ಸೋಮವಾರ, ಜುಲೈ 4, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಾಧುವಿನ ಸಂಗಡ

ಜಮ್ಮುವಿನ ಭಗವತಿ ನಗರದಲ್ಲಿನ ಅಮರನಾಥ ಯಾತ್ರೆಯ ಬೇಸ್ ಕ್ಯಾಂಪ್‌ನಲ್ಲಿ ಭಾನುವಾರ ಸಾಧುವೊಬ್ಬರು ಮಂಗಗಳ ಜೊತೆಗೆ ಹೊರಗೆ ಕಾಯುತ್ತಾ ಕುಳಿತಿದ್ದರು



ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮುಂದಿನ 30–40 ವರ್ಷ ಬಿಜೆಪಿ ಯುಗ: ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಅಮಿತ್ ಶಾ

ದಕ್ಷಿಣ ಭಾರತದತ್ತ ಕಮಲದ ಕಣ್ಣು

ಪ್ರಜಾವಾಣಿ ವಾರ್ತೆ

ಹೈದರಾಬಾದ್: ದಕ್ಷಿಣ ಭಾರತವು ಬಿಜೆಪಿಯ ಮುಂದಿನ ಗುರಿ ಆಗಲಿದೆ ಎಂದು ಹೈದರಾಬಾದ್‌ನಲ್ಲಿ ನಡೆದ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಭಾನುವಾರ ಘೋಷಿಸಲಾಗಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕಾರ್ಯಕಾರಿಣಿಯ ರಾಜಕೀಯ ನಿರ್ಣಯವನ್ನು ಮಂಡಿಸಿದರು. ಕುಟುಂಬ ನಾಯಕತ್ವದ ಪಕ್ಷಗಳನ್ನು ನಿವಾರಿಸಲು ಬಿಜೆಪಿ ಕೆಲಸ ಮಾಡಲಿದೆ ಎಂದೂ ನಿರ್ಣಯದಲ್ಲಿ ಹೇಳಲಾಗಿದೆ. ಕರ್ನಾಟಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರು ನಿರ್ಣಯವನ್ನು ಅನುಮೋದಿಸಿದರು.

ದಕ್ಷಿಣ ಭಾರತದಲ್ಲಿ ಬಿಜೆಪಿಗೆ ಸರ್ಕಾರ ರಚಿಸಲು ಸಾಧ್ಯವಾಗಿದ್ದು ಕರ್ನಾಟಕದಲ್ಲಿ ಮಾತ್ರ. ತೆಲಂಗಾಣದಲ್ಲಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಅಲ್ಲಿನ ಆಡಳಿತಾರೂಢ ತೆಲಂಗಾಣ ರಾಷ್ಟ್ರ ಸಮಿತಿಯನ್ನು ಎದುರಿಸಲು ಬಿಜೆಪಿ ಎಲ್ಲ ಸಿದ್ಧತೆ ನಡೆಸಿದೆ. ಹಾಗಾಗಿಯೇ ಕಾರ್ಯಕಾರಿಣಿಗೆ ಹೈದರಾಬಾದ್‌ನಗರವನ್ನು ಆಯ್ಕೆ ಮಾಡಲಾಗಿದೆ. ತೆಲಂಗಾಣದಲ್ಲಿ ಮುಂದಿನ ವರ್ಷ ಚುನಾವಣೆ ನಡೆಯಲಿದೆ.

ಕಾರ್ಯಕಾರಿಣಿ ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರೂ ವಂಶಾಡಳಿತದ ರಾಜಕೀಯ ಪಕ್ಷಗಳ ವಿರುದ್ಧ ಹರಿಹಾಯ್ದರು. ಅಂತಹ ರಾಜಕೀಯದ ಕಾಲ ಮುಗಿಯಿತು ಎಂದು ಅವರು ಹೇಳಿದರು. ಕುಟುಂಬ ನೇತೃತ್ವದ ಪಕ್ಷಗಳಿಂದ ದೇಶವು ಈಗ ಬೇಸತ್ತಿದೆ ಎಂದು ಹೇಳಿದ್ದಾರೆ ಎಂದು ಬಿಜೆಪಿ ಮುಖಂಡ ರವಿಶಂಕರ್ ಪ್ರಸಾದ್ ತಿಳಿಸಿದ್ದಾರೆ.

ಕಾಂಗ್ರೆಸ್ ಈಗ ಒಂದು ಕುಟುಂಬದ ಪಕ್ಷವಾಗಿ ಮಾತ್ರ ಉಳಿದಿದೆ. 'ಕಾಂಗ್ರೆಸ್‌ನಲ್ಲಿ ಆಂತರಿಕ ಪ್ರಜಾಪ್ರಭುತ್ವ ಬೇಕು ಎಂಬ ಕೂಗು ಎದ್ದಿದೆ. ಆದರೆ, ಹೊಸ ಅಧ್ಯಕ್ಷನನ್ನು ಕಾಂಗ್ರೆಸ್ ಆಯ್ಕೆ ಮಾಡುತ್ತಿಲ್ಲ. ಪಕ್ಷದಲ್ಲಿ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆದರೆ ತಮ್ಮ ಸ್ಥಾನಕ್ಕೆ ಕುತ್ತು ಎದುರಾಗಬಹುದು ಎಂಬ ಭೀತಿ ಆ ಕುಟುಂಬದಲ್ಲಿ ಇದೆ' ಎಂದು ಬಿಜೆಪಿಯ ರಾಜಕೀಯ ನಿರ್ಣಯದಲ್ಲಿ ಇದೆ.

ಪಶ್ಚಿಮ ಬಂಗಾಳ ಮತ್ತು ತೆಲಂಗಾಣದಲ್ಲಿ ಕುಟುಂಬ ಆಳ್ವಿಕೆಯನ್ನು ಬಿಜೆಪಿ ಸೋಲಿಸಲಿದೆ. 'ಪಶ್ಚಿಮ ಬಂಗಾಳ, ತೆಲಂಗಾಣ, ಕೇರಳ, ಆಂಧ್ರ ಪ್ರದೇಶ, ತಮಿಳುನಾಡು ಮತ್ತು ಒಡಿಶಾದಲ್ಲಿ ಬಿಜೆಪಿ ಅಧಿಕಾರಕ್ಕೆ ಏರಲಿದೆ' ಎಂದು ಹಿಮಂತ ಬಿಸ್ವ ಶರ್ಮಾ ಹೇಳಿದ್ದಾರೆ.

2002ರ ಗುಜರಾತ್ ಗಲಭೆಗಳಲ್ಲಿ ಮೋದಿ ಅವರು ಆರೋಪಮುಕ್ತ ಎಂಬ ತೀರ್ಪನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿರುವುದು ಚಾರಿತ್ರಿಕ ಎಂದು ಕಾರ್ಯಕಾರಿಣಿಯು ಬಣ್ಣಿಸಿದೆ. ಕೆಲವು ಜನರು, ಸೈದ್ಧಾಂತಿಕ ನಿಲುವಿನ ಮಾಧ್ಯಮ ವ್ಯಕ್ತಿಗಳು ಮತ್ತು ಕೆಲವು ಎನ್‌ಜಿಒಗಳು ಸೇರಿ ಮೋದಿ ಅವರ ತೇಜೋವಧೆಗೆ ನಡೆಸಿದ ಪಿತೂರಿಯನ್ನು ಕೋರ್ಟ್ ತೀರ್ಪು ಬಯಲಾಗಿಸಿದೆ. ಇಷ್ಟೆಲ್ಲ ವರ್ಷಗಳಲ್ಲಿ ಮೋದಿ ಅವರು ಮೌನವಾಗಿಯೇ ಇದ್ದರು ಮತ್ತು ವಿಶೇಷ ತನಿಖಾ ತಂಡದ ತನಿಖೆಗೆ ಸಹಕರಿಸಿದ್ದರು. ಮೋದಿ ಅವರು ಯಾವುದೇ ನಾಟಕ ಮಾಡಲಿಲ್ಲ' ಎಂದು ಶರ್ಮಾ ಹೇಳಿದ್ದಾರೆ.

ಬಿಜೆಪಿಗೆ ಸಿಕ್ಕಿರುವ ಚುನಾವಣಾ ಗೆಲುವಿನ ಬಗ್ಗೆಯೂ ಕಾರ್ಯಕಾರಿಣಿಯಲ್ಲಿ ಉಲ್ಲೇಖ ಇದೆ. ತುಷ್ಟೀಕರಣದ ರಾಜಕಾರಣ ಕೊನೆಯಾಗಿದ್ದು, ದಕ್ಷತೆ ಮತ್ತು ಅಭಿವೃದ್ಧಿಯ ರಾಜಕಾರಣ ಆರಂಭವಾಗಿದೆ. ಮುಂದಿನ 30–40 ವರ್ಷ ಬಿಜೆಪಿಯುಗ ಇರಲಿದೆ ಎಂದು ಶಾ ಹೇಳಿದ್ದಾರೆ.

ಅಗ್ನಿವೀರ ಯೋಜನೆ, ರಕ್ಷಣಾ ಪಡೆಗಳ ಮುಖ್ಯಸ್ಥ ಸ್ಥಾನ ಸೃಷ್ಟಿ, ಒಂದು ಶ್ರೇಣಿ ಒಂದು ಪಿಂಚಣಿ ಯೋಜನೆ ಜಾರಿಗಳ ಬಗ್ಗೆಯೂ ನಿರ್ಣಯದಲ್ಲಿ ಉಲ್ಲೇಖ ಇದೆ. ಮೋದಿ ನೇತೃತ್ವದ ಸರ್ಕಾರದ ಸಾಧನೆಯನ್ನು ಹೊಗಳಲಾಗಿದೆ.



ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಮತ್ತು ಗೃಹ ಸಚಿವ ಅಮಿತ್ ಶಾ ಅವರು ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಭಾನುವಾರ ಭಾಗವಹಿಸಿದ್ದರು –ಪಿಟಿಐ ಚಿತ್ರ

ಹೈದರಾಬಾದ್ ಹೆಸರು ಬದಲು ಪ್ರಸ್ತಾವ

ಹೈದರಾಬಾದ್‌ನ ಹೆಸರನ್ನು ಭಾಗ್ಯನಗರ ಎಂದು ಬದಲಿಸುವ ಮಾತನ್ನು ಪ್ರಧಾನಿ ಸೇರಿದಂತೆ ಬಿಜೆಪಿಯ ನಾಯಕರು ಕಾರ್ಯಕಾರಿಣಿಯಲ್ಲಿ ಆಡಿದ್ದಾರೆ.

'ಏಕ ಭಾರತದ ಕಲ್ಪನೆಯನ್ನು ಸರ್ದಾರ್ ಪಟೇಲರು ಮೊದಲು ಪ್ರಚುರ ಪಡಿಸಿದ್ದು ಇದೇ ಭಾಗ್ಯನಗರದಲ್ಲಿ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಹೈದರಾಬಾದ್‌ನ ಹೆಸರನ್ನು ಭಾಗ್ಯನಗರ ಎಂದು ಬದಲಿಸಬೇಕು ಎಂದು ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಸ್ಥಳೀಯ ನಾಯಕರು ಈ ಹಿಂದೆಯೇ ಬೇಡಿಕೆ ಇಟ್ಟಿದ್ದರು.

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು, 'ಹೈದರಾಬಾದ್ ಅನ್ನು ಭಾಗ್ಯನಗರವಾಗಿ ಪರಿವರ್ತಿಸಬೇಕಿದ್ದರೆ ಬಿಜೆಪಿಗೆ ಮತ ನೀಡಿ' ಎಂದು ಹೇಳಿದ್ದಾರೆ. ಕೇಂದ್ರ ಸಚಿವ ಪೀಯೂಷ್ ಗೋಯಲ್, 'ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಭಾಗ್ಯನಗರ ಎಂದು ನಾಮಕರಣ ಮಾಡುವ ಬಗ್ಗೆ ಮುಖ್ಯಮಂತ್ರಿ ನಿರ್ಧಾರ ತೆಗೆದುಕೊಳ್ಳುತ್ತಾರೆ' ಎಂದು ಹೇಳಿದ್ದಾರೆ.

ಇನ್ನೊಂದು ಸುದ್ದಿ 11

ಇಂಡಿಗೊದ ಶೇ 55 ವಿಮಾನ ಸೇವೆ ವಿಳಂಬ

ನವದೆಹಲಿ (ಪಿಟಿಐ): ಏರ್ ಇಂಡಿಯಾ ವಿಮಾನ ಸಂಸ್ಥೆ ನಡೆಸುತ್ತಿರುವ ನೇಮಕಾತಿಯಲ್ಲಿ ಪಾಲ್ಗೊಳ್ಳುವ ಸಲುವಾಗಿ ಇಂಡಿಗೊದ ವಿಮಾನಗಳ ಕ್ಯಾಬಿನ್ ಸಿಬ್ಬಂದಿಯಲ್ಲಿ ಬಹುತೇಕರು ಅನಾರೋಗ್ಯ ರಜೆ (ಸಿಕ್ ಲೀವ್) ಪಡೆದಿದ್ದರಿಂದ ಶನಿವಾರ ಇಂಡಿಗೊದ ಸಂಸ್ಥೆಯ ಶೇ 55 ದೇಶಿಯ ವಿಮಾನಗಳ ಸಂಚಾರದಲ್ಲಿ ವಿಳಂಬವಾಯಿತು.

4

60,725 ಎಕರೆ ಅರಣ್ಯ ಭೂಮಿ ಅಕ್ರಮ ಮಂಜೂರು

• ಚಿರಂಜೀವಿ ಕುಲಕರ್ಣಿ

ಬೆಂಗಳೂರು: ರಾಜ್ಯದಲ್ಲಿ ಸುಮಾರು 60,725 ಎಕರೆ ಅರಣ್ಯ ಭೂಮಿಯನ್ನು ಕಾನೂನು ಬಾಹಿರವಾಗಿ ಅನ್ಯ ಉದ್ದೇಶಗಳಿಗೆ ಕಂದಾಯ ಇಲಾಖೆ ಮಂಜೂರು ಮಾಡಿದೆ.

ಕೆಲವು ಮಂಜೂರಾತಿ ಪ್ರಕ್ರಿಯೆಗಳು 1950ಕ್ಕೂ ಹಿಂದೆಯೇ ನಡೆದಿವೆ. ಆದರೆ, ಬಹುತೇಕ ಅಕ್ರಮ ಮಂಜೂರಾತಿ ಪ್ರಕರಣಗಳು 25 ವರ್ಷಗಳಿಂದೀಚೆಗೆ ನಡೆದಿರುವುದು 'ಪ್ರಜಾವಾಣಿ'ಗೆ ಲಭ್ಯವಾಗಿರುವ ದಾಖಲೆಗಳಿಂದ ಬಹಿರಂಗವಾಗಿದೆ.

ಅರಣ್ಯ ಇಲಾಖೆಯ 13 ವೃತ್ತಗಳಲ್ಲಿ ಅಕ್ರಮ ಮ್ಯುಟೇಷನ್‌ಗಳ ಪ್ರತಿಯೊಂದು ಪ್ರಕರಣಗಳಲ್ಲಿ ದೀರ್ಘಾವಧಿಯಿಂದ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಆದೇಶಗಳಿಂದ ಎಚ್ಚೆತ್ತುಕೊಂಡ ಮುಖ್ಯ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಅಕ್ರಮವಾಗಿ ಮಂಜೂರಾಗಿರುವ ಭೂಮಿಯ ದಾಖಲೆಗಳನ್ನು ಸಿದ್ಧಪಡಿಸಿ, ಅರಣ್ಯ ಭೂಮಿಯನ್ನು ಮರುವಶಪಡಿಸಿಕೊಳ್ಳಲು ಕಳೆದ ಎರಡು ವರ್ಷಗಳಿಂದ ಪ್ರಯತ್ನಿಸುತ್ತಿದ್ದಾರೆ.

ಎಲ್ಲ ವಿಭಾಗಗಳಲ್ಲಿ 60,725.78 ಎಕರೆ ಅರಣ್ಯ ಭೂಮಿಯನ್ನು 2022ರ ಫೆಬ್ರುವರಿವರೆಗೆ ಅಕ್ರಮವಾಗಿ ಮಂಜೂರು ಮಾಡಲಾಗಿದೆ ಎಂದು ವರದಿಯಿಂದ ತಿಳಿದು ಬಂದಿದೆ. ಒತ್ತುವರಿ ಪ್ರಕರಣಗಳಿಗಿಂತಲೂ ಅಕ್ರಮ ಮಂಜೂರು ಪ್ರಕರಣಗಳೇ ಹೆಚ್ಚಾಗಿವೆ. ಅರಣ್ಯ ಇಲಾಖೆಯ ಅಧಿಕಾರಿಗಳ ಗಮನಕ್ಕೂ ತಾರದೆ ಕರ್ನಾಟಕ ಅರಣ್ಯ ಕಾಯ್ದೆ ಮತ್ತು ಕರ್ನಾಟಕ ಭೂ ಕಂದಾಯ ಕಾಯ್ದೆಗಳನ್ನೂ ಉಲ್ಲಂಘಿಸಲಾಗಿದೆ.

ಕಂದಾಯ ಇಲಾಖೆಯಲ್ಲಿ ಭೂಮಿಗೆ ಸಂಬಂಧಿಸಿದಂತೆ ಇಂತಹ ಆದೇಶಗಳನ್ನು ಮಾಡಿದಾಗ ಹಲವು ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ತಹಶೀಲ್ದಾರ್ ಕೆಲಸವನ್ನೂ ಕಳೆದುಕೊಂಡಿದ್ದಾರೆ. ಹಸಿರು ಪ್ರದೇಶವನ್ನು ಗಣಿಗಾರಿಕೆಗೆ ನೀಡಲು 251 ಎಕರೆಗೂ ಹೆಚ್ಚು ಅರಣ್ಯ ಭೂಮಿಯನ್ನು ಕಂದಾಯ ಭೂಮಿಯಾಗಿ ಪರಿವರ್ತಿಸಿದ್ದ ಚಿತ್ರದುರ್ಗದ ಜಿಲ್ಲಾಧಿಕಾರಿ ವಿರುದ್ಧ ಕ್ರಮಕೈಗೊಳ್ಳಲು ಮುಖ್ಯ ಕಾರ್ಯದರ್ಶಿ ಅವರು ಏಪ್ರಿಲ್‌ನಲ್ಲಿ ಸೂಚಿಸಿದ್ದರು.

5ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕಲುಷಿತ ನೀರು ಕುಡಿದು ಮಹಿಳೆ ಸಾವು: 40ಕ್ಕೂ ಹೆಚ್ಚು ಜನ ಅಸ್ವಸ್ಥ

ಮಾನ್ವಿ (ರಾಯಚೂರು ಜಿಲ್ಲೆ): ತಾಲ್ಲೂಕಿನ ವಲ್ಕಂದಿನ್ನಿ ಮತ್ತು ಜೂಕೂರ ಗ್ರಾಮಗಳಲ್ಲಿ ಕಲುಷಿತ ನೀರು ಕುಡಿದು ಭಾನುವಾರ 40ಕ್ಕೂ ಅಧಿಕ ಜನರು ಅಸ್ವಸ್ಥಗೊಂಡಿದ್ದಾರೆ. ಜೂಕೂರಿನ ಲಕ್ಷ್ಮಿ ವೀರೇಶ (26) ರಾಯಚೂರಿನ ರಿಮ್ಸ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಅಸ್ವಸ್ಥರಾಗಿದ್ದ ಲಕ್ಷ್ಮಿ ಅವರನ್ನು ಮರ್ಚಟ್ಹಾಳ್ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ದಾಖಲಿಸಲಾಗಿತ್ತು. ರಕ್ತದೊತ್ತಡ ಕಡಿಮೆಯಾಗಿದ್ದರಿಂದ ರಿಮ್ಸ್ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆದರೆ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಗ್ರಾಮಕ್ಕೆ ಪೂರೈಸಿದ್ದ ತುಂಗಭದ್ರಾ ನದಿ ನೀರು ಸೇವಿಸಿದ್ದು ವಾಂತಿ–ಭೇದಿಗೆ ಕಾರಣವಾಗಿದೆ. ಕಲುಷಿತ ನೀರು ಸೇವನೆಯಿಂದ ರಾಯಚೂರು ಜಿಲ್ಲೆಯಲ್ಲಿ ಇದುವರೆಗೂ ಎಂಟು ಜನರು ಮೃತಪಟ್ಟಂತಾಗಿದೆ.

ವಿದ್ಯುತ್ ಸಮಸ್ಯೆಯಿಂದ ಶುದ್ಧ ನೀರಿನ ಘಟಕಗಳು ಸ್ಥಗಿತಗೊಂಡಿದ್ದವು. ಹೀಗಾಗಿ ಜನರಿಗೆ ತುಂಗಭದ್ರಾ ನದಿ ನೀರನ್ನು ಪೂರೈಸಿದ್ದು ವಾಂತಿ–ಭೇದಿಗೆ ಕಾರಣ ಎನ್ನಲಾಗಿದೆ.

ಆರೋಗ್ಯ ಇಲಾಖೆ ಸಿಬ್ಬಂದಿ ಗ್ರಾಮಗಳಿಗೆ ಧಾವಿಸಿ ಸಮುದಾಯ ಭವನಗಳಲ್ಲೇ ಹೊರರೋಗಿ ವಿಭಾಗ ಆರಂಭಿಸಿ ಚಿಕಿತ್ಸೆ ನೀಡಿ, ಕೆಲವರನ್ನು ಆಸ್ಪತ್ರೆಗಳಿಗೆ ದಾಖಲಿಸಿದ್ದಾರೆ.

'ನದಿಯಿಂದ ಪೂರೈಸಲಾದ ನೀರು ಕುಡಿದಿರುವುದು ಗ್ರಾಮಸ್ಥರಿಗೆ ವಾಂತಿ–ಭೇದಿಯಾಗಿ ಅಸ್ವಸ್ಥಗೊಳ್ಳಲು ಕಾರಣವಾಗಿದೆ' ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಚಂದ್ರಶೇಖರಯ್ಯ ತಿಳಿಸಿದರು.

ಇದೀಗ ಶುದ್ಧ ನೀರಿನ ಘಟಕಗಳಿಗೆ ನಿರಂತರ ವಿದ್ಯುತ್ ಪೂರೈಸುವುದಕ್ಕೆ ವ್ಯವಸ್ಥೆ ಮಾಡಲಾಗಿದೆ.

ಜಿಲ್ಲಾ ಆರೋಗ್ಯಾಧಿಕಾರಿ ಡಾ. ಸುರೇಂದ್ರಬಾಬು ಸೇರಿ ವಿವಿಧ ಇಲಾಖೆಗಳ ಅಧಿಕಾರಿಗಳು ಭೇಟಿ ನೀಡಿದ್ದು, ಪರಿಶೀಲನೆ ಆರಂಭಿಸಿದ್ದಾರೆ.

ಚಿತ್ರ 4

ಮಹಾರಾಷ್ಟ್ರ: ರಾಹುಲ್ ನಾರ್ವೇಕರ್ ಸ್ಪೀಕರ್



ಮುಂಬೈ: ಕೊಲಾಬಾದ ಬಿಜೆಪಿ ಶಾಸಕ ರಾಹುಲ್ ನಾರ್ವೇಕರ್ ಅವರು ಮಹಾರಾಷ್ಟ್ರ ವಿಧಾನಸಭೆಯ 20ನೇ ಸ್ಪೀಕರ್ ಆಗಿ ಆಯ್ಕೆಯಾದರು.

ಭಾನುವಾರ ಆರಂಭಗೊಂಡ ವಿಧಾನ ಸಭೆಯ ಎರಡು ದಿನಗಳ ವಿಶೇಷ ಅಧಿವೇಶನದಲ್ಲಿ ನೂತನ ಸ್ಪೀಕರ್ ಆಯ್ಕೆ ನಡೆಯಿತು.

45 ವರ್ಷದ ನಾರ್ವೇಕರ್ ಅವರು ಮಹಾರಾಷ್ಟ್ರದ ಅತ್ಯಂತ ಕಿರಿಯ ವಯಸ್ಸಿನ ಸ್ಪೀಕರ್ ಆಗಿದ್ದಾರೆ.

ಬಿಜೆಪಿ ಹಾಗೂ ಮುಖ್ಯಮಂತ್ರಿ ಏಕನಾಥ ಶಿಂಧೆ ನೇತೃತ್ವದ ಶಿವಸೇನಾ ಗುಂಪಿನ ಅಭ್ಯರ್ಥಿಯಾಗಿದ್ದ ನಾರ್ವೇಕರ್ ಅವರು ಮಹಾವಿಕಾಸ ಆಘಾಡಿಯ ಅಭ್ಯರ್ಥಿ, ಶಿವಸೇನಾದ ರಾಜನ್ ಸಾಳ್ವಿ ಅವರನ್ನು ಪರಾಭವಗೊಳಿಸಿದರು.

ಇನ್ನೊಂದು ಸುದ್ದಿ 10

ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ವರ್ಷಧಾರೆ

ಕೊಡಗು ಜಿಲ್ಲೆಯಲ್ಲಿ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೊಡಗು ಜಿಲ್ಲೆ ಹಾಗೂ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಶನಿವಾರ ರಾತ್ರಿಯಿಡೀ ಧಾರಾಕಾರ ಮಳೆ ಸುರಿದಿದೆ. ದಕ್ಷಿಣ ಕನ್ನಡ, ಉಡುಪಿ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಭಾನುವಾರ ಬಿರುಸಿನ ಮಳೆಯಾಗಿದ್ದರೆ, ಮೈಸೂರು ಜಿಲ್ಲೆಯಲ್ಲಿ ಜಿಟಿಜಿಟಿ ಮಳೆಯಾಗಿದೆ.

ಕೊಡಗು ಜಿಲ್ಲೆಯ ಭಾಗಮಂಡಲದ ತ್ರಿವೇಣಿ ಸಂಗಮ ಭರ್ತಿಯಾಗಿದೆ. ರಸ್ತೆ ಮೇಲೆ ನೀರು ಹರಿಯುತ್ತಿದ್ದು, ನಾಪೋಕ್ಲು–ಭಾಗಮಂಡಲ ಸಂಪರ್ಕ ಕಡಿತಗೊಂಡಿದೆ. ಭಾಗಮಂಡಲ–ತ್ರಿವೇಣಿ ಸಂಗಮ ರಸ್ತೆಯೂ ಜಲಾವೃತಗೊಂಡಿದೆ. ಹಾರಂಗಿ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣದಲ್ಲಿ ಮತ್ತಷ್ಟು ಏರಿಕೆಯಾಗಿದ್ದು, 15 ಸಾವಿರ ಕ್ಯುಸೆಕ್ ನೀರನ್ನು ಹೊರಬಿಡಲಾಗುತ್ತಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಸುರಿದ ಭಾರಿ ಮಳೆ ಪರಿಣಾಮ ಕೆಆರ್‌ಎಸ್ ಒಳ ಹರಿವಿನಲ್ಲಿ ಹೆಚ್ಚಳವಾಗಿದೆ. ಜಲಾಶಯಕ್ಕೆ 13,418 ಕ್ಯುಸೆಕ್ ಒಳಹರಿವು ಇದ್ದು, ಸದ್ಯ 109.52 ಅಡಿ ತಲುಪಿದೆ. ಹೊರ ಹರಿವು 1,208 ಕ್ಯುಸೆಕ್ ಇದೆ.

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಆಲೆಟ್ಟಿಯಲ್ಲಿ 12.55 ಸೆಂ.ಮೀ, ಹರಿಹರ ಪಲ್ಲತಡ್ಕ ಹಾಗೂ ಸಂಪಾಜೆಯಲ್ಲಿ 12.45 ಸೆಂ.ಮೀ. ಮಳೆಯಾಗಿದೆ. ಕರಾವಳಿಯುದ್ದಕ್ಕೂ ಕಡಲು ಪ್ರಕ್ಷುಬ್ಧಗೊಂಡಿದೆ. ಶಿವಮೊಗ್ಗ ಜಿಲ್ಲೆಯ ವಿವಿಧೆಡೆ ಉತ್ತಮ ಮಳೆಯಾಗಿದೆ.



ಶಿವಮೊಗ್ಗ ತಾಲ್ಲೂಕಿನ ಗಾಜನೂರು ಜಲಾಶಯದಿಂದ 5 ಗೇಟ್‌ಗಳ ಮೂಲಕ 16 ಸಾವಿರ ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ –ಪ್ರಜಾವಾಣಿ ಚಿತ್ರ

ಕೇರಳದಲ್ಲಿ ಭಾರಿ ಮಳೆ

ತಿರುವನಂತಪುರ (ಪಿಟಿಐ): ಕೇರಳದ ಹಲವು ಭಾಗಗಳಲ್ಲಿ ಭಾರಿ ಮಳೆಯಾಗುತ್ತಿದೆ. ಭಾರತೀಯ ಹವಾಮಾನ ಇಲಾಖೆಯು (ಐಎಂಡಿ) ಭಾನುವಾರ ಇಡುಕ್ಕಿ, ತ್ರಿಶ್ಶೂರ್, ಕೋಯಿಕ್ಕೋಡ್, ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಿದೆ. ಇದೇ 7ರ ವರೆಗೆ ಕೇರಳ-ಲಕ್ಷದ್ವೀಪ-ಕರ್ನಾಟಕ ಕರಾವಳಿಯಲ್ಲಿ ಗಂಟೆಗೆ 40 ರಿಂದ 50 ಕಿ.ಮೀ ವೇಗದಲ್ಲಿ ಬಲವಾದ ಗಾಳಿ ಬೀಸುವ ಸಾಧ್ಯತೆಯಿದ್ದು, ಮೀನುಗಾರರಿಗೆ ಸಮುದ್ರಕ್ಕೆ ಹೋಗದಂತೆ ಸೂಚಿಸಲಾಗಿದೆ ಎಂದು ತಿಳಿಸಿದೆ.

ಮೂರು ದಿನ ಪೂರೈಸಿದ ಪೌರಕಾರ್ಮಿಕರ ಅನಿರ್ದಿಷ್ಟಾವಧಿ ಮುಷ್ಕರ • ಬೇಡಿಕೆ ಈಡೇರಿಸಲು ಪಟ್ಟು

‘ಕೆಲಸ ಕಾಯಂ ಆಗುವ ತನಕ ಹೋರಾಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆಲಸ ಕಾಯಂಗೊಳಿಸಬೇಕು’ ಎನ್ನುವುದೂ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಪೌರಕಾರ್ಮಿಕರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಮುಷ್ಕರ ಭಾನುವಾರವೂ ಮುಂದುವರಿಯಿತು. ಲಿಖಿತ ಭರವಸೆ ನೀಡುವವರೆಗೂ ಮುಷ್ಕರ ಕೈಬಿಡುವುದಿಲ್ಲವೆಂದು ಪೌರಕಾರ್ಮಿಕರು ಪಟ್ಟು ಹಿಡಿದಿದ್ದಾರೆ.

ಪೌರಕಾರ್ಮಿಕರ ಸಂಘಟನೆಗಳ ಜಂಟಿ ಹೋರಾಟ ಸಮಿತಿ, ರಾಜ್ಯ ನಗರಪಾಲಿಕೆ- ಪುರಸಭೆ- ನಗರಸಭೆ ಪೌರಕಾರ್ಮಿಕರ ಮಹಾ ಸಂಘ ಹಾಗೂ ಬಿಬಿಎಂಪಿ ಪೌರ ಕಾರ್ಮಿಕರ ಸಂಘ ಸಹಯೋಗದಲ್ಲಿ ಪೌರಕಾರ್ಮಿಕರು ಜುಲೈ 1ರಿಂದ ಮುಷ್ಕರ ಆರಂಭಿಸಿದ್ದಾರೆ.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನ ಹಾಗೂ ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಮುಷ್ಕರ ನಡೆಯುತ್ತಿದ್ದು, ಕೆಲಸಕ್ಕೆ ಗೈರಾಗಿ ಪೌರಕಾರ್ಮಿಕರು ಮುಷ್ಕರದಲ್ಲಿ ಪಾಲ್ಗೊಳ್ಳುತ್ತಿದ್ದಾರೆ.



ಕರ್ನಾಟಕ ರಾಜ್ಯ ನಗರ ಪಾಲಿಕೆ ನಗರ ಸಭೆ ಪುರಸಭೆಗಳ ಪೌರಕಾರ್ಮಿಕರ ಮಹಾಸಂಘದ ಸದಸ್ಯರು ವಿವಿಧ ಬೇಡಿಕೆಗಳಿಗೆ ಒತ್ತಾಯಿಸಿ ನಡೆಸುತ್ತಿರುವ ಪ್ರತಿಭಟನೆಯಲ್ಲಿ ಹೋರಾಟದ ಮುಂದಿನ ರೂಪುರೇಷೆಗಳ ಬಗ್ಗೆ ಮುಖಂಡರುಗಳ ಸಭೆಯಲ್ಲಿ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘದ ಅಧ್ಯಕ್ಷ ನಾರಾಯಣ (ಮೈಸೂರು) ಮಾತನಾಡಿದರು –ಪ್ರಜಾವಾಣಿ ಚಿತ್ರ

ರಸ್ತೆ ಸ್ವಚ್ಛತೆಗೆ ಖಾಸಗಿ ನೌಕರರು: ಬಿಬಿಎಂಪಿ

ಬೆಂಗಳೂರು: ಪೌರಕಾರ್ಮಿಕರ ಮುಷ್ಕರದ ಹಿನ್ನೆಲೆಯಲ್ಲಿ ನಗರದಲ್ಲಿ ರಸ್ತೆಗಳನ್ನು ಸ್ವಚ್ಛವಾಗಿರಿಸಿಕೊಳ್ಳುವ ನಿಟ್ಟಿನಲ್ಲಿ ಖಾಸಗಿ ಸಂಸ್ಥೆಗಳಿಂದ ನೌಕರರು ಹಾಗೂ ಯಂತ್ರಗಳನ್ನು ತೆಗೆದುಕೊಳ್ಳಲು ಬಿಬಿಎಂಪಿ ಚಿಂತನೆ ನಡೆಸಿದೆ.

‘ನಗರದಲ್ಲಿ ತ್ಯಾಜ್ಯ ನಿರ್ವಹಣೆಗೆ ಎಲ್ಲೂ ತೊಂದರೆಯಾಗಿಲ್ಲ. ಮನೆಗಳಿಂದ ಕಸ ಸಂಗ್ರಹಿಸಲಾಗುತ್ತಿದೆ. ಆದರೆ ರಸ್ತೆ ಸ್ವಚ್ಛತೆಗೆ ಹಿನ್ನಡೆಯಾಗಿದೆ. ಬಿಬಿಎಂಪಿಯಲ್ಲಿರುವ 12 ಸಾವಿರ ಸಿಬ್ಬಂದಿ ಪೈಕಿ ಮೂರು ಸಾವಿರ ಪೌರ ಕಾರ್ಮಿಕರು ಭಾನುವಾರ ಕಾರ್ಯನಿರ್ವಹಿಸಿದ್ದಾರೆ’ ಎಂದು ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆ ವಿಭಾಗ ವಿಶೇಷ ಆಯುಕ್ತ ಹರೀಶ್ ಕುಮಾರ್ ತಿಳಿಸಿದರು.

‘ರಸ್ತೆಯಲ್ಲಿನ ಕಸ ಸ್ವಚ್ಛಗೊಳಿಸಲು ಹೆಚ್ಚುವರಿಯಾಗಿ ಯಂತ್ರಗಳನ್ನು ಖಾಸಗಿಯಾಗಿ ತೆಗೆದುಕೊಳ್ಳಲಾಗುತ್ತಿದೆ. ಇದಕ್ಕಾಗಿ ಟೆಂಡರ್ ಕೂಡ ಕರೆಯ ಲಾಗಿದೆ. ಶೇ 20ರಷ್ಟು ಖಾಸಗಿ ನೌಕರರನ್ನೂ ತೆಗೆದುಕೊಳ್ಳಲು ಬಿಬಿಎಂಪಿ ಆಲೋಚಿಸುತ್ತಿದೆ. ಸೋಮವಾರ ಮುಷ್ಕರ ಮುಗಿಯದಿದ್ದರೆ ಖಾಸಗಿಯಾಗಿ ನಾವು ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುತ್ತೇವೆ’ ಎಂದು ಅವರು ಹೇಳಿದರು.

‘ಎಲ್ಲಿಯ ತನಕ ಹೋರಾಟ, ಕಾಯಂ ಆಗುವ ತನಕ ಹೋರಾಟ’ ಸೇರಿದಂತೆ ವಿವಿಧ ಘೋಷಣೆಯುಳ್ಳ ಫಲಕ ಪ್ರದರ್ಶಿಸಿ, ಸರ್ಕಾರ ವಿರುದ್ಧ ಆಕ್ರೋಶ ಹೊರಹಾಕಿದರು.

‘ಬೆಂಗಳೂರು ಹಾಗೂ ಇತರೆ ನಗರಗಳನ್ನು ಸ್ವಚ್ಛವಾಗಿಡಲು ಪೌರಕಾರ್ಮಿಕರ ಪಾತ್ರ ಮಹತ್ವದ್ದು. ರಾಜ್ಯದಲ್ಲಿ ಸುಮಾರು 54,512 ಗುತ್ತಿಗೆ ಪೌರ ಕಾರ್ಮಿಕರಿದ್ದು, ಈ ಪೈಕಿ 10,775 ಕಾರ್ಮಿಕರನ್ನು ಮಾತ್ರ ಕಾಯಂಗೊಳಿಸಲಾಗಿದೆ. ಉಳಿದ ಕಾರ್ಮಿಕರ ಕಾಯಂ ಮಾಡುವಂತೆ ಈ ಮುಷ್ಕರ ಆರಂಭಿಸಲಾಗಿದೆ’ ಎಂದು ಪ್ರತಿಭಟನಕಾರರು ಹೇಳಿದರು.

‘ಗುತ್ತಿಗೆ ಆಧಾರದಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ತಿಂಗಳಿಗೆ ಕೇವಲ ₹14 ಸಾವಿರ ವೇತನ ಬರುತ್ತಿದೆ. ಈ ವೇತನ ಯಾವುದಕ್ಕೂ ಸಾಲುತ್ತಿಲ್ಲ. ಹೀಗಾಗಿ, ಕನಿಷ್ಠ ವೇತನವನ್ನು ₹ 30 ಸಾವಿರಕ್ಕೆ ಹೆಚ್ಚಿಸಬೇಕು. ಕಸ ಸಾಗಣೆ ವಾಹನದ ಚಾಲಕ ಹಾಗೂ ಲೋಡರ್‌ಗಳ ಸೇವೆಯನ್ನೂ ಕಾಯಂಗೊಳಿಸಬೇಕು. ಪೌರಕಾರ್ಮಿಕರ ಕಲ್ಯಾಣಕ್ಕೆ ಸಮಗ್ರ ನೀತಿ ರೂಪಿಸಬೇಕು. ಪೌರಕಾರ್ಮಿಕರು ಹಾಗೂ ಅವರ ಅವಲಂಬಿತರ ಆರೋಗ್ಯಕ್ಕೆ ವಿಶೇಷ ಆದ್ಯತೆ ನೀಡಬೇಕು. ಮಕ್ಕಳಿಗೆ ಗುಣಮಟ್ಟದ ಶಿಕ್ಷಣಕ್ಕೆ ವಿಶೇಷ ಒತ್ತು ನೀಡಬೇಕು’ ಎಂದೂ ಅವರು ಒತ್ತಾಯಿಸಿದರು.

ಸುದ್ದಿ 2 ನಿಮಿಷ

ಸಕ್ರಿಯ ಪ್ರಕರಣ 6,248ಕ್ಕೆ ಏರಿಕೆ

ಬೆಂಗಳೂರು: ನಗರದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಳದಿಂದ ಸಕ್ರಿಯ ಪ್ರಕರಣಗಳ ಸಂಖ್ಯೆ 6,248ಕ್ಕೆ ಏರಿಕೆಯಾಗಿದೆ. ಭಾನುವಾರ 746 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಸೋಂಕು ದೃಢ ಪ್ರಮಾಣ ಶೇ 3.25 ರಷ್ಟಿದೆ.



ಮರಣ ಪ್ರಕರಣ ಹೊಸದಾಗಿ ವರದಿಯಾಗಿಲ್ಲ. ಸೋಂಕಿತರಲ್ಲಿ ಬೆಂಗಳೂರಿನಲ್ಲಿ 573 ಮಂದಿ ಹೊಸದಾಗಿ ಚೇತರಿಸಿಕೊಂಡಿದ್ದಾರೆ. ಸೋಂಕಿತರ ಒಟ್ಟು ಸಂಖ್ಯೆ 18.06 ಲಕ್ಷಕ್ಕೆ ಏರಿದೆ. ಸೋಂಕಿತರಲ್ಲಿ ಈವರೆಗೆ 17.83 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ.

ಸದ್ಯ 93 ಮಂದಿ ಆಸ್ಪತ್ರೆ ಚಿಕಿತ್ಸೆಗೆ ಒಳಗಾಗಿದ್ದಾರೆ. 84 ಮಂದಿ ಸಾಮಾನ್ಯ ಹಾಸಿಗೆ, ಆರು ಮಂದಿ ಎಚ್‌ಡಿಯು ಹಾಸಿಗೆ ಹಾಗೂ ಮೂವರು ಐಸಿಯು ಹಾಸಿಗೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಆ. 11ರಿಂದ ‘ಹರ್ ಘರ್ ತಿರಂಗಾ’

ಬೆಂಗಳೂರು: ಅಮೃತ ಸ್ವಾತಂತ್ರ್ಯೋತ್ಸವ ಪ್ರಯುಕ್ತ ಕೇಂದ್ರ ಸರ್ಕಾರ ಆಗಸ್ಟ್ 11 ರಿಂದ 17ರವರೆಗೆ ಹಮ್ಮಿಕೊಂಡಿರುವ ‘ಹರ್ ಘರ್ ತಿರಂಗಾ’ ಕಾರ್ಯಕ್ರಮವನ್ನು ಉನ್ನತ ಶಿಕ್ಷಣ ಮತ್ತು ಕಾಲೇಜು ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆ (ಡಿಸಿಟಿಇ) ವ್ಯಾಪ್ತಿಯಲ್ಲಿ ಯಶಸ್ವಿಗೊಳಿಸುವಂತೆ ಸುತ್ತೋಲೆ ಹೊರಡಿಸಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದ್ದಾರೆ.

‘ಈ ಅಭಿಯಾನದಡಿ ಮನೆ- ಮನೆಗಳಲ್ಲಿ ರಾಷ್ಟ್ರಧ್ವಜ ಹಾರಿಸಿ, ರಾಷ್ಟ್ರಪ್ರೇಮ ಅಭಿವ್ಯಕ್ತಗೊಳಿಸಲು ಕರೆ ಕೊಡಲಾಗಿದೆ. ಪೂರಕವಾಗಿ, ಎಲ್ಲ ವಿಶ್ವವಿದ್ಯಾನಿಲಯಗಳು, ಸರ್ಕಾರಿ, ಅನುದಾನಿತ, ಅನುದಾನರಹಿತ ಪದವಿ ಕಾಲೇಜುಗಳು ಮತ್ತು ಡಿಪ್ಲೊಮಾ ಕಾಲೇಜುಗಳಲ್ಲೂ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ’ ಎಂದು ತಿಳಿಸಿದ್ದಾರೆ.

ತರಗತಿಗಳ ಸಮಯದಲ್ಲಿ ಈ ಬಗ್ಗೆ ತಿಳಿಸಬೇಕು, ಸೂಚನಾ ಫಲಕಗಳಲ್ಲಿ ಮಾಹಿತಿ ಹಾಕಬೇಕು, ಆಯಾ ಕಾಲೇಜುಗಳ ವಾಹನಗಳ ಮೇಲೆ ಧ್ವಜ ಅಳವಡಿಸಲು ತಿಳಿಸಬೇಕು. ಅಲ್ಲದೆ, ತೆಗೆದುಕೊಂಡ ಕ್ರಮಗಳ ಬಗ್ಗೆ ಪ್ರತಿ ವಾರದ ಕೊನೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವೆಬ್ ಸೈಟ್‌ನಲ್ಲಿ kanbahvblr@gmail.com ಅಪ್‌ಲೋಡ್ ಮಾಡಬೇಕು ಎಂದು ಸೂಚಿಸಲಾಗಿದೆ. ಕೇಂದ್ರ ಸರ್ಕಾರದ ಜಾಲತಾಣದಲ್ಲಿ amritmahotsav.nic.in ‘ಹರ್ ಘರ್ ತಿರಂಗಾ’ ಅಡಿಯಲ್ಲಿ ಈ ಕುರಿತು ಇರುವ ಬ್ಯಾನರ್ ಮತ್ತು ಪೋಸ್ಟರ್‌ಗಳ ಮಾದರಿ ಬಳಸಿಕೊಳ್ಳಬೇಕು ಎಂದೂ ಸಚಿವರು ಹೇಳಿದ್ದಾರೆ.

‘ಸತತ ಶ್ರಮದಿಂದ ಯಶಸ್ಸು’


ಪಿಇಎಸ್ ವಿವಿ ಕುಲಾಧಿಪತಿ ದೊರೆಸ್ವಾಮಿ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸತತ ಪರಿಶ್ರಮದಿಂದ ಮಾತ್ರ ಜೀವನದಲ್ಲಿ ಯಶಸ್ಸು ಗಳಿಸಲು ಸಾಧ್ಯ’ ಎಂದು ಪಿ.ಇ.ಎಸ್ ವಿಶ್ವವಿದ್ಯಾಲಯ ಕುಲಾಧಿಪತಿ ಎಂ.ಆರ್.ದೊರೆಸ್ವಾಮಿ ಹೇಳಿದರು.

ಸಂಸ್ಥೆ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಪಾಲಿಟೆಕ್ನಿಕ್‌ನ ಪ್ರಥಮ ವರ್ಷದ ಡಿಪ್ಲೊಮಾ ತರಗತಿ ಉದ್ಘಾಟಿಸಿ, ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಿದರು.

‘ಡಿಪ್ಲೊಮಾದ ಬಗ್ಗೆ ಕೆಲ ವಿದ್ಯಾರ್ಥಿಗಳಲ್ಲಿ ಕೀಳರಿಮೆಯಿದೆ. ಎಂಜಿನಿಯರಿಂಗ್ ಮತ್ತು ವೈದ್ಯಕೀಯಕ್ಕೆ ಸಮಾನ ಅವಕಾಶಗಳು ಡಿಪ್ಲೊಮಾ ಪದವೀಧರರಿಗೂ ಇದೆ. ಮೆಂಟರಿಂಗ್ ವ್ಯವಸ್ಥೆ, ಯೋಗ ತರಗತಿಗಳನ್ನು ರಾಜ್ಯದ ಎಲ್ಲ ಶಾಲಾ–ಕಾಲೇಜುಗಳಲ್ಲಿ ಪ್ರಾರಂಭಿಸಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಸಂಸ್ಥೆಯಲ್ಲಿ ಈಗಾಗಲೇ ಈ ವ್ಯವಸ್ಥೆ ಯನ್ನು ಪ್ರಾರಂಭಿಸಲಾಗಿದೆ’ ಎಂದರು.



ಪಿ.ಇ.ಎಸ್ ವಿಶ್ವವಿದ್ಯಾಲಯದ ಕುಲಪತಿ ಜೆ.ಸೂರ್ಯಪ್ರಸಾದ್, ಎಲ್.ಎ.ರವಿಸುಬ್ರಹ್ಮಣ್ಯ, ಎಂ.ಆರ್.ದೊರೆಸ್ವಾಮಿ, ಕುಲಸಚಿವ ಕೆ.ಎಸ್. ಶ್ರೀಧರ್, ಪಿಇಎಸ್ ಹನುಮಂತನಗರ ಕ್ಯಾಂಪಸ್‌ನ ನಿರ್ದೇಶಕ ಪ್ರೊ.ಎಂ.ವಿ. ಸತ್ಯನಾರಾಯಣ ಹಾಗೂ ಪ್ರಾಂಶುಪಾಲ ಎಚ್.ಎನ್. ದೇವರಾಜು ಅವರು ಶೈಕ್ಷಣಿಕ ಕೈಪಿಡಿ ಬಿಡುಗಡೆ ಮಾಡಿದರು.

ಶಾಸಕ ಎಲ್.ಎ.ರವಿ ಸುಬ್ರಹ್ಮಣ್ಯ ಅವರು ವಿವಿಧ ವಿಭಾಗಗಳಲ್ಲಿ ಅಧಿಕ ಅಂಕ ಪಡೆದ ಅಂತಿಮ ವರ್ಷದ ನಾಲ್ವರು ವಿದ್ಯಾರ್ಥಿಗಳಿಗೆ ಚಿನ್ನದ ಪದಕ ವಿತರಿಸಿದರು. ಮೊದಲ, 2ನೇ ವರ್ಷದ 8 ವಿದ್ಯಾರ್ಥಿ ಗಳಿಗೆ ಪುಸ್ತಕ ಖರೀದಿಗೆ ಉಡುಗೊರೆ ಕೂಪನ್‌ಗಳನ್ನು ನೀಡಿದರು.

‘ವಿಶ್ವವಿದ್ಯಾಲಯವು ಐಎಸ್‌ಆರ್‌ಒ ಮತ್ತು ಡಿಆರ್‌ಡಿಒ ಸಹಯೋಗದೊಂದಿಗೆ ಎರಡು ಮೈಕ್ರೊ ಉಪಗ್ರಹವನ್ನು ತಯಾರಿಸುತ್ತಿರುವುದು ಹೆಮ್ಮೆಯ ವಿಷಯ. ವಿದ್ಯಾರ್ಥಿಗಳಿಗೆ ಉತ್ತಮ ಭವಿಷ್ಯ ರೂಪಿಸಿಕೊಡಲು ಸಂಸ್ಥೆ ಶ್ರಮಿಸುತ್ತಿದೆ’ ಎಂದು ಎಲ್.ಎ. ರವಿಸುಬ್ರಹ್ಮಣ್ಯ ಮೆಚ್ಚುಗೆ ವ್ಯಕ್ತಪಡಿಸಿದರು.

‘ಕಾಂಗ್ರೆಸ್ ಅಧಿಕಾರಕ್ಕೆ ಬರಲು ಶ್ರಮಿಸಿ’

ಕೆ.ಆರ್.ಪುರ: ಪಕ್ಷ ಸಂಘಟನೆಗೆ ಒತ್ತು ನೀಡುವ ಮೂಲಕ ಮುಂದಿನ ಬಾರಿ ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತರಲು ಶ್ರಮಿಸಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಹೇಳಿದರು. ಮಹದೇವಪುರ ಕ್ಷೇತ್ರದಲ್ಲಿ ಬೆಂಗಳೂರು ಕೇಂದ್ರ ಜಿಲ್ಲಾ ಕಾಂಗ್ರೆಸ್ ಸಮಿತಿಯ ನವ ಸಂಕಲ್ಪ ಚಿಂತನಾ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು.

ಕಾಂಗ್ರೆಸ್ ಸರ್ವ ಜನಾಂಗದ ಹಿತ ಕಾಯುವ ಪಕ್ಷವಾಗಿದೆ. ಪೆಟ್ರೋಲ್, ಡೀಸೆಲ್ ಹಾಗೂ ಅಡುಗೆ ಅನಿಲ ಸೇರಿ ಬೆಲೆ ಏರಿಕೆಗೆ ಜನತೆ ತತ್ತರಿಸಿದ್ದು, ಬಿಜೆಪಿ ಸರ್ಕಾರದ ಜನವಿರೋಧಿ ಆಳ್ವಿಕೆಗೆ ಮುಂದೆ ಜನರು ತಕ್ಕಪಾಠ ಕಲಿಸಲಿದ್ದಾರೆ ಎಂದು ಅವರು ಹೇಳಿದರು.

’ಮಹದೇವಪುರ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷವನ್ನು ಬಲಪಡಿಸುವ ಮೂಲಕ ಅಧಿಕಾರಕ್ಕೆ ತರಬೇಕಿದೆ. ರಾಜ್ಯದಲ್ಲಿ ಪಕ್ಷದ ಪರವಾಗಿ ಉತ್ತಮವಾದ ಒಲವು ವ್ಯಕ್ತವಾಗುತ್ತಿದ್ದು, ಎಲ್ಲರೂ ಒಗ್ಗಟ್ಟಾಗಿ ಪಕ್ಷದ ಸಂಘಟನೆಗೆ ಶ್ರಮಿಸಿ‘ ಎಂದು ಹೇಳಿದರು.

ಕುಂದು ಕೊರತೆ | ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.



ಸರ್.ಎಂ. ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ದುರಸ್ತಿಯಾಗದ ಮೋರಿ.

ಸರ್ ಎಂ.ವಿ ಬಡಾವಣೆಗೆ ಸೌಲಭ್ಯ ಕಲ್ಪಿಸಿ

ಸರ್ ಎಂ.ವಿಶ್ವೇಶ್ವರಯ್ಯ ಬಡಾವಣೆಗೆ ಇದುವರೆಗೂ ಮೂಲಸೌಲಭ್ಯ ಕಲ್ಪಿಸಿಲ್ಲ. ಮೋರಿಗಳನ್ನು ಮುಚ್ಚದೆ ಬಿಟ್ಟಿರುವುದರಿಂದ ಮಕ್ಕಳು ಹಿರಿಯ ನಾಗರಿಕರು ಹಸು, ಕರುಗಳು ಬಿದ್ದಿರುವ ಉದಾಹರಣೆಗಳಿವೆ. ರಸ್ತೆಗಳ ತುಂಬೆಲ್ಲಾ ಕಸದ ರಾಶಿ ಮತ್ತು ಕೋಳಿ ರೆಕ್ಕೆ ಪುಕ್ಕ ಬಿದ್ದರೂ ಸ್ವಚ್ಛತೆಗೆ ಆದ್ಯತೆ ನೀಡಿಲ್ಲ. ಖಾಲಿ ನಿವೇಶನಗಳಲ್ಲಿ ಗಿಡಗಂಟಿ ಬೆಳೆದಿವೆ. ಅನೈತಿಕ ಚಟುವಟಿಕೆಗಳಿಗೆ ಆಸ್ಪದವಾಗುತ್ತಿದೆ. ಬಡಾವಣೆಯಲ್ಲಿ ತಕ್ಷಣವೇ ಸೌಲಭ್ಯಗಳನ್ನು ಕಲ್ಪಿಸಲು ಕ್ರಮಗಳನ್ನು ಕೈಗೊಳ್ಳಬೇಕು ಎಂಬುದು ಸ್ಥಳೀಯ ನಿವಾಸಿಗಳ ಒತ್ತಾಯ.

ನಂಜನಹಳ್ಳಿ ನಾರಾಯಣ, ಸರ್.ಎಂ. ವಿಶ್ವೇಶ್ವರಯ್ಯ ಬಡಾವಣೆ ನಿವಾಸಿ



ಪೈಪ್‌ಲೈನ್ ಅಳವಡಿಸಲು ರಾಘವೇಂದ್ರ ಬಡಾವಣೆಯಿಂದ ಚಾಮರಾಜಪೇಟೆಗೆ ಸಂಪರ್ಕ ಕಲ್ಪಿಸುವ ರಸ್ತೆ ಅಗೆದು ಬಿಟ್ಟಿರುವುದು

ಅಗೆದ ರಸ್ತೆ ಮುಚ್ಚಲು ಆಗ್ರಹ

ಚಾಮರಾಜಪೇಟೆಗೆ ಸಂಪರ್ಕ ಕಲ್ಪಿಸುವ ರಾಘವೇಂದ್ರ ಬಡಾವಣೆ 3ನೇ ಕ್ರಾಸ್ 5ನೇ ಮುಖ್ಯ ರಸ್ತೆಯನ್ನು ನಾಲ್ಕು ತಿಂಗಳ ಹಿಂದೆ ಪೈಪ್‌ಲೈನ್ ಬದಲಾವಣೆಗೆ ಅಗೆದ ರಸ್ತೆ ಇದುವರೆಗೂ ದುರಸ್ತಿಗೊಳಿಸಿಲ್ಲ. ಮಳೆ ಬಂದರೆ ರಸ್ತೆ ಕೆಸರು ಗದ್ದೆಯಂತಾಗುತ್ತದೆ. ಬೇಸಿಗೆ ಕಾಲದಲ್ಲಿ ಪ್ರತಿದಿನ ದೂಳಿನ ಮಜ್ಜನವಾಗುತ್ತಿದೆ. ಸ್ಥಳೀಯರ ಗಮನಕ್ಕೆ ತಾರದೇ ಅಗೆಯಲಾಗಿದೆ. ಈ ಕುರಿತು ಸಂಬಂಧ ಪಟ್ಟ ಅಧಿಕಾರಿಗಳಿಗೆ ಹಲವಾರು ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ.

ಸುಮೇಧ, ಸ್ಥಳೀಯ ನಿವಾಸಿ

ಹೊಸಕೆರೆಹಳ್ಳಿ ರಸ್ತೆ: ಬಾಯ್ತೆರೆದ ಗುಂಡಿ

ಹೊಸಕೆರೆಹಳ್ಳಿ ಪೆಟ್ರೋಲ್ ಬಂಕ್ ಬಳಿ ಬೃಹದಾಕಾರದ ಗುಂಡಿ ಬಾಯ್ತೆರೆದು ಕೊಂಡಿದೆ. ಪ್ರತಿನಿತ್ಯ ಈ ಭಾಗದಲ್ಲಿ ಸಂಚರಿಸುವ ಸಾರ್ವಜನಿಕರಿಗೆ ಮತ್ತು ಶಾಲಾ ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗುತ್ತಿದೆ. ಈ ಗುಂಡಿಯ ಮುಂದೆ ಬಿಎಂಟಿಸಿಯ ಬಸ್ ನಿಲ್ದಾಣವಿದೆ. ಬಸ್ ಹತ್ತಲು ಓಡುವ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು ಈ ಗುಂಡಿಗೆ ಬಿದ್ದು ಕಾಲು ಕೈ ಮುರಿದುಕೊಂಡಿರುವ ಸಾಕಷ್ಟು ನಿದರ್ಶನಗಳಿವೆ. ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು

ಸಿ.ಎ ಕೃಷ್ಣಮೂರ್ತಿ, ಸ್ಥಳೀಯ ನಿವಾಸಿ



ಹೊಸಕೆರೆಹಳ್ಳಿ ಪೆಟ್ರೋಲ್ ಬಂಕ್ ಬಳಿ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು

ಉದ್ಘಾಟನೆ ಭಾಗ್ಯ ಕಾಣದ ನೀರಿನ ಘಟಕ

ಕೃಷ್ಣರಾಜಪುರ ವಿಧಾನಸಭಾ ಕ್ಷೇತ್ರದ ಬಸವನಪುರ ವಾರ್ಡ್ ನಂಬರ್ 52ಕ್ಕೆ ಸೇರಿದ ಮೇಡಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶುದ್ಧ ಕುಡಿಯುವ ನೀರಿನ ಘಟಕ ಇದುವರೆಗೂ ಉದ್ಘಾಟನೆ ಭಾಗ್ಯ ಕಂಡಿಲ್ಲ. ಈ ಘಟಕವನ್ನು ನಿರ್ಮಿಸಿ ಹಲವು ತಿಂಗಳುಗಳಾಗಿವೆ. ಬಿಬಿಎಂಪಿ ಅಧಿಕಾರಿಗಳು ಮತ್ತು ಸ್ಥಳೀಯ ಜನ ಪ್ರತಿನಿಧಿಗಳು ಶುದ್ಧ ಕುಡಿಯುವ ನೀರಿನ ಘಟಕದ ಉದ್ಘಾಟನೆಗೆ ಆಸಕ್ತಿ ತೋರಬೇಕು.

ಕಿರಣ್ ಕುಮಾರ್.ಜೆ, ಮೇಡಹಳ್ಳಿ ನಿವಾಸಿ



ಉದ್ಘಾಟನೆ ಭಾಗ್ಯ ಕಾಣದ ಶುದ್ಧ ನೀರಿನ ಘಟಕ

ನಾಯಿಗಳ ಕಾಟದಿಂದ ರಕ್ಷಿಸಿ

ಬೆಂಗಳೂರಿನ ದೂರವಾಣಿ ನಗರ ಐಟಿಐ ಸಿಬಿಎಸ್ ಪಬ್ಲಿಕ್ ಶಾಲೆ ಮತ್ತು ಕೆ.ಆರ್.ಪುರ ಬಡಾವಣೆ ಸುತ್ತ ಮುತ್ತ ನಾಯಿಗಳ ಹಾವಳಿ ಹೆಚ್ಚಾಗಿದೆ. ಶಾಲೆಗೆ ಹೋಗುವ ಮಕ್ಕಳಿಗೆ ಮತ್ತು ವಾಯು ವಿಹಾರಕ್ಕೆ ತೆರಳುವ ವೃದ್ಧರಿಗೆ ನಾಯಿಗಳು ಗುಂಪು ಗುಂಪಾಗಿ ಅಟ್ಟಿಸಿಕೊಂಡು ಬರುತ್ತಿವೆ. ನಾಯಿಗಳಿಗೆ ಹೆದರಿ ಓಡುವಾಗ ಹಲವರು ಬಿದ್ದು ಗಾಯಗೊಂಡಿದ್ದಾರೆ. ಮಕ್ಕಳ ಊಟದ ಡಬ್ಬಿಗೆ ಬಾಯಿ ಹಾಕುತ್ತಿವೆ. ಸಂಬಂಧಪಟ್ಟ ಅಧಿಕಾರಿಗಳು ನಾಯಿಗಳ ಹಾವಳಿಯನ್ನು ನಿಯಂತ್ರಿಸಿ ಮಕ್ಕಳನ್ನು ರಕ್ಷಿಸಬೇಕು. ನಾಯಿಗಳ

ಎಂ.ಎಸ್. ಇಂಚರ ದತ್ತ, 9ನೇ ತರಗತಿ ವಿದ್ಯಾರ್ಥಿ, ಕೆ.ಆರ್.ಪುರ

‘ಬಸ್ ತಂಗುದಾಣ ನಿರ್ಮಿಸಿ’

ತುಮಕೂರು ರಸ್ತೆ, ಪಾರ್ಲೆ–ಜಿ ಬಿಸ್ಕತ್ ಫ್ಯಾಕ್ಟರಿ ಹತ್ತಿರದ ಟೋಲ್ ಭಾಗದಲ್ಲಿ ಸಂಚರಿಸುವ ಬೆಂಗಳೂರಿನಿಂದ ಬೇರೆ ಬೇರೆ ಕಡೆ ಹಲವು ಬಸ್‌ಗಳು ಸಂಚರಿಸುತ್ತವೆ. ಆದರೆ, ಟೋಲ್‌ನಲ್ಲಿ ಸರ್ಕಾರಿ ಬಸ್‌ಗಳಲ್ಲಿ ಹತ್ತುವ ಪ್ರಯಾಣಿಕರಿಂದ ಬೇರೆ ವಾಹನಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ, ಟೋಲ್ ಬಳಿ ಸ್ವಲ್ಪ ಮುಂದೆ ಬಸ್ ತಂಗುದಾಣಕ್ಕೆ ವ್ಯವಸ್ಥೆ ಕಲ್ಪಿಸಬೇಕು. ಇದರಿಂದ ಮಹಿಳೆಯರಿಗೆ, ವೃದ್ಧರಿಗೆ ಮಕ್ಕಳಿಗೆ ಅನುಕೂಲವಾಗಲಿದೆ.

ಪಿ.ಸ್ವಾಮಿ, ಪ್ರಯಾಣಿಕ

ಕಾಮಗಾರಿ ಪೂರ್ಣಗೊಳಿಸಲು ಆಗ್ರಹ

ಇಂದಿರಾನಗರದ ಮೊದಲನೇ ಹಂತದ ಪಾದಚಾರಿ ಮಾರ್ಗದ ಕಾಮಗಾರಿ ಆಮೆ ಗತಿಯಲ್ಲಿ ಸಾಗಿದೆ. ಇದರಿಂದ ಪ್ರತಿನಿತ್ಯ ದೂಳಿನ ಮಜ್ಜನವಾಗುತ್ತಿದೆ. ಪಾದಚಾರಿಗಳು ಮುಖ್ಯ ರಸ್ತೆಯಲ್ಲಿ ಓಡಾಡುವುದರಿಂದ ಅಪಘಾತಗಳು ಸಂಭವಿಸುತ್ತಿದ್ದು, ವಾಹನ ದಟ್ಟಣೆಯಾಗುತ್ತಿದೆ. ಪಾದಚಾರಿ ಮಾರ್ಗದ ದುರಸ್ತಿ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು.

ಕಲ್ಮೇಶ.ಕೆ.ಎಸ್. ಸ್ಥಳೀಯ ನಿವಾಸಿ



ಇಂದಿರಾನಗರ ಮುಖ್ಯರಸ್ತೆಯ ಪಾದಚಾರಿ ಮಾರ್ಗದ ಕಾಮಗಾರಿ ನಿಧಾನವಾಗಿ ಸಾಗುತ್ತಿದೆ.

ಈದ್ಗಾ: ಆಟದ ಮೈದಾನವಾಗಿಯೇ ಉಳಿಯಲಿ– ನಾಗರಿಕರ ಒಕ್ಕೂಟ ವೇದಿಕೆ

12ಕ್ಕೆ ಚಾಮರಾಜಪೇಟೆ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಾಮರಾಜಪೇಟೆ ಈದ್ಗಾ ಮೈದಾನವನ್ನು ಆಟದ ಮೈದಾನವನ್ನಾಗಿಯೇ ಉಳಿಸಿಕೊಳ್ಳಬೇಕು. ಎಲ್ಲ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅವಕಾಶ ಮಾಡಿಕೊಡಬೇಕು' ಎಂದು ಆಗ್ರಹಿಸಿ ಚಾಮರಾಜಪೇಟೆ ನಾಗರಿಕರ ಒಕ್ಕೂಟ ವೇದಿಕೆ ಜುಲೈ 12ರಂದು ಬಂದ್‌ಗೆ ಕರೆ ನೀಡಿದೆ.

ಚಾಮರಾಜಪೇಟೆಯ ಜಂಗಮ ಸಮುದಾಯ ಭವನದಲ್ಲಿ ಸ್ಥಳೀಯ ಸುಮಾರು 30 ಸಂಘ–ಸಂಸ್ಥೆಗಳ ಸದಸ್ಯರು ಹಾಗೂ ನಾಗರಿಕರು ಚಾಮರಾಜಪೇಟೆ ನಾಗರಿಕರ ಒಕ್ಕೂಟ ವೇದಿಕೆಯಡಿ ಭಾನುವಾರ ಸಭೆ ನಡೆಸಿ ಬಂದ್ ನಡೆಸಲು ನಿರ್ಧಾರ ಕೈಗೊಂಡಿದ್ದಾರೆ.

'ಈದ್ಗಾ ಮೈದಾನಕ್ಕೆ ಸಂಬಂಧಿಸಿದಂತೆ ವೇದಿಕೆ ಒಂದಷ್ಟು ಬೇಡಿಕೆಗಳನ್ನು ಮುಂದಿಟ್ಟಿದೆ. ಅವುಗಳನ್ನು ಮನವಿ ರೂಪದಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಸಲ್ಲಿಸಲಿದೆ. ಬೇಡಿಕೆ ಈಡೇರಿಸದಿದ್ದರೆ ಚಾಮರಾಜಪೇಟೆ

ಮುಖ್ಯಾಂಶಗಳು

- 30 ಸಂಘ–ಸಂಸ್ಥೆಗಳ ಸದಸ್ಯರು, ಮುಖಂಡರ ಸಭೆ
- ಮನವಿಗೆ ಸ್ಪಂದಿಸದಿದ್ದರೆ ಬಂದ್ ನಡೆಸಲು ಕ್ರಮ
- ಬಿಬಿಎಂಪಿ ಮುಖ್ಯ ಆಯುಕ್ತರ ಹೇಳಿಕೆಗೆ ಆಕ್ಷೇಪ

ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಪ್ರದೇಶದಲ್ಲಿ ಶಾಂತಿಯುತವಾಗಿ ಬಂದ್ ನಡೆಸಲಾಗುವುದು' ಎಂದು ವೇದಿಕೆ ಸದಸ್ಯ ಶಶಾಂಕ್ ತಿಳಿಸಿದರು.

'ಬಿಬಿಎಂಪಿ ಮುಖ್ಯ ಆಯುಕ್ತರು ಈದ್ಗಾ ಮೈದಾನಕ್ಕೆ ಸಂಬಂಧಿಸಿದಂತೆ ಎರಡೆರಡು ಹೇಳಿಕೆಗಳನ್ನು ನೀಡಿದ್ದಾರೆ. ಅವುಗಳನ್ನು ಹಿಂಪಡೆಯಬೇಕು, ಕ್ಷಮೆಯಾಚಿಸಬೇಕು. ಆಟದ ಮೈದಾನವನ್ನಾಗಿಯೇ ಉಳಿಸಿಕೊಳ್ಳುತ್ತೇವೆ ಎಂದು ಸ್ಪಷ್ಟಪಡಿಸಬೇಕು' ಎಂದು ಒತ್ತಾಯಿಸಿದರು.

'ಶಾಸಕ ಜಮೀರ್ ಅಹಮದ್ 2006ರಲ್ಲಿ ಒಂದು ಒಪ್ಪಂದ



ಚಾಮರಾಜಪೇಟೆಯ ಜಂಗಮ ಸಮುದಾಯ ಭವನದಲ್ಲಿ ಸ್ಥಳೀಯ ಸುಮಾರು 30 ಸಂಘ–ಸಂಸ್ಥೆಗಳ ಸದಸ್ಯರು ಹಾಗೂ ನಾಗರಿಕರು ಚಾಮರಾಜಪೇಟೆ ನಾಗರಿಕರ ಒಕ್ಕೂಟ ವೇದಿಕೆಯಡಿ ಭಾನುವಾರ ಸಭೆ ನಡೆಸಿದರು

ಮಾಡಿದ್ದರು. ಇಲ್ಲಿ ಬಿರುಕುಬಿಟ್ಟಿರುವ ಗೋಡೆಯನ್ನು ದುರಸ್ತಿ ಮಾಡಲು ಅವಕಾಶ ಮಾಡಿಕೊಡಿ. ನಂತರ ಸಾರ್ವಜನಿಕರು ಗಣೇಶ, ದಸರಾ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಳ್ಳಿ. ವರ್ಷಕ್ಕೆ ಎರಡು ಬಾರಿ ನಮಗೆ ಅವಕಾಶ ಮಾಡಿಕೊಡಿ ಎಂದಿದ್ದರು. ದುರಸ್ತಿ ಮುಗಿದ ಮೇಲೆ ಈ ಮಾತನ್ನು ನಡೆಸಿಕೊಂಡಿಲ್ಲ. ಅವರು ಎಲ್ಲರಿಗೂ ಶಾಸಕರು, ಒಂದು ಸಮುದಾಯಕ್ಕಲ್ಲ. ಆದ್ದರಿಂದ ಅವರನ್ನೂ ಈ ಬಗ್ಗೆ ಪ್ರಶ್ನಿಸಲು ನಿರ್ಣಯ ಕೈಗೊಂಡಿದ್ದೇವೆ' ಎಂದರು.

'ಜೈ ಚಾಮರಾಜೇಂದ್ರ ಒಡೆಯರ್ ಆಟದ ಮೈದಾನ ಎಂದು ನಾಮಕರಣ ಮಾಡಬೇಕು ಎಂದೂ ಒತ್ತಾಯ ಮಾಡಲಿದ್ದೇವೆ' ಎಂದೂ ಅವರು ಹೇಳಿದರು.



ಬೆಂಗಳೂರು ಹುಡುಗರು, ರೋಟರಿ ಕ್ಲಬ್ ಸಹಯೋಗದಲ್ಲಿ ಫುಲ್ ಸರ್ಕಲ್ ಸಂಸ್ಥೆಯು ಹೊಸಕೆರೆಹಳ್ಳಿಯಲ್ಲಿ ಭಾನುವಾರ ಹಮ್ಮಿಕೊಂಡ 'ಮೊಳೆ ಮುಕ್ತ ಮರ' ಅಭಿಯಾನದಡಿ ಸ್ವಯಂ ಸೇವಕರು ಮರಗಳಿಗೆ ಹೊಡೆಯಲಾಗಿದ್ದ ಮೊಳೆ, ಬ್ಯಾನರ್ ಹಾಗೂ ಕೇಬಲ್ ವೈರ್‌ಗಳನ್ನು ತೆರವುಗೊಳಿಸಿದರು

'ಸಮಾಜ ಒಡೆಯುವ ಕೆಲಸ ಮಾಡಲ್ಲ'

ಬೆಂಗಳೂರು: ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರು ವಿಶ್ವಕರ್ಮ ಸಮಾಜ ವನ್ನು ಒಡೆದು ಇಬ್ಭಾಗ ಮಾಡಲು ಮುಂದಾಗಿದ್ದಾರೆ ಎಂಬ ಆರೋಪದಲ್ಲಿ ಯಾವುದೇ ಹುರುಳಿಲ್ಲ. ಬಿಜೆಪಿಯಾಗಲಿ, ಸಚಿವರಾಗಲಿ ಸಮಾಜ ಒಡೆಯುವ ಕೆಲಸ ಮಾಡುವುದಿಲ್ಲ ಎಂದು ಒಬಿಸಿ ಮೋರ್ಚಾ ರಾಜ್ಯ ಅಧ್ಯಕ್ಷ ನೆ.ಲ. ನರೇಂದ್ರಬಾಬು ಹೇಳಿದ್ದಾರೆ.

'ವಿಶ್ವಕರ್ಮ ಸಮಾಜದ ಸ್ವಾಮೀಜಿಗಳು ಮತ್ತು ಪ್ರಮುಖರು ಬಂದು ಮನವಿಪತ್ರ ನೀಡಿದಾಗ ಅದನ್ನು ಸ್ವೀಕರಿಸುವುದು ಅವರ ಕರ್ತವ್ಯ. ಆ ರೀತಿ ಸೌಜನ್ಯದಿಂದ ಸ್ವೀಕರಿಸಿದ್ದಾರೆ. ಅದನ್ನು ಸ್ವೀಕರಿಸಬಾರದು ಎಂದು ಹೇಳುವುದು ಸೂಕ್ತವಲ್ಲ. ಕೆ.ಪಿ.ನಂಜುಂಡಿ ಅವರನ್ನು ಪಕ್ಷ ಕಡೆಗಣಿಸಿಲ್ಲ'ಎಂದು ತಿಳಿಸಿದ್ದಾರೆ.

ಜ್ಯೇಷ್ಠತೆ, ಬಡ್ತಿಯಲ್ಲಿ ಅನ್ಯಾಯ ಕಾರಜೋಳಗೆ ಅಹವಾಲು

ಬೆಂಗಳೂರು: 'ಲೋಕೋಪಯೋಗಿ ಇಲಾಖೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಧಿಕಾರಿ, ನೌಕರರಿಗೆ ಜ್ಯೇಷ್ಠತೆ, ಬಡ್ತಿಯಲ್ಲಿ ಅನ್ಯಾಯವಾಗುತ್ತಿದ್ದು, ನ್ಯಾಯ ಒದಗಿಸಬೇಕು' ಎಂದು ಒತ್ತಾಯಿಸಿ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಅವರಿಗೆ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ಅಧಿಕಾರಿ, ನೌಕರರ ಸಂಘ ಅಹವಾಲು ಸಲ್ಲಿಸಿದೆ.

'ಇಲಾಖೆಯ ಕಾರ್ಯದರ್ಶಿ ಕೃಷ್ಣಾರೆಡ್ಡಿಯವರು ಎಲ್ಲ ವೃಂದಗಳಲ್ಲಿ ಈ ವರ್ಗದವರಿಗೆ ಬಡ್ತಿ ತಪ್ಪಿಸುವ ಕೆಲಸದಲ್ಲಿ ನಿರತರಾಗಿರುತ್ತಾರೆ' ಎಂದು ಆರೋಪಿಸಿದ ಸಂಘದ ಅಧ್ಯಕ್ಷ ಡಿ. ಚಂದ್ರಶೇಖರಯ್ಯ, 'ನಮ್ಮ ಮನವಿಗೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ' ಎಂದರು.

'ಬಿ.ಕೆ.ಪವಿತ್ರ ತೀರ್ಪು–2 ಬಂದ ಬಳಿಕ ಜ್ಯೇಷ್ಠತೆ ಪರಿಷ್ಕರಿಸಿ, ಅರ್ಹತೆ ಇಲ್ಲದ ಸಾಮಾನ್ಯ ವರ್ಗದವರಿಗೆ ಹಿಂಬಡ್ತಿ ನೀಡಿಲ್ಲ. ಅಧೀಕ್ಷಕ ಎಂಜಿನಿಯರ್ ಹುದ್ದೆಯಿಂದ ಮುಖ್ಯ ಎಂಜಿನಿಯರ್ ಹುದ್ದೆಗೆ ಮುಂಬಡ್ತಿ ಹೊಂದುವವರೆಲ್ಲ ಜ್ಯೇಷ್ಠತೆಯಲ್ಲಿ ಪರಿಶಿಷ್ಟ ಜಾತಿಯವರು ಎಂಬ ಕಾರಣಕ್ಕೆ ಇದೇ 27ರಂದು ನಡೆಯಬೇಕಿದ್ದ ಇಲಾಖಾ ಪದೋನ್ನತಿ ಸಮಿತಿ (ಡಿಪಿಸಿ) ಸಭೆ ಮುಂದೂಡುವಂತೆ ಮಾಡಲಾಗಿದೆ. ಅಧೀಕ್ಷಕ ಎಂಜಿನಿಯರ್ ಹುದ್ದೆಯಲ್ಲಿ ಕೇವಲ 11 ಹುದ್ದೆಗಳು ಖಾಲಿ ಇದ್ದರೂ ಸಾಮಾನ್ಯ ವರ್ಗದ 31 ಜನರಿಗೆ ಡಿಪಿಸಿ ಸಭೆ ನಡೆಸಿ ಸ್ಥಳ ನಿಯುಕ್ತಿಗೊಳಿಸಿದರೆ, ಪರಿಶಿಷ್ಟ ಜಾತಿಯ 20 ಅಧೀಕ್ಷಕ ಎಂಜಿನಿಯರ್‌ಗಳು ಹಾಲಿ ಕಾರ್ಯ-ನಿರ್ವಹಣೆಯಿಂದ ಸ್ಥಳ ನಿರೀಕ್ಷಣೆಯ ಸಂಭವ ಉಂಟಾಗಲಿದೆ ಎಂದು ಮನವಿಯಲ್ಲಿ ಪ್ರಸ್ತಾಪಿಸಿದ್ದೇವೆ' ಎಂದರು.

'ಬ್ಯಾಕ್‌ಲಾಗ್ ಎಂಜಿನಿಯರ್‌ಗಳಿಗೆ 2004ರಿಂದ ಜ್ಯೇಷ್ಠತೆ ನಿಗದಿಪಡಿಸದೆ 700ಕ್ಕೂ ಹೆಚ್ಚು ಜನರು ಸಾಮಾನ್ಯ ವರ್ಗದವರೇ ಜೇಷ್ಠತೆಯಲ್ಲಿ ಹಿರಿತನಕ್ಕೆ ಬರುವಂತೆ ಮಾಡಲಾಗಿದೆ. ಸಹಾಯಕ ಅಭಿಯಂತರರು ವಿಭಾಗ-2 ಹುದ್ದೆಗೆ ಮುಂಬಡ್ತಿ ನೀಡಲು ಲೋಕೋಪಯೋಗಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಒಪ್ಪಿಗೆ ನೀಡಿದ್ದರೂ ಕ್ರಮ ವಹಿಸದಿರುವ ಬಗ್ಗೆಯೂ ಉಲ್ಲೇಖಿಸಿದ್ದೇವೆ' ಎಂದೂ ಹೇಳಿದರು.

'ಕೆಂಪೇಗೌಡರ ಜನಸೇವೆ ಸ್ಮರಣೀಯ'

ನೆಲಮಂಗಲ: 'ಕೆಂಪೇಗೌಡರ ದೂರದೃಷ್ಟಿ ಫಲವಾಗಿ ಬೆಂಗಳೂರು ಜಾಗತಿಕ ಮಟ್ಟದಲ್ಲಿ ಬೆಳೆಯಲು ಕಾರಣವಾಗಿದೆ' ಎಂದು ಮಾಜಿ ಸಚಿವ ಆಂಜನಮೂರ್ತಿ ತಿಳಿಸಿದರು.

ಕೆಪಿಸಿಸಿ ತಾಲ್ಲೂಕು ಘಟಕ ಕಾಂಗ್ರೆಸ್ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ನಾಡಪ್ರಭು ಕೆಂಪೇಗೌಡರ ಜಯಂತಿಯಲ್ಲಿ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಮಾತನಾಡಿದರು.

'ಮಹಾಪುರುಷರನ್ನು ಪ್ರಸ್ತುತ ದಿನಮಾನಗಳಲ್ಲಿಯೂ ನೆನೆಯುತ್ತೇವೆ. ನಾಡಪ್ರಭು ಕೆಂಪೇಗೌಡರು, ಬಸವೇಶ್ವರರು, ಅಂಬೇಡ್ಕರ್ ಇನ್ನು ಅನೇಕರು ತಾವು ಮಾಡಿದ ಕಾರ್ಯಗಳಿಂದ ಜನರ ಮನಸ್ಸಿನಲ್ಲಿ ಉಳಿದಿದ್ದಾರೆ' ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ಮಾಜಿ ಸಚಿವ ಆಂಜನಮೂರ್ತಿ ಮಾತನಾಡಿದರು. ಮುಖಂಡರಾದ ಚೌಡಯ್ಯ, ಸಪ್ತಗಿರಿ ಶಂಕರ್ ನಾಯಕ್, ಕಾರೆಹಳ್ಳಿ ವೆಂಕಟರಾಮು, ಎಚ್.ಪಿ. ಚೆಲುವರಾಜು, ಶಿವಣ್ಣ ಇದ್ದರು

ಮುಖಂಡ ಸಪ್ತಗಿರಿ ಶಂಕರ್ ನಾಯಕ್ ಅವರು ಮಾತನಾಡಿ, 'ಕೆಂಪೇಗೌಡರು ಪ್ರಕೃತಿ ವಿಕೋಪಗಳ ಅಪಾಯ ಕಡಿಮೆ ಇರುವ ಭೌಗೋಳಿಕವಾಗಿ ಎತ್ತರ ಪ್ರದೇಶದಲ್ಲಿರುವ ಬೆಂಗಳೂರನ್ನು ಆಯ್ಕೆ ಮಾಡಿಕೊಂಡು ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿ, ಮಾರುಕಟ್ಟೆ ನಿರ್ಮಾಣ ಮಾಡಿ, ಉದ್ಯೋಗಾವಕಾಶವನ್ನೂ ಕಲ್ಪಿಸಿಕೊಟ್ಟಿದ್ದಾರೆ' ಎಂದು ಸ್ಮರಿಸಿದರು.

ಮುಖಂಡ ಚಿಕ್ಕನಾಗಯ್ಯ ಮಾತನಾಡಿ ನೆಲಮಂಗಲದಲ್ಲಿ ಒಂದು ವೃತ್ತವನ್ನು ನಿರ್ಮಿಸಿ ಕೆಂಪೇಗೌಡರ ಕಂಚಿನ ಪ್ರತಿಮೆಯನ್ನು ಸ್ಥಾಪಿಸಬೇಕು ಎಂದು ಒತ್ತಾಯಿಸಿದರು.

ಮುಖಂಡರಾದ ಕಾರೆಹಳ್ಳಿ ವೆಂಕಟರಾಮು, ಎಚ್.ಪಿ.ಚೆಲುವರಾಜು, ಶಿವಣ್ಣ, ಉಮಾದೇವಿ, ಉಮೇಶ್, ರಂಗನಾಥ್ ಭಾಬು, ಯುವ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಯೋಗೀಶ್ ಇದ್ದರು

ನಗರದಲ್ಲಿ ಇಂದು

ಪವಮಾನ ಮಹಾಯಾಗ ಹಾಗೂ ಗಾಯತ್ರಿ ಬ್ರಹ್ಮರಥೋತ್ಸವ: ಮಹಾಗಣಪತಿ ಪ್ರಾರ್ಥನೆ, ಗಣಪತಿ ಪೂಜೆ, ಸ್ವಸ್ತಿ ಪುಣ್ಯಾಹ, ಪಂಚಗವ್ಯ, ದೇವನಾಂದಿ, ಅಂಕುರಾರ್ಪಣೆ, ರಕ್ಷಾಬಂಧನ, ಋತ್ವಿಕರಣ, ವಾಸ್ತುಮಂಡಲ ಪೂಜೆ, ವಾಸ್ತು ಹೋಮ, ರಾಕ್ಷೋಘ್ನ ಹೋಮ, ವಾಸ್ತು ಪರ್ಯಗ್ನೀಕರಣ, ಬಲಿಪ್ರದಾನ, ಆಯೋಜನೆ: ಮಹಾಯಾಗ ಕ್ಷೇತ್ರ ಗಾಯತ್ರಿ ದೇವಸ್ಥಾನ ಟ್ರಸ್ಟ್, ಸ್ಥಳ: ಯಶವಂತಪುರ ವೃತ್ತ, ಸಂಜೆ 5

'ಬೆಂಗಳೂರು ವಿಶ್ವವಿದ್ಯಾಲಯ ಪದವಿ ನೂತನ ಕನ್ನಡ ಭಾಷಾ ಪಠ್ಯಗಳು' ಕಾರ್ಯಾಗಾರ: ಉದ್ಘಾಟನೆ: ಬಿ.ಎನ್. ದಾಸೇಗೌಡ, ಅತಿಥಿಗಳು: ಆರ್. ಅಮರೇಂದ್ರ ಶೆಟ್ಟಿ, ಶಿವರಾಜ ಬ್ಯಾಡರಹಳ್ಳಿ, ಉಪಸ್ಥಿತಿ: ಬಿ.ಆರ್. ಧನಂಜಯ, ಆಯೋಜನೆ ಮತ್ತು ಸ್ಥಳ: ಆರ್.ಪಿ.ಎ ಪ್ರಥಮದರ್ಜೆ ಕಾಲೇಜು, ರಾಜಾಜಿನಗರ, ಬೆಳಿಗ್ಗೆ 10.30

ಪದಾಧಿಕಾರಿಗಳ ಪದಗ್ರಹಣ: ಅತಿಥಿಗಳು: ಜಿತೇಂದ್ರ ಅನೇಜಾ, ಟಿ.ಎನ್ ಸುಬ್ರಹ್ಮಣ್ಯನ್, ಆಯೋಜನೆ:ರೋಟರಿ ಬೆಂಗಳೂರು ಇಂದಿರಾನಗರ, ಸ್ಥಳ: ಹೋಟೆಲ್ ರಾಯಲ್ ರಿಚ್ಮಂಡ್, ಹಳೆಯ ವಿಮಾನ ನಿಲ್ದಾಣ ರಸ್ತೆ, ಸಂಜೆ: 6.30

ಡಾ.ವಿಜಯಾ ಅವರಿಂದ ಕೃತಿ ಲೋಕಾರ್ಪಣೆ

'ನನ್ನವ್ವನ ಬಯೋಗ್ರಫಿ' ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವ್ಯಕ್ತಿಯೊಳಗಿನ ತಾಯ್ತನ ಕಳೆದುಹೋಗುತ್ತಿರುವುದರಿಂದ ಸಮಾಜದಲ್ಲಿ ಬಿಕ್ಕಟ್ಟುಗಳು ಹೆಚ್ಚಾಗುತ್ತಿವೆ' ಎಂದು ಪತ್ರಕರ್ತೆ ಡಾ.ವಿಜಯಾ ಹೇಳಿದರು.

ಬಹುರೂಪಿ ಪ್ರಕಾಶನದ ಕಿರುಚಿತ್ರ ನಿರ್ದೇಶಕ ಜಯರಾಮಾಚಾರಿ ಅವರ ಕೃತಿ 'ನನ್ನವ್ವನ ಬಯೋಗ್ರಫಿ' ಪುಸ್ತಕವನ್ನು ಭಾನುವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಪ್ರತಿಯೊಬ್ಬರಲ್ಲೂ ತಾಯ್ತನವಿದ್ದರೆ ಸಮಾಜ ಆರೋಗ್ಯಕರವಾಗಿರುತ್ತದೆ. ತಾಯಿ ತನ್ನನ್ನು ಕಷ್ಟಕ್ಕೆ ಒಡ್ಡಿಕೊಂಡೇ ಕುಟುಂಬದ ಸ್ವಾಸ್ಥ್ಯ ರಕ್ಷಿಸುತ್ತಾಳೆ. ತಾಯ್ತನದ ಗುಣವನ್ನು ಈ ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಅಂತಹ ತಾಯ್ತನವನ್ನು ಕಾಪಾಡೋಣ' ಎಂದರು.

ಕಲಬುರಗಿ ರಂಗಾಯಣದ ನಿರ್ದೇಶಕ ಪ್ರಭಾಕರ ಜೋಶಿ



ಬಹುರೂಪಿ ಪ್ರಕಾಶನದ ಕಿರುಚಿತ್ರ ನಿರ್ದೇಶಕ ಜಯರಾಮಾಚಾರಿ ಅವರ ಕೃತಿ 'ನನ್ನವ್ವನ ಬಯೋಗ್ರಫಿ' ಪುಸ್ತಕವನ್ನು ಪತ್ರಕರ್ತೆ ಡಾ. ವಿಜಯಾ ಭಾನುವಾರ ಬಿಡುಗಡೆ ಮಾಡಿದರು. ಪತ್ರಕರ್ತರಾದ ಜಿ.ಎನ್. ಮೋಹನ್, ಎ.ಆರ್. ಮಣಿಕಾಂತ್, ಕಲಬುರ್ಗಿ ರಂಗಾಯಣದ ನಿರ್ದೇಶಕ ಪ್ರಭಾಕರ ಜೋಶಿ ಇದ್ದರು

ಮಾತನಾಡಿ, 'ರಂಗಭೂಮಿ ಹೃದಯಕ್ಕೆ ಹತ್ತಿರವಾಗುವುದೇ ಅದರ ತಾಯ್ತನದ ಗುಣದಿಂದ' ಎಂದರು.

ಪತ್ರಕರ್ತ ಜಿ.ಎನ್.ಮೋಹನ್ ಮಾತನಾಡಿ, 'ತಾಯಂದಿರನ್ನು ಗೌರವಿಸುವ, ಪ್ರೀತಿಸುವವರಿಗಾಗಿ ಪ್ರತೀ ವರ್ಷ ತಾಯಿಯನ್ನು ಕುರಿತ ಒಂದು ಕೃತಿ ಬಹುರೂಪಿ ಪ್ರಕಟಿಸುತ್ತದೆ' ಎಂದು ಘೋಷಿಸಿದರು.

ಲೇಖಕ ಎ.ಆರ್.ಮಣಿಕಾಂತ್, ಬಹುರೂಪಿ ಸಂಸ್ಥಾಪಕಿ ಶ್ರೀಜಾ ವಿ.ಎನ್ ಇದ್ದರು.

'ಗಾರ್ಮೆಂಟ್ಸ್ ಕಾರ್ಮಿಕರ ಬಗ್ಗೆ ಸರ್ಕಾರದ ನಿರ್ಲಕ್ಷ್ಯ' ಚರ್ಚಾ ಕಾರ್ಯಕ್ರಮ

ಕನಿಷ್ಠ ವೇತನ ಪರಿಷ್ಕರಣೆಗೆ ಕಾರ್ಮಿಕರ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನಿಷ್ಠ ವೇತನವನ್ನು ವೈಜ್ಞಾನಿಕ ರೀತಿಯಲ್ಲಿ ಪರಿಷ್ಕರಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದು ವಿವಿಧ ಗಾರ್ಮೆಂಟ್ಸ್‌ಗಳ ಕಾರ್ಮಿಕರು ಒತ್ತಾಯಿಸಿದರು.

ಗಾರ್ಮೆಂಟ್ಸ್ ಆ್ಯಂಡ್ ಟೆಕ್ಸ್‌ಟೈಲ್ಸ್ ಕಾರ್ಮಿಕರ ಒಕ್ಕೂಟ (ಜಿಎಟಿಡಬ್ಲ್ಯುಯು) ಹಾಗೂ ಪರ್ಯಾಯ ಕಾನೂನು ವೇದಿಕೆ (ಎಎಲ್‌ಎಫ್) ನಗರದಲ್ಲಿ ಭಾನುವಾರ ಆಯೋಜಿಸಿದ್ದ 'ಗಾರ್ಮೆಂಟ್ಸ್ ಕಾರ್ಮಿಕರ ಬಗ್ಗೆ ಸರ್ಕಾರದ ನಿರ್ಲಕ್ಷ್ಯ' ಚರ್ಚಾ ಕಾರ್ಯಕ್ರಮದಲ್ಲಿ ಹಕ್ಕೊತ್ತಾಯ ಮಂಡಿಸಲಾಯಿತು.

'ಕೆಲಸದ ಸ್ಥಳದಲ್ಲಿ ಮಹಿಳಾ



'ಗಾರ್ಮೆಂಟ್ಸ್ ಕಾರ್ಖಾನೆ ಕಾರ್ಮಿಕರು ಅನುಭವಿಸುತ್ತಿರುವ ಸಮಸ್ಯೆ ಹಾಗೂ ಸರ್ಕಾರ ತೋರುತ್ತಿರುವ ನಿರ್ಲಕ್ಷ್ಯ' ಕುರಿತ ಅಧ್ಯಯನ ವರದಿಯನ್ನು ಭಾನುವಾರ ಬಿಡುಗಡೆ ಮಾಡಲಾಯಿತು – ಪ್ರಜಾವಾಣಿ ಚಿತ್ರ

ಕಾರ್ಮಿಕರ ಮೇಲೆ ಕಿರುಕುಳ ನಡೆಯುತ್ತಿದ್ದು, ಇದನ್ನು ತಡೆಯಲು ಮಹಿಳಾ ಆಯೋಗ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹೆಚ್ಚು ಕ್ರಿಯಾಶೀಲವಾಗಿ ಕೆಲಸ ಮಾಡಬೇಕು. ಕಾರ್ಮಿಕರು ಕೆಲಸಕ್ಕೆ ಹೋಗಿ ಬರಲು ಸೂಕ್ತ ಸಾರಿಗೆ ವ್ಯವಸ್ಥೆ ಮಾಡಬೇಕು. ವನಿತಾ ಸಂಗಾತಿ ಯೋಜನೆಯನ್ನು ಗ್ರಾಮೀಣ ಕಾರ್ಮಿಕರಿಗೂ ವಿಸ್ತರಿಸಬೇಕು' ಎಂದೂ ಆಗ್ರಹಿಸಿದರು.

'ಚಿಕಿತ್ಸಾಲಯ, ಔಷಧಿ, ವೈದ್ಯರ ಕೊರತೆ ನೀಗಿಸಿ ಇಎಸ್‌ಐ ಆರೋಗ್ಯ ಸೇವೆಯನ್ನು ಕಾರ್ಮಿಕ ಸ್ನೇಹಿಯಾಗಿಸಬೇಕು. ಕಾರ್ಮಿಕರ ಮುಖಂಡರ ಮೇಲೆ ಹಲ್ಲೆಗಳು ನಡೆಯುತ್ತಿದೆ. ಕಾರ್ಮಿಕ ಇಲಾಖೆ ಮಧ್ಯಪ್ರವೇಶಿಸಿ, ನ್ಯಾಯ ಕೊಡಿಸಬೇಕು. ನಿರ್ದಿಷ್ಟ ಸಂಖ್ಯೆಯ ಸದಸ್ಯತ್ವ ಇರುವ ಕಾರ್ಮಿಕ ಸಂಘಟನೆಗಳನ್ನು ಮಾನ್ಯ ಮಾಡಲು ಕಾನೂನು ರೂಪಿಸಬೇಕು' ಎಂದೂ ಕಾರ್ಮಿಕರು ಒತ್ತಾಯಿಸಿದರು.

'ಗಾರ್ಮೆಂಟ್ಸ್ ಕಾರ್ಖಾನೆ ಕಾರ್ಮಿಕರು ಅನುಭವಿಸುತ್ತಿರುವ ಸಮಸ್ಯೆ ಹಾಗೂ ಸರ್ಕಾರ ತೋರುತ್ತಿರುವ ನಿರ್ಲಕ್ಷ್ಯ' ಕುರಿತ ಅಧ್ಯಯನ ವರದಿಯನ್ನು ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಯಿತು.

ಸಂತ ಶಿಶುನಾಳ ಶರೀಫರ ಹಾಡುಗಳಿಗೆ ತಲೆದೂಗಿದ ಸಭಿಕರು

ರಂಜಿಸಿದ 'ತತ್ವ ರಸಾಯನ'

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ ಮಾನಸ ಜೋಶಿ ಮತ್ತು ತಂಡದವರು ನೃತ್ಯರೂಪಕ ಪ್ರದರ್ಶಿಸಿದರು–ಪ್ರಜಾವಾಣಿ ಚಿತ್ರ

ಬೆಂಗಳೂರು: 'ಬೋಧ ಒಂದೇ ಬ್ರಹ್ಮನಾದ ಒಂದೇ ಸಾಧನೆ ಮಾಡುವ ಹಾದಿ ಒಂದೇ...' ಸಂತ ಶಿಶುನಾಳ ಶರೀಫರ ಈ ಹಾಡಿಗೆ ಮಾನಸ ಜೋಶಿ ಮತ್ತು ಅವರ ತಂಡ ಪ್ರದರ್ಶಿಸಿದ ನೃತ್ಯ ರೂಪಕಕ್ಕೆ ರವೀಂದ್ರ ಕಲಾಮಂದಿರದಲ್ಲಿ ಕಿಕ್ಕಿರಿದು ಸೇರಿದ್ದ ಸಭಿಕರು ತಲೆದೂಗಿದರು.

ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕನ್ನಡ ಸಂಸ್ಕೃತಿ ಇಲಾಖೆ ಶಿಶುನಾಳ ಶರೀಫರ ಜನ್ಮದಿನ ಹಾಗೂ ಪುಣ್ಯಸ್ಮರಣೆಯ ಅಂಗವಾಗಿ ಭಾನುವಾರ ಹಮ್ಮಿಕೊಂಡಿದ್ದ ಶರೀಫರು, ಗುರು ಗೋವಿಂದ ಭಟ್ಟರ ತತ್ವಪದಗಳ ಆಧಾರಿತ 'ತತ್ವ ರಸಾಯನ' ಕಾರ್ಯಕ್ರಮದಲ್ಲಿ ಇಂತಹ 18 ಹಾಡುಗಳು, ನೃತ್ಯರೂಪಗಳಿಗೆ ಪ್ರಶಂಸೆಯ ಸುರಿಮಳೆಯೇ ಹರಿದು ಬಂತು.

ಗಾಯಕರಾದ ರಘುಪತಿ ಹೆಗಡೆ ಅವರು 'ಖಾದರಿ ಸದಾವರಿ ನಿತ್ಯ ನಿರಂಜನಾವಳಿ' ಮಲ್ಲಿಗೆ ಸುಧೀರ್ 'ದೊರಕಿದಾ ಗುರು ದೊರಕಿದಾ' ಅಶ್ವಿನ್ ಶರ್ಮಾ 'ಹಾಕಿದ ಜನಿವಾರವ ಸದ್ಗುರುನಾಥ ಹಾಕಿದ ಜನಿವಾರವ' ಜಿ.ನಾಗರಾಜ ತೋಂಬ್ರಿ 'ಮೋಹದ ಹೆಂಡತಿ ತೀರಿದ ಬಳಿಕ ಮಾವನ ಮನೆಯ ಹಂಗಿನ್ಯಾಕೋ' ಮಹೇಶ್ ಜೋಶಿ ಮತ್ತು ಸಂಗಡಿಗರು 'ಸೋರುತಿಹುದು ಮನೆಯ ಮಾಳಿಗೀ' ಸಂಗೀತ ಕಟ್ಟಿ ಕುಲಕರ್ಣಿ 'ಎಲ್ಲಮ್ಮನಂಥಾಕಿ ಎಲ್ಲಿ ಕಾಣೆ' ಕೆ.ಎಂ. ಮಂಜುನಾಥ್ 'ಬಿದ್ದಿಯಬ್ಬೆ ಮುದುಕಿ' ಶ್ರೀಷ್ಮಾ ಸುಕುಮಾರ್ 'ಸ್ಥಿರವಲ್ಲ ಕಾಯ ಸ್ಥಿರವಲ್ಲ' ಪಂಚಮ್ ಹಳೀಬಂಡಿ 'ಎಂಥೆಂಥಾದೆಲ್ಲನು ಬರಲಿ ಚಿಂತೆ ಎಂಬುದು ಸಾವಿರ ಇರಲಿ' ರೇಖಾ ಸೌದಿ ಮತ್ತು ತಂಡ 'ಎಂಥಾ ಮೋಜಿನ ಕುದುರಿ' ರಾಜೇಶ್ ಪರಿಯಾರ್ 'ತರವಲ್ಲ ತಗಿ ನಿನ್ನ ತಂಬೂರಿ ಸ್ವರ' ಮೆಹಬೂಬ್ ಹರಲಾಪುರ 'ಗುಡಿಯ ನೋಡಿರಣ್ಣ' ದಾವಲ್ ಸಾಬ್ ನದಾಫ್ 'ಬಿಡುತೀನಿ ದೇಹ ಬಿಡುತೀನಿ' ಸುಚೇಂದ್ರ ಪ್ರಸಾದ್ ಮತ್ತು ತಂಡ 'ಎಂಟರ ನೆಂಟ ಶರೀಫಜ್ಜ' ಹಾಡುಗಳನ್ನು ಹಾಡಿದರು.

ಮುಖ್ಯಾಂಶಗಳು


- ಕನ್ನಡ ಸಾಹಿತ್ಯ ಪರಿಷತ್ತು –ಕನ್ನಡ ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮ
- 18 ಹಾಡುಗಳು, ನೃತ್ಯರೂಪಗಳಿಗೆ ಪ್ರಶಂಸೆಯ ಸುರಿಮಳೆ
- ತತ್ವಪದಗಳ ಅರ್ಥ ವಿಶ್ಲೇಷಣೆ ಮಾಡಿದ ಡಾ.ಗುರುರಾಜ ಕರಜಗಿ

ಕಲಾಯನ ಸ್ಕೂಲ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್‌ನ ವಿದ್ಯಾರ್ಥಿನಿಯರು 'ಕುಕೂ ಎನುತಿದೆ. ಬೆಳವ ಬಂದು ಹೊಕ್ಕಿತು ಭವವೆಂಬ ದುಃಖದ ಹಳವಾ' ಹಾಡಿಗೆ, ಮಡಕೇರಿಯ ನಾಟ್ಯ ಮಯೂರಿ ನೃತ್ಯ ಶಾಲೆಯ ಮಕ್ಕಳು 'ಚೆನ್ನಪ್ಪ ಚೆನ್ನೆಗೌಡ' ಹಾಡಿಗೆ, ನಾಟ್ಯ ನಿನಾದ ತಂಡ 'ಕೋಡಗನ ಕೋಳಿ ನುಂಗಿತ್ತಾ ನೋಡವ್ವ ತಂಗಿ' ಹಾಡಿಗೆ, ಸಪ್ತಸ್ವರ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ಸ್ ತಂಡ 'ಮಂಗಳಾರತಿ' ಹಾಡಿಗೆ ನೃತ್ಯರೂಪಕ ಪ್ರದರ್ಶಿಸಿದರು.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಉದ್ಘಾಟನಾ ಸಂದೇಶ ನೀಡಿದರು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ ಪ್ರಸ್ತಾವಿಕ ಮಾತನಾಡಿದರು. ಡಾ.ಗುರುರಾಜ ಕರಜಗಿ ಅವರು ತತ್ವಪದಗಳ ಅರ್ಥ ವಿಶ್ಲೇಷಣೆ ಮಾಡಿದರು.

ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಬೇಲಿಮಠದ ಶಿವರುದ್ರ ಸ್ವಾಮೀಜಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ.ಸುನೀಲ್ ಕುಮಾರ್, ಮಹಾಧರ್ಮಾಧ್ಯಕ್ಷ ಪೀಟರ್ ಮಚಾದೋ, ಧರ್ಮಗುರು ಕೆ.ಎಂ.ಸಿದ್ದಿಕಿ, ಮಹಾಬೋಧಿ ಆನಂದ್ ಬಂತೇಜಿ, ನ್ಯಾಯಮೂರ್ತಿಗಳಾದ ಎಂ.ಎನ್.ವೆಂಕಟಾಚಲಯ್ಯ, ಶಿವರಾಜ್ ಪಾಟೀಲ್ ಮತ್ತಿತರರು ಉಪಸ್ಥಿತರಿದ್ದರು.

ಡಾ.ಗಜಾನನ ಶರ್ಮಗೆ 'ವರ್ಧಮಾನ ಸಾಹಿತ್ಯ ಪ್ರಶಸ್ತಿ'



ಗಜಾನನ ಶರ್ಮ



ಸತ್ಯನಾರಾಯಣ

ಮೂಡುಬಿದಿರೆ: ಮೂಡುಬಿದಿರೆಯ ವರ್ಧಮಾನ ಪ್ರಶಸ್ತಿ ಪೀಠದಿಂದ ನೀಡುವ 2021ನೇ ಸಾಲಿನ 'ವರ್ಧಮಾನ ಸಾಹಿತ್ಯ ಪ್ರಶಸ್ತಿ'ಗೆ ಬೆಂಗಳೂರಿನ ಡಾ.ಗಜಾನನ ಶರ್ಮ ಮತ್ತು 'ವರ್ಧಮಾನ ಉದಯೋನ್ಮುಖ ಸಾಹಿತ್ಯ ಪ್ರಶಸ್ತಿ'ಗೆ ಚಿಕ್ಕಮಗಳೂರಿನ ಡಾ.ಎಚ್.ಎಸ್.ಸತ್ಯನಾರಾಯಣ ಅವರನ್ನು ಆಯ್ಕೆ ಮಾಡಲಾಗಿದೆ.

ವರ್ಧಮಾನ ಸಾಹಿತ್ಯ ಪ್ರಶಸ್ತಿ ₹25 ಸಾವಿರ ನಗದು ಹಾಗೂ ತಾಮ್ರಪತ್ರ, ಉದಯೋನ್ಮುಖ ಸಾಹಿತ್ಯ ಪ್ರಶಸ್ತಿ ₹15 ಸಾವಿರ ನಗದು, ತಾಮಪತ್ರವನ್ನು ಒಳಗೊಂಡಿದೆ ಎಂದು ಪೀಠದ ನಿರ್ದೇಶಕ ಡಾ.ನಾ.ಮೊಗಸಾಲೆ ಅವರು ಪ್ರಕಟಣೆಯಲ್ಲಿ ಭಾನುವಾರ ತಿಳಿಸಿದ್ದಾರೆ.

ಸಾತಪೂರ: 42 ಜನರಿಗೆ ವಾಂತಿ, ಭೇದಿ

ಇಂಡಿ: ತಾಲ್ಲೂಕಿನ ಸಾತಪೂರ ಗ್ರಾಮದ 42 ಮಂದಿ ವಾಂತಿ– ಭೇದಿ, ಜ್ವರದಿಂದ ಬಳಲುತ್ತಿದ್ದಾರೆ. ಅವರಲ್ಲಿ 10 ಮಂದಿಯನ್ನು ತಾಲ್ಲೂಕು ಆಸ್ಪತ್ರೆಗೆ ದಾಖಲಿಸಲಾಗಿದೆ.

ಶನಿವಾರವೂ ಕೆಲವರು ವಾಂತಿ–ಭೇದಿಯಿಂದ ಅಸ್ವಸ್ಥರಾಗಿದ್ದರು ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಅನಾರೋಗ್ಯಕ್ಕೆ ಕಾರಣ ತಿಳಿದು ಬಂದಿಲ್ಲ. ಕುಡಿಯುವ ನೀರಿನ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ.

ಸುಟ್ಟ ಸ್ಥಿತಿಯಲ್ಲಿ ಮಹಿಳೆ ಶವ ಪತ್ತೆ: ಅತ್ಯಾಚಾರ ಶಂಕೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ನೈಸ್ ರಸ್ತೆಗೆ ಹೊಂದಿಕೊಂಡಿರುವ ವಿಶ್ವೇಶ್ವರಯ್ಯ ಬಡಾವಣೆ ಬಳಿಯ ಅರಣ್ಯ ಪ್ರದೇಶದಲ್ಲಿ ಭಾನುವಾರ ಬೆಳಿಗ್ಗೆ ಅರೆಬೆಂದ ಸ್ಥಿತಿಯಲ್ಲಿ ಮಹಿಳೆಯ ಮೃತದೇಹ ಪತ್ತೆಯಾಗಿದೆ. ಅತ್ಯಾಚಾರ ಎಸಗಿ ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದೆ.

'ಮಹಿಳೆಯ ವಯಸ್ಸು 25ರಿಂದ 30 ಇರಬಹುದೆಂದು ಅಂದಾಜಿಸಲಾಗಿದ್ದು, ಹೆಸರು ಗೊತ್ತಾಗಿಲ್ಲ. ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ' ಎಂದು ಕೆಂಗೇರಿ ಠಾಣೆ ಪೊಲೀಸರು ಹೇಳಿದರು.

'ಎರಡು ದಿನದ ಹಿಂದೆಯೇ ದುಷ್ಕರ್ಮಿಗಳು, ಮಹಿಳೆಯನ್ನು ಕೊಂದಿರುವ, ಮೃತದೇಹವನ್ನು ತಂದು ಅರಣ್ಯ ಪ್ರದೇಶದಲ್ಲಿ ಸುಟ್ಟು ಹೋಗಿರುವ ಶಂಕೆ ಇದೆ. ತನಿಖೆ ಮುಂದುವರಿಸಲಾಗಿದೆ' ಎಂದೂ ತಿಳಿಸಿದರು.

'ಕೆಲ ಸ್ಥಳೀಯರು, ಶವ ಗಮನಿಸಿ ಠಾಣೆಗೆ ಮಾಹಿತಿ ನೀಡಿದ್ದರು. ವಿಧಿ ವಿಜ್ಞಾನ ಪ್ರಯೋಗಾಲಯ ತಜ್ಞರು, ಶ್ವಾನದಳದ ಸಿಬ್ಬಂದಿ ಸಮೇತ ಸ್ಥಳ ಪರಿಶೀಲಿಸಲಾಯಿತು. ತಜ್ಞರು ವರದಿ ನೀಡಿದ ಬಳಿಕ ಸಾವಿನ ಬಗ್ಗೆ ನಿಖರ ಮಾಹಿತಿ ತಿಳಿಯಲಿದೆ' ಎಂದೂ ಹೇಳಿದರು.

ಸಿಗದ ಸುಳಿವು: 'ಮೃತದೇಹ ಸಿಕ್ಕ ಸ್ಥಳದಲ್ಲಿ ಹೆಚ್ಚಾಗಿ ಜನ ಓಡಾಡುವುದಿಲ್ಲ. ಜೊತೆಗೆ, ಅಕ್ಕ-ಪಕ್ಕದಲ್ಲಿ ಯಾವುದೇ ಸಿಸಿಟಿವಿ ಕ್ಯಾಮೆರಾ ಇಲ್ಲ. ಹೀಗಾಗಿ, ಮಹಿಳೆ ಕೊಲೆ ಬಗ್ಗೆ ಸದ್ಯಕ್ಕೆ ಸುಳಿವು ಸಿಗುತ್ತಿಲ್ಲ' ಎಂದು ಪೊಲೀಸರು ತಿಳಿಸಿದರು.

ವೃದ್ಧೆ ಕೊಲೆ: ಚಿನ್ನದ ಬಳೆ, ಸರ ಕದ್ದೊಯ್ದಿರುವ ದುಷ್ಕರ್ಮಿಗಳು

ಬೆಂಗಳೂರು: ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆ ವ್ಯಾಪ್ತಿಯಲ್ಲಿನ ವಿನಾಯಕ ನಗರದ ನಿವಾಸಿ ಯಶೋಧಮ್ಮ (75) ಕೊಲೆ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಪೊಲೀಸರು, ಆರೋಪಿಗಳ ಪತ್ತೆಗಾಗಿ ಹುಡುಕಾಟ ನಡೆಸುತ್ತಿದ್ದಾರೆ.

'ಯಶೋಧಮ್ಮ ಅವರನ್ನು ಶುಕ್ರವಾರ ರಾತ್ರಿ ದುಷ್ಕರ್ಮಿಗಳು ಕೊಲೆ ಮಾಡಿದ್ದಾರೆ. 4 ಮಹಡಿ ಕಟ್ಟಡದ ಮಾಲೀಕರಾಗಿದ್ದ ಅವರು ನೆಲ ಮಹಡಿ ಮನೆಯಲ್ಲಿ ಒಂಟಿಯಾಗಿ ವಾಸವಿದ್ದು, ಉಳಿದ ಮನೆಗಳನ್ನು ಬಾಡಿಗೆಗೆ ನೀಡಿದ್ದರು. ಒಬ್ಬನೇ ಮಗ, ಕತ್ರಿಗುಪ್ಪೆಯಲ್ಲಿ ವಾಸವಿದ್ದು, ಆಗಾಗ್ಗೆ ಬಂದು ಆರೋಗ್ಯ ವಿಚಾರಿಸುತ್ತಿದ್ದ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಯಶೋಧಮ್ಮ ಅಪರಿಚಿತರನ್ನು ಹೆಚ್ಚು ಮಾತನಾಡಿಸುತ್ತಿರಲಿಲ್ಲ. ಯಾರನ್ನೂ ಮನೆಯೊಳಗೆ ಕರೆದುಕೊಳ್ಳುತ್ತಿರಲಿಲ್ಲ. ಪರಿಚಯಸ್ಥರೇ ಕೃತ್ಯ ಎಸಗಿರುವ ಶಂಕೆ ಸ್ಥಳೀಯರದ್ದಾಗಿದೆ' ಎಂದು ಹೇಳಿದರು.

'ವೃದ್ಧೆಯನ್ನು ಕೊಲೆ ಮಾಡಿದ ಬಳಿಕ ಆರೋಪಿಗಳು, ಚಿನ್ನದ 4 ಬಳೆ ಹಾಗೂ 2 ಚಿನ್ನದ ಸರಗಳನ್ನು ಕದ್ದೊಯ್ದಿರುವುದು ಸದ್ಯಕ್ಕೆ ಗೊತ್ತಾಗಿದೆ' ಎಂದೂ ತಿಳಿಸಿದರು.

ವೃದ್ಧೆಯ ಸರಗಳವು

ಬೆಂಗಳೂರು: ಮನೆ ಮುಂದೆ ನಿಂತಿದ್ದ ವೃದ್ಧೆಯ ಚಿನ್ನದ ಸರವನ್ನು, ಬೈಕ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ಕಿತ್ತೊಯ್ದಿದ್ದು, ಈ ಬಗ್ಗೆ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಶನಿವಾರ ಮಧ್ಯಾಹ್ನ ಘಟನೆ ನಡೆದಿದೆ. ಆರ್‌ಪಿಸಿ ಬಡಾವಣೆಯ 8ನೇ ಮುಖ್ಯರಸ್ತೆ ನಿವಾಸಿ, ಈರಮ್ಮ (84) ಹೇಳಿಕೆ ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಪಬ್ ಮೇಲೆ ದಾಳಿ

ಬೆಂಗಳೂರು: ಕೆಂಗೇರಿ ಠಾಣೆ ವ್ಯಾಪ್ತಿಯಲ್ಲಿರುವ ಪಬ್‌ವೊಂದರ ಮೇಲೆ ಸಿಸಿಬಿ ಪೊಲೀಸರು ಭಾನುವಾರ ನಸುಕಿನಲ್ಲಿ ದಾಳಿ ಮಾಡಿದ್ದು, 7 ವಿದೇಶಿಯರು ಸೇರಿದಂತೆ ಹಲವರನ್ನು ವಶಕ್ಕೆ ಪಡೆದಿದ್ದಾರೆ.

'ಕೆಂಗೇರಿಯ ವಿಶ್ವೇಶ್ವರಯ್ಯ ಬಡಾವಣೆ ಬಳಿ ಇರುವ 'ಬಿ' ಹೆಸರಿನ ಪಬ್, ಭಾನುವಾರ ನಸುಕಿನ 3.30ರವರೆಗೂ ತೆರೆದಿತ್ತು. ಅವಧಿ ಮೀರಿ ವ್ಯವಹಾರ ನಡೆಸುತ್ತಿದ್ದ ಬಗ್ಗೆ ಬಂದ ಮಾಹಿತಿ ಆಧರಿಸಿ ದಾಳಿ ಮಾಡಲಾಯಿತು' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಪಬ್‌ನಲ್ಲಿ ಪಾರ್ಟಿ ಆಯೋಜಿಸಲಾಗಿತ್ತು. 45 ಯುವಕರು, 18 ಯುವತಿಯರು ಹಾಗೂ 7 ವಿದೇಶಿ ಪ್ರಜೆಗಳು ಪಾರ್ಟಿಯಲ್ಲಿ ಪಾಲ್ಗೊಂಡಿದ್ದರು. ಎಲ್ಲರನ್ನೂ ವಿಚಾರಣೆಗೆ ಒಳಪಡಿಸಿ, ವಶಕ್ಕೆ ಪಡೆಯಲಾಯಿತು. ಪಬ್‌ನ ಕೆಲಸಗಾರರನ್ನೂ ಬಂಧಿಸಲಾಯಿತು. ಎಲ್ಲರ ವಿರುದ್ಧ ಕೆಂಗೇರಿ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದೂ ತಿಳಿಸಿವೆ.

'ಪಾರ್ಟಿಯಲ್ಲಿ ಡ್ರಗ್ಸ್ ಪೂರೈಕೆಯಾದ ಬಗ್ಗೆ ಮಾಹಿತಿ ಇದೆ. ಹೀಗಾಗಿ, ಕೆಲವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ. ಅದರ ವರದಿ ಬಂದ ನಂತರ, ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದೂ ಹೇಳಿವೆ.

ಕನಕ ಗುರುಪೀಠದಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಕೇಂದ್ರ ಉದ್ಘಾಟನೆ

'ಸಮುದಾಯಕ್ಕೆ ಕೊಡುಗೆ ನೀಡಿ'

ಪ್ರಜಾವಾಣಿ ವಾರ್ತೆ



ಹರಿಹರ ತಾಲ್ಲೂಕಿನ ಬೆಳ್ಳೂಡಿಯ ಕಾಗಿನೆಲೆ ಕನಕಗುರುಪೀಠದ ಶಾಖಾ ಮಠದಲ್ಲಿ ನಡೆದ ಯುಪಿಎಸ್‌ಸಿ, ಕೆಪಿಎಸ್‌ಸಿ ತರಬೇತಿ ಕೇಂದ್ರದ ಉದ್ಘಾಟನೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಬಸವರಾಜ ನೆರವೇರಿಸಿದರು. ನಿರಂಜನಾನಂದಪುರಿ ಸ್ವಾಮೀಜಿ, ಈಶ್ವರಾನಂದಪುರಿ ಸ್ವಾಮೀಜಿ, ಸಂಸದ ಜಿ.ಎಂ.ಸಿದ್ದೇಶ್ವರ ಹಾಗೂ ಇತರ ಪ್ರಮುಖರಿದ್ದರು

ಹರಿಹರ: 'ಯುಪಿಎಸ್‌ಸಿ, ಕೆಪಿಎಸ್‌ಸಿ ತರಬೇತಿ ಕೇಂದ್ರ ಆರಂಭಿಸುವ ಮೂಲಕ ಮಧ್ಯ ಕರ್ನಾಟಕದ ಯುವಜನರಿಗೆ ಉತ್ತಮ ಸೌಲಭ್ಯ ನೀಡಿದ ತೃಪ್ತಿ ಇದೆ. ಸಮುದಾಯ ನಮಗೇನು ನೀಡಿತು ಎನ್ನುವುದಕ್ಕಿಂತ ಸಮುದಾಯಕ್ಕೆ ನಾನೇನು ನೀಡಿದೆ ಎಂದು ಪ್ರಶ್ನಿಸಿಕೊಳ್ಳ ಬೇಕಿದೆ' ಎಂದು ಕಾಗಿನೆಲೆ ಮಹಾ ಸಂಸ್ಥಾನ ಕನಕಗುರು ಪೀಠದ ನಿರಂಜನಾನಂದಪುರಿ ಸ್ವಾಮೀಜಿ ಹೇಳಿದರು.

ಕಾಗಿನೆಲೆ ಮಹಾ ಸಂಸ್ಥಾನ ಕನಕ ಗುರುಪೀಠದ ಬೆಳ್ಳೂಡಿ ಶಾಖಾ ಮಠದಲ್ಲಿ ಭಾನುವಾರ ಮಠದ ಚಂದ್ರಗುಪ್ತ ಮೌರ್ಯ ಶಿಕ್ಷಣ ಸಂಸ್ಥೆ ಹಾಗೂ ಬೆಂಗಳೂರಿನ ಇನ್‌ಸೈಟ್ಸ್ ಐಎಎಸ್ ಅಕಾಡೆಮಿ ಸಹಯೋಗದಲ್ಲಿ ನಡೆದ ಯುಪಿಎಸ್‌ಸಿ, ಕೆಪಿಎಸ್‌ಸಿ ತರಬೇತಿ ಕೇಂದ್ರದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

'ಈ ಭಾಗದ ಆಕಾಂಕ್ಷಿಗಳು ದೂರದ ಮಹಾನಗರಗಳಲ್ಲಿ ಹಲವು ಲಕ್ಷ ರೂಪಾಯಿ ವ್ಯಯಿಸಿ ತರಬೇತಿ ಪಡೆಯುವುದು ಕಷ್ಟವಾಗಿತ್ತು. ಹೀಗಾಗಿ ಮಧ್ಯ ಕರ್ನಾಟಕದವರಿಗೆ ಅನುಕೂಲ ಕಲ್ಪಿಸಲು ಇಲ್ಲಿ ಕೇಂದ್ರ ತೆರೆಯಲಾಗಿದೆ. ಶುಲ್ಕವೂ ಕಡಿಮೆ. ತರಬೇತಿಯ ಖರ್ಚನ್ನು ಮಾತ್ರ ಸಂಗ್ರಹಿಸುತ್ತಿದ್ದೇವೆ. ಲಾಭದ ಉದ್ದೇಶವಿಲ್ಲ' ಎಂದರು.

'ನಿರಂಜನಾನಂದಪುರಿ ಶ್ರೀಗಳು ಹಿಡಿದ ಕೆಲಸ ಬಿಡುವುದಿಲ್ಲ. ಮಠವು ಜಾತ್ಯತೀತವಾಗಿ ಬೆಳೆಯುತ್ತಿದೆ' ಎಂದು ಹೊಸದುರ್ಗ ಕನಕಗುರು ಶಾಖಾ ಮಠದ ಈಶ್ವರಾನಂದಪುರಿ ಸ್ವಾಮೀಜಿ ಹೇಳಿದರು.

ಬೆಂಗಳೂರಿನ ಕೇಂದ್ರದಲ್ಲಿರುವ ಗುಣಮಟ್ಟದಲ್ಲೇ ಬೆಳ್ಳೂಡಿ ಕೇಂದ್ರದಲ್ಲೂ ಬೋಧನೆ ಇರಲಿದೆ. ಅಕಾಡೆಮಿಯಲ್ಲಿ ತರಬೇತಿ ಪಡೆದ ಹಲವರು ಉನ್ನತ ಹುದ್ದೆಗಳಿಗೆ ಆಯ್ಕೆಯಾಗಿದ್ದಾರೆ.

ಜಿ.ಬಿ.ವಿನಯ್ ಕುಮಾರ್, ಇನ್‌ಸೈಟ್ಸ್ ಐಎಎಸ್ ಅಕಾಡೆಮಿ ಮುಖ್ಯಸ್ಥ

'ಕೇಂದ್ರವನ್ನು ಗ್ರಾಮೀಣ ಭಾಗದಲ್ಲಿ ಆರಂಭಿಸಿದ್ದು ಜನಮುಖಿ ಕಾರ್ಯ. ಇಲ್ಲಿ ತರಬೇತಿ ಪಡೆಯಲು ಬಯಸುವ ಪ್ರತಿಭಾವಂತ ಹತ್ತು ವಿದ್ಯಾರ್ಥಿಗಳನ್ನು ದತ್ತು ತೆಗೆದುಕೊಳ್ಳುತ್ತೇನೆ' ಎಂದು ಸಚಿವ ಬೈರತಿ ಬಸವರಾಜ ಹೇಳಿದರು.

ಕೇಂದ್ರಕ್ಕೆ ಶಿಫಾರಸು –ಒತ್ತಾಯ

ಕುರುಬ ಸಮಾಜಕ್ಕೆ ಪರಿಶಿಷ್ಟ ಪಂಗಡ ಮೀಸಲಾತಿ ನೀಡುವ ಸಂಬಂಧ ಮೈಸೂರಿನ ಬುಡಕಟ್ಟು ಸಂಶೋಧನಾ ಕೇಂದ್ರ ನೀಡಲಿರುವ ಕುಲಶಾಸ್ತ್ರೀಯ ಅಧ್ಯಯನದ ವರದಿಯನ್ನು ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡಬೇಕು ಎಂದು ಕಾಗಿನೆಲೆ ಕನಕಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮೀಸಲಾತಿ ಸಂಬಂಧ ಪಾದಯಾತ್ರೆ ನಡೆಸಿ ಒತ್ತಾಯಿಸಿದ ಪರಿಣಾಮ ರಾಜ್ಯ ಸರ್ಕಾರ ಕುಲಶಾಸ್ತ್ರೀಯ ಅಧ್ಯಯನಕ್ಕೆ ಆದೇಶ ನೀಡಿತ್ತು. ಸಂಶೋಧನಾ ಕೇಂದ್ರದಿಂದ ಶೇ 98ರಷ್ಟು ಅಧ್ಯಯನ ಮುಗಿದಿದೆ. ಶೀಘ್ರ ವರದಿ ಸಲ್ಲಿಸಲಿದೆ' ಎಂದರು.

'ಪ್ರಜಾವಾಣಿ','ಡೆಕ್ಕನ್ ಹೆರಾಲ್ಡ್' ಆಯೋಜಿಸಿದ್ದ 'ಎಡ್ಯುವರ್ಸ್' 12ನೇ ಆವೃತ್ತಿಗೆ ತೆರೆ

ಆತ್ಮವಿಶ್ವಾಸ ಹೆಚ್ಚಿಸಿದ ಶೈಕ್ಷಣಿಕ ಮೇಳ





'ಎಡ್ಯುವರ್ಸ್: ಜ್ಞಾನದೇಗುಲ' ಶೈಕ್ಷಣಿಕ ಮೇಳದ ಮಳಿಗೆಯೊಂದರಲ್ಲಿ ವಿದ್ಯಾರ್ಥಿಗಳು, ಪೋಷಕರು ವಿವಿಧ ಕೋರ್ಸ್‌ಗಳ ಮಾಹಿತಿ ಪಡೆದರು (ಎಡಚಿತ್ರ) ಗೋಷ್ಠಿಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ಹಾಗೂ ಪೋಷಕರು – ಪ್ರಜಾವಾಣಿ ಚಿತ್ರಗಳು

ಪ್ರಜಾವಾಣಿ ವಾರ್ತೆ

ಪ್ರಜಾವಾಣಿ DH ಎಡ್ಯುವರ್ಸ್™ ಜ್ಞಾನ ದೇಗುಲ® - 2022 (12ನೇ ಆವೃತ್ತಿ) ಎ ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೋ

ಬೆಂಗಳೂರು: ಕಾಲೇಜುಗಳಲ್ಲಿ ಇರುವ ಸೌಲಭ್ಯ, ಕೋರ್ಸ್‌ಗಳು, ಪ್ರವೇಶ ಶುಲ್ಕ, ಉದ್ಯೋಗಾವಕಾಶ, ಶೈಕ್ಷಣಿಕ ಸಾಲ... ಹೀಗೆ ವಿದ್ಯಾರ್ಥಿಗಳು, ಪೋಷಕರಲ್ಲಿನ ಸಾಲು ಸಾಲು ಅನುಮಾನಗಳನ್ನು ಹೋಗಲಾಡಿಸುವ ಪ್ರಯತ್ನವನ್ನು ಶೈಕ್ಷಣಿಕ ಮೇಳ ಮಾಡಿತು.

ಜಯಮಹಲ್ ಪ್ಯಾಲೇಸ್ ಹೋಟೆಲ್ ಗ್ರೌಂಡ್ಸ್‌ನಲ್ಲಿ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಆಯೋಜಿಸಿದ್ದ 'ಎಡ್ಯುವರ್ಸ್: ಜ್ಞಾನದೇಗುಲ' ಶಿಕ್ಷಣ ಮೇಳವು ಭಾನುವಾರ ಸಂಪನ್ನವಾಯಿತು. ಎರಡನೇ ದಿನವೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿ, ತಮ್ಮ ಗೊಂದಲಗಳನ್ನು ಬಗೆಹರಿಸಿಕೊಂಡರು.

ಶೈಕ್ಷಣಿಕ ಮೇಳದ ಪ್ರಥಮ ದಿನವಾದ ಶನಿವಾರ ಸಿಇಟಿ ಮತ್ತು ಕಾಮೆಡ್‌–ಕೆ ಕುರಿತ ಉಪನ್ಯಾಸಗಳಿಂದ ವಂಚಿತರಾಗಿದ್ದ ವಿದ್ಯಾರ್ಥಿಗಳು ಹಾಗೂ ಪಾಲಕರು ಎರಡನೇ ದಿನ ಬಂದು, ಪ್ರಯೋಜನ ಪಡೆದುಕೊಂಡರು.

ಸಿಇಟಿ ಮತ್ತು ಕಾಮೆಡ್‌–ಕೆಗೆ ಸಂಬಂಧಿಸಿದ ವಿಚಾರಗೋಷ್ಠಿಗಳು ಮೆಚ್ಚುಗೆಗೆ ಪಾತ್ರವಾಯಿತು. ಕಾಮೆಡ್‌–ಕೆ ಪರಿಣತ ಶಾಂತಾರಾಮ ನಾಯಕ್ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಹಿರಿಯ ಸಹಾಯಕ ಉತ್ತಮ್ ಬಡಿಗೇರ ಅವರು ಸೂಕ್ತ ಮಾರ್ಗದರ್ಶನ ನೀಡುವ ಮೂಲಕ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸ ತುಂಬಿದರು.

'ಸಿಇಟಿ, ಕಾಮೆಡ್‌–ಕೆ ಸೀಟುಗಳ ಆಯ್ಕೆ ಪ್ರಕ್ರಿಯೆಯನ್ನು ಬಹಳ ಎಚ್ಚರಿಕೆಯಿಂದ ಮಾಡಬೇಕು ಎನ್ನುತ್ತಾರೆ. ಆದರೆ, ವಿವರವಾಗಿ ಯಾರೂ ಹೇಳುವುದಿಲ್ಲ. ಇಲ್ಲಿ ಅದರ ಸಮಗ್ರ ಮಾಹಿತಿ ತಿಳಿದುಕೊಂಡೆವು' ಎಂದು ಬಹಳಷ್ಟು ಪೋಷಕರು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಬಾರಿ ಮೇಳದಲ್ಲಿ 50ಕ್ಕೂ ಅಧಿಕ ಶಿಕ್ಷಣ ಸಂಸ್ಥೆಗಳು ಭಾಗವಹಿಸಿದ್ದವು. ರಾಜ್ಯದ ವಿವಿಧ ಭಾಗಗಳ ಜತೆಗೆ ಮುಂಬೈ, ಪುಣೆ, ನವದೆಹಲಿ ಹಾಗೂ ಹೈದರಾಬಾದ್‌ನ ಶಿಕ್ಷಣ ಸಂಸ್ಥೆಗಳೂ ಪಾಲ್ಗೊಂಡಿದ್ದವು.

ಎಂಜಿನಿಯರಿಂಗ್, ವೈದ್ಯಕೀಯ, ವಾಸ್ತುಶಿಲ್ಪ, ರೋಬೋಟಿಕ್ಸ್, ಪ್ರವಾಸೋದ್ಯಮ, ಎಂಬಿಎ, ಎಂಸಿಎ, ಫ್ಯಾಷನ್ ಡಿಸೈನ್ ಸೇರಿದಂತೆ ವಿವಿಧ ಕೋರ್ಸ್‌ಗಳು ಹಾಗೂ ಕಾಲೇಜುಗಳ ವೈಶಿಷ್ಟ್ಯಗಳ ಬಗ್ಗೆ ವಿದ್ಯಾರ್ಥಿಗಳು ಹಾಗೂ ಪಾಲಕರಿಗೆ ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳು ಮಾಹಿತಿ ಒದಗಿಸಿದರು.

ಸಿಇಟಿ, ಕಾಮೆಡ್‌–ಕೆ ಗೊಂದಲ ನಿವಾರಣೆ

'ಕಾಮೆಡ್‌–ಕೆ ಅಧೀನದಲ್ಲಿರುವ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಸೀಟು ಪಡೆಯಲು ಬಯಸುವ ವಿದ್ಯಾರ್ಥಿಗಳು ಆಯ್ಕೆ ಪ್ರಕ್ರಿಯೆ ಮುಗಿಯುವವರೆಗೂ ನಿರಂತರವಾಗಿ www.comedk.org ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಬೇಕು. ಕಾಮೆಡ್‌–ಕೆ ಪರೀಕ್ಷೆ, ಸೀಟು ಆಯ್ಕೆ ಪ್ರಕ್ರಿಯೆಗೆ ಸಂಬಂಧಿಸಿದ ಸುತ್ತೋಲೆಗಳು ವೆಬ್‌ಸೈಟ್‌ನಲ್ಲಿ ಪ್ರಕಟಗೊಳ್ಳುತ್ತಿರುತ್ತವೆ. ದಿನಕ್ಕೆ ಎರಡು ಮೂರಿ ಬಾರಿ ವೆಬ್‌ಸೈಟ್‌ಗೆ ಭೇಟಿ ನೀಡುವುದರಿಂದ ಅಗತ್ಯ ಮಾಹಿತಿಗಳು ಸಿಗುತ್ತವೆ' ಎಂದು ಕಾಮೆಡ್‌–ಕೆ ಅಧಿಕಾರಿ ಪ್ರೊ. ಶಾಂತಾರಾಮ ನಾಯಕ್ ತಿಳಿಸಿದರು.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಹಿರಿಯ ಸಹಾಯಕ ಉತ್ತಮ್ ಬಡಿಗೇರ, 'ಸಿಇಟಿ ಫಲಿತಾಂಶ ಶೀಘ್ರದಲ್ಲಿಯೇ ಪ್ರಕಟವಾಗಲಿದೆ. ಸೀಟು ಆಯ್ಕೆ ಸಂದರ್ಭ ಯಾವುದೇ ಒಂದು ಹಂತ ತಪ್ಪಿದರೂ ಸೀಟು ಕೈತಪ್ಪಿ ಹೋಗಬಹುದು. ಜಾಲತಾಣದಲ್ಲಿ ಪರೀಕ್ಷಾರ್ಥ ಪ್ರಯೋಗ ನಡೆಸಲು ಹೋಗಬಾರದು. ಕಾಲೇಜು ಮತ್ತು ಕೋರ್ಸ್ ಆಯ್ಕೆಯಲ್ಲಿ ಆದ್ಯತೆ ನೀಡುವಾಗ ಎಚ್ಚರ ವಹಿಸಬೇಕು.

ಕಡಿಮೆ ರ್‍ಯಾಂಕ್ ಬಂದವರು ನಿಗದಿತ ಕಾಲೇಜು ಸಿಗಲಿಲ್ಲ ಎಂದು ಕೊರಗುವ ಅಗತ್ಯವಿಲ್ಲ. ಸೀಟು ಸಿಕ್ಕ ಕಾಲೇಜಿನಲ್ಲಿ ಚೆನ್ನಾಗಿ ಓದಿ, ಉತ್ತಮ ಸಾಧನೆ ಮಾಡಬಹುದು' ಎಂದು ಸಲಹೆ ನೀಡಿದರು.

ಶಿಕ್ಷಣ ಮೇಳ: ಮೆಚ್ಚುಗೆಯ ಮಹಾಪೂರ



ಸಿಇಟಿ, ಕಾಮೆಡ್‌–ಕೆ, ವಿವಿಧ ಕಾಲೇಜುಗಳು, ಕೋರ್ಸ್‌ಗಳ ಬಗ್ಗೆ ತಿಳಿದುಕೊಳ್ಳಲು 'ಎಡ್ಯುವರ್ಸ್' ಶಿಕ್ಷಣ ಮೇಳ ಉತ್ತಮ ವೇದಿಕೆ. ವಿದ್ಯಾರ್ಥಿಗಳಿಗೆ ತಮ್ಮ ಭವಿಷ್ಯ ರೂಪಿಸಿಕೊಳ್ಳಲು ಅಗತ್ಯ ಮಾರ್ಗದರ್ಶನ ಹಾಗೂ ಸಲಹೆಗಳನ್ನು ಈ ವೇದಿಕೆ ಒದಗಿಸುತ್ತಿದೆ.

ಶಾಂತಾರಾಮ ನಾಯಕ್, ಕಾಮೆಡ್‌–ಕೆ ವಿಶೇಷಾಧಿಕಾರಿ



ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಭವಿಷ್ಯ ರೂಪಿಸಿಕೊಳ್ಳಲು ಶಿಕ್ಷಣ ಮೇಳದಿಂದ ಸೂಕ್ತ ಮಾರ್ಗದರ್ಶನ ದೊರೆಯುತ್ತಿದೆ. ಸಿಇಟಿ, ಕಾಮೆಡ್‌–ಕೆ, ನೀಟ್ ಬಗ್ಗೆ ವಿದ್ಯಾರ್ಥಿಗಳು ಹಾಗೂ ಪಾಲಕರಲ್ಲಿನ ಗೊಂದಲಗಳ ನಿವಾರಣೆಗೆ ಸಹಕಾರಿಯಾಗಿದೆ.

ಉತ್ತಮ್ ಬಡಿಗೇರ, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಹಿರಿಯ ಸಹಾಯಕ



ಸಿಇಟಿ ಪರೀಕ್ಷೆ ಬಳಿಕ ಸೀಟು ಹಂಚಿಕೆ ಪ್ರಕ್ರಿಯೆ ಹೇಗೆ ನಡೆಯುತ್ತದೆ ಎಂಬ ನಿಖರ ಮಾಹಿತಿ ದೊರೆಯಿತು. ಅದೇ ರೀತಿ, ವಿವಿಧ ಕೋರ್ಸ್‌ಗಳು ಹಾಗೂ ಅಧ್ಯಯನ ತಗಲುವ ವೆಚ್ಚದ ಬಗ್ಗೆ ತಿಳಿದುಕೊಳ್ಳಲು ಈ ಮೇಳ ಸಹಕಾರಿಯಾಗಿದೆ. ಕಾಲೇಜಿನಿಂದ ಕಾಲೇಜಿಗೆ ಅಲೆಯುವುದು ಕೂಡ ತಪ್ಪಿತು.

ಋತು, ವಿಜಯನಗರ



ಎಂಜಿನಿಯರಿಂಗ್ ಓದಬೇಕು ಎಂಬ ಇಚ್ಛೆ ಇದೆ. ವಿವಿಧ ಶೈಕ್ಷಣಿಕ ಸಂಸ್ಥೆಗಳ ಮಳಿಗೆಗಳಿಗೆ ಭೇಟಿ ನೀಡಿ, ಯಾವ ಕಾಲೇಜಿನಲ್ಲಿ ಯಾವ ಕೋರ್ಸ್ ಲಭ್ಯ ಎಂಬುದನ್ನು ತಿಳಿದುಕೊಂಡೆ. ಸಿಇಟಿ, ಕಾಮೆಡ್‌–ಕೆ ಪ್ರವೇಶ ಪ್ರಕ್ರಿಯೆಯ ಸಮಗ್ರ ಮಾಹಿತಿ ಪಡೆದೆ.

ಆರ್ಯ, ರಾಜಾಜಿನಗರ



ಸಿಇಟಿ ಪ್ರಕ್ರಿಯೆ ಬಗ್ಗೆ ಉಪಯುಕ್ತವಾದ ಮಾಹಿತಿಗಳು ದೊರೆತವು. ಅದೇ ರೀತಿ, ಹೊಸ ಕೋರ್ಸ್‌ಗಳ ವಿವರ ಸಿಕ್ಕವು. ಒಂದೇ ಸೂರಿನಡಿ ಹಲವು ಕಾಲೇಜುಗಳ ಮಳಿಗೆ ಇರುವುದರಿಂದ ಗೊಂದಲಗಳು ದೂರವಾದವು. ಉತ್ತಮವಾದ ಆಯೋಜನೆಯಾಗಿದೆ.

ಕುಶಾಲ್, ನಾಗರಬಾವಿ



ಸಿಇಟಿಯಲ್ಲಿ ಸೀಟು ಪಡೆದ ನಂತರದ ಪ್ರಕ್ರಿಯೆಗಳು ಗೊತ್ತಾದವು. ಆಯ್ಕೆ ಮಾಡಿಕೊಳ್ಳುವ ಕಾಲೇಜು ಹಾಗೂ ಕೋರ್ಸ್‌ಗಳ ಪ್ರವೇಶ ವಿಧಾನ ತಿಳಿಯಿತು. ವಿವಿಧ ಎಂಜಿನಿಯರಿಂಗ್, ವೈದ್ಯಕೀಯ ಕಾಲೇಜಿನ ಚಿತ್ರಣ ದೊರೆತಿದೆ.

ಮಮತಾ, ಹೆಬ್ಬಾಳ



ಭಿನ್ನ ಕೋರ್ಸ್‌ಗಳಿಗೆ ಯಾವ ರೀತಿಯ ಶುಲ್ಕಗಳಿವೆ ಎಂಬುದನ್ನು ತಿಳಿಯಲು ಹಾಗೂ ಹೊಸ ಕೋರ್ಸ್‌ಗಳ ಬಗ್ಗೆ ಮಾಹಿತಿ ಪಡೆಯಲು ಈ ಮೇಳ ಸಹಾಯಕವಾಯಿತು. ಸಾಕಷ್ಟು ಕಾಲೇಜುಗಳು ಇಲ್ಲಿರುವುದರಿಂದ ಉಪಯುಕ್ತ ಮಾಹಿತಿಗಳು ದೊರೆತವು.

ಪಿಯೂಷ್, ಮಾಗಡಿ ರಸ್ತೆ

'ನಮ್ಮ ಫಿಟ್ನೆಸ್ ಟ್ರ್ಯಾಯಲ್'ಗೆ ವಿರೋಧ

ಕಬ್ಬನ್ ಪಾರ್ಕ್‌ನಲ್ಲಿ ಸ್ಥಾಪನೆಗೆ ಸ್ವಿಸ್ ಕಾನ್ಸುಲೇಟ್‌ನಿಂದ ಸಭೆ • ವಾಯುವಿಹಾರಿಗಳ ತೀವ್ರ ಆಕ್ಷೇಪ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ವಿಟಾ ಪಾರ್‌ಫೋರ್ಸ್ ಫೌಂಡೇಷನ್ ವತಿಯಿಂದ ಸ್ಥಾಪನೆ
- 12ರಿಂದ 14 ಕೇಂದ್ರಗಳ ಸ್ಥಾಪನೆಗೆ ಉದ್ದೇಶ
- ವ್ಯಾಯಾಮ ಚಟುವಟಿಕೆಯ ಉಚಿತ ಅವಕಾಶಕ್ಕೆ ಚಿಂತನೆ

ಬೆಂಗಳೂರು: ನಗರದ ಹೃದಯ ಭಾಗದಲ್ಲಿರುವ ಕಬ್ಬನ್ ಪಾರ್ಕ್‌ನಲ್ಲಿ ಆರಂಭಿಸಲು ಉದ್ದೇಶಿಸಲಾಗಿದ್ದ 'ನಮ್ಮ ಫಿಟ್ನೆಸ್ ಟ್ರ್ಯಾಯಲ್' ವ್ಯಾಯಾಮ ಕೇಂದ್ರಕ್ಕೆ ವಾಯು ವಿಹಾರಿಗಳು ವಿರೋಧ ವ್ಯಕ್ತಪಡಿಸಿದ್ದಾರೆ.

ಕಬ್ಬನ್ ಪಾರ್ಕ್ ಆವರಣದಲ್ಲಿ ಸ್ವಿಸ್ ಕಾನ್ಸುಲೇಟ್‌ನವರ 'ನಮ್ಮ ಫಿಟ್ನೆಸ್ ಟ್ರ್ಯಾಯಲ್' ವ್ಯಾಯಾಮ ಕೇಂದ್ರಗಳನ್ನು ಅಳವಡಿಸುವ ಕುರಿತು ಭಾನುವಾರ ಸಭೆ ನಡೆಯಿತು. ತೋಟಗಾರಿಕೆ ಇಲಾಖೆ ಅಧಿಕಾರಿಗಳು, ಸ್ವಿಸ್ ಕಾನ್ಸುಲೇಟ್ ಪ್ರತಿನಿಧಿಗಳು ಮತ್ತು ವಾಯು ವಿಹಾರಿಗಳು ಭಾಗವಹಿಸಿದ್ದರು.

ಮೂರು ತಿಂಗಳ ಹಿಂದೆ ಸ್ವಿಟ್ಜರ್ ಲೆಂಡ್‌ನಿಂದ 'ಫಿಟ್ನೆಸ್ ಟ್ರ್ಯಾಯಲ್' ಬಗ್ಗೆ ಪ್ರಸ್ತಾವ ಬಂದಿತ್ತು. ಇಲಾಖೆಯಿಂದ ಅನುಮತಿ ನೀಡಿರಲಿಲ್ಲ. ಮುಖ್ಯ ಕಾರ್ಯದರ್ಶಿ ಅವರ ಆದೇಶದ ಮೇರೆಗೆ ಸಾರ್ವಜನಿಕ ಅಭಿಪ್ರಾಯ ಪಡೆದುಕೊಳ್ಳಲಾಯಿತು. ಇದನ್ನು ಬೇರೆ ಯಾವುದಾದರೂ ಉದ್ಯಾನಕ್ಕೆ ಸ್ಥಳಾಂತರಿಸಿ ಎನ್ನುವುದು ವಾಯು ವಿಹಾರಿಗಳ ಒತ್ತಾಯವಾಗಿದೆ ಎಂದು ಕಬ್ಬನ್ ಉದ್ಯಾನದ ಉಪನಿರ್ದೇಶಕ ಎಚ್.ಟಿ. ಬಾಲಕೃಷ್ಣ ಮಾಹಿತಿ ನೀಡಿದರು.

ಸ್ವಿಸ್ ಕಾನ್ಸಲೇಟ್‌ನ ಪ್ರತಿನಿಧಿ ಪ್ರಜ್ವಲಾ ಮಾತನಾಡಿ, 'ವಿಟಾ ಪಾರ್‌ಕೋರ್ಸ್ ಫೌಂಡೇಷನ್ ವತಿಯಿಂದ 4 ಕಿ.ಮೀ ವ್ಯಾಪ್ತಿಯಲ್ಲಿ 12 ರಿಂದ 14 ನಮ್ಮ ಫಿಟ್ನೆಸ್ ಟ್ರ್ಯಾಯಲ್‌ಗಳನ್ನು ಸ್ಥಾಪಿಸಲಾಗುತ್ತದೆ. ನಾಗರಿಕರಿಗೆ ಉಚಿತ ಕ್ರೀಡಾ, ವ್ಯಾಯಾಮ ಚಟುವಟಿಕೆಗಳಿಗೆ ಉತ್ತೇಜಿಸುವುದು, ಆರೋಗ್ಯ ಜಾಗೃತಿ ಮೂಡಿಸುವುದು ಉದ್ದೇಶವಾಗಿದೆ. ಇದು ಸಂಪೂರ್ಣ ಪರಿಸರ ಸ್ನೇಹಿ' ಎಂದು ತಿಳಿಸಿದರು.



ಕಬ್ಬನ್ ಪಾರ್ಕ್‌ನಲ್ಲಿ 'ಫಿಟ್ನೆಸ್ ಟ್ರ್ಯಾಯಲ್' ಅಳವಡಿಸುವ ಕುರಿತು ನಡೆದ ಸಭೆಯಲ್ಲಿ ತೋಟಗಾರಿಕೆ ಇಲಾಖೆ ಮತ್ತು ಸ್ವಿಸ್ ಕಾನ್ಸುಲೇಟ್ ಅಧಿಕಾರಿಗಳು ಮತ್ತು ಕಬ್ಬನ್ ಪಾರ್ಕ್‌ನ ವಾಯು ವಿಹಾರಿಗಳು ಪಾಲ್ಗೊಂಡಿದ್ದರು

'ವೀ ಲವ್ ಕಬ್ಬನ್ ಪಾರ್ಕ್' ಸದಸ್ಯೆ ಸುನೀತಾ ಮಾತನಾಡಿ, 'ಈ ಪರಿಕಲ್ಪನೆ ಸಂಪೂರ್ಣವಾಗಿ ವಾಣಿಜ್ಯ ಉದ್ದೇಶದಿಂದ ಕೂಡಿದೆ. ಕಬ್ಬನ್ ಪಾರ್ಕ್ ವಾತಾವರಣದಲ್ಲಿ ಇಂತಹ ಚಟುವಟಿಕೆಗಳಿಗೆ ಅವಕಾಶ ನೀಡಬಾರದು. ಇವತ್ತು ಸ್ವಿಸ್ ದೇಶದವರು ಬಂದಿದ್ದಾರೆ. ಮುಂದಿನ ದಿನಗಳಲ್ಲಿ ಜರ್ಮನಿ, ಇಂಗ್ಲೆಂಡ್, ಚೀನಾದವರು ಕಬ್ಬನ್ ಪಾರ್ಕ್‌ಗೆ ಲಗ್ಗೆ ಇಡುತ್ತಾರೆ. ಆದ್ದರಿಂದ ಇಲ್ಲಿ ಖಾಸಗಿ ಕಂಪನಿಯವರಿಗೆ ಅವಕಾಶ ನೀಡಬಾರದು' ಎಂದು ಆಗ್ರಹಿಸಿದರು.

'ಕಬ್ಬನ್ ಪಾರ್ಕ್‌ನಲ್ಲಿ ನಮ್ಮ ಫಿಟ್ನೆಸ್ ಟ್ರ್ಯಾಯಲ್ ಕೇಂದ್ರಗಳನ್ನು ಅಳವಡಿಸಲು ಸರ್ಕಾರ ಮತ್ತು ತೋಟಗಾರಿಕೆ ಇಲಾಖೆ ಆದೇಶ ನೀಡಿದರೆ ಹೋರಾಟ ಮಾಡಲಾಗುವುದು' ಎಂದು ಕಬ್ಬನ್ ಪಾರ್ಕ್ ವಾಯು ವಿಹಾರಿಗಳ ಸಂಘದ ಅಧ್ಯಕ್ಷ ಎಸ್.ಉಮೇಶ ಎಚ್ಚರಿಕೆ ನೀಡಿದರು.

ತೋಟಗಾರಿಕೆ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ ಇದ್ದರು.

ನಾಟಕ ಪ್ರದರ್ಶನಕ್ಕೆ ಬಜರಂಗದಳ, ಆರ್‌ಎಸ್‌ಎಸ್ ವಿರೋಧ

'ಜತೆಗಿರುವನು ಚಂದಿರ'ನಿಗೆ ಅಡ್ಡಿ

ಆನವಟ್ಟಿ (ಶಿವಮೊಗ್ಗ): ಸೊರಬ ತಾಲ್ಲೂಕಿನ ಆನವಟ್ಟಿಯ ವೀರಶೈವ ಕಲ್ಯಾಣ ಮಂದಿರದಲ್ಲಿ ಭಾನುವಾರ ಆಯೋಜಿಸಲಾಗಿದ್ದ 'ಜತೆಗಿರುವನು ಚಂದಿರ' ನಾಟಕಕ್ಕೆ ಮುಸ್ಲಿಂ ಪ್ರಧಾನ ಕಥಾಹಂದರ ಹೊಂದಿದೆ ಎಂದು ಆರೋಪಿಸಿ ಬಜರಂಗದಳ ಹಾಗೂ ಆರ್‌ಎಸ್‌ಎಸ್ ಕಾರ್ಯಕರ್ತರು ಅಡ್ಡಿಪಡಿಸಿದರು. ಇದರಿಂದಾಗಿ ಸಂಘಟಕರು ಅನಿವಾರ್ಯವಾಗಿ ನಾಟಕ ಪ್ರದರ್ಶನವನ್ನು ಅರ್ಧದಲ್ಲಿಯೇ ನಿಲ್ಲಿಸಿದರು.

ಜೋಸೆಫ್ ಸ್ಟೀನ್ ಅವರ 'ಫಿಡ್ಲರ್ ಆನ್ ದಿ ರೂಫ್' ನಾಟಕವನ್ನು ಜಯಂತ ಕಾಯ್ಕಿಣಿ ಅವರು ಕನ್ನಡಕ್ಕೆ ರೂಪಾಂತರ ಮಾಡಿದ್ದರು. ಅದನ್ನು ಶಿವಮೊಗ್ಗದ ರಂಗಬೆಳಕು ತಂಡವು ರಂಗಕ್ಕೆ ತಂದಿತ್ತು. ಈ ನಾಟಕದ ಪ್ರಯೋಗ ಭಾನುವಾರ ಆನವಟ್ಟಿಯಲ್ಲಿ ಆಯೋಜಿಸಲಾಗಿತ್ತು. ರಾತ್ರಿ 7.45ಕ್ಕೆ ನಾಟಕ ಆರಂಭವಾಗಿತ್ತು.

9.30ರ ಹೊತ್ತಿಗೆ ಆರ್‌ಎಸ್‌ಎಸ್‌ನ ಶ್ರೀಧರ ಆಚಾರ್, ಬಜರಂಗದಳದ ಮಂಜಣ್ಣ ಸಭಾಂಗಣದ ಒಳಗೆ ಬಂದಿದ್ದು, ಸಂಜಯ್ ಡೊಂಗ್ರೆ ಎಂಬುವವರು ಹೊರಗಡೆ ನಿಂತಿದ್ದರು. 'ಬೋಲೊ ಭಾರತ್ ಮಾತಾಕಿ ಜೈ', 'ಜೈ ಹಿಂದ್' ಘೋಷಣೆಗಳನ್ನು ಕೂಗಿದ ಅವರು, ನಾಟಕವನ್ನು ನಿಲ್ಲಿಸುವಂತೆ ಆಗ್ರಹಿಸಿದರು. ಪ್ರೇಕ್ಷಕರನ್ನು ಒತ್ತಾಯಪೂರ್ವಕವಾಗಿ ಹೊರಗೆ ಕಳುಹಿಸಿದರು. ಹೀಗಾಗಿ ಸಂಘಟಕರು ನಾಟಕವನ್ನು ಅರ್ಧದಲ್ಲಿಯೇ ಮೊಟಕುಗೊಳಿಸಿದರು.



ಆನವಟ್ಟಿಯಲ್ಲಿ ಭಾನುವಾರ 'ಜೊತೆಗಿರುವನು ಚಂದಿರ' ನಾಟಕ ಪ್ರದರ್ಶನಕ್ಕೆ ಆರ್‌ಎಸ್‌ಎಸ್ ಕಾರ್ಯಕರ್ತರು ಅಡ್ಡಿಪಡಿಸಿದಾಗ ಗೊಂದಲ ಉಂಟಾಯಿತು

'ದೇಶದಲ್ಲಿ ಹಿಂದೂ–ಮುಸ್ಲಿಂ ಗಲಾಟೆ ನಡೆಯುತ್ತಿರುವಾಗ ಮುಸ್ಲಿಮರೇ ಪ್ರಧಾನವಾಗಿರುವ ಕಥಾವಸ್ತು ಇಟ್ಟುಕೊಂಡು ನಾಟಕ ಮಾಡಿರುವುದು ಬೇಸರದ ಸಂಗತಿ. ಹಾಗಾಗಿ ನಾಟಕವನ್ನು ಅರ್ಧಕ್ಕೆ ನಿಲ್ಲಿಸಬೇಕಾಯಿತು' ಎಂದು ಶ್ರೀಧರ ಆಚಾರ್ ಹಾಗೂ ಮಂಜಣ್ಣ ಸಮರ್ಥಿಸಿಕೊಂಡಿದ್ದಾರೆ.

'ನಾಟಕದಲ್ಲಿ ಅಂತಹ ಸನ್ನಿವೇಶಗಳು ಇರಲಿಲ್ಲ. ನಾವು ಭಾರತೀಯರು ಒಂದೇ ಎಂದು ಸಾರುವ ಐಕ್ಯಭಾವ ನಾಟಕದಲ್ಲಿತ್ತು. ಅವರು ನೋಡಿ ವಿಮರ್ಶಿಸಬೇಕಿತ್ತು. ಅರ್ಧದಲ್ಲಿ ನಿಲ್ಲಿಸಿದ್ದು ಸರಿಯಲ್ಲ' ಎಂದು ಆಯೋಜಕರಲ್ಲಿ ಒಬ್ಬರಾದ ಕೊಟ್ರಪ್ಪ ಹಿರೇಮಾಗಡಿ ನೋವು ತೋಡಿಕೊಂಡರು.

ಈ ಹಿಂದೆ ಶಿವಮೊಗ್ಗ ನಗರದಲ್ಲಿ ನಡೆದ ಮಾರಿಕಾಂಬ ಜಾತ್ರೆಯ ವೇಳೆಯಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ದೇವಸ್ಥಾನದ ಬಳಿ ಮಳಿಗೆ ಹಾಕಲು ಅವಕಾಶ ನೀಡಿರಲಿಲ್ಲ ಎಂಬುದನ್ನೂ ಈ ಸಂದರ್ಭದಲ್ಲಿ ಸ್ಮರಿಸಬಹುದು.

ಮತ್ತೆ 'ಕೈ' ಹಿಡಿದ ಎಚ್.ಆರ್. ಶ್ರೀನಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ತ್ಯಜಿಸಿ ಜೆಡಿಎಸ್ ಸೇರಿದ್ದ ವಿಧಾನ ಪರಿಷತ್‌ನ ಮಾಜಿ ಸದಸ್ಯ ಕೊಪ್ಪಳದ ಎಚ್.ಆರ್. ಶ್ರೀನಾಥ್ ಮತ್ತೆ 'ಕೈ' ಹಿಡಿದಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪಕ್ಷದ ಬಾವುಟ ನೀಡಿ ಶ್ರೀನಾಥ್ ಅವರನ್ನು ಸ್ವಾಗತಿಸಿದರು.

ಡಿ.ಕೆ.ಶಿವಕುಮಾರ್ ಮಾತನಾಡಿ, 'ಯಾವ ಷರತ್ತೂ ಇಲ್ಲದೇ, ಎಲ್ಲರ ಒಮ್ಮತದಿಂದ ಅವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳಲಾಗಿದೆ. ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಬೇಕು ಎಂಬ ಷರತ್ತು ಮಾತ್ರ ಅವರಿಗೆ ನಾವು ಹಾಕಿದ್ದೇವೆ' ಎಂದರು.

'ಕೊಪ್ಪಳ ಜಿಲ್ಲೆಯಲ್ಲಿ ನಮ್ಮ ಪಕ್ಷದ ಸಾಮರ್ಥ್ಯವೇನು ಎನ್ನುವುದೂ ಗೊತ್ತಿದೆ. ಶ್ರೀನಾಥ್ ಸೇರ್ಪಡೆ ಸಂತೋಷದ ವಿಷಯ. ಕೊಪ್ಪಳ ಜಿಲ್ಲೆಯಲ್ಲಿ ಪಕ್ಷಕ್ಕಾಗಿ ಜೊತೆಯಾಗಿ ದುಡಿಯುತ್ತೇವೆ' ಎಂದು ಇಕ್ಬಾಲ್ ಅನ್ಸಾರಿ ತಿಳಿಸಿದರು.

'ಮೂರು ವರ್ಷ ವನವಾಸದಲ್ಲಿದ್ದೆ. ಬಿಜೆಪಿ ಸೇರುವಂತೆ ಅಮಿತ್ ಶಾ ಕಚೇರಿಯಿಂದಲೇ ಆಹ್ವಾನ ಬಂದಿತ್ತು. ಜಾತ್ಯತೀತತೆಯ ಕಾರಣ ಮತ್ತೆ ಕಾಂಗ್ರೆಸ್‌ಗೆ ವಾಪಸ್ಸಾಗಿದ್ದೇನೆ. ಅಂಜನಾದ್ರಿ ವಿಚಾರ ಮುಂದಿಟ್ಟುಕೊಂಡು ಅವರು ರಾಜಕೀಯ ಮಾಡುತ್ತಿದ್ದಾರೆ. ಈ ಪವಿತ್ರ ಕ್ಷೇತ್ರವನ್ನು ರಕ್ಷಿಸುವ ಕೆಲಸ ಮಾಡುತ್ತೇವೆ' ಎಂದು ಶ್ರೀನಾಥ್ ಹೇಳಿದರು.

ಕೆಂಪೇಗೌಡ ಜಯಂತಿ: ಮಕ್ಕಳಿಗೆ ಬ್ಯಾಗ್ ವಿತರಣೆ

ಬೆಂಗಳೂರು: ರಾಜ್ಯ ಒಕ್ಕಲಿಗರ ಒಕ್ಕೂಟ ಭಾನುವಾರ ನಾಡಪ್ರಭು ಕೆಂಪೇಗೌಡರ 513ನೇ ಜಯಂತಿ ಹಮ್ಮಿಕೊಂಡಿತ್ತು. ಬಿಎಂಟಿಸಿ ಉಪಾಧ್ಯಕ್ಷ ಡಾ.ಎಂ.ಆರ್. ವೆಂಕಟೇಶ್ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಾನಪದ ಕಲಾತಂಡಗಳು ಗಮನ ಸೆಳೆದವು.

ಶಾಸಕಿ ಸೌಮ್ಯಾರೆಡ್ಡಿ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಉಚಿತವಾಗಿ ಶಾಲಾ ಬ್ಯಾಗ್‌ಗಳನ್ನು ವಿತರಿಸಿದರು. ಅದಮ್ಯ ಚೇತನ ಸಂಸ್ಥೆಯ ತೇಜಸ್ವಿನಿ ಅನಂತಕುಮಾರ್ ಅವರು ಕಾಲೇಜು ವಿದ್ಯಾರ್ಥಿಗಳಿಂದ ಜನ ಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ 'ಏಕ ಬಳಕೆಯ ಪ್ಲಾಸ್ಟಿಕ್ ಮುಕ್ತ ಬೆಂಗಳೂರು' ಅಭಿಯಾನಕ್ಕೆ ಚಾಲನೆ ನೀಡಿದರು.

ಬಿಬಿಎಂಪಿ ಮಾಜಿ ಮೇಯರ್ ಎಸ್.ಕೆ.ನಟರಾಜ್, ಮಾಜಿ ಸದಸ್ಯ ನಾಗರಾಜ್ ಹಾಗೂ ಒಕ್ಕೂಟದ ಪದಾಧಿಕಾರಿಗಳು, ವಿವಿಧ ಸ್ಥಳೀಯ ಮುಖಂಡರು ಇದ್ದರು.



'ಮಣ್ಣು ಉಳಿಸಿ' ಅಭಿಯಾನದ ಮ್ಯಾರಥಾನ್‌ನಲ್ಲಿ ವಿಜೇತರಾದವರಿಗೆ ಅಶ್ವಿನಿ ಪುನೀತ್‌ರಾಜ್‌ಕುಮಾರ್ ಪದಕ ವಿತರಿಸಿದರು

'ಮಣ್ಣು ಉಳಿಸಿ' ಅಭಿಯಾನ: ಮ್ಯಾರಥಾನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಣ್ಣು ಉಳಿಸಿ' ಅಭಿಯಾನ ಅಂಗವಾಗಿ ಸೂತ್ರ ಫಿಟ್ನೆಸ್ ವತಿಯಿಂದ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಮ್ಯಾರಥಾನ್‌ನಲ್ಲಿ ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು.

ನಗರದ ಕಂಠೀರವ ಕ್ರೀಡಾಂಗಣದಲ್ಲಿ ಬೆಳಿಗ್ಗೆ 6 ಗಂಟೆಗೆ ಮ್ಯಾರಾಥಾನ್ ಆರಂಭವಾಯಿತು. ಯುವಕ–ಯುವತಿಯರು ಉತ್ಸಾಹದಿಂದ ಓಟದಲ್ಲಿ ಪಾಲ್ಗೊಂಡು, ಅಭಿಯಾನಕ್ಕೆ ಕೈ ಜೋಡಿಸಿದರು.

ನಟಿ ಧನ್ಯಾ ರಾಮ್‌ಕುಮಾರ್ ಸಹ ಓಡಿದರು. 25 ಅಂಧರು ಸಹ ಓಟದಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಇವರಿಗೆ ಪದಕ ನೀಡಿ ಅಭಿನಂದಿಸಲಾಯಿತು. ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಅಶ್ವಿನಿ ಪುನೀತ್ ರಾಜ್‌ಕುಮಾರ್, ಮ್ಯಾರಥಾನ್‌ನಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿದರು.

ಓಟದಲ್ಲಿ ಪಾಲ್ಗೊಂಡಿದ್ದ ಎಲ್ಲರನ್ನೂ ಅಭಿನಂದಿಸಿದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತ ಗೋಪಾಲಕೃಷ್ಣ ಹಾಜರಿದ್ದರು.

ಚುನಾವಣಾ ಅಕ್ರಮ: ಇಂದು ವಿಚಾರಣೆ

ಬೆಂಗಳೂರು: 'ಚುನಾವಣಾ ಸಂದರ್ಭದಲ್ಲಿ ನಕಲಿ ಬಾಂಡ್‌ಗಳನ್ನು ಹಂಚಿ ಗೌರಿಶಂಕರ್ ಚುನಾವಣಾ ಅಪರಾಧ ಎಸಗಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಅರ್ಜಿದಾರರು ಈಗಾಗಲೇ ಹೈಕೋರ್ಟ್‌ಗೆ ದಾಖಲೆಗಳನ್ನು ಸಲ್ಲಿಸಿದ್ದು ಈ ಕುರಿತ ಅರ್ಜಿದಾರರ ಮುಖ್ಯ ವಿಚಾರಣೆ ಸೋಮವಾರ (ಜುಲೈ 4) ನಡೆಯಲಿದೆ.

'ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ಶಾಸಕ ಡಿ.ಸಿ.ಗೌರಿಶಂಕರ್ ಆಯ್ಕೆಯನ್ನು ಅಸಿಂಧುಗೊಳಿಸಬೇಕು' ಎಂದು ಕೋರಿ ಪರಾಜಿತ ಅಭ್ಯರ್ಥಿ ಬಿ.ಸುರೇಶ್ ಗೌಡ ಸಲ್ಲಿಸಿದ್ದಾರೆ.

ಸಿದ್ದರಾಮೋತ್ಸವ ಆಚರಣೆ ತಪ್ಪಲ್ಲ- ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನಗೆ ವ್ಯಕ್ತಿ ಮುಖ್ಯವಲ್ಲ. ಪಕ್ಷ ಮುಖ್ಯ. ಪಕ್ಷ ಇದ್ದರೆ ಮಾತ್ರ ನಾವು. ಇದನ್ನೇ ನಾನು ಮೊದಲಿಂದಲೂ ಪ್ರತಿಪಾದಿಸುತ್ತಿದ್ದೇನೆ. ಪಕ್ಷದ ಕಾರ್ಯಕರ್ತರಿಗೂ ಇದನ್ನೇ ಹೇಳುತ್ತಿದ್ದೇನೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

'ಸಿದ್ದರಾಮೋತ್ಸವ ಕಾರ್ಯಕ್ರಮದ ನಂತರ ಕಾಂಗ್ರೆಸ್ ಖಾಲಿ ಆಗಲಿದೆ' ಎಂಬ ಬಿಜೆಪಿ ಟ್ವೀಟ್ ಕುರಿತು ಕೇಳಿದ ಪ್ರಶ್ನೆಗೆ, 'ಬೇರೆಯವರು ಏನಾದರೂ ಹೇಳಲಿ. ನಮ್ಮ ಪಕ್ಷದ ನಾಯಕರು ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಾರೆ. ನಾನು ಕೇದಾರನಾಥಕ್ಕೆ ಕುಟುಂಬ ಸಮೇತ ಹೋಗಿ ನಾನು ಹುಟ್ಟುಹಬ್ಬ ಆಚರಣೆ ಮಾಡಿಕೊಳ್ಳಬೇಕಿತ್ತು. ಸಿದ್ದರಾಮಯ್ಯ ಅವರ ಹುಟ್ಟುಹಬ್ಬ ಆಚರಿಸಲು ಅವರ ಅಭಿಮಾನಿಗಳು ಬಯಸುತ್ತಿದ್ದಾರೆ. ಇದರಲ್ಲಿ ಯಾವುದೇ ತಪ್ಪಿಲ್ಲ' ಎಂದರು.

'ಇದು ಶಕ್ತಿ ಪ್ರದರ್ಶನ ಅಲ್ಲವೇ' ಎಂದು ಕೇಳಿದ ಪ್ರಶ್ನೆಗೆ, 'ನಮ್ಮ ಪಕ್ಷಕ್ಕೆ ಏನೆಲ್ಲಾ ಅನುಕೂಲವಾಗುತ್ತದೆಯೋ ಅದನ್ನೆಲ್ಲ ಮಾಡೋಣ. ಇನ್ನು ಖರ್ಗೆ ಅವರು ಶಾಸಕರಾಗಿ 50 ವರ್ಷ ಆಗಿದೆ. ಆ ಕಾರ್ಯಕ್ರಮ ಮಾಡಬೇಕು ಎಂದು ಅವರ ಅಭಿಮಾನಿಗಳು ಕೇಳುತ್ತಾರೆ. ಪರಮೇಶ್ವರ್ ಅವರ ಅಭಿಮಾನಿಗಳು ಬಂದು ಅವರ ಪುಸ್ತಕ ಬಿಡುಗಡೆ ಕಾರ್ಯಕ್ರಮ ಮಾಡಬೇಕು ಎಂದು ಕೇಳುತ್ತಾರೆ. ಒಬ್ಬೊಬ್ಬರದ್ದು ಒಂದೊಂದು ಆಸೆ ಇರುತ್ತದೆ. ಅದನ್ನು ತಪ್ಪು ಎಂದು ಹೇಳಲು ಸಾಧ್ಯವೇ? ಏನೇ ಸಂಘಟನೆ ಆದರೂ ಅದರಿಂದ ಪಕ್ಷಕ್ಕೆ ಒಳ್ಳೆಯದಾದರೆ ಸಾಕು' ಎಂದರು.

'ಮುಂಬರುವ ಚುನಾವಣೆಯನ್ನು ಸಾಮೂಹಿಕ ನಾಯಕತ್ವದಲ್ಲಿ ಎದುರಿಸಬೇಕು ಎಂದು ರಾಹುಲ್ ಗಾಂಧಿ ಹಾಗೂ ಪಕ್ಷದ ವರಿಷ್ಠರು ತೀರ್ಮಾನಿಸಿದ್ದಾರೆ' ಎಂದರು.

'ತಪ್ಪಲ್ಲ, ಗುಂಪುಗಾರಿಕೆ ಇಲ್ಲ'

ರಾಮನಗರ: 'ವ್ಯಕ್ತಿ 75 ವರ್ಷ ಪೂರೈಸುವುದು ಸುಲಭವಲ್ಲ. ಹೀಗಾಗಿ ಸಿದ್ದರಾಮಯ್ಯ ಅವರ ಅಭಿಮಾನಿಗಳು ಅವರ ಹೆಸರಿನಲ್ಲಿ ಸಂಭ್ರಮಾಚರಣೆ ಕಾರ್ಯಕ್ರಮ ಆಯೋಜಿಸಿರುವುದು ತಪ್ಪಲ್ಲ' ಎಂದು ಮಾಜಿ ಉಪಮುಖ್ಯಮಂತ್ರಿ ಜಿ.ಪರಮೇಶ್ವರ ಹೇಳಿದರು.

ಸಿದ್ದರಾಮೋತ್ಸವ ಕಾರ್ಯಕ್ರಮ ಆಯೋಜನೆ ಕುರಿತು ಭಾನುವಾರ ಪ್ರತಿಕ್ರಿಯಿಸಿದ ಅವರು, 'ಕಾಂಗ್ರೆಸ್‌ನಲ್ಲಿ ಗುಂಪುಗಾರಿಕೆ ಇಲ್ಲ. ಮೊದಲು ಪಕ್ಷ ಅಧಿಕಾರಕ್ಕೆ ಬರಬೇಕು. ಚುನಾವಣೆಯನ್ನು ಕಾಂಗ್ರೆಸ್ ಸಾಮೂಹಿಕ ನಾಯಕತ್ವದೊಂದಿಗೆ ಎದುರಿಸಲಿದೆ' ಎಂದರು.

'ದಲಿತ ಮುಖ್ಯಮಂತ್ರಿ ಆಯ್ಕೆ ಪಕ್ಷಕ್ಕೆ ಬಿಟ್ಟ ವಿಚಾರ. ಸದ್ಯ ಪಕ್ಷ ಅಧಿಕಾರಕ್ಕೆ ಬರುವುದು ಮುಖ್ಯ. ನಂತರವಷ್ಟೇ ಮುಖ್ಯಮಂತ್ರಿ ಯಾರೆಂದು ಪಕ್ಷ ತೀರ್ಮಾನ ಮಾಡುತ್ತದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.



ಡಾ.ಲತಾ ಹಾಗೂ ಡಾ.ನಕುಲ್ ಅವರು ದಂತ ತಪಾಸಣೆ ನಡೆಸಿದರು. ಚಂದ್ರಕಲಾ ಮತ್ತು ಗಿರೀಶ್ ಲಕ್ಕಣ್ಣ ಇದ್ದಾರೆ

ದಂತ ಸಮಸ್ಯೆ: ಸ್ಥಳದಲ್ಲೇ ಚಿಕಿತ್ಸೆ

ಬೆಂಗಳೂರು: ಗಾಯತ್ರಿನಗರ ವಾರ್ಡ್‌ನಲ್ಲಿ ಭಾನುವಾರ ನಡೆದ ಉಚಿತ ದಂತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರದಲ್ಲಿ ಹಲ್ಲಿನ ಸಮಸ್ಯೆ ಎದುರಿಸುತ್ತಿದ್ದ 150ಕ್ಕೂ ಅಧಿಕ ಮಂದಿಗೆ ಸ್ಥಳದಲ್ಲಿಯೇ ಚಿಕಿತ್ಸೆ ನೀಡಲಾಯಿತು.

ಬಿಬಿಎಂಪಿ ನಿಕಟಪೂರ್ವ ಸದಸ್ಯೆ ಚಂದ್ರಕಲಾ ಗಿರೀಶ್ ಲಕ್ಕಣ್ಣ ಮತ್ತು ವಿಜಯ ಚಾರಿಟಬಲ್ ಟ್ರಸ್ಟ್ ವತಿಯಿಂದ ಶಿಬಿರ ನಡೆಯಿತು.

'ವ್ಯಕ್ತಿಗೆ ಆರೋಗ್ಯದಷ್ಟೇ ದಂತಗಳ ಆರೋಗ್ಯವೂ ಮುಖ್ಯ. ದಂತ ಸರಿಯಿದ್ದರೆ ಯಾವುದೇ ಕಾಯಿಲೆ ಸುಲಭವಾಗಿ ಬರುವುದಿಲ್ಲ' ಎಂದು ಚಂದ್ರಕಲಾ ಗಿರೀಶ್ ಅಭಿಪ್ರಾಯಪಟ್ಟರು.

ವಿಜಯ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷೆ ಡಾ.ಲತಾ ಹಾಗೂ ಡಾ.ನಕುಲ್ ನೇತೃತ್ವದ ವೈದ್ಯರ ತಂಡ ಸಾವಿರಕ್ಕೂ ಅಧಿಕ ಮಂದಿಗೆ ತಪಾಸಣೆ ನಡೆಸಿತು. ದಂತ ಸಮಸ್ಯೆ ಇದ್ದವರಲ್ಲಿ 150 ಮಂದಿಗೆ ಚಿಕಿತ್ಸೆ ನೀಡಲಾಯಿತು. ವಿವಿಧ ಕಾರಣಗಳಿಂದ ಹಲ್ಲಿನ ತೊಂದರೆ, ನೋವು ಅನುಭವಿಸುತ್ತಿದ್ದ 50ಕ್ಕೂ ಹೆಚ್ಚು ಮಂದಿಗೆ ಸ್ಥಳದಲ್ಲಿಯೇ ಚಿಕಿತ್ಸೆ ಮತ್ತು ಔಷಧಗಳನ್ನು ನೀಡಲಾಯಿತು.

ಮಾಜಿ ಸಚಿವರ ಸ್ಮರಣೆ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ

'ರಘುಪತಿ ನನ್ನ ರಾಜಕೀಯ ಗುರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಜಿ ಸಚಿವ ಎಂ.ರಘುಪತಿ ನನ್ನ ರಾಜಕೀಯ ಗುರುಗಳು. ಅವರ ಒತ್ತಾಸೆಯಿಂದಾಗಿಯೇ ಕಾಂಗ್ರೆಸ್ ಸೇರಲು ನಿರ್ಧರಿಸಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಅರಮನೆ ಮೈದಾನದ ಕಿಂಗ್ಸ್‌ಕೋರ್ಟ್ ಆವರಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ರಘುಪತಿ ಸ್ಮರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

'ಈಚೆಗೆ ಶಾಸಕ ಕೆ.ಜೆ.ಜಾರ್ಜ್ ಅವರ ಮನೆಯಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಿದ್ದ ರಘುಪತಿ ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ತರುವ ಆಶಯ ವ್ಯಕ್ತಪಡಿಸಿದ್ದರು. 2023ರ ಚುನಾವಣೆಯಲ್ಲಿ ಪಕ್ಷ ಅಧಿಕಾರಕ್ಕೆ ಬರಬೇಕು. ಪುನಃ ನಾನೇ ಮುಖ್ಯಮಂತ್ರಿ ಆಗಬೇಕು ಎಂದು ಆಶಿಸಿದ್ದರು. ಅವರು ಇನ್ನಷ್ಟು ದಿನಗಳು ಇರಬೇಕಿತ್ತು. ಸಮಾಜಕ್ಕೆ ಅವರ ಅಗತ್ಯವಿತ್ತು' ಎಂದು ಸಿದ್ದರಾಮಯ್ಯ ಅವರು ಹೇಳಿದರು.



ಮಾಜಿ ಸಚಿವ ಎಂ. ರಘುಪತಿ ಅವರ ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಭಾಗವಹಿಸಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಶಾಸಕ ಜಮೀರ್ ಅಹಮದ್ ಅವರು ಹಾಜರಿದ್ದರು.

ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ಎನ್.ಟಿ.ರಾಮರಾವ್ ಅವರ ಮೊಮ್ಮಗ ಶ್ರೀನಿವಾಸ್ ಮಾತನಾಡಿ, 'ನಮ್ಮಜ್ಜನ ರಾಜಕೀಯ ಜೀವನದ ಸಂಕಷ್ಟದ ಕಾಲದಲ್ಲಿ ರಘುಪತಿ ನೆರವಾಗಿದ್ದರು. ನಮ್ಮ ಕುಟುಂಬದ ಜತೆ ಅವಿನಾಭಾವ ಸಂಬಂಧ ಹೊಂದಿದ್ದರು. ರಜನಿಕಾಂತ್, ಅಮಿತಾಭ್ ಬಚ್ಚನ್ ಅವರ ಜತೆಗೂ ಉತ್ತಮ ಒಡನಾಟವಿತ್ತು' ಎಂದು ಸ್ಮರಿಸಿದರು.

ಸ್ಮರಣಾ ಕಾರ್ಯಕ್ರಮದಲ್ಲಿ ಶಾಸಕರಾದ ರಮೇಶ್ ಕುಮಾರ್, ಕೆ.ಜೆ.ಜಾರ್ಜ್, ಜಮೀರ್ ಅಹಮದ್ ಖಾನ್, ವಿಧಾನಪರಿಷತ್‌ನ ಮಾಜಿ ಸಭಾಪತಿ ವಿ.ಆರ್. ಸುದರ್ಶನ್, ಬಿಜೆಪಿ ನಾಯಕ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮುಂತಾದವರು ಇದ್ದರು.

'ಜಿಲ್ಲಾ ಸಲಹಾ ಮಂಡಳಿ' ಅನುಮೋದನೆ ಇಲ್ಲದೇ ಕಾಮಗಾರಿಗಳಿಗೆ ಮಂಜೂರಾತಿ

ಕೆಕೆಆರ್‌ಡಿಬಿ ನಡೆಗೆ ಬಿಜೆಪಿ ಶಾಸಕರಿಂದಲೇ ಆಕ್ಷೇಪ

• ರಾಜೇಶ್ ರೈ ಚಟ್ಲ

ಬೆಂಗಳೂರು: ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ (ಕೆಕೆಆರ್‌ಡಿಬಿ) ಮ್ಯಾಕ್ರೊ ಯೋಜನೆಯ ಅನುದಾನವನ್ನು ಜಿಲ್ಲಾ ಸಲಹಾ ಮಂಡಳಿಯ ಅನುಮೋದನೆ ಇಲ್ಲದೇ ಮಂಡಳಿಯ ಅಧ್ಯಕ್ಷರ ಶಿಫಾರಸಿನ ಮೇರೆಗೆ ಕಾರ್ಯದರ್ಶಿ ಮಂಜೂರು ಮಾಡಿರುವುದಕ್ಕೆ ಆ ಭಾಗದ ಬಿಜೆಪಿ ಶಾಸಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿ-ದ್ದಾರೆ.

ಶಾಸಕರ ಆಕ್ಷೇಪವನ್ನು ಉಲ್ಲೇಖಿಸಿ ಕೆಕೆಆರ್‌ಡಿಬಿ ಕಾರ್ಯದರ್ಶಿಗೆ ಪತ್ರ ಬರೆದಿರುವ ಕಲಬುರಗಿ ಜಿಲ್ಲಾಧಿಕಾರಿ ಯಶವಂತ ವಿ. ಗುರುಕರ್, '2021–22ನೇ ಸಾಲಿನಲ್ಲಿ ನಿಗದಿಪಡಿಸಿದ ₹104.77 ಕೋಟಿಯಲ್ಲಿ ಜಿಲ್ಲಾ ಸಲಹಾ ಸಮಿತಿ ಒಪ್ಪಿಗೆ ನೀಡಿದ ₹ 43.12 ಕೋಟಿಯ ಕಾಮಗಾರಿ ಹೊರತುಪಡಿಸಿ, ಉಳಿದ ₹61.64 ಕೋಟಿಯ ಕಾಮಗಾರಿ ರದ್ದುಗೊಳಿಸ-ಬೇಕು. ಪ್ರಸಕ್ತ ಸಾಲಿನಲ್ಲಿ (2022–23) ಜಿಲ್ಲಾ ಸಲಹಾ ಸಮಿತಿಯ ಒಪ್ಪಿಗೆ ಪಡೆಯದೆ ಅನುಮೋದನೆ ನೀಡಿರುವ ₹73.01 ಕೋಟಿ (8 ಕಾಮಗಾರಿಗಳು) ಯೋಜನೆಯನ್ನು ತಕ್ಷಣ ರದ್ದುಗೊಳಿಸ-ಬೇಕು' ಎಂದು ಸೂಚಿಸಿದ್ದಾರೆ.

ಈ ಪತ್ರದ ಪ್ರತಿಯನ್ನು ವಿವರವಾದ ಟಿಪ್ಪಣಿ ಸಹಿತ ಮುಖ್ಯಮಂತ್ರಿ, ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಮುರುಗೇಶ ನಿರಾಣಿ, ಮುಖ್ಯಕಾರ್ಯದರ್ಶಿ, ಮುಖ್ಯಮಂತ್ರಿಯ ಪ್ರಧಾನ ಕಾರ್ಯದರ್ಶಿ, ಲೋಕಾಯುಕ್ತಕ್ಕೆ ಕಳಿಸಿರುವ ಅವರು, 'ಜಿಲ್ಲಾ ಸಲಹಾ ಸಮಿತಿಯ ಅನುಮೋದನೆ ಇಲ್ಲದೆ ಯೋಜನೆಗಳಿಗೆ ಮಂಜೂರಾತಿ ನೀಡಿದರೆ ಮಂಡಳಿಯೇ ಹೊಣೆ' ಎಂದೂ ತಿಳಿಸಿದ್ದಾರೆ.

ಪತ್ರದಲ್ಲಿ ಏನಿದೆ?: 'ಜಿಲ್ಲಾ ಉಸ್ತವಾರಿ ಸಚಿವ ಮುರುಗೇಶ ನಿರಾಣಿ ಅಧ್ಯಕ್ಷ-ತೆಯಲ್ಲಿ ಜೂನ್ 25ರಂದು ಜರುಗಿದ ಜಿಲ್ಲಾ ಸಲಹಾ ಸಮಿತಿ ಸಭೆಯಲ್ಲಿ, ಒಂದೇ ವಿಧಾನಸಭಾ ಕ್ಷೇತ್ರಕ್ಕೆ ಅನುದಾನ ಸೀಮಿತಗೊಳಿಸದೆ, ಸಮಾನವಾಗಿ ಹಂಚಿಕೆ ಮಾಡುವಂತೆ ಎಲ್ಲ ಶಾಸಕರು ಕೋರಿದ್ದರು. ಹೀಗಾಗಿ, 2022–23ನೇ ಸಾಲಿನ ಮ್ಯಾಕ್ರೋ ಅನುದಾನ ₹ 105.26 ಕೋಟಿಯನ್ನು ಜಿಲ್ಲೆಯ ಶಾಸಕರಿಗೆ ಸಮಾನವಾಗಿ ಹಂಚಿಕೆ ಮಾಡಿ ಕಾಮಗಾರಿ ಅನುಮೋದನೆಗಾಗಿ ಮಂಡಳಿಗೆ ಕಳಿಸುವಂತೆ ಸೂಚಿಸಲಾಗಿದೆ. ಆದರೆ, ₹ 73.01 ಕೋಟಿಯ (8 ಕಾಮಗಾರಿ) ಯೋಜನೆಗಳಿಗೆ ಮಾತ್ರ ಮಂಜೂರಾತಿ ನೀಡಿ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ. ಎಲ್ಲ ಶಾಸಕರಿಗೂ ಸಮಾನವಾಗಿ ಹಂಚಿಕೆ ಮಾಡುವಂತೆ ಜಿಲ್ಲಾ ಉಸ್ತವಾರಿ ಸಚಿವರು ಸೂಚಿಸಿದ್ದರೂ 2021–22ನೇ ಸಾಲಿನಲ್ಲಿಯೂ ಸಮಾನವಾಗಿ ಅನುದಾನ ಹಂಚಿಕೆ ಮಾಡಿಲ್ಲವೆಂದು ಶಾಸಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಹೀಗಾಗಿ, 2022–23ನೇ ಸಾಲಿನ ಮ್ಯಾಕ್ರೋ ಅನುದಾನದಲ್ಲಿ ಮಂಜೂರು ಗೊಳಿಸಿದ ಕಾಮಗಾರಿಗಳನ್ನು ತಕ್ಷಣ ರದ್ದುಗೊಳಿಸಿ, ನಿಗದಿಪಡಿಸಿದ ಅನುದಾನ ₹ 105.26 ಕೋಟಿಯನ್ನು ಯಥಾವತ್ತಾಗಿ ಕಾಯ್ದಿರಿಸಬೇಕು. ಇದರಲ್ಲಿ ವ್ಯತ್ಯಾಸವಾದರೆ ಮಂಡಳಿಯೇ ಹೊಣೆ' ಎಂದು ಪತ್ರದಲ್ಲಿ ಜಿಲ್ಲಾಧಿಕಾರಿ ಸೂಚಿಸಿದ್ದಾರೆ.

> **ಜಿಲ್ಲಾ ಸಲಹಾ ಸಮಿತಿ ಸಲಹೆಯಷ್ಟೆ ಕೊಡುತ್ತದೆ. ಅನುದಾನ ವೆಚ್ಚ ವಿಷಯದಲ್ಲಿ ಮಂಡಳಿ ತೀರ್ಮಾನ ಕೈಗೊಳ್ಳುತ್ತಿದೆ. ಈ ಬಗ್ಗೆ ಡಿ.ಸಿಗೆ ಪತ್ರ ಬರೆಯುತ್ತೇವೆ**
> **ಆರ್. ವೆಂಕಟೇಶ್ ಕುಮಾರ್,**
> ಕಾರ್ಯದರ್ಶಿ, ಕೆಕೆಆರ್‌ಡಿಬಿ

ಜಿಲ್ಲಾಧಿಕಾರಿ ಟಿಪ್ಪಣಿಯಲ್ಲಿ ಏನಿದೆ?

- 2022–23ನೇ ಸಾಲಿನಲ್ಲಿ ಮ್ಯಾಕ್ರೊ ಅನುದಾನದಲ್ಲಿ ಜಿಲ್ಲಾ ಸಲಹಾ ಸಮಿತಿಯ ಅನುಮೋದನೆ ಇಲ್ಲದೆ ₹ 73.01 ಕೋಟಿಯ ಕಾಮಗಾರಿಗೆ ಮಂಡಳಿಯಿಂದಲೇ ಅನುಮೋದನೆ
- 2021–22ನೇ ಸಾಲಿನಲ್ಲಿ ಜಿಲ್ಲಾ ಸಲಹಾ ಸಮಿತಿ ಅನುಮೋದನೆ ನೀಡಿದ, ಸಚಿವ ಸಂಪುಟದಿಂದ ಅನುಮೋದನೆಗೊಂಡ ₹ 43.12 ಕೋಟಿಯ ಕಾಮಗಾರಿ ಹೊರತುಪಡಿಸಿ, ಉಳಿದ ₹ 61.64 ಕೋಟಿ ಕಾಮಗಾರಿಯನ್ನು ರದ್ದುಗೊಳಿಸಬೇಕು.
- ಕೋವಿಡ್ ನಿಯಂತ್ರಿಸಲು ಕೈಗೊಂಡ ₹ 15.26 ಕೋಟಿ ಕಾಮಗಾರಿಗೆ ಜಿಲ್ಲಾಧಿಕಾರಿ ಕಚೇರಿಯಿಂದ ಆಡಳಿತಾತ್ಮಕ ಅನುಮೋದನೆ ಪಡೆದಿಲ್ಲ.
- 2021–22ನೇ ಸಾಲಿನಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಟಾಟಾ ಟೆಕ್ನಾಲಜಿಸ್ ಲ್ಯಾಬ್‌ಗೆ ಸಂಬಂಧಿಸಿದ ₹ 12.63 ಕೋಟಿಯ ಕಾಮಗಾರಿಯ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆಗೆ ಪತ್ರ ವ್ಯವಹಾರ ಆಗಿಲ್ಲ
- ರಾಷ್ಟ್ರೀಯ ಹೆದ್ದಾರಿ 50ರಲ್ಲಿ ಖರ್ಗೆ ಪೆಟ್ರೋಲ್ ಪಂಪ್ ಬಳಿ ಮೇಲ್ಸೇತುವೆ ನಿರ್ಮಾಣದ ಕಾಮಗಾರಿಗೆ ₹ 52 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಪಡೆಯದೆ ಟೆಂಡರ್.

ಆಡಳಿತ ಪಕ್ಷದ ಶಾಸಕರ ವಿರೋಧ

ಶಾಲಾ ಕಾಲೇಜುಗಳಿಗೆ ಮೈಕ್ರೊ ಯೋಜನೆಯಡಿ ಮಂಡಳಿಯಿಂದಲೇ ಪೀಠೋಪಕರಣ ಪೂರೈಸುವುದಾಗಿ ಕೆಕೆಆರ್‌ಡಿಬಿ ಕಾರ್ಯದರ್ಶಿ ಸೂಚಿಸಿರುವುದು ಕಾನೂನುಬಾಹಿರ ಎಂದು ಬಿಜೆಪಿ ಶಾಸಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಯೋಜನಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಶಾಸಕ ರಾಜಕುಮಾರ ಪಾಟೀಲ ತೇಲ್ಕೂರ (ಸೇಡಂ) ಪತ್ರ ಬರೆದಿದ್ದಾರೆ. ಈ ಪತ್ರಕ್ಕೆ ಅವಿನಾಶ ಜಾಧವ (ಚಿಂಚೋಳಿ), ಸುಭಾಷ ಗುತ್ತೇದಾರ (ಆಳಂದ), ಬಸವರಾಜ ಮತ್ತಿಮೂಡ (ಕಲಬುರಗಿ ಗ್ರಾಮೀಣ) ಸಹಿ ಹಾಕಿದ್ದಾರೆ. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಆಯಾ ವಿಧಾನಸಭಾ ಕ್ಷೇತ್ರಗಳಿಗೆ ಏಜೆನ್ಸಿಗಳನ್ನು ಗುರುತಿಸುತ್ತಿದ್ದು, ಈ ಬಾರಿಯೂ ಅದೇ ರೀತಿ ಅವಕಾಶ ಮಾಡಿಕೊಡಬೇಕು ಎಂದೂ ಪತ್ರದಲ್ಲಿ ಒತ್ತಾಯಿಸಿದ್ದಾರೆ.



ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕಿನ ವಲ್ಕಂದಿನ್ನಿ ಗ್ರಾಮದಲ್ಲಿ ಕಲುಷಿತ ನೀರು ಸೇವಿಸಿ ಅಸ್ವಸ್ಥಗೊಂಡವರಿಗೆ ಸಮುದಾಯ ಭವನದಲ್ಲಿ ಭಾನುವಾರ ಚಿಕಿತ್ಸೆ ನೀಡಲಾಯಿತು

ಸುದ್ದಿ 2 ನಿಮಿಷ

ತಲೆಮರೆಸಿಕೊಂಡಿದ್ದ ಶಿಕ್ಷಕ ಸೆರೆ

ಕೊಪ್ಪಳ: ಐದು ದಿನಗಳಿಂದ ತಲೆ ಮರೆಸಿಕೊಂಡಿದ್ದ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಸಿಂಗಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಮಹಮ್ಮದ್ ಅಜರುದ್ದೀನ್ ಅವರನ್ನು ಪೊಲೀಸರು ಭಾನುವಾರ ಗೋವಾ ಸಮೀಪ ಬಂಧಿಸಿದ್ದಾರೆ.

ಕೊಪ್ಪಳ ಜಿಲ್ಲೆ ಕಾರಟಗಿಯಲ್ಲಿ ವಾಸವಾಗಿದ್ದ ಶಿಕ್ಷಕ, ಅಲ್ಲಿನ ಮಹಿಳೆ ಜೊತೆ ಅನೈತಿಕ ಸಂಬಂಧ ಹೊಂದಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ಶಿಕ್ಷಣ ಇಲಾಖೆ ಆತನನ್ನು ಅಮಾನತು ಕೂಡ ಮಾಡಿತ್ತು. ದೂರು ದಾಖಲಾಗುತ್ತಿದ್ದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ ತನಿಖೆಗೆ ತಂಡ ರಚನೆ ಮಾಡಿದ್ದರು.

ಈ ತಂಡ ಶಿಕ್ಷಕನ ಸ್ವಂತ ಊರು ಧಾರವಾಡ ತಾಲ್ಲೂಕಿನ ಅಮ್ಮಿನಭಾವಿಯಲ್ಲಿ ಶೋಧ ನಡೆಸಿ ಅಲ್ಲಿ ಒಂದಷ್ಟು ಮಾಹಿತಿ ಕಲೆಹಾಕಿತ್ತು.

'ಶಿಕ್ಷಕ ಬೇರೆ ಮಹಿಳೆಯರ ಜೊತೆಗೂ ಅಸಭ್ಯವಾಗಿ ನಡೆದುಕೊಂಡ ಬಗ್ಗೆ ಮೊದಲಿನಿಂದಲೂ ದೂರುಗಳು ಕೇಳಿ ಬರುತ್ತಿದ್ದವು. ಆದರೆ, ಯಾರೂ ಲಿಖಿತವಾಗಿ ದೂರು ದಾಖಲಿಸಿರಲಿಲ್ಲ. ಮಹಿಳೆಯೊಬ್ಬರು ಈಗ ದೂರು ನೀಡಿದ್ದು, ಅದರ ಆಧಾರದ ಮೇಲೆ ಶಿಕ್ಷಕನನ್ನು ಗೋವಾ ಸಮೀಪ ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.



ಮಗಳ ಮೇಲೆ ವಿಕೃತಿ: ತಂದೆ ಬಂಧನ

ಬೆಳಗಾವಿ: ಐದು ವರ್ಷದ ಮಗಳ ಕೆನ್ನೆ ಮತ್ತು ಎದೆಯ ಭಾಗ ಕಚ್ಚಿದ ತಂದೆಯನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ತಾಲ್ಲೂಕಿನ ಗ್ರಾಮವೊಂದರ ನಿವಾಸಿ, ವೃತ್ತಿಯಲ್ಲಿ ವೈದ್ಯನಾದ ಆರೋಪಿಯು ಪತ್ನಿ ಕೆಲಸಕ್ಕೆ ಹೋಗಿದ್ದ ಸಮಯದಲ್ಲಿ ಮದ್ಯದ ಅಮಲಿನಲ್ಲಿ ಕೃತ್ಯ ಎಸಗಿದ್ದಾನೆ ಎನ್ನಲಾಗಿದೆ. ಬಾಲಕಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾಳೆ.

ಆರೋಪಿಯ ಪತ್ನಿ ನೀಡಿದ ದೂರಿನ ಮೇಲೆ ಪೋಕ್ಸೊ ಅಡಿ ಪ್ರಕರಣ ದಾಖಲಿಸಲಾಗಿದೆ.

ಕೋರಂಗಾಲ: ಅಟಲ್‌ಬಿಹಾರಿ ವಾಜಪೇಯಿ ವಸತಿ ಶಾಲೆಯಲ್ಲಿ ವಿದ್ಯುತ್ ಇಲ್ಲ

ನೀರಿಲ್ಲದೆ ವಿದ್ಯಾರ್ಥಿಗಳ ಪರದಾಟ: ಶಾಲೆಗೆ ರಜೆ

• ಕೆ.ಎಸ್.ಗಿರೀಶ

ಪ್ರಜಾವಾಣಿ ವಿಶೇಷ

ಮಡಿಕೇರಿ: ಇಲ್ಲಿನ ಭಾಗಮಂಡಲದ ಕೋರಂಗಾಲದಲ್ಲಿರುವ ಅಟಲ್‌ಬಿಹಾರಿ ವಾಜಪೇಯಿ ವಸತಿ ಶಾಲೆಯ 500 ಮಕ್ಕಳು ನೀರಿಲ್ಲದೇ ಪರದಾಡುತ್ತಿದ್ದು, ಶಾಲೆಗೆ ಜುಲೈ 10ರವರೆಗೆ ರಜೆ ಘೋಷಿಸಲಾಗಿದೆ. ಈ ಭಾಗದಲ್ಲಿ ಬೀಳುತ್ತಿರುವ ಧಾರಾಕಾರ ಮಳೆಯಿಂದ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ.

6ನೇ ತರಗತಿಯಿಂದ ಪಿಯುಸಿವರೆಗೆ ಇರುವ ಈ ವಸತಿ ಶಾಲೆಯಲ್ಲಿದ್ದ ಜಿಲ್ಲೆಯ ಹಾಗೂ ಸಮೀಪದ ಜಿಲ್ಲೆಯ ಮಕ್ಕಳನ್ನು ಅವರ ಪೋಷಕರು ಕರೆದುಕೊಂಡು ಹೋಗುತ್ತಿದ್ದಾರೆ. ಆದರೆ, ಉತ್ತರ ಕರ್ನಾಟಕ ಭಾಗದಿಂದ ಪೋಷಕರು ಬಂದಿಲ್ಲದ ಕಾರಣ 30 ಮಕ್ಕಳನ್ನು ಶಾಲೆಯಲ್ಲೇ ಇರಿಸಿಕೊಳ್ಳಲಾಗಿದೆ.

ಇದುವರೆಗೂ ಕುಶಾಲನಗರ ತಾಲ್ಲೂಕಿನಲ್ಲಿ ಬಾಡಿಗೆ ಕಟ್ಟಡದಲ್ಲಿದ್ದ ಶಾಲೆಯು ಈಗಷ್ಟೇ ಇಲ್ಲಿನ ಹೊಸ ಕಟ್ಟಡಕ್ಕೆ ಸ್ಥಳಾಂತರಗೊಂಡಿದೆ.

ಸಮೀಪದಲ್ಲಿ ಹರಿಯುವ ಹೊಳೆಯ ನೀರು ತೀರಾ ಕೆಂಪು ಬಣ್ಣದಿಂದ ಕೂಡಿದ್ದು, ಅದರಿಂದ ಅಡುಗೆ ಮಾಡಲು ಆಗುತ್ತಿಲ್ಲ. ಜಿಲ್ಲಾಡಳಿತದಿಂದ ಜನರೇಟರ್ ವ್ಯವಸ್ಥೆ ಮಾಡಿಕೊಟ್ಟರೆ ಮಕ್ಕಳಿಗೆ ಅನುಕೂಲವಾಗುತ್ತದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಶಾಲೆಯ ವಾರ್ಡನ್ ದೀಪಕ್, 'ಅಧಿಕಾರಿಗಳ ಅನುಮತಿ ತೆಗೆದುಕೊಂಡೇ ರಜೆ ನೀಡಲಾಗಿದೆ. 'ಜನರೇಟರ್ ಖರೀದಿ ಪ್ರಕ್ರಿಯೆಯು ಟೆಂಡರ್ ಹಂತದಲ್ಲಿದೆ. ವಿದ್ಯುತ್ ಇಲ್ಲದೇ ಇರುವುದರಿಂದ 500ಕ್ಕೂ ಅಧಿಕ ಮಕ್ಕಳಿಗೆ ನೀರು ಪೂರೈಸ-ಲಾಗುತ್ತಿಲ್ಲ. ಸದ್ಯ, ದೂರದ ಊರಿನ ಹಾಗೂ ಅನಾಥ 30 ಮಕ್ಕಳು ಇದ್ದಾರೆ. ಅವರಿಗಾಗಿ ಶುದ್ಧೀಕರಿಸಿದ ನೀರನ್ನೇ ತರಿಸಿಕೊಂಡು ಅದನ್ನೇ ಬಳಕೆ ಮಾಡುತ್ತಿದ್ದೇವೆ' ಎಂದು ಹೇಳಿದರು.

ಈ ಶಾಲೆಯಲ್ಲಿ ರಾಜ್ಯದ 19 ಜಿಲ್ಲೆಗಳ ವಿದ್ಯಾರ್ಥಿ, ವಿದ್ಯಾರ್ಥಿನಿಯ-ರಿದ್ದಾರೆ. 2013ರಲ್ಲಿ ಆರಂಭವಾದ ಶಾಲೆಯು ಇದುವರೆಗೂ ಕುಶಾಲನಗರ ತಾಲ್ಲೂಕಿನಲ್ಲಿ ಬಾಡಿಗೆ ಕಟ್ಟಡದಲ್ಲಿತ್ತು. ನಿತ್ಯ ಕನಿಷ್ಠ 30ಸಾವಿರ ಲೀಟರ್ ನೀರು ಬೇಕಿದೆ.

ಮುಖ್ಯಾಂಶಗಳು

- 6ನೇ ತರಗತಿಯಿಂದ ಪಿಯುಸಿವರೆಗೆ ಇರುವ ವಸತಿ ಶಾಲೆ
- ಅಡುಗೆಗೆ ಯೋಗ್ಯವಲ್ಲದ ಕೆಂಪುಬಣ್ಣದಿಂದ ಕೂಡಿರುವ ಹೊಳೆ ನೀರು

ಭಾವಸಾರ ಕ್ಷತ್ರಿಯ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷರಾಗಿ ಜವಳಕರ್

ಪ್ರಜಾವಾಣಿ ವಾರ್ತೆ


ಕಲಬುರಗಿ: ಅಖಿಲ ಭಾರತೀಯ ಭಾವಸಾರ ಕ್ಷತ್ರಿಯ ಮಹಾಸಭಾದ 27ನೇ ರಾಷ್ಟ್ರೀಯ ಅಧ್ಯಕ್ಷರಾಗಿ ರಾಜು ಬಿ.ಜವಳಕರ್ ಆಯ್ಕೆಯಾದರು.

ನಗರದಲ್ಲಿ ಭಾನುವಾರ ನಡೆದ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಜವಳಕರ್ ಅವರು ಅಧಿಕಾರ ಸ್ವೀಕರಿಸಿದರು.

ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷರಾಗಿ ಎನ್.ವಿ. ಶ್ರೀನಿವಾಸರಾವ್ ಪಿಸೆ ಆಯ್ಕೆಯಾದರು. ಗಿರೀಶ್ ವೇಚಾಳ್ (ಮಹಾರಾಷ್ಟ್ರ), ವಿಪಿನ್ ಭಾವಸಾರ (ಮಧ್ಯಪ್ರದೇಶ), ಉಮೇಶ್ ಜೈತಾನೆ (ತೆಲಂಗಾಣ), ಅನಿಲ್‌ಕುಮಾರ್ ಭಾವಸಾರ (ಗುಜರಾತ್), ಈಶ್ವರ ರಾವ್ ಹಂಚಾಟೆ (ಆಂಧ್ರಪ್ರದೇಶ) ಮತ್ತು ಚಂದ್ರಕುಮಾರ್ ಬಾಸುತ್ಕರ್ ಅವರು ತಮಿಳುನಾಡು ಘಟಕದ ಅಧ್ಯಕ್ಷರಾಗಿ ಆಯ್ಕೆಯಾಗಿ, ಪ್ರತಿಜ್ಞಾವಿಧಿ ಸ್ವೀಕರಿಸಿದರು.



ರಾಜು ಬಿ.ಜವಳಕರ್



ಎನ್.ವಿ. ಶ್ರೀನಿವಾಸರಾವ್

ಈ ವೇಳೆ ಮಾತನಾಡಿದ ರಾಜು ಬಿ.ಜವಳಕರ್ , 'ಮಹಾಸಭಾದ 10 ಟ್ರಸ್ಟ್‌ಗಳಲ್ಲಿನ ಲೋಪದೋಷಗಳನ್ನು ತಿದ್ದಿಕೊಂಡು ಅಮೂಲಾಗ್ರ ಬದಲಾವಣೆ ತರಬೇಕಿದೆ. ಧಾರವಾಡದ ಕೆ.ಟಿ. ಬೋರ್ಡಿಂಗ್ ಬಯಲು ಜಾಗದಲ್ಲಿ ವಾಣಿಜ್ಯ ಮಳಿಗೆ ನಿರ್ಮಾಣ ಮಾಡಿ, ಅದರಿಂದ ಬರುವ ಆದಾಯವನ್ನು ಸಮಾಜ ಬಾಂಧವರ ಶ್ರೇಯೋಭಿವೃ-ದ್ಧಿಗೆ ವಿನಿಯೋಗಿಸಲಾಗುವುದು. ಎಲ್ಲ ಟ್ರಸ್ಟ್‌ಗಳು ಕೂಡ ಆದಾಯದ ಮೂಲ ಕಂಡುಕೊಂಡು ಸಮಾಜದ ಏಳಿಗೆಗೆ ಮುಂದಾಗಬೇಕು' ಎಂದರು.

ಸರ್ಕಾರಿ ಶಾಲಾ ವಾಹನ ಖರೀದಿಗೆ ಶಾಸಕರ ನಿಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆಗಳಲ್ಲಿ ಮಕ್ಕಳನ್ನು ಕರೆದೊಯ್ಯಲು ಶಾಲಾ ವಾಹನ ಖರೀದಿಗೆ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ ಬಳಸಲು ರಾಜ್ಯ ಸರ್ಕಾರ ಅವಕಾಶ ಕಲ್ಪಿಸಿದೆ. ಅದಕ್ಕೆ ಪೂರಕವಾಗಿ ಶಾಸಕರ ನಿಧಿ ಬಳಕೆಗೆ ಸಂಬಂಧಿಸಿದ ಮಾರ್ಗಸೂಚಿಯನ್ನೂ ಪರಿಷ್ಕರಿ-ಸಲಾಗಿದೆ.

ಆದರೆ, ಶಾಲಾ ವಾಹನದ ಚಾಲಕರ ವೇತನ, ಪೆಟ್ರೋಲ್ ಅಥವಾ ಡೀಸೆಲ್, ದುರಸ್ತಿ ವೆಚ್ಚಕ್ಕೆ ಶಾಸಕರ ನಿಧಿ ಬಳಸಲು ಅವಕಾಶ ಇಲ್ಲ. ಈ ಮೊತ್ತವನ್ನು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು (ಎಸ್‌ಡಿಎಂಸಿ) ಇತರ ಅನುದಾನದಿಂದ ಭರಿಸಬೇಕು ಎಂದೂ ಸ್ಪಷ್ಟಪಡಿಸಲಾಗಿದೆ.

2022–23ನೇ ಸಾಲಿನ ಬಜೆಟ್ ಘೋಷಣೆಯಂತೆ, ಶೀಘ್ರದಲ್ಲಿ ಹೋಬಳಿ ಮಟ್ಟದಲ್ಲಿ ಸುಮಾರು 200 ಶಾಲೆಗಳನ್ನು 'ಮಾದರಿ ಶಾಲೆ'ಗಳಾಗಿ ಮೇಲ್ದ-ರ್ಜೆಗೇರಿಸಲು ಶಿಕ್ಷಣ ಇಲಾಖೆ ಮುಂದಾಗಿದೆ. ಈ ಶಾಲೆಗಳಲ್ಲಿ ಮಕ್ಕಳನ್ನು ಉಚಿತವಾಗಿ ಕರೆದೊಯ್ಯಲು ಶಾಲಾ ವಾಹನ ಖರೀದಿಸಲು ಚಿಂತನೆ ನಡೆದಿದೆ.



ಪ್ರಶಸ್ತಿ ಪ್ರದಾನ

ಖಾದ್ರಿ ಶಾಮಣ್ಣ ಸ್ಮಾರಕ ಟ್ರಸ್ಟ್ ಹಾಗೂ ಧಾರವಾಡ ಜಿಲ್ಲಾ ಪತ್ರಕರ್ತರ ಸಂಘ ಹುಬ್ಬಳ್ಳಿಯ ಬಿವಿಬಿ ಕಾಲೇಜಿನ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಸಮಾರಂಭದಲ್ಲಿ ಪತ್ರಕರ್ತ ಗೋಪಾಲಕೃಷ್ಣ ಹೆಗಡೆ ಅವರಿಗೆ ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ. ಅಶೋಕ್ ಶೆಟ್ಟರ್ ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿ ಪ್ರದಾನ ಮಾಡಿದರು. ಗೋಪಾಲಕೃಷ್ಣ ಹೆಗಡೆ ಅವರ ಪತ್ನಿ ರೋಹಿಣಿ, ಪತ್ರಕರ್ತ ಎಚ್.ಆರ್. ಶ್ರೀಶ, ಧಾರವಾಡ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಲೋಚನೇಶ ಹೂಗಾರ, ಸೆಲ್ಕೊ ಸಂಸ್ಥಾಪಕ ಹರೀಶ್ ಹಂದೆ, ಪತ್ರಕರ್ತ ಗಣಪತಿ ಗಂಗೊಳ್ಳಿ, ಖಾದ್ರಿ ಶಾಮಣ್ಣ ಸ್ಮಾರಕದ ಟ್ರಸ್ಟಿ ಸ್ಮಿತಾ ವೆಂಕಟೇಶ್, ಸಂಘದ ಪ್ರಧಾನ ಕಾರ್ಯದರ್ಶಿ ಸುಶಿಲೇಂದ್ರ ಕುಂದರಗಿ ಇದ್ದಾರೆ

ಸಿಬ್ಬಂದಿ ರಜೆ: ಇಂಡಿಗೊದ ಶೇ 55 ವಿಮಾನ ಸೇವೆ ವಿಳಂಬ

ನವದೆಹಲಿ (ಪಿಟಿಐ): ಏರ್ ಇಂಡಿಯಾ ವಿಮಾನ ಸಂಸ್ಥೆ ನಡೆಸುತ್ತಿರುವ ನೇಮಕಾತಿಯಲ್ಲಿ ಪಾಲ್ಗೊಳ್ಳುವ ಸಲುವಾಗಿ ಇಂಡಿಗೊದ ವಿಮಾನಗಳ ಕ್ಯಾಬಿನ್ ಸಿಬ್ಬಂದಿಯಲ್ಲಿ ಬಹುತೇಕರು ಅನಾರೋಗ್ಯ ರಜೆ (ಸಿಕ್ ಲೀವ್) ಪಡೆದಿದ್ದರಿಂದ ಶನಿವಾರ ಇಂಡಿಗೊದ ಸಂಸ್ಥೆಯ ಶೇ 55 ದೇಶಿಯ ವಿಮಾನಗಳ ಸಂಚಾರದಲ್ಲಿ ವಿಳಂಬವಾಯಿತು.

ಭಾನುವಾರ ಈ ಬಗ್ಗೆ ಮಾಹಿತಿ ಕೇಳಿದಾಗ ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ) ಮುಖ್ಯಸ್ಥ ಅರುಣ್‌ಕುಮಾರ್ ಅವರು, 'ನಾವು ಈ ಬಗ್ಗೆ ಪರಿಶೀಲಿಸುತ್ತಿದ್ದೇವೆ' ಎಂದು ಪ್ರತಿಕ್ರಿಯಿಸಿದರು.

'ಏರ್ ಇಂಡಿಯಾವು ಎರಡನೇ ಹಂತದ ನೇಮಕಾತಿಯನ್ನು ಶನಿವಾರ ನಡೆಸಿತು. ಇದರಲ್ಲಿ ಪಾಲ್ಗೊಳ್ಳುವ ಸಲುವಾಗಿ ಇಂಡಿಗೊದ ಬಹುತೇಕ ಕ್ಯಾಬಿನ್ ಸಿಬ್ಬಂದಿ ಅನಾರೋಗ್ಯ ರಜೆ ಪಡೆದು, ನೇಮಕಾತಿಯಲ್ಲಿ ಭಾಗವಹಿಸಲು ಹೋಗಿದ್ದರು' ಎಂದು ವಿಮಾನ ಸೇವೆ ಉದ್ಯಮದ ಮೂಲಗಳು ಹೇಳಿವೆ. ಆದರೆ, ಇಂಡಿಗೊ ಸಂಸ್ಥೆ ಈ ಬಗ್ಗೆ ಯಾವುದೇ ಪ್ರತಿಕ್ರಿಯೆಯನ್ನು ನೀಡಿಲ್ಲ.



ಇಂಡಿಗೊ ದೇಶದ ಬಹುದೊಡ್ಡ ವಿಮಾನ ಸೇವಾ ಸಂಸ್ಥೆಯಾಗಿದ್ದು, ಸದ್ಯ ಪ್ರತಿದಿನ ಅಂದಾಜು 1,600 ವಿಮಾನಗಳು ದೇಶಿಯ ಮತ್ತು ಅಂತರರಾಷ್ಟ್ರೀಯ ಮಾರ್ಗದಲ್ಲಿ ಕಾರ್ಯಾಚರಿಸುತ್ತಿವೆ.

ನಾಗರಿಕ ವಿಮಾನಯಾನ ಸಚಿವಾಲಯದ ವೆಬ್‌ಸೈಟ್‌ನಲ್ಲಿ-ರುವ ಮಾಹಿತಿ ಪ್ರಕಾರ, ಇಂಡಿಗೊದ ದೇಶಿಯ ವಿಮಾನಗಳಲ್ಲಿ ಶೇಕಡ 45.2 ವಿಮಾನಗಳು ಮಾತ್ರ ಶನಿವಾರ ಸಮಯಕ್ಕೆ ಸರಿಯಾಗಿ ಕಾರ್ಯಾಚರಣೆ ನಡೆಸಿವೆ.

'ಅಗ್ನಿಪಥ'ಕ್ಕೆ ವಿರೋಧ ಪ್ರಧಾನಿಗೆ ₹420 ಚೆಕ್ ಕಳುಹಿಸಿದ ಎಎಪಿ

ಲಖನೌ (ಪಿಟಿಐ): 'ಅಗ್ನಿಪಥ' ಯೋಜನೆಯನ್ನು ವಿರೋಧಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ₹420ರ ಚೆಕ್ ಕಳುಹಿಸಲಾಗಿದೆ ಎಂದು ಎಎಪಿ ಭಾನುವಾರ ತಿಳಿಸಿದೆ.

ಯೋಜನೆಯನ್ನು ವಿರೋಧಿಸಿ ಇಲ್ಲಿ ಪ್ರತಿಭಟನೆ ನಡೆಸಿದ ಎಎಪಿ ವಿದ್ಯಾರ್ಥಿ ಘಟಕದ ಕಾರ್ಯಕರ್ತರು, 'ಕೇಂದ್ರ ಸರ್ಕಾರವು 'ಅಗ್ನಿಪಥ' ನೇಮಕಾತಿ ಯೋಜನೆಯ ಮೂಲಕ ಯುವಜನರನ್ನು ವಂಚಿಸುತ್ತಿದೆ' ಎಂದು ಆರೋಪಿಸಿದ್ದಾರೆ.

ಜಂಗಲ್ ಲಾಡ್ಜಸ್‌ನಲ್ಲಿ ವಾಸ್ತವ್ಯ ವ್ಯವಸ್ಥೆಗೆ ಬೇಡಿಕೆ

ಪ್ರಧಾನಿ ಕಚೇರಿ ಹೆಸರು ಹೇಳಿ ಜಿಲ್ಲಾಧಿಕಾರಿಗೆ ಕರೆ: ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಪ್ರಧಾನಿ ಕಚೇರಿಯಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿ ಎಂದು ಹೇಳಿಕೊಂಡು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರಿಗೆ ಕರೆ ಮಾಡಿ, ಬಿಳಿಗಿರಿರಂಗನಬೆಟ್ಟದಲ್ಲಿ ದೇವರ ದರ್ಶನ, ಬಿಆರ್‌ಟಿಯಲ್ಲಿ ಸಂಪಿಗೆ ಮರ ವೀಕ್ಷಣೆ ಹಾಗೂ ವಾಸ್ತವ್ಯಕ್ಕೆ ಜಂಗಲ್ ಲಾಡ್ಜಸ್ ನಲ್ಲಿ ಕೊಠಡಿಗಳ ವ್ಯವಸ್ಥೆ ಮಾಡಲು ಬೇಡಿಕೆ ಇಟ್ಟಿದ್ದ ಅಪರಿಚಿತ ವ್ಯಕ್ತಿಯ ವಿರುದ್ಧ ಪಟ್ಟಣ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.



ಚಾರುಲತಾ ಸೋಮಲ್

'ನಾನು ಗುಜರಾತ್ ರಾಜ್ಯದ ನಿವೃತ್ತ ಮುಖ್ಯ ಕಾರ್ಯದರ್ಶಿಯಾಗಿದ್ದು, ಈಗ ಪ್ರಧಾನಿ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದೇನೆ' ಎಂದು ಹೇಳಿಕೊಂಡ ರಾವ್ ಎಂಬ ಹೆಸರಿನ ವ್ಯಕ್ತಿ ಜಿಲ್ಲಾಧಿಕಾರಿ ಅವರಿಗೆ ಜೂನ್ 27ರಂದು ಕರೆ ಮಾಡಿದ್ದರು. ಕುಟುಂಬ ಸಮೇತರಾಗಿ ಜುಲೈ 2ರಂದು ಬಿಳಿಗಿರಿರಂಗನಬೆಟ್ಟ-ಕ್ಕೆ ಬರುವುದಾಗಿ ತಿಳಿಸಿದ್ದರು. ಪೂರ್ಣ ಹೆಸರು ಹಾಗೂ ಹುದ್ದೆಯ ವಿವರಗಳನ್ನು ಜಿಲ್ಲಾಧಿಕಾರಿ ಕೇಳಿದಾಗ, ಗೋಪ್ಯದ ಕಾರಣಕ್ಕೆ ಹೇಳಲು ಸಾಧ್ಯವಿಲ್ಲ ಎಂದು ಹೇಳಿದ್ದರು. ವ್ಯಕ್ತಿಯ ಮಾತಿನ ಶೈಲಿ ಬಗ್ಗೆ ಅನುಮಾನಗೊಂಡ ಜಿಲ್ಲಾಧಿಕಾರಿ ಮೊಬೈಲ್ ಫೋನ್ ವಿವರಗಳನ್ನು ಪರಿಶೀಲಿಸಿದಾಗ ಆತ ಹೇಳಿದ್ದು ಸುಳ್ಳು ಎಂದು ಗೊತ್ತಾಗಿದೆ. ಆ ವ್ಯಕ್ತಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ದೂರು ನೀಡಿದ್ದರು.

ವ್ಯಕ್ತಿಯ ವಿರುದ್ಧ ವಂಚನೆ ಪ್ರಕರಣ ದಾಖಲಾಗಿದೆ. ಆ ವ್ಯಕ್ತಿಯು ಜುಲೈ 2ರಂದು ಬಿಳಿಗಿರಿರಂಗನ ಬೆಟ್ಟಕ್ಕೆ ಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಎಫ್‌ಐಆರ್ ದಾಖಲಾಗಿರುವು-ದನ್ನು ಖಚಿತಪಡಿಸಿದ ಎಸ್ಪಿ ಟಿ.ಪಿ. ಶಿವಕುಮಾರ್, 'ಬೇರೆ ರಾಜ್ಯದ ನಿವೃತ್ತ ಮುಖ್ಯಕಾರ್ಯದರ್ಶಿ ಎಂದು ಹೇಳಿಕೊಂಡು ವ್ಯಕ್ತಿ ಕರೆ ಮಾಡಿದ್ದ. ಎಫ್‌ಐಆರ್ ದಾಖಲಿಸಿದ್ದೇವೆ. ಇನ್ನೂ ಬಂಧಿಸಿಲ್ಲ. ವಿವರಗಳನ್ನು ಕಲೆ ಹಾಕುತ್ತಿದ್ದೇವೆ' ಎಂದು ಹೇಳಿದರು.

ಮುಖ್ಯಾಂಶಗಳು

- ಕರೆ ಮಾಡಿದ್ದ ಅಪರಿಚಿತ ವ್ಯಕ್ತಿಯ ಮಾತಿನಿಂದ ಶಂಕೆ
- ಕುಟುಂಬ ಸಮೇತ ಬರುವುದಾಗಿ ಹೇಳಿದ್ದ ವ್ಯಕ್ತಿ
- ವಿವರಗಳನ್ನು ಕಲೆ ಹಾಕುತ್ತಿರುವ ಪೊಲೀಸರು

ನಿಧನ ವಾರ್ತೆ

ಸ್ವಾತಂತ್ರ್ಯ ಹೋರಾಟಗಾರ ಬಸವಲಿಂಗಪ್ಪ



ನಾಗರಮುನ್ನೋಳಿ (ಬೆಳಗಾವಿ): ಸ್ವಾತಂತ್ರ್ಯ ಹೋರಾಟಗಾರ, ನಿವೃತ ಶಿಕ್ಷಕರಾದ ಬಸವಲಿಂಗಪ್ಪ ಮಹಾರುದ್ರಪ್ಪ ಕುಂಬಾರ (101) ಅವರು ಶನಿವಾರ ರಾತ್ರಿ ನಿಧನರಾದರು.

ಅವರಿಗೆ ಪತ್ನಿ ಕೃಷ್ಣಾಬಾಯಿ, ಪಾರ್ಶ್ವವಾಯು ತಜ್ಞ ಡಾ.ಎಂ.ಬಿ.ಕುಂಬಾರ ಸೇರಿದಂತೆ ಇಬ್ಬರು ಪುತ್ರರು, ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ರಾಯಬಾಗದ ಅವರ ತೋಟದಲ್ಲಿ ಭಾನುವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

1921ರ ಅಕ್ಟೋಬರ್ 15 ರಂದು ರಾಯಬಾಗದಲ್ಲಿ ಜನಿಸಿದ ಬಸವಲಿಂಗಪ್ಪ ಅವರು, ಆರಂಭದ ಶಿಕ್ಷಣವನ್ನು ಅಲ್ಲಿಯೇ ಮುಗಿಸಿದರು. ಅವರು ತಮ್ಮ 22ನೇ ವಯಸ್ಸಿಗೆ ರಾಯಬಾಗದಲ್ಲಿ ಮರಾಠಿ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಆರಂಭಿಸಿದರು. ನಂತರ ನಾಗರಾಳ, ಬಾವಚಿ, ಬೊಮ್ಮನಾಳ, ಪಂಚರಗಾವಹಟ್ಟಿಯಲ್ಲಿ ಕನ್ನಡ ಶಾಲೆ ಶಿಕ್ಷಕರಾಗಿದ್ದರು.

1944 ಹಾಗೂ 45ರಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಂಡರು. ಆಗಿನ ಯುವ ಸಮುದಾಯವನ್ನು ಸ್ವಾತಂತ್ರ್ಯ ಸಂಗ್ರಾಮಕ್ಕೆ ಸೆಳೆಯುವಲ್ಲಿ ಯಶಸ್ವಿಯಾ-ಗಿದ್ದರು. ರಾಯಬಾಗ ತಾಲ್ಲೂಕಿನಲ್ಲಿ 'ಕುಂಬಾರಜ್ಜ' ಎಂದೇ ಅವರು ಹೆಸರುವಾಸಿ.

ಸ್ವಾತಂತ್ರ್ಯದ ನಂತರ ಸಾಮಾಜಿಕ ಹಾಗೂ ಧಾರ್ಮಿಕ ಚಟುವಟಿಕೆಗಳಲ್ಲಿ ಅವರು ತೊಡಗಿಸಿಕೊಂಡಿದ್ದರು.

ಬಂಡೀಪುರ ಸಮೀಪ ಲಕ್ಕಿಪುರದಲ್ಲಿ ಹಸು ಕೊಂದಿದ್ದ ವ್ಯಾಘ್ರ

ರೈತರ ಮೇಲೆ ದಾಳಿ ನಡೆಸಿದ್ದ ಹುಲಿ ಸೆರೆ

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಅಂಚಿನಲ್ಲಿರುವ ಲಕ್ಕಿಪುರ ಗ್ರಾಮದಲ್ಲಿ ಇಬ್ಬರು ರೈತರ ಮೇಲೆ ದಾಳಿ ನಡೆಸಿ ಗಾಯಗೊಳಿಸಿದ್ದ ಮತ್ತು ಹಸು ಕೊಂದಿದ್ದ ಹುಲಿಯನ್ನು ಅರಣ್ಯ ಇಲಾಖೆಯ ಸಿಬ್ಬಂದಿ ಭಾನುವಾರ ಬೆಳಿಗ್ಗೆ ಸೆರೆ ಹಿಡಿದಿದ್ದಾರೆ.

ಆ ಹೆಣ್ಣು ಹುಲಿಗೆ 10 ವರ್ಷ ವಯಸ್ಸಾಗಿರಬಹುದು ಎಂದು ಅಂದಾಜಿಸಲಾಗಿದೆ. ನಿತ್ರಾಣಗೊಂಡಿದ್ದ ಹುಲಿಯ ಕಾಲು, ಭುಜ, ಹೊಟ್ಟೆಯ ಹಿಂಭಾಗಗಳಿಗೆ ಗಾಯವಾಗಿದ್ದು, ಮೈಸೂರು ತಾಲ್ಲೂಕಿನ ಕೂರ್ಗಳ್ಳಿ-ಯಲ್ಲಿರುವ ಪ್ರಾಣಿಗಳ ಪುನರ್ವಸತಿ ಕೇಂದ್ರದಲ್ಲಿರಿಸಿ ಚಿಕಿತ್ಸೆ ನೀಡಲಾಗುತ್ತಿದೆ.



ಸೆರೆ ಹಿಡಿಯಲಾದ ಹುಲಿ

ಆನೆಗಳ ನೆರವು: ಲಕ್ಕಿಪುರ ಗ್ರಾಮಕ್ಕೆ ಹೊಂದಿಕೊಂಡಂತಿರುವ ಶಿವಬಸಪ್ಪ ಅವರಿಗೆ ಸೇರಿದ ಬಾಳೆ ತೋಟದಲ್ಲಿ ಅಡಗಿದ್ದ ಹುಲಿ ಸೆರೆ ಹಿಡಿಯಲು ಅರಣ್ಯ ಇಲಾಖೆಯು 'ಅಭಿಮನ್ಯು' ಹಾಗೂ 'ಶ್ರೀಕಂಠ' ಆನೆಗಳ ನೆರವು ಪಡೆಯಲಾಯಿತು.

ಮಳೆಯ ನಡುವೆಯೇ ಭಾನುವಾರ ಬೆಳಿಗ್ಗೆ ಆರು ಗಂಟೆಗೆ ಹುಲಿ ಪತ್ತೆ ಕಾರ್ಯಾಚರಣೆ ಆರಂಭಿಸಲಾಯಿತು. ಒಂಬತ್ತು ಗಂಟೆಯವರೆಗೆ ನಡೆಯಿತು. ಅರಣ್ಯ ಇಲಾಖೆಯ ಪಶುವೈದ್ಯರಾದ ಮಿರ್ಜಾ ವಾಸೀಂ ಹಾಗೂ ಮುಜೀಬ್ ರೆಹಮಾನ್ ಅವರು ಹುಲಿಗೆ ಅರಿವಳಿಕೆ ಚುಚ್ಚುಮದ್ದು ಹೊಡೆಯುವಲ್ಲಿ ಯಶಸ್ವಿಯಾದರು. ನಿತ್ರಾಣಗೊಂಡು ಬಿದ್ದಿದ್ದ ಹುಲಿಗೆ ಬಲೆ ಹಾಕಿ, ನಂತರ ಬೋನಿಗೆ ಹಾಕಿದರು.

'ಈ ಹುಲಿಯು ಹಡಿಯಾಲ ವಲಯದಲ್ಲಿ 2014ರಿಂದ 2021ರವರೆಗೂ ಕಾಣಿಸಿಕೊಂಡಿದೆ ಎಂದು ಬೆಂಗಳೂರಿನ ಟೈಗಲ್ ಸೆಲ್‌ನವರು ಮಾಹಿತಿ ನೀಡಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಭಾನಂದ ಸ್ವಾಮೀಜಿ



ಜಮಖಂಡಿ: ತಾಲ್ಲೂಕಿನ ಬುದ್ನಿ ಗ್ರಾಮದ ಸಿದ್ಧಾರೂಢ ಮಠದ ಪೀಠಾಧಿಕಾರಿ ಪ್ರಭಾನಂದ ಸ್ವಾಮೀಜಿ (75) ಭಾನುವಾರ ನಿಧನರಾದರು.

ಮೂಲತಃ ಗದಗ ಜಿಲ್ಲೆಯವರಾದ ಅವರು ಬೆಳಗಾವಿ ಜಿಲ್ಲೆಯ ಮುತಗಾ ಗ್ರಾಮದಲ್ಲಿ ಸಿದ್ಧಸಾಯಿ ಆಶ್ರಮ ಸಂಸ್ಥಾಪಕ ಪೀಠಾಧಿಕಾರಿಯಾಗಿ ಅಪಾರ ಭಕ್ತ ಸಮೂಹವನ್ನು ಹೊಂದಿದ್ದರು.

ಶ್ರೀಗಳು ಕನ್ನಡ, ಸಂಸ್ಕೃತ, ಇಂಗ್ಲಿಷ್, ಮರಾಠಿ ಮತ್ತು ಹಿಂದಿ ಭಾಷೆಗಳಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಪ್ರವಚನ ನೀಡಿ ಹೆಸರುವಾಸಿಯಾಗಿದ್ದರು.

ಶ್ರೀಮಠದ ಆವರಣದಲ್ಲಿ ಆರೂಢ ಸಂಪ್ರದಾಯದಂತೆ ಕ್ರಿಯಾ ಸಮಾಧಿ ನೆರವೇರಿಸಲಾಯಿತು.

ಪ್ರತಿಭಟನೆ ಮೂಲಕ ಕರ್ನಾಟಕ ಜನಶಕ್ತಿ ರಾಜ್ಯ ಸಮ್ಮೇಳನ ಉದ್ಘಾಟನೆ

‘ಸಂಬಂಧ ಕದಡಿ ದೇಶ ಕಟ್ಟಲಾಗದು’

ಪ್ರಜಾವಾಣಿ ವಾರ್ತೆ

ರಾಯಚೂರು: ‘ಮಾನವ ಸಂಬಂಧಗಳನ್ನು ಕದಡಿ, ಕೇವಲ ಆರ್ಥಿಕ ಸಾಧನೆಗಳನ್ನು ಮಾಡಿ ದೇಶ ಕಟ್ಟುವುದು ಅಸಾಧ್ಯ’ ಎಂದು ಸಂಸ್ಕೃತಿ ಚಿಂತಕ ಡಾ. ರಹಮತ್ ತರೀಕೆರೆ ಹೇಳಿದರು.

ನಗರದಲ್ಲಿ ಭಾನುವಾರ ಆರಂಭವಾದ ಎರಡು ದಿನಗಳ ಕರ್ನಾಟಕ ಜನಶಕ್ತಿ ಮೂರನೇ ರಾಜ್ಯ ಸಮ್ಮೇಳನದಲ್ಲಿ ಭಾಷಣ ಮಾಡಿದರು.

‘ದೇಶದಲ್ಲಿ ಒಂದು ರೀತಿ ಆತಂಕದ ವಾತಾವರಣ ಮನೆಮಾಡಿದೆ. ಮಾನವ ಹಕ್ಕುಗಳಿಗಾಗಿ ಹೋರಾಟ ಮಾಡುವವರನ್ನು ಬಂಧಿಸುವ ಸ್ಥಿತಿ ಇದೆ. ಅವ್ಯವಸ್ಥೆ ವಿರುದ್ಧ ಧ್ವನಿ ಎತ್ತುವಂತಿಲ್ಲ. ಮಾಧ್ಯಮಗಳನ್ನು ಕೂಡಾ ಮೌನಗೊಳಿಸುವ ಕೆಲಸ ಆಗುತ್ತಿದೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ಸಂವಿಧಾನದಡಿ ಪ್ರಮಾಣವಚನ ಸ್ವೀಕರಿಸಿದವರು, ತಮ್ಮ ಜೊತೆಗೆ ಬದುಕುತ್ತಿರುವವರನ್ನು ಪ್ರತ್ಯೇಕಿಸಿ ಮಾತನಾಡುತ್ತಿದ್ದಾರೆ. ರಾಜ್ಯದಲ್ಲಿ ಪಠ್ಯ-ಪುಸ್ತಕಗಳ ಬ್ರಾಹ್ಮಣ್ಯವಾದ ಸಂಸ್ಕೃತಿ ಹೇರಲಾಗುತ್ತಿದೆ. ಮಾನುಷ ಬದಲು ಅಮಾನುಷದತ್ತ ಭಾರತ ಸಾಗುತ್ತಿದೆ’ ಎಂದು ಹೇಳಿದರು.

‘ಇಂತಹ ಸನ್ನಿವೇಶದಲ್ಲಿ ಹೋರಾಟ ನಡೆಸಬೇಕಾದ ಪ್ರಜಾಸತ್ತಾತ್ಮಕ ಸಂಘಟನೆಗಳು ಛಿದ್ರವಾಗಿರುವುದು ಶೋಚನೀಯ ಸಂಗತಿ. ರೈತ, ದಲಿತ, ಜಾತ್ಯತೀತ



ರಾಯಚೂರಿನಲ್ಲಿ ಕರ್ನಾಟಕ ಜನಶಕ್ತಿಯಿಂದ ಆಯೋಜಿಸಿರುವ ಎರಡು ದಿನಗಳ ರಾಜ್ಯಮಟ್ಟದ ಸಮ್ಮೇಳನವನ್ನು ಹೋರಾಟಗಾರರ ಬಂಧನ ಖಂಡಿಸಿ ವೇದಿಕೆಯಲ್ಲಿ ಪ್ರತಿಭಟಿಸುವ ಮೂಲಕ ಭಾನುವಾರ ಉದ್ಘಾಟಿಸಲಾಯಿತು

> **ಇಂದಿನ ಹೋರಾಟಗಳು ಛಿದ್ರವಾಗಿವೆ. ಹಿಂಸೆಗೆ ಸಾಂಸ್ಥಿಕರೂಪ ನೀಡಲಾಗುತ್ತಿದ್ದು, ಇದು ಅತ್ಯಂತ ಅಪಾಯಕಾರಿ.**
> **ಫಾ. ಜೆರಾಲ್ಡ್ ಡಿಸೋಜಾ**
> ನಿರ್ದೇಶಕ, ಸೇಂಟ್ ಜೋಸೆಫ್ ಕಾನೂನು ಕಾಲೇಜು, ಬೆಂಗಳೂರು

ತಳಹದಿ ಸಂಘಟನೆಗಳು ಭಿನ್ನ ಭಿನ್ನ ಹಾದಿಯಲ್ಲಿವೆ. ಸದ್ಯದ ಪರಿಸ್ಥಿತಿಯಲ್ಲಿ ಸಾಮಾನ್ಯ ಸೈದ್ಧಾಂತಿಕ ನೆಲೆಯಲ್ಲಿ ಎಲ್ಲರೂ ಒಂದಾಗುವ ಅಗತ್ಯವಿದೆ. ಈ ದಿಕ್ಕಿನಲ್ಲಿ ಪ್ರಯತ್ನ ನಡೆಯುತ್ತಿವೆ. ಹೊಸದನ್ನು ಕಟ್ಟುವ ಮನಸ್ಸಿರುವ ಸಂಘಟನೆಗಳು ಬೆಸೆದುಕೊಳ್ಳಬೇಕಾದ ಅಗತ್ಯವಿದೆ’ ಎಂದು ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ರಾಜ್ಯ ಘಟಕದ ಅಧ್ಯಕ್ಷ ಎಚ್.ಆರ್.ಬಸವರಾಜಪ್ಪ ಮಾತನಾಡಿ, ‘ಸ್ವಾತಂತ್ರ್ಯದ ಪರಿಕಲ್ಪನೆ ಸಾಕಾರ ಆಗಿದೆಯಾ ಎಂಬುದನ್ನು ಚಿಂತನೆ ಮಾಡಬೇಕಿದೆ. ಬಡವರು ಬಡವರಾಗಿಯೇ ಉಳಿದಿದ್ದಾರೆ. ಶ್ರೀಮಂತರು ಶ್ರೀಮಂತರಾಗಿಯೇ ಮುಂದುವರಿದಿದ್ದಾರೆ. ಆಡಳಿತ ನಡೆಸುವ ಪ್ರಭುತ್ವದ ವಿರುದ್ಧ ಹೋರಾಟ ಮಾಡುವ ಪರಿಸ್ಥಿತಿ ಇದೆಯೇ? ಎಂಬುದನ್ನು ಅವಲೋಕಿಸಬೇಕಿದೆ’ ಎಂದರು.

ದಲಿತ ಸಂಘರ್ಷ ಸಮಿತಿ ರಾಜ್ಯ ಮುಖಂಡ ಎನ್.ವೆಂಕಟೇಶ್ ಮಾತನಾಡಿ, ‘ದೇಶದಲ್ಲಿ ಬೇರೆಬೇರೆ ಕಡೆಗಳಲ್ಲಿ ದೊಡ್ಡ ಚಳವಳಿಗಳು ನಡೆಯುತ್ತಿವೆ. ಇವೆಲ್ಲವನ್ನೂ ಒಂದು ಕಡೆಗೆ ಸೇರಿಸುವ ಕೆಲಸ ಮಾಡೋಣ’ ಎಂದು ಸಲಹೆ ನೀಡಿದರು.

ಮಾನವ ಹಕ್ಕುಗಳ ಹೋರಾಟಗಾರ್ತಿ ತೀಸ್ತಾ ಸೆಟಲ್‌ವಾಡ್ ಸೇರಿ ಮೂವರು ಹೋರಾಟಗಾರರ ಬಂಧನದ ವಿರುದ್ಧ ಪ್ರತಿಭಟನೆ ಮಾಡುವ ಮೂಲಕ ಸಮ್ಮೇಳನ ಉದ್ಘಾಟಿಸಲಾಯಿತು.

ಜನಪರ, ಜೀವಪರ ಸಂಘಟನೆಗಳ ಮುಖಂಡರು ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ. ಚಿಂತನಾ ಗೋಷ್ಠಿಗಳು ನಡೆದವು.

ವಿಭಾಗ ಮಟ್ಟದಲ್ಲಿ ಬೆಸ್ಕಾಂ ‘ಇವಿ ಎಕ್ಸ್‌ಪೋ’

ಬೆಂಗಳೂರು: ಎಲೆಕ್ಟ್ರಿಕಲ್ ವಾಹನಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ವಿಭಾಗ ಮಟ್ಟದಲ್ಲೂ ‘ಇವಿ ಎಕ್ಸ್‌ಪೋ’ ಆಯೋಜಿಸಲು ಬೆಸ್ಕಾಂ ನಿರ್ಧರಿಸಿದೆ.

‘ಇವಿ ಎಕ್ಸ್‌ಪೋ’ವನ್ನು ಮೈಸೂರು, ಮಂಗಳೂರು, ಹುಬ್ಬಳ್ಳಿ, ಬೆಳಗಾವಿ ಮತ್ತು ಕಲಬುರಗಿಯಲ್ಲಿ ನಡೆಸಲಾಗುವುದು ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಪಿ. ರಾಜೇಂದ್ರ ಚೋಳನ್ ತಿಳಿಸಿದರು.

ಎಲೆಕ್ಟ್ರಿಕಲ್ ವಾಹನಗಳಿಗೆ ಸಂಬಂಧಿಸಿದಂತೆ ನೋಡಲ್ ಏಜೆನ್ಸಿಯಾಗಿರುವ ಬೆಸ್ಕಾಂ, ಎರಡನೇ ಹಂತದ ನಗರಗಳಲ್ಲಿ ಅಭಿಯಾನ ನಡೆಸಲಿದೆ. ನಗರದ ಅರಮನೆ ಮೈದಾನದ ‘ಚಾಮರ ವಜ್ರ’ದಲ್ಲಿ ಬೆಸ್ಕಾಂ ಏರ್ಪಡಿಸಿದ್ದ ಮೂರು ದಿನಗಳ ‘ಇವಿ ಎಕ್ಸ್‌ಪೋ’ಗೆ ಉತ್ತಮ ಪ್ರತಿಕ್ರಿಯೆ ದೊರೆತಿದ್ದು, ಸುಮಾರು 30 ಸಾವಿರಕ್ಕೂ ಜನರು ವೀಕ್ಷಿಸಿದರು ಎಂದು ತಿಳಿಸಿದರು.

ಮೊಟ್ಟ ಮೊದಲ ಬಾರಿ ‘ಇವಿ ಎಕ್ಸ್‌ಪೋ’ವನ್ನು ಆಯೋಜಿಸಲಾಗಿತ್ತು. ಮುಂದಿನ ದಿನಗಳಲ್ಲಿ ನಿರಂತರವಾಗಿ ‘ಇವಿ’ ಎಕ್ಸ್‌ಪೋ ಆಯೋಜಿಸಲಾಗುವುದು ಎಂದರು.

2025ರ ವೇಳೆಗೆ 5 ಲಕ್ಷಕ್ಕೂ ಹೆಚ್ಚು ಎಲೆಕ್ಟ್ರಿಕಲ್ ವಾಹನಗಳು ರಸ್ತೆಗೆ ಬರುವ ನಿರೀಕ್ಷೆ ಇದೆ. ಹೀಗಾಗಿ, ಪ್ರತಿ 500ರಿಂದ 1000 ಮೀಟರ್‌ಗೆ ಒಂದರಂತೆ ಚಾರ್ಜಿಂಗ್ ಸ್ಟೇಷನ್ ನಿರ್ಮಿಸಲು ಬೆಸ್ಕಾಂ ನಿರ್ಧರಿಸಿದ್ದು, ಮುಂದಿನ ಎರಡು ತಿಂಗಳಲ್ಲಿ ಒಂದು ಸಾವಿರ ಚಾರ್ಜಿಂಗ್ ಸ್ಟೇಷನ್ ಸ್ಥಾಪಿಸುವ ಗುರಿ ಹೊಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಾರ್ಜಿಂಗ್ ಸ್ಟೇಷನ್ ಸ್ಥಾಪಿಸಲು ಏಕಗವಾಕ್ಷಿ ಯೋಜನೆಯಲ್ಲಿ ಅರ್ಜಿ ಸಲ್ಲಿಸಿದರೆ, ಏಳು ಸ್ಟೇಷನ್ ನಿರ್ಮಾಣಕ್ಕೆ ಅನುಮತಿ ನೀಡಲಾಗುವುದು. ಖಾಸಗಿ ವ್ಯಕ್ತಿಗಳು, ಕಂಪನಿಗಳು ಚಾರ್ಜಿಂಗ್ ಸ್ಟೇಷನ್ ನಿರ್ಮಾಣ ಮಾಡಲು ಆಸಕ್ತಿ ಇದ್ದರೆ, 25 ಕಿಲೋ ವಾಟ್ ಸಾಮರ್ಥ್ಯದ ಚಾರ್ಜಿಂಗ್ ಸ್ಟೇಷನ್ ನಿರ್ಮಿಸಲು ಅನುಮತಿ ನೀಡಲಾಗುವುದು ಎಂದು ತಿಳಿಸಿದ್ದಾರೆ.

‘ಸಂವಿಧಾನಕ್ಕೆ ಉತ್ತರದಾಯಿ ರಾಷ್ಟ್ರಪತಿ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾನು ರಾಷ್ಟ್ರಪತಿಯಾಗಿ ಆಯ್ಕೆಯಾದರೆ ಸಂವಿಧಾನಕ್ಕೆ ಮಾತ್ರ ಉತ್ತರದಾಯಿ ಆಗಿರುತ್ತೇನೆ. ಆಡಳಿತ ಪಕ್ಷದ ಅಭ್ಯರ್ಥಿಯೂ ಅದೇ ರೀತಿ ಇರಬೇಕೆಂದು ಬಯಸುತ್ತೇನೆ’ ಎಂದು ರಾಷ್ಟ್ರಪತಿ ಚುನಾವಣೆಯಲ್ಲಿ ವಿರೋಧ ಪಕ್ಷಗಳ ಸಹಮತ ಅಭ್ಯರ್ಥಿ ಯಶವಂತ ಸಿನ್ಹಾ ಹೇಳಿದರು.

ನಗರದ ಶಾಂಗ್ರಿ-ಲಾ ಹೋಟೆಲ್‌ನಲ್ಲಿ ಭಾನುವಾರ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಮತ ಯಾಚಿಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ದೇಶಕ್ಕೆ ಮಾತನಾಡುವ ರಾಷ್ಟ್ರಪತಿ ಬೇಕೇ ಹೊರತು, ರಬ್ಬರ್ ಸ್ಟ್ಯಾಂಪ್ ರಾಷ್ಟ್ರಪತಿ ಅಲ್ಲ’ ಎಂದರು.

‘ದೇಶದಲ್ಲಿ ವಿರೋಧ ಪಕ್ಷಗಳ ನಾಯಕರು ಮಾತನಾಡುವ ಸ್ಥಿತಿಯಲ್ಲಿ ಇಲ್ಲ. ಯಾರಾದರು ಏನಾದರು ಮಾತನಾಡಿದರೆ ತನಿಖಾ ಸಂಸ್ಥೆಗಳಿಂದ ನೋಟಿಸ್ ನೀಡಲಾಗುತ್ತಿದೆ. ಮಹಾರಾಷ್ಟ್ರ, ಕರ್ನಾಟಕ ಇನ್ನಿತರ ರಾಜ್ಯಗಳಲ್ಲಿ ಏನು ನಡೆಯುತ್ತಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ’ ಎಂದು ಹೇಳಿದರು.



ರಾಷ್ಟ್ರಪತಿ ಚುನಾವಣೆಯಲ್ಲಿ ವಿರೋಧ ಪಕ್ಷಗಳ ಸಹಮತ ಅಭ್ಯರ್ಥಿ ಯಶವಂತ ಸಿನ್ಹಾ ಅವರನ್ನು ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ ಮತ್ತು ಡಿ.ಕೆ. ಶಿವಕುಮಾರ್ ಹೂಗುಚ್ಛ ನೀಡಿ ಸ್ವಾಗತಿಸಿದರು –ಪ್ರಜಾವಾಣಿ ಚಿತ್ರ

‘ಜನರಿಂದ ಆಯ್ಕೆಯಾದ ಸರ್ಕಾರಗಳನ್ನು ಉರುಳಿಸುವ ಪ್ರಜಾಪ್ರಭುತ್ವ ವಿರೋಧಿ ಕೆಲಸಗಳು ನಡೆಯುತ್ತಿದೆ. ಬಿಜೆಪಿಯೇತರ ಸರ್ಕಾರಗಳನ್ನು ಅಡ್ಡ ಮಾರ್ಗಗಳಿಂದ ಉರುಳಿಸುವ ಕೆಲಸವನ್ನು ಕೇಂದ್ರದ ಬಿಜೆಪಿ ಸರ್ಕಾರ ಮಾಡುತ್ತಿದೆ. ಇದು ಯಾರೂ ಒಪ್ಪುವಂಥದ್ದಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದು ಅನಾರೋಗ್ಯಕರ ಬೆಳವಣಿಗೆ’ ಎಂದು ಟೀಕಿಸಿದರು.

‘ಪ್ರವಾದಿ ಮಹಮ್ಮದ್ ಬಗ್ಗೆ ಆಕ್ಷೇಪಾರ್ಹವಾಗಿ ಮಾತನಾಡಿದ ನೂಪುರ್ ಶರ್ಮಾ ಬಗ್ಗೆ ಸುಪ್ರೀಂ ಕೋರ್ಟ್ ಅಭಿಪ್ರಾಯ ವ್ಯಕ್ತಪಡಿಸಿದೆ. ನ್ಯಾಯಾಂಗವು ಸಂವಿಧಾನಕ್ಕೆ ಉತ್ತರದಾಯಿ ಆಗಿರಬೇಕು ಎಂದೂ ಕೋರ್ಟ್ ಹೇಳಿದೆ. ಕೋರ್ಟ್‌ನ ಈ ಅಭಿಪ್ರಾಯವನ್ನು ನಾನೂ ಸ್ವಾಗತಿಸುತ್ತೇನೆ. ಆದರೆ, ಮಾಧ್ಯಮಗಳಲ್ಲಿ ಕೋರ್ಟ್‌ನ ಅಭಿಪ್ರಾಯದ ಬಗ್ಗೆ ಕೆಟ್ಟದಾಗಿ ಟೀಕೆ ಮಾಡಲಾಗುತ್ತಿದೆ. ನ್ಯಾಯಾಂಗದ ಬಗೆಗಿನ ಇಂಥ ಟೀಕೆ ಪ್ರಜಾಪ್ರಭುತ್ವಕ್ಕೆ ಕಳಂಕ’ ಎಂದೂ ಸಿನ್ಹಾ ಅಭಿಪ್ರಾಯಪಟ್ಟರು.

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿ, ‘ದೇಶದ ಸಂವಿಧಾನ ಮತ್ತು ಪ್ರಜಾಪ್ರಭುತ್ವ ಅಪಾಯದಲ್ಲಿರುವ ಸಂದರ್ಭದಲ್ಲಿ ರಾಷ್ಟ್ರಪತಿ ಚುನಾವಣೆ ನಡೆಯುತ್ತಿದೆ. ಇಂದಿನ ರಾಜಕೀಯ ಸ್ಥಿತಿಯಲ್ಲಿ ಸಿನ್ಹಾ ಅವರು ರಾಷ್ಟ್ರಪತಿ ಆಗುವ ಅಗತ್ಯವಿದೆ’ ಎಂದರು.

ಶಾಸಕಾಂಗ ಸಭೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಶಾಸಕರಾದ ಆರ್.ವಿ. ದೇಶಪಾಂಡೆ, ಯು.ಟಿ. ಖಾದರ್, ಸಲೀಂ ಅಹಮ್ಮದ್, ಈಶ್ವರ್ ಖಂಡ್ರೆ, ಎಂ.ಕೃಷ್ಣಪ್ಪ, ಪ್ರಿಯಾಂಕ್ ಖರ್ಗೆ, ಅಂಜಲಿ ನಿಂಬಾಳ್ಕರ್, ಕುಸುಮಾ ಶಿವಳ್ಳಿ ಸೇರಿದಂತೆ ಶಾಸಕರು, ಪರಿಷತ್ ಸದಸ್ಯರು ಇದ್ದರು.

ಪವಿತ್ರಾ–ನರೇಶ್ ಅಡ್ಡಗಟ್ಟಿ ರಮ್ಯಾ ಗಲಾಟೆ

ಮೈಸೂರು: ನಗರದ ಹೋಟೆಲ್ ಕೊಠಡಿಯಿಂದ ತೆರಳುತ್ತಿದ್ದ ಚಲನಚಿತ್ರ ನಟಿ ಪವಿತ್ರಾ ಲೋಕೇಶ್ ಮತ್ತು ತೆಲುಗು ಚಿತ್ರ ನಟ ನರೇಶ್ ಅವರನ್ನು ನರೇಶ್ ಪತ್ನಿ ರಮ್ಯಾ ರಘುಪತಿ ಭಾನುವಾರ ಅಡ್ಡಗಟ್ಟಿ ಗಲಾಟೆ ಮಾಡಿದರು.

ಪತಿ ಮತ್ತು ಪವಿತ್ರಾ ಅವರನ್ನು ರಮ್ಯಾ ನಿಂದಿಸಿದರು.

‘ಸುದ್ದಿವಾಹಿನಿಯೊಂದು ನನ್ನ ಖಾಸಗಿತನಕ್ಕೆ ಧಕ್ಕೆ ತರುತ್ತಿದೆ. ನಾನು ಹೋದಲ್ಲೆಲ್ಲಾ ಹಿಂಬಾಲಿಸಿ ಚಿತ್ರೀಕರಿಸಲಾಗುತ್ತಿದೆ. ಇದನ್ನು ತಡೆಯಬೇಕು’ ಎಂದು ವಿ.ವಿ. ಪುರಂ ಪೊಲೀಸ್ ಠಾಣೆಗೆ ಶನಿವಾರ ದೂರು ನೀಡಿದ್ದ ಪವಿತ್ರಾ ಇಲ್ಲಿ ತಂಗಿದ್ದರು. ಅವರೊಂದಿಗೆ ನರೇಶ್ ಇದ್ದಾರೆಂಬ ಮಾಹಿತಿ ಪಡೆದು ರಮ್ಯಾ ಹೋಟೆಲ್ ಕೊಠಡಿ ಬಳಿಗೇ ಬಂದಿದ್ದರು. ಹೊರಬರುತ್ತಿದ್ದಂತೆಯೇ ಪವಿತ್ರಾ ಮೇಲೆ ಹಲ್ಲೆಗೆ ಮುಂದಾದ ರಮ್ಯಾ ಅವರನ್ನು ಪೊಲೀಸರು ತಡೆದರು.

ಇಬ್ಬರು ಪೊಲೀಸರ ರಕ್ಷಣೆಯಲ್ಲಿ ಅಲ್ಲಿಂದ ಕಾರ್‌ನಲ್ಲಿ ನಿರ್ಗಮಿಸಿದರು.

ಮಾಧ್ಯಮದವರ ಜತೆ ಮಾತನಾಡಿದ ರಮ್ಯಾ,‘ಪತಿ ನರೇಶ್ ನನಗೆ ವಿಚ್ಛೇದನ ನೋಟಿಸ್ ಕಳುಹಿಸಿದ್ದಾರೆ. ಕಾನೂನು ಹೋರಾಟ ನಡೆಸುತ್ತೇನೆ’ ಎಂದು ಹೇಳಿದರು.

ರಾಜ್ಯದಾದ್ಯಂತ ಧ್ವಜ ಸತ್ಯಾಗ್ರಹ: ರಂಗಕರ್ಮಿ ಪ್ರಸನ್ನ

ಧ್ವಜಸಂಹಿತೆ ತಿದ್ದುಪಡಿ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮೈಸೂರು: ಕೇಂದ್ರ ಸರ್ಕಾರವು ಧ್ವಜ ಸಂಹಿತೆ-2002ಕ್ಕೆ ತಿದ್ದುಪಡಿ ತಂದು ಖಾದಿ ಬಟ್ಟೆಯ ಬದಲು ಪಾಲಿಸ್ಟರ್ ಧ್ವಜಗಳಿಗೆ ಅನುಮತಿ ನೀಡಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿರುವ ‘ಮೈಸೂರು ಖಾದಿ ನೂಲುಗಾರರ ಬಳಗ’ವು ಮಕ್ಕಳು ಮತ್ತು ನಾಗರಿಕರಿಗೆ ಖಾದಿ ನೇಯುವ ಕಾರ್ಯಾಗಾರ ನಡೆಸಿ ಭಾನುವಾರ ಮೌನ ಪ್ರತಿಭಟನೆ ನಡೆಸಿದರು.

ಇಲ್ಲಿನ ಕೃಷ್ಣಬುಲೇವಾರ್ಡ್‌ನಲ್ಲಿರುವ ‘ಪ್ರಕೃತಿ ಆಹಾರ’ ಮನೆಯಲ್ಲಿ ಕೆಲವು ಮಕ್ಕಳು ಹಾಗೂ ಖಾದಿಪ್ರಿಯರು ಚರಕ ಹಾಗೂ ನೂಲುವ ಪೆಟ್ಟಿಗೆಗಳಲ್ಲಿ ದಾರವನ್ನು ತೆಗೆದರು.

‘ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಣೆ ಸಂದರ್ಭದಲ್ಲಿಯೇ ಧ್ವಜ ಸಂಹಿತೆಗೆ ತಿದ್ದುಪಡಿ ಮಾಡುವ ಮೂಲಕ ಗಾಂಧಿ ಆಶಯಗಳಿಗೆ ಧಕ್ಕೆ ತರಲಾಗಿದೆ ’ ಎಂದು ಬಳಗಕ್ಕೆ ಬೆಂಬಲ ನೀಡಿ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ರಂಗಕರ್ಮಿ ಪ್ರಸನ್ನ ಆರೋಪಿಸಿದರು.

‘ಈ ನಡೆಯ ವಿರುದ್ಧ ಶಿವಪುರ ಸತ್ಯಾಗ್ರಹದ ಮಾದರಿಯಲ್ಲಿ ಬೆಂಗಳೂರು, ಧಾರವಾಡಗಳಲ್ಲಿ ಧ್ವಜ ಸತ್ಯಾಗ್ರಹ ಆರಂಭವಾಗಲಿದೆ’ ಎಂದರು.



‘ಮೈಸೂರು ಖಾದಿ ನೂಲುಗಾರರ ಬಳಗ’ವು ಮೈಸೂರಿನಲ್ಲಿ ನೂಲು ತೆಗೆಯುವ ಶಿಬಿರದಲ್ಲಿ ಬಾಲಕನೊಬ್ಬ ನೂಲು ತೆಗೆದ. ಕಲಾವಿದ ಕೆ.ಜೆ. ಸಚ್ಚಿದಾನಂದ ಇದ್ದಾರೆ

‘ಬಾವುಟವನ್ನೇ ನೇಯುತ್ತಿದ್ದ ಉತ್ತರ ಕರ್ನಾಟಕದ ಕೈ ಮಗ್ಗಗಳು, ಧ್ವಜ ಸಂಹಿತೆ ತಿದ್ದುಪಡಿಯಿಂದಾಗಿ ನಷ್ಟಕ್ಕೆ ಸಿಲುಕಲಿವೆ ’ ಎಂದು ಬಳಗದ ಬಾಲಚಂದ್ರ ಹೇಳಿದರು.

‘ಕೃತಕ ನೂಲಿನಿಂದ ತಯಾರಿಸಿದ ಬಾವುಟವನ್ನು ಆಮದು ಮಾಡಿಕೊಳ್ಳುವುದರಿಂದ ರಾಷ್ಟ್ರ ಬಾವುಟದ ಮೌಲ್ಯವೂ ಕುಗ್ಗಲಿದೆ. ಸಾವಿರಾರು ಜನರು ಕೆಲಸ ಕಳೆದುಕೊಳ್ಳಲಿದ್ದಾರೆ’ ಎಂದು ಗ್ರಾಮ ಸೇವಾ ಸಂಘದ ಸದಸ್ಯ ಸಿ.ಎ. ಅಭಿಲಾಷ್ ಪ್ರತಿಕ್ರಿಯಿಸಿದರು.

ಚಿತ್ರ ಕಲಾವಿದ ಕೆ.ಜೆ. ಸಚ್ಚಿದಾನಂದ, ಗಾಂಧಿ ಚಿಂತಕ ಸಂತೋಷ್ ಕೌಲಗಿ, ರಜನಿ, ಸೌಮ್ಯಾ ಪಾಲ್ಗೊಂಡಿದ್ದರು.

60,725 ಎಕರೆ ಅರಣ್ಯ ಭೂಮಿ ಅಕ್ರಮ ಮಂಜೂರು

ಒಂದನೇ ಪುಟದಿಂದ

ಶಿವಮೊಗ್ಗ ವೃತ್ತದಲ್ಲಿ ಅತಿ ಹೆಚ್ಚು ಅಂದರೆ, 25,381.8 ಎಕರೆ ಅರಣ್ಯ ಪ್ರದೇಶವನ್ನು ಅಕ್ರಮವಾಗಿ ಮಂಜೂರು ಮಾಡಲಾಗಿದೆ. ನಂತರ ಸ್ಥಾನದಲ್ಲಿ ಕಲಬುರಗಿ ವೃತ್ತ (10,748.44 ಎಕರೆ), ಧಾರವಾಡ (5,801.8 ಎಕರೆ), ಬೆಂಗಳೂರು (5,850.27 ಎಕರೆ), ಕೆನರಾ (5,123.78 ಎಕರೆ) ವೃತ್ತಗಳಿವೆ.

ಅಕ್ರಮ ಮಂಜೂರಾತಿ ಸಮಸ್ಯೆಯು ಹಲವು ದಶಕಗಳಿಂದ ನಡೆದುಕೊಂಡು ಬಂದಿದೆ. ಅರಣ್ಯ ಪ್ರದೇಶ ಎಂದು ಘೋಷಿಸಿ ಅಧಿಸೂಚನೆ ಹೊರಡಿಸಿದ್ದರೂ ತಹಶೀಲ್ದಾರ್‌ಗಳು ಅಗತ್ಯ ಬದಲಾವಣೆಗಳನ್ನು ಮಾಡಿಲ್ಲ. ಇದರಿಂದ, 11.01 ಲಕ್ಷ ಎಕರೆಯಷ್ಟು ಅರಣ್ಯ ಪ್ರದೇಶವು ಅತಿಕ್ರಮಣಕ್ಕೆ ಮತ್ತು ಕಾನೂನುಬಾಹಿರವಾಗಿ ಮಂಜೂರು ಮಾಡಲಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಅತಿಕ್ರಮಣ ಮಾಡಿರುವ ಪ್ರದೇಶವನ್ನು ವಾಪಸ್ ಪಡೆಯಲು ಇಲಾಖೆ ಪ್ರಯತ್ನಿಸುತ್ತಿದೆ’ ಎಂದು ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ (ಪಿಸಿಸಿಎಫ್) ರಾಜ ಕಿಶೋರ್ ಸಿಂಗ್ ಪ್ರತಿಕ್ರಿಯಿಸಿದ್ದಾರೆ.

ಮರವಂತೆ: ಹೆದ್ದಾರಿಯಿಂದ ಸಮುದ್ರಕ್ಕೆ ಉರುಳಿದ ಕಾರು

ಒಬ್ಬ ಸಾವು, ಇನ್ನೊಬ್ಬ ನಾಪತ್ತೆ, ಇಬ್ಬರು ಆಸ್ಪತ್ರೆಗೆ

ಪ್ರಜಾವಾಣಿ ವಾರ್ತೆ

ಕುಂದಾಪುರ: ಕುಂದಾಪುರ ಕಡೆಯಿಂದ ಬೈಂದೂರಿನತ್ತ ಚಲಿಸುತ್ತಿದ್ದ ಮಾರುತಿ ಸ್ವಿಫ್ಟ್ ಕಾರು ರಸ್ತೆಯಿಂದ ಪಲ್ಟಿಯಾಗಿ, 40 ಅಡಿ ಆಳಕ್ಕೆ ಉರುಳಿ ಅರಬ್ಬಿ ಸಮುದ್ರ ಪಾಲಾದ ಘಟನೆ ಗಂಗೊಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಮರವಂತೆ ಬೀಚ್ ಬಳಿ ಶನಿವಾರ ತಡರಾತ್ರಿ ನಡೆದಿದೆ.

ಕಾರಿನ ಚಾಲಕ ಸಾವನ್ನಪ್ಪಿದ್ದು, ಇನ್ನೊಬ್ಬರು ನಾಪತ್ತೆಯಾಗಿದ್ದಾರೆ. ಇನ್ನಿಬ್ಬರು ಗಾಯಾಳುಗಳಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಕುಂದಾಪುರದ ಬೀಜಾಡಿಯ ಗೋಳಿಬೆಟ್ಟು ನಿವಾಸಿ, ವಿಲಾಸ್ ಮಾರ್ಬಲ್ ಮಾಲಿಕ ರಮೇಶ್ ಆಚಾರ್ ನೇರಂಬಳ್ಳಿ ಅವರ ಪುತ್ರ ವಿರಾಜ್ ಆಚಾರ್(28) ಮೃತಪಟ್ಟವರು. ಕಾಡಿನಕೊಂಡ ನಿವಾಸಿ ನಾರಾಯಣ ಆಚಾರ್ ಪುತ್ರ ರೋಶನ್ ಆಚಾರ್ (23) ನಾಪತ್ತೆಯಾಗಿದ್ದಾರೆ. ಗಾಯಾಳುಗಳನ್ನು ಕಾಡಿನಕೊಂಡ ನಿವಾಸಿ ಕಾರ್ತಿಕ್ (22) ಹಾಗೂ ಬಸ್ರೂರ್ ಮೂರುಕೈ ಬಳಿಯ ಸಂದೇಶ್ (28) ಎಂದು ಗುರುತಿಸಲಾಗಿದೆ. ಈ ಪೈಕಿ ಕಾರ್ತಿಕ್ ಅವರನ್ನು ಚಿಕಿತ್ಸೆಗಾಗಿ ಮಣಿಪಾಲದ ಕೆಎಂಸಿ ಆಸ್ಪತ್ರೆಗೆ ದಾಖಲಿಸಲಾಗಿದೆ.



ವಿರಾಜ್ ಆಚಾರ್

ಘಟನೆಯ ವಿವರ : ಶನಿವಾರ ತಡರಾತ್ರಿ 1 ಗಂಟೆ ಸುಮಾರಿಗೆ ವಿರಾಜ್ ಆಚಾರ್ ತಮ್ಮ ಸಹೋದರ ಸಂಬಂಧಿಗಳು ಹಾಗೂ ಸ್ನೇಹಿತನೊಂದಿಗೆ ಕಾರಿನಲ್ಲಿ ಕುಂದಾಪುರ ಕಡೆಯಿಂದ ಬೈಂದೂರು ಕಡೆಗೆ ಹೋಗುತ್ತಿದ್ದರು. ರಾಷ್ಟ್ರೀಯ ಹೆದ್ದಾರಿ 66ರ ಮರವಂತೆ ಬೀಚ್ ಬಳಿ ಕಾರು ಸಮುದ್ರದ ತಡೆಗೋಡೆಗಳಿಗೆ ಹಾಕಲಾಗಿದ್ದ ಬಂಡೆ ಕಲ್ಲುಗಳ ಮೇಲೆ ಉರುಳಿ, ಬಳಿಕ ಸಮುದ್ರದ ತಳಭಾಗದ ಬಂಡೆ ಕಲ್ಲುಗಳ ನಡುವೆ ಬಿದ್ದಿದೆ. ಈ ವೇಳೆ ಕಾರಿನಲ್ಲಿದ್ದ ಸಂದೀಪ್ ಹಾಗೂ ಕಾರ್ತಿಕ್ ಕಾರಿನಿಂದ ಹೊರಕ್ಕೆ ಬಿದ್ದಿದ್ದಾರೆ.

ಅಪಘಾತದಿಂದ ಚೇತರಿಸಿಕೊಂಡು ಹೆದ್ದಾರಿಗೆ ಬಂದ ಸಂದೀಪ್ 2 ಕಿ.ಮೀ ದೂರದ ತ್ರಾಸಿ ಜಂಕ್ಷನ್ ವರೆಗೆ ನಡೆದುಕೊಂಡು ಬಂದು, ಕೋಟೇಶ್ವರ-ಬೀಜಾಡಿ ಪರಿಸರದ ಕೆಲ ಯುವಕರಿಗೆ ಘಟನೆಯ ಬಗ್ಗೆ ಮಾಹಿತಿ ನೀಡಿ ಅವರನ್ನು ಕರೆದುಕೊಂಡು ದುರಂತ ನಡೆದ ಸ್ಥಳಕ್ಕೆ ಬಂದಿದ್ದಾರೆ. ಈ ವೇಳೆ ಬಂಡೆಕಲ್ಲುಗಳ ನಡುವೆ ಬಿದ್ದದ್ದ ಕಾರ್ತಿಕ್ ಅವರನ್ನು ರಕ್ಷಣೆ ಮಾಡಿ ಚಿಕಿತ್ಸೆಗಾಗಿ ಕುಂದಾಪುರದ ಆಸ್ಪತ್ರೆಗೆ ಸೇರಿಸಲಾಗಿತ್ತು.

ಭಾನುವಾರ ಮುಂಜಾನೆ ಕಾರನ್ನು ಮೇಲಕ್ಕೆತ್ತಿದ್ದು, ಸೀಟ್ ಬೆಲ್ಟ್ ಧರಿಸಿದ್ದ ಸ್ಥಿತಿಯಲ್ಲಿ ವಿರಾಜ್ ಅವರ ಮೃತದೇಹ ಪತ್ತೆಯಾಗಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ನಿನ್ನಂತೆ ನೀನಾಗು, ನಿನ್ನ ನೀ ಅರಿ ಮೊದಲು.

– ಬೀಚಿ

‘ಆಲ್ಟ್‌ನ್ಯೂಸ್’ ಸಹಸಂಸ್ಥಾಪಕನ ಬಂಧನ ಪ್ರತೀಕಾರದ ನಡೆಗೆ ಮತ್ತೊಂದು ನಿದರ್ಶನ

ಸುದ್ದಿಯ ರೂಪದಲ್ಲಿ ಬರುವ ಕೆಲವು ವಿವರ, ಮಾಹಿತಿಗಳ ಸತ್ಯಾಸತ್ಯತೆಯನ್ನು ಪರಿಶೀಲಿಸುವ ಆಲ್ಟ್‌ನ್ಯೂಸ್ ವೆಬ್‌ಸೈಟ್‌ನ ಸಹಸಂಸ್ಥಾಪಕ ಮಹಮ್ಮದ್ ಜುಬೈರ್ ಅವರನ್ನು ಕಳೆದ ವಾರ ಬಂಧಿಸಲಾಗಿದೆ. ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದ ಆರೋಪ ಹಾಗೂ ಎರಡು ಸಮುದಾಯಗಳ ನಡುವೆ ದ್ವೇಷ ಮೂಡಿಸುವ ಯತ್ನದ ಆರೋಪವನ್ನು ಅವರ ಮೇಲೆ ಹೊರಿಸಲಾಗಿದೆ. ಅವರ ಬಂಧನ ಹಾಗೂ ಈಚಿನ ವರ್ಷಗಳಲ್ಲಿ ನಡೆದಿರುವ ಇತರ ಕೆಲವು ಬಂಧನಗಳ ನಡುವೆ ಸಾಮ್ಯತೆ ಇದೆ. ಸರ್ಕಾರ ಅಥವಾ ಆಡಳಿತ ಪಕ್ಷದ ಟೀಕಾಕಾರರಂತೆ ಕಂಡುಬರುವ ಯಾವುದೇ ವ್ಯಕ್ತಿಯನ್ನು ಕ್ಷುಲ್ಲಕ ಆರೋಪಗಳ ಅಡಿ ಬಂಧಿಸಲಾಗುತ್ತದೆ. ಕೆಲವೊಮ್ಮೆ, ಹೇಳಿಕೊಳ್ಳುವಂತಹ ಯಾವುದೇ ಆಧಾರ ಇಲ್ಲದಿದ್ದರೂ ಬಂಧಿಸಲಾಗುತ್ತದೆ. ಸರ್ಕಾರದ ವಿರುದ್ಧ ಮಾತನಾಡುವ ಧೈರ್ಯ ತೋರಿಸುವ ಇತರರಿಗೆ ಈ ಬಂಧನದ ಮೂಲಕ ಒಂದು ಸಂದೇಶ ರವಾನಿಸುವ ಉದ್ದೇಶ ಇರುವಂತಿದೆ. ಧಾರ್ಮಿಕ ಸಮುದಾಯವೊಂದರ ಭಾವನೆಗಳಿಗೆ ಧಕ್ಕೆ ತರುವ ರೀತಿಯಲ್ಲಿ, ಸಂಘರ್ಷ ಸೃಷ್ಟಿಸುವ ರೀತಿಯಲ್ಲಿ 2018ರಲ್ಲಿ ಒಂದು ಟ್ವೀಟ್ ಮಾಡಿದ್ದರು ಎಂಬುದು ಜುಬೈರ್ ಅವರ ಮೇಲಿರುವ ಆರೋಪ. ಆದರೆ ಆ ಟ್ವೀಟ್ ಗಮನಿಸಿದ್ದವರ ಪಾಲಿಗೆ ಇದು ತೃಪ್ತಿಕರವಾದ ಕಾರಣ ಅಲ್ಲ. 1983ರ ಒಂದು ಸಿನಿಮಾದ ದೃಶ್ಯವೊಂದನ್ನು ಆಧರಿಸಿದ ಟ್ವೀಟ್ ಅದಾಗಿತ್ತು ಎನ್ನಲಾಗಿದೆ. ಆ ಟ್ವೀಟ್ ಅಪಾಯಕಾರಿ ಆಗಿತ್ತು ಎಂದಾದರೆ ಅದು ಈ ವೇಳೆಗಾಗಲೇ ಕಲಹ ಸೃಷ್ಟಿ ಮಾಡಬೇಕಿತ್ತು. ಬಹುತೇಕರಿಗೆ ಆ ಟ್ವೀಟ್ ಗೊತ್ತೇ ಇರಲಿಲ್ಲ. ಆ ಟ್ವೀಟ್‌ನಿಂದಾಗಿ ಏನೂ ಆಗಿಲ್ಲ. ಹೀಗಿರುವಾಗ, ನಾಲ್ಕು ವರ್ಷಗಳ ನಂತರದಲ್ಲಿ ಜುಬೈರ್ ವಿರುದ್ಧ ಕಾನೂನು ಕ್ರಮ ಜರುಗಿಸುವುದಕ್ಕೆ ಆ ಟ್ವೀಟ್ ಕಾರಣವಾಗುವುದು ಹೇಗೆ?



ಜುಬೈರ್ ಅವರ ಬಂಧನ ರವಾನಿಸುವ ಸಂದೇಶ ಏನು?

ಜುಬೈರ್ ಅವರನ್ನು ಬಂಧಿಸಿದ ಬಗೆ ಕೂಡ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಇನ್ನೊಂದು ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಅವರನ್ನು ದೆಹಲಿ ಪೊಲೀಸರು ಕರೆಸಿದ್ದರು. ಆದರೆ, ಆ ಪ್ರಕರಣದಲ್ಲಿ ಅವರು ಬಂಧನದಿಂದ ರಕ್ಷಣೆ ಪಡೆದುಕೊಂಡಿದ್ದರು. ಅವರನ್ನು ಹೊಸ ಪ್ರಕರಣದ ಅಡಿಯಲ್ಲಿ ಬಂಧಿಸಲಾಯಿತು. ಬಿಜೆಪಿ ವಕ್ತಾರೆ ಆಗಿದ್ದ ನೂಪುರ್ ಶರ್ಮಾ ಅವರು ಪ್ರವಾದಿ ಮಹಮ್ಮದ್ ಅವರ ಕುರಿತು ಆಡಿದ ಮಾತುಗಳನ್ನು ಜುಬೈರ್ ಅವರು ಹಲವರ ಗಮನಕ್ಕೆ ತಂದರು. ಶರ್ಮಾ ಅವರ ಹೇಳಿಕೆಯು ಅಂತರರಾಷ್ಟ್ರೀಯ ಮಟ್ಟದಲ್ಲಿ ಖಂಡನೆಗೆ ಗುರಿಯಾಯಿತು. ಸರ್ಕಾರಕ್ಕೆ ಇರುಸುಮುರುಸು ಆಯಿತು. ಆಗಲೂ, ಜುಬೈರ್ ಅವರನ್ನು ದೇಶದ್ರೋಹದ ಆರೋಪದ ಅಡಿಯಲ್ಲಿ ಬಂಧಿಸಬೇಕು ಎಂದು ಕೆಲವರು ಆಗ್ರಹಿಸಿದ್ದರು. ಆಕ್ಷೇಪಾರ್ಹ ಮಾತುಗಳನ್ನು ಆಡಿದವರು ಜೈಲಿನಿಂದ ಹೊರಗೆ ಇದ್ದಾರೆ. ಆದರೆ ಜುಬೈರ್ ಅವರನ್ನು ಬಂಧಿಸಲಾಗಿದೆ.

ಸುಳ್ಳು ಸುದ್ದಿ ಹಬ್ಬಿಸುವುದು ಹಾಗೂ ತಪ್ಪು ಮಾಹಿತಿ ನೀಡುವ ಅಭಿಯಾನವು ಈಗಿನ ಸಂದರ್ಭದಲ್ಲಿ ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಬಹುದೊಡ್ಡ ಬೆದರಿಕೆಗಳು. ಸುಳ್ಳು ಸುದ್ದಿಗಳನ್ನು ಗುರುತಿಸುವ ಮೂಲಕ ಹಾಗೂ ನಿಜ ಸುದ್ದಿ ಯಾವುದು ಎಂಬುದನ್ನು ತಿಳಿಸುವ ಮೂಲಕ ಆಲ್ಟ್‌ನ್ಯೂಸ್ ಈಚಿನ ವರ್ಷಗಳಲ್ಲಿ ಬಹಳ ಒಳ್ಳೆಯ ಕೆಲಸ ಮಾಡಿದೆ. ಈ ವೆಬ್‌ಸೈಟ್ ವಸ್ತುನಿಷ್ಠವಾಗಿ ಕೆಲಸ ಮಾಡಿದೆ. ಪಕ್ಷಪಾತಿಯಾಗಿ ವರ್ತಿಸಿಲ್ಲ. ಈ ವೆಬ್‌ಸೈಟ್, ಬಿಜೆಪಿಯ ತಪ್ಪುಗಳನ್ನು ಮಾತ್ರವೇ ಅಲ್ಲದೆ ಇತರ ಪಕ್ಷಗಳ ತಪ್ಪುಗಳನ್ನೂ ಎತ್ತಿತೋರಿಸುವ ಕೆಲಸ ಮಾಡಿದೆ. ಸಮೂಹ ಮಾಧ್ಯಮಗಳನ್ನು ಬಳಸಿಕೊಂಡು ಸುಳ್ಳು ಸುದ್ದಿಗಳನ್ನು ಹರಡುವ ಯತ್ನ ನಡೆದಿರುವ ಹೊತ್ತಿನಲ್ಲಿ, ಇಂತಹ ಸುಳ್ಳುಗಳ ವಿರುದ್ಧ, ತಪ್ಪು ಮಾಹಿತಿ ಹಾಗೂ ತಪ್ಪು ಅರ್ಥೈಸುವಿಕೆಗಳ ವಿರುದ್ಧ ಕಟ್ಟೆಚ್ಚರ ವಹಿಸಬೇಕು. ಆಗ ಜನತಂತ್ರ ಗಟ್ಟಿಯಾಗುತ್ತದೆ. ಆಲ್ಟ್‌ನ್ಯೂಸ್ ವೆಬ್‌ಸೈಟ್ ತನ್ನ ಕೆಲಸಗಳ ಮೂಲಕ ಪ್ರಜಾತಂತ್ರಕ್ಕೆ ಸೇವೆ ಸಲ್ಲಿಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಬಲಿಷ್ಠ ಪ್ರಜಾತಂತ್ರಕ್ಕೆ ಸಂಬಂಧಿಸಿದ ಹೇಳಿಕೆಯೊಂದಕ್ಕೆ ಸಹಿ ಹಾಕಿದ ಸಂದರ್ಭದಲ್ಲಿಯೇ ಜುಬೈರ್ ಅವರನ್ನು ಬಂಧಿಸಲಾಗಿದೆ. ಅವರು ಮ್ಯೂನಿಕ್‌ನಲ್ಲಿ ನಡೆದ ಜಿ–7 ಶೃಂಗಸಭೆಯಲ್ಲಿ ಸಹಿ ಮಾಡಿದ ಈ ಹೇಳಿಕೆಯು ನಾಗರಿಕರ ಸ್ವಾತಂತ್ರ್ಯ ಎತ್ತಿಹಿಡಿಯುವ ವಚನ ನೀಡುವಂಥದ್ದು. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸುವ ಮಾತೂ ಅದರಲ್ಲಿದೆ. ಮೋದಿ ಅವರು 1975ರ ತುರ್ತು ಪರಿಸ್ಥಿತಿಯ ಬಗ್ಗೆಯೂ ದೇಶಕ್ಕೆ ನೆನಪು ಮಾಡಿಕೊಡುತ್ತಿದ್ದರು. ಇಂತಹ ಸಂದರ್ಭದಲ್ಲಿ ಆಗಿರುವ ಈ ಬಂಧನ ಒಂದು ವ್ಯಂಗ್ಯ.

ದಿನದ ಟ್ವೀಟ್


ಮಾದರಿ ನಡೆ



ಆದಿತ್ಯ ಠಾಕ್ರೆ ಅವರು ಸದನದಲ್ಲಿ ತಮ್ಮನ್ನು ಆದಿತ್ಯ ರಶ್ಮಿ ಉದ್ಧವ್ ಠಾಕ್ರೆ ಎಂದು ಕರೆದುಕೊಂಡಿದ್ದನ್ನು ಕೇಳಿ ಖುಷಿಯಾಯಿತು. ಒಬ್ಬ ಯುವ ರಾಜಕಾರಣಿಯು ತನ್ನ ತಾಯಿಯ ಹೆಸರನ್ನು ಮೊದಲು ಇಟ್ಟುಕೊಳ್ಳುವುದು ಅಸಾಧಾರಣ ನಡೆ.

ಚೈತಿ ನರೂಲ, ಪತ್ರಕರ್ತೆ

ಕಿಡಿನುಡಿ



ದ್ವೇಷ ಬಿತ್ತನೆಯು ಸಮಾಜವನ್ನು ಒಡೆದು ಚುನಾವಣೆಯನ್ನು ಗೆಲ್ಲುವ ತಂತ್ರವಾದಾಗ ಉದಯಪುರದಲ್ಲಿ ನಡೆದಂತಹ ಪೈಶಾಚಿಕ ಕೃತ್ಯಗಳು ಮರುಕಳಿಸುತ್ತವೆ. ಇಂತಹ ಭೀಕರ ಕೃತ್ಯಗಳು ಸಮುದಾಯಗಳನ್ನು ಗುರಿಯಾಗಿಸುವ ಕಾರ್ಯಸೂಚಿಯ ಫಲ; ಏಕತೆಯನ್ನು ವಿಭಜಿಸುವ ಸಂಚಿನ ಪರಿಣಾಮ.

ಕಪಿಲ್ ಸಿಬಲ್, ರಾಜ್ಯಸಭಾ ಸದಸ್ಯ

25 ವರ್ಷಗಳ ಹಿಂದೆ

ಶುಕ್ರವಾರ, 4-7-1997

• ಜಾಲಪ್ಪ ಸೇರಿ 14 ಸದಸ್ಯರಿಂದ ಬಹಿಷ್ಕಾರ: ಕಡೇ ಗಳಿಗೆಯಲ್ಲಿ 7 ಸಚಿವರ ಮನಃಪರಿವರ್ತನೆ

ಬೆಂಗಳೂರು, ಜುಲೈ 3 – ಜನತಾದಳದ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಇಂದು ನಡೆದ ಚುನಾವಣೆಯಲ್ಲಿ ರಾಜ್ಯದ 65 ಮತದಾರರ ಪೈಕಿ ಲಾಲೂ ಪ್ರಸಾದ್ ಯಾದವ್ ಬೆಂಬಲಿಗರಾದ ಕೇಂದ್ರ ಸಚಿವ ಆರ್.ಎಲ್. ಜಾಲಪ್ಪ ಸೇರಿದಂತೆ ಹದಿನಾಲ್ಕು ಮಂದಿ ಸದಸ್ಯರು ಚುನಾವಣೆ ಬಹಿಷ್ಕರಿಸಿದರು.

ಮತದಾನ ಬಹಿಷ್ಕರಿಸುವುದಾಗಿ ಘೋಷಿಸಿದ್ದ ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಏಳು ಮಂದಿ ಸಚಿವರು ಕೊನೇ ಗಳಿಗೆಯಲ್ಲಿ ಮತದಾನದಲ್ಲಿ ಭಾಗವಹಿಸುವ ಮೂಲಕ ಜೆ.ಎಚ್. ಪಟೇಲ್ ನೇತೃತ್ವದ ದಳ ಸರ್ಕಾರವನ್ನು ಬಿಕ್ಕಟ್ಟಿನಿಂದ ಪಾರು ಮಾಡಿದರು.

ಚುನಾವಣೆ ಬಹಿಷ್ಕರಿಸುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸುವುದಾಗಿ ನಿನ್ನೆ ಎಚ್ಚರಿಕೆ ಕೊಟ್ಟಿದ್ದ ಪಟೇಲ್, ಮತದಾನದಲ್ಲಿ ಪಾಲ್ಗೊಳ್ಳದಿದ್ದರೆ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡಿ ಎಂದು ನೀಡಿದ ನಿರ್ದೇಶನದಂತೆ ನಡೆಯಲು ಮುಂದಾಗಿದ್ದ ಈ ಸಚಿವರು, ಸರ್ಕಾರ ಉರುಳಬಾರದೆಂದು ಕೊನೇ ಗಳಿಗೆಯಲ್ಲಿ ಮತದಾನದಲ್ಲಿ ಭಾಗವಹಿಸಿದ್ದು ಇಂದಿನ ಹೊಸ ರಾಜಕೀಯ ಬೆಳವಣಿಗೆಯಾಗಿದೆ.

ಚುನಾವಣೆ ಬಹಿಷ್ಕರಿಸಲು ಕರೆ ನೀಡಿದ್ದ ಬಿಹಾರದ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್‌ರ ಬೆಂಬಲಕ್ಕೆ ನಿಂತ ಜಾಲಪ್ಪ ಅವರ ಸೂಚನೆಯ ಮೇರೆಗೆ, ಮತದಾನ ಅಂತ್ಯವಾಗಲು ಹದಿನೈದು ನಿಮಿಷಗಳಿದ್ದಾಗ ಈ ಸಚಿವರು ಮತದಾನದಲ್ಲಿ ಪಾಲ್ಗೊಂಡರು.

ನವದೆಹಲಿ ವರದಿ: ಜನತಾದಳ ರಾಷ್ಟ್ರೀಯ ಮಂಡಲಿಯ ಒಟ್ಟು 1,140 ಸದಸ್ಯರಲ್ಲಿ 650 ಮಂದಿ ಮತ ಚಲಾಯಿಸಿದ್ದಾರೆ.

ದೇಶದಾದ್ಯಂತ ಮತದಾನ ಶಾಂತಿಯುತವಾಗಿ ನಡೆಯಿತು ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಬಾಪು ಕಲದಾತೆ ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಮಂಗಳವಾರ, 4-7-1972

• ಹಾಲಿನಲ್ಲಿ ಹುಳು; ಕಾರ್ಮಿಕರ ಕೈವಾಡ

ಬೆಂಗಳೂರು, ಜುಲೈ 3 – ಬೆಂಗಳೂರು ಡೈರಿಯ ‘ಹಾಲಿನಲ್ಲಿ ಹುಳು’ ಪ್ರಸಂಗ ವ್ಯಾನಿನಲ್ಲಿ ಬರುತ್ತಿದ್ದ ಮೂವರು ಕೆಲಸಗಾರರು ನೀರು ಮತ್ತು ಡಬಲ್ ಟೋನ್ಡ್ ಮಿಲ್ಕ್ ಬೆರೆಸಿ ಅಕ್ರಮ ಮಾಡುತ್ತಿದ್ದ ಪ್ರಕರಣದಿಂದಾಗಿದೆಯೆಂದು ಪತ್ತೆಹಚ್ಚಲಾಗಿದೆಯೆಂದೂ ಆ ಮೂವರು ಕಾರ್ಮಿಕರ ಮೇಲೆ ಕ್ರಮ ಕೈಗೊಳ್ಳಲಾಗಿದೆಯೆಂದೂ ಪಶುಸಂಗೋಪನಾ ಸಚಿವ ಶ್ರೀ ಎನ್. ಚಿಕ್ಕೇಗೌಡ ಅವರು ಇಂದು ವಿಧಾನಸಭೆಗೆ ವಿವರಣೆ ನೀಡಿದರು.

ಮೊನ್ನೆ ಶ್ರೀ ವಾಟಾಳ್ ನಾಗರಾಜ್ ಅವರು ಎತ್ತಿದ್ದ ವಿಚಾರದ ಬಗ್ಗೆ ಹೇಳಿಕೆ ನೀಡಿದ ಸಚಿವರು, ಶೇಷಾದ್ರಿಪುರಕ್ಕೆ ಬೆಳಿಗ್ಗೆ 5 ಗಂಟೆಗೆ ಹಾಲು ಬರುತ್ತಿದ್ದು ಶ್ರೀಮತಿ ಬಿ.ವಿ. ಲಲಿತಾ ಎಂಬ ಸಬ್ ಏಜೆಂಟರಿಂದ ಹಾಲು ಕೊಂಡ ಶ್ರೀ ಎ.ವಿ. ತಲಾಂಗ್ ಎಂಬುವವರು ಹುಳು ಇದ್ದದ್ದನ್ನು ತಂದು ಪೊಲೀಸು ಠಾಣೆಗೆ ದೂರು ಕೊಟ್ಟರೆಂದೂ ಹೇಳಿದರು.

• ಸದನ ಸಮೀಕ್ಷೆ

ಬೆಂಗಳೂರು, ಜುಲೈ 3 – ಆಡಳಿತ ಯಂತ್ರದ ಮನೋಭಾವ ಬದಲಾವಣೆಯಾಗದೆ ‘ಹತ್ತಲ್ಲ ನೂರು ಇಂದಿರಾ ಗಾಂಧಿ ಬಂದರೂ ಸಮಾಜವಾದ ಸಾಧ್ಯವಿಲ್ಲ’

– ಕಾಂಗ್ರೆಸ್ ಸದಸ್ಯ ಶ್ರೀ ಶೀರ್ನಾಳಿ ಚಂದ್ರಶೇಖರ್ ಕೂಗಿ ಹೇಳಿದರು.

ಸೋಮವಾರ ವಿಧಾನಸಭೆಯಲ್ಲಿ ಸಾರ್ವತ್ರಿಕ ಆಡಳಿತ ಇಲಾಖೆಯ ಬೇಡಿಕೆಗಳ ಬಗ್ಗೆ ನಡೆದ ಚರ್ಚೆಯಲ್ಲಿ ಎಲ್ಲರೂ ಬಯಸಿದ್ದು ಈ ಯಂತ್ರದ ಸುಧಾರಣೆಯನ್ನ. ಎಲ್ಲರೂ ಕೊಟ್ಟಿದ್ದು ಈ ಎಚ್ಚರಿಕೆಯನ್ನ. ಸದ್ಯದ ಸರ್ಕಾರ ಅಧಿಕಾರಕ್ಕೆ ಬಂದು ಕೇವಲ ನಾಲ್ಕು ತಿಂಗಳಾಗಿದೆ ಎಂಬುದು ಎಲ್ಲರಿಗೂ ಗೊತ್ತು. ಹಿಂದಿನ ಧಾಟಿಯನ್ನೇ ಹಿಡಿದಿದ್ದೀರಿ?– ಇದು ವಿರೋಧಿ ಸದಸ್ಯರ ಟೀಕೆ, ಆಕ್ರೋಶ.

ಜೊತೆಗೆ ನೀರಾವರಿ, ಪೊಲೀಸು ಹಾಗೂ ಜೈಲುಗಳಿಗೆ ಸಂಬಂಧಿಸಿದ ಬೇಡಿಕೆಗಳೂ ಇದ್ದವು. ಪೊಲೀಸ್ ಆಡಳಿತವನ್ನು ಪ್ರಸ್ತಾಪಿಸದ, ಟೀಕಿಸದ ಭಾಷಣವೇ ಇರಲಿಲ್ಲ.

ನದಿಗಳ ಬಗೆಗೆ ವಿಜ್ಞಾನಿಗಳು ನುಡಿದಿರುವ ಭವಿಷ್ಯ ನಮಗೊಂದು ಎಚ್ಚರಿಕೆಯ ಗಂಟೆ

ನದಿಗಳಿಗೂ ತಟ್ಟಲಿದೆ ಬಿಸಿ



ವಿಶ್ಲೇಷಣೆ

ಟಿ.ಆರ್.ಅನಂತರಾಮು

‘ಒಲೆ ಹತ್ತಿ ಉರಿದೊಡೆ ನಿಲಬಹುದಲ್ಲದೆ, ಧರೆ ಹತ್ತಿ ಉರಿದೊಡೆ ನಿಲಲುಬಾರದು’ ಎಂಬುದು ಬಸವಣ್ಣನವರ ಒಂದು ವಚನದ ಪ್ರಸಿದ್ಧ ಸಾಲು. ಸದ್ಯದ ಸ್ಥಿತಿಯಲ್ಲಿ ವಿಜ್ಞಾನಿಗಳು ಇನ್ನೊಂದು ರೀತಿಯಲ್ಲಿ ಅದನ್ನೇ ಪುನರುಚ್ಚರಿಸುತ್ತಿದ್ದಾರೆ. ಭೂಮಿ ಸುಡುತ್ತಿದೆ, ಸಮುದ್ರವೂ ಬಿಸಿಯಾಗುತ್ತಿದೆ. ಇವೆರಡರ ಫಲವನ್ನು ನಾವು ಈಗಾಗಲೇ ಪ್ರತ್ಯಕ್ಷವಾಗಿ ಅನುಭವಿಸುತ್ತಿದ್ದೇವೆ. ಹೆಚ್ಚುತ್ತಿರುವ ಚಂಡಮಾರುತ, ಅತಿವೃಷ್ಟಿ, ಅನಾವೃಷ್ಟಿ, ಬರ, ಪ್ರವಾಹ ಇವೆಲ್ಲ ಹವಾಗುಣ ಬದಲಾವಣೆಯ ಪ್ರತ್ಯಕ್ಷ ಸಾಕ್ಷಿಗಳು.

ಹವಾಗುಣ ಬದಲಾವಣೆಯ ಸಂಗತಿಯನ್ನು ಭೂತಾಪ ಏರಿಕೆ ವಿಷಯದ ಜೊತೆ ಜೋಡಿಸುತ್ತಲೇ ಬಂದಿದ್ದೇವೆ. ಈಗ ಪರಿಸರದ ಬಗೆಗಿನ ಕಾಳಜಿ ಜಗತ್ತಿನಾದ್ಯಂತ ಮೆರವಣಿಗೆ, ಮತಪ್ರದರ್ಶನದಂತಹ ರೂಪಗಳಲ್ಲಿ ಹೊರಬೀಳುತ್ತಿದೆ; ಮಾತೂ ಕಾವೇರುತ್ತಿದೆ. ನೆಲ, ಜಲ ಬಿಸಿಯಾದರೆ ಹರಿಯುವ ನದಿಗಳನ್ನೂ ಇದು ಬಾಧಿಸಲೇಬೇಕಲ್ಲ. ಏಕೆಂದರೆ ನದಿಗಳು ಜಲಚಕ್ರದ ಭಾಗ.

ನದಿಗಳ ಪ್ರಸ್ತಾಪ ಬಂದಾಗಲೆಲ್ಲ ನಾವು ಒಂದೇ ಅಳತೆಗೋಲನ್ನು ಬಳಸಿ ನದಿಮಾಲಿನ್ಯದ ಬಗ್ಗೆ ದಶಕಗಳಿಂದ ಮಾತನಾಡುತ್ತಿದ್ದೇವೆ. ಅದು ಸಹಜವೂ ಹೌದು. ಏಕೆಂದರೆ ನದಿಮಾಲಿನ್ಯ ನೇರವಾಗಿ ಕಣ್ಣಿಗೆ ಕಾಣುತ್ತದೆ, ಅದು ಮಾನವಕೃತ. ಭಾರತದ ಸಂದರ್ಭದಲ್ಲಿ ನದಿಮಾಲಿನ್ಯದಲ್ಲಿ ಎಲ್ಲ ರಾಜ್ಯಗಳ ಪಾಲೂ ಉಂಟು. ಭಾರತದ 351 ಪ್ರಮುಖ ನದಿಗಳಲ್ಲಿನ ಮಾಲಿನ್ಯವು ಪರಾಕಾಷ್ಠೆ ಮುಟ್ಟಿದೆ. ಅದರಲ್ಲಿ ಮಹಾರಾಷ್ಟ್ರಕ್ಕೇ ಮೊದಲ ಸ್ಥಾನ. 53 ನದಿಗಳನ್ನು ಮಲಿನಗೊಳಿಸಲು ಆ ರಾಜ್ಯ ಗುತ್ತಿಗೆ ತೆಗೆದುಕೊಂಡಂತಿದೆ. ನಮ್ಮಲ್ಲಿ ಅತ್ತ ಮಲಪ್ರಭಾ ನದಿಯಿಂದ ಹಿಡಿದು ಇತ್ತ ಕಾವೇರಿ ನದಿಯವರೆಗೆ ಯಾವುದೂ ಶುದ್ಧ ಎನ್ನುವಂತಿಲ್ಲ. ನದಿಗಳ ಆರೋಗ್ಯ ತಪಾಸಣೆ ಮಾಡಿದ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು 2018ರಲ್ಲಿ ವರದಿ ಕೊಟ್ಟಿತ್ತು. ಸ್ಥಿತಿಯಲ್ಲಿ ಈಗಲೂ ಹೆಚ್ಚೇನೂ ಬದಲಾವಣೆ ಆದಂತಿಲ್ಲ.

ಈಗ ನದಿಗಳಿಗೂ ‘ಬಿಸಿ’ ಕಂಟಕ ಎದುರಾಗಿದೆ. ವಿಜ್ಞಾನಿಗಳು ಅವುಗಳ ಭವಿಷ್ಯವನ್ನೂ ನುಡಿದಿದ್ದಾರೆ. ಇದನ್ನು ಬೇಕಾದರೆ ನಿಜವಾದ ‘ಕಾಲಜ್ಞಾನ’ ಎನ್ನಿ. ಇದೇನೂ ಅಳ್ಳೆದೆಯವರನ್ನು ನಡುಗಿಸಲು ಹೆಣೆದ ತಂತ್ರವಲ್ಲ, ವೈಜ್ಞಾನಿಕ ಅಧ್ಯಯನದ ತಳಹದಿಯ ಮೇಲೆ ನಮ್ಮ ಮುಂದಿಟ್ಟಿರುವ ಮಾಹಿತಿ, ಎಚ್ಚರಿಕೆಯ ಗಂಟೆ. ಹರಿಯುವ ಜುಳು ಜುಳು ನದಿ ನೀರಲ್ಲಿ ಕಾಲಿಟ್ಟು ಅಲುಗಿಸುತ್ತ ಮನವನ್ನು ಮುದಗೊಳಿಸಲು ಇನ್ನು ಮುಂದೆ ಸಾಧ್ಯವೇ? ಬಹುಶಃ ನೀವು ಕನಸು ಕಾಣುತ್ತಿದ್ದೀರಿ ಎನ್ನುತ್ತದೆ ‘ಸೈನ್ಸ್ ರಿಪೋರ್ಟ್ಸ್’ನಲ್ಲಿ ಪ್ರಕಟವಾಗಿರುವ ಇತ್ತೀಚಿನ ವರದಿ. ವಿಶೇಷವೆಂದರೆ, ಭಾರತದ ನದಿಗಳನ್ನೇ ಅಧ್ಯಯನಕ್ಕೆ ಒಳಪಡಿಸಿ, ‘ನಿಮ್ಮ ನಿಮ್ಮ ನದಿಗಳ ಆರೋಗ್ಯವನ್ನು ವಿಚಾರಿಸಿ’ ಎಂದು ಉಳಿದ ದೇಶಗಳಿಗೆ ಕಿವಿಮಾತು ಹೇಳಿದಂತಿದೆ. ಭವಿಷ್ಯದಲ್ಲಿ ಕುಡಿಯುವ ನೀರಿಗೆ ತತ್ವಾರ ಯಾವುದರಿಂದ ಆಗಬಹುದು ಎಂಬುದರ ಬೆನ್ನುಹತ್ತಿ ಹೊರಟ ವಿಜ್ಞಾನಿಗಳಿಗೆ, ಈಗಿನ ನದಿಗಳಲ್ಲಿ ನೀರು ಮೊದಲಿಗಿಂತ ಹೆಚ್ಚು ಬಿಸಿಯಾಗುತ್ತಿರುವುದು ಕೂಡ ಇದಕ್ಕೆ ಒಂದು ಕಾರಣವಾಗಬಹುದು ಎಂಬ ಅಂಶ ಗಮನಕ್ಕೆ ಬಂದಿತು. ಬಿಸಿ ಹೆಚ್ಚಿದರೆ ನೀರಿನಲ್ಲಿ ವಿಲೀನವಾಗುವ ಆಕ್ಸಿಜನ್ ಪ್ರಮಾಣ ಗಣನೀಯವಾಗಿ ಕುಗ್ಗುತ್ತದೆ. ಸಾಮಾನ್ಯವಾಗಿ ಹರಿಯುವ ನೀರಿನಲ್ಲಿ ಆಕ್ಸಿಜನ್ ಹೆಚ್ಚು ವಿಲೀನವಾಗುವ ಅವಕಾಶವಿರುತ್ತದೆ. ನಿಂತ ನೀರಿನಲ್ಲಿ ಇದರ ಪ್ರಮಾಣ ಕಡಿಮೆ.

ಅಮೆರಿಕದ ನಾಸಾ ಸಂಸ್ಥೆಯ ಉಪಗ್ರಹಗಳು ಬಿಂಬಿಸಿರುವ ನದಿ ಕಣಿವೆಗಳ ಉಷ್ಣತೆಯ ಸ್ಥಿತಿಗತಿಯನ್ನು ಆಧಾರವಾಗಿ ಇಟ್ಟುಕೊಂಡು ಭಾರತೀಯ ವಿಜ್ಞಾನಿಗಳು ನಮ್ಮ ತುಂಗಭದ್ರಾ, ಸಾಬರಮತಿ, ಮೂಸಿ, ಗಂಗಾ ಮತ್ತು ನರ್ಮದಾ ನದಿ ನೀರಿನ ಉಷ್ಣತೆ ಯಾವ ಪ್ರಮಾಣದಲ್ಲಿ ಏರಬಹುದು ಎಂಬುದನ್ನು ಲೆಕ್ಕ ಹಾಕಿದ್ದಾರೆ. ಈಗಿರುವುದಕ್ಕಿಂತ ಕನಿಷ್ಠ 3.1 ಡಿಗ್ರಿ ಸೆಲ್ಸಿಯಸ್‌ನಿಂದ 7.8 ಡಿಗ್ರಿ ಸೆಲ್ಸಿಯಸ್‌ಗೆ ಏರಬಹುದು. ಆದರೆ ಇದು ದಿಢೀರ್ ಆಗುವ ಬದಲಾವಣೆ ಅಲ್ಲ. 2071ರಿಂದ 2100ರ ಕಾಲಘಟ್ಟದಲ್ಲಿ ಎದುರಿಸಬೇಕಾದ ಪರಿಸ್ಥಿತಿ. ಅಂದರೆ ಆಗ ನರ್ಮದಾ ನದಿಯು ಬೇಸಿಗೆಯಲ್ಲಿ 35 ಡಿಗ್ರಿ ಸೆ.ನಷ್ಟು ಉಷ್ಣತೆಯಲ್ಲಿ ಹರಿಯುತ್ತಿರುತ್ತದೆ. ಅಂದರೆ ನೀರಿನಲ್ಲಿ ಆಕ್ಸಿಜನ್ ವಿಲೀನವಾಗುವ ಸಾಮರ್ಥ್ಯ ಶೇ 2ರಿಂದ 12ರಷ್ಟು ಕಡಿತ. ಬಿಸಿನೀರಿಗೆ ಹೆಚ್ಚು ಆಕ್ಸಿಜನ್ ಹಿಡಿದಿಡುವ ಗುಣವಿರುವುದಿಲ್ಲ.

ತ್ಯಾಜ್ಯದಿಂದ ನದಿಗಳ ಆರೋಗ್ಯ ಕೆಡುತ್ತಿದ್ದರೆ, ಅದನ್ನು ನಿಯಂತ್ರಿಸುವ ಮೂಲಕ ನದಿಗಳ ಆರೋಗ್ಯ ಕಾಪಾಡಿಕೊಳ್ಳಬಹುದು. ಅದು ನಮ್ಮ ಕೈಯಲ್ಲೇ ಇದೆ. ಆದರೆ, ಈ ಸಂಬಂಧ ಕಾನೂನನ್ನು ಬಿಗಿಗೊಳಿಸಬೇಕು ಅಷ್ಟೆ. ಆದರೆ ನಿಸರ್ಗದ ಸಹಜ ಕ್ರಿಯೆಯಾದ ನೀರಿನಲ್ಲಿ ಆಕ್ಸಿಜನ್ ವಿಲೀನ ಮಾಡುವುದು ಕಾನೂನು ರೀತ್ಯ ಸಾಧ್ಯವಾಗದು. ಮುಂದೆ ‘ಗಂಗಾಸ್ನಾನ ತುಂಗಾಪಾನ’ ಎಂಬುದು ಓಬಿರಾಯನ ಕಾಲದ ನುಡಿಗಟ್ಟು ಎನಿಸಬಹುದು. ಭಾರತದಲ್ಲಿ ಸಮಸ್ಯೆ ಇನ್ನೂ ಗಂಭೀರ ಸ್ವರೂಪದ್ದು. ಹೆಚ್ಚಿನ ಪಾಲು ಉಷ್ಣವಲಯದ ನದಿಗಳೇ ಆದ್ದರಿಂದ ಬೇರೆ ಖಂಡಗಳಿಗಿಂತ ಇಲ್ಲಿ ವಿಶೇಷವಾಗಿ ಬೇಸಿಗೆಯಲ್ಲಿ ಸೌರವಿಕಿರಣದ ತೀವ್ರತೆಯು ಜಲಮೂಲಗಳಿಗೆ ತೀವ್ರವಾಗಿಯೇ ತಟ್ಟುತ್ತದೆ. ಅಲ್ಲದೆ ನೀರಿನ ಪ್ರಮಾಣದ ಹರಿವು ಕೂಡ ಗಣನೀಯವಾಗಿ ತಗ್ಗಿರುತ್ತದೆ.



ನದಿ ನೀರಿನಲ್ಲಿ ವಿಲೀನವಾದ ಆಕ್ಸಿಜನ್ ಪ್ರಮಾಣ ಕಡಿಮೆಯಾದರೆ ಅದರ ಪರಿಣಾಮ ಇಡೀ ನದಿಯಲ್ಲಿನ ಜಲಚರಗಳ ಮೇಲಾಗುತ್ತದೆ. ಅದರಲ್ಲೂ ಮೀನುಗಳು ಕಡಿಮೆ ಆಕ್ಸಿಜನ್ ಇರುವ ನೀರಿನಲ್ಲಿ ಬದುಕುವುದೇ ಇಲ್ಲ. ನೀರಿನಲ್ಲಿ ಆಕ್ಸಿಜನ್ ಪ್ರಮಾಣ ಹೆಚ್ಚಾದರೂ ಕಷ್ಟ, ಕಡಿಮೆಯಾದರೂ ಕಷ್ಟ. ಅತಿಯಾದ ಪಾಚಿ ಕೊಳೆತಾಗ ಇಲ್ಲವೇ ಸೂಕ್ಷ್ಮಜೀವಿಗಳ ವಿಘಟನೆ ದೊಡ್ಡ ಪ್ರಮಾಣದಲ್ಲಿ ಆದಾಗ, ಇದ್ದಬದ್ದ ಆಕ್ಸಿಜನ್ ಪ್ರಮಾಣವೆಲ್ಲ ಕಡಿತವಾಗಿಬಿಡುತ್ತದೆ.

ನದಿಗಳೂ ಜೀವಿಗಳೇ, ಅವಕ್ಕೂ ಬದುಕುವ ಹಕ್ಕಿದೆ. ಅವುಗಳ ಪಾಡಿಗೆ ಅವುಗಳನ್ನು ಬಿಡಬೇಕು ಅಷ್ಟೆ. ನದಿ ಪರಿಸರವನ್ನು ಆಶ್ರಯಿಸಿದ ಜೀವಿವೈವಿಧ್ಯಕ್ಕೂ ಆವಾಸ ಗಾಸಿಯಾಗದಂತೆ ನೋಡಿಕೊಳ್ಳಬೇಕು ಎಂಬುದನ್ನು ಅಮೆರಿಕ ಮತ್ತು ಯೂರೋಪು ರಾಷ್ಟ್ರಗಳು ಇತ್ತೀಚೆಗೆ ಗಂಭೀರವಾಗಿ ಪರಿಗಣಿಸಿದಂತೆ ಕಾಣುತ್ತಿದೆ. ಅಣೆಕಟ್ಟುಗಳನ್ನು ಒಡೆಯುವುದು ಕೂಡ ಅಭಿವೃದ್ಧಿಯ ಒಂದು ಭಾಗ ಎಂದು ಭಾವಿಸಿದಂತಿದೆ. ಹಾಗೆ ನೋಡಿದರೆ ಜಗತ್ತಿನ ಯಾವ ಪ್ರಮುಖ ನದಿಯೂ ಅದು ಹುಟ್ಟಿದ ಜಾಗದಿಂದ ಸಲೀಸಾಗಿ ಹರಿದು ಸಾಗರ ಸೇರಿದ ಉದಾಹರಣೆ ಇಲ್ಲ.

ಮನುಷ್ಯನ ನಾಗರಿಕತೆ ಪ್ರಾರಂಭವಾದದ್ದೇ ನದಿ ತಟಗಳಲ್ಲಿ. ಜಲಮೂಲವಾಗಿ, ಕೃಷಿಮೂಲವಾಗಿ, ಸಾರಿಗೆಗೆ ಒದಗಿಬಂದು ಜಲಚರಗಳ ಸಂಪನ್ಮೂಲವಲ್ಲದೆ ನಮ್ಮೆಲ್ಲರ ಮಾಲಿನ್ಯದ ಗುಡ್ಡೆಗಳನ್ನು ಒಯ್ಯುವ ಗುತ್ತಿಗೆದಾರನಾಗಿ ನದಿಗಳು ವರ್ತಿಸುತ್ತಿವೆ. ಆದರೆ ಈಗ ಅಭಿವೃದ್ಧಿಗೇ ಒತ್ತುಕೊಟ್ಟು ಅಣೆಕಟ್ಟುಗಳನ್ನು ಕಟ್ಟಿರುವಾಗ, ಅವುಗಳನ್ನು ಒಡೆಯುವ ಪ್ರಯತ್ನ ಎಂದರೆ ವಿರೋಧಾಭಾಸವಲ್ಲವೇ ಎನ್ನುವ ಪ್ರಶ್ನೆ ಏಳಬಹುದು. ಸಣ್ಣ ಸಣ್ಣ ಅಣೆಕಟ್ಟುಗಳು ಬಹುಬೇಗ ಹೂಳುತುಂಬಿ ಕಟ್ಟೆ ಒಡೆದು ಪ್ರವಾಹ ಸ್ಥಿತಿ ಸೃಷ್ಟಿಸುತ್ತಿರುವ ನಿದರ್ಶನಗಳು ಅಮೆರಿಕದಲ್ಲೇ ಹೆಚ್ಚಾಗಿ ಕಾಣುತ್ತಿವೆ.

ಅಮೆರಿಕ ಮತ್ತು ಕೆನಡಾದ ಗಡಿಭಾಗದಲ್ಲಿ ಹರಿಯುವ ಎಲ್ವಾ ನದಿಗೆ ಎರಡು ಕಡೆ ಕಟ್ಟಿದ್ದ 32 ಮೀಟರ್ ಮತ್ತು 64 ಮೀಟರ್ ಎತ್ತರದ ದೊಡ್ಡ ಅಣೆಕಟ್ಟುಗಳನ್ನು 2011 ಮತ್ತು 2014ರ ನಡುವೆ ಒಡೆದುಹಾಕಲು ಸರ್ಕಾರವೇ ಮುಂದಾಗಬೇಕಾಯಿತು. ನದಿಯ ಕೆಳ ಹರಿವಿನಲ್ಲಿ ಪರಿಸರಕ್ಕೊದಗಿದ ಧಕ್ಕೆ ಮತ್ತು ಬುಡಕಟ್ಟು ಸಮುದಾಯಕ್ಕೆ, ಮೀನುಗಾರಿಕೆಗೆ ಕುತ್ತು ಒದಗಿದ್ದು ಇದಕ್ಕೆ ಪ್ರಮುಖ ಕಾರಣ. ಸುರಕ್ಷತೆಯ ದೃಷ್ಟಿಯಿಂದ ಮತ್ತು ಮೂಲ ಪರಿಸರ ಉಳಿಸಿಕೊಳ್ಳುವ ಸಲುವಾಗಿ 2050ರ ಹೊತ್ತಿಗೆ ಸುಮಾರು 10,000 ಅಣೆಕಟ್ಟುಗಳನ್ನು ಒಡೆಯುವ ಯೋಜನೆಯನ್ನು ಅಮೆರಿಕ ಹಾಕಿಕೊಂಡಿದೆ. ಹಾಗೆಂದು ಎಲ್ಲ ದೇಶಗಳೂ ಹೀಗೆಯೇ ಒಡೆಯುತ್ತಾ ಹೋದರೆ ಕೃಷಿ ಮತ್ತು ಆ ಮೂಲದ ಆರ್ಥಿಕತೆ ಏನಾಗಬೇಕು? ಇದನ್ನು ಆಯಾ ದೇಶಗಳು ಯೋಚಿಸಿಯೇ ತೀರ್ಮಾನ ತೆಗೆದುಕೊಳ್ಳಬೇಕು.

ಚುರುಮುರಿ



ಹರಾಜು ಸೂತ್ರ

• ಸುಮಂಗಲಾ

‘ಏ ನೋಡಿಲ್ಲಿ... ನಮ್ ಕರುನಾಡೇ ಫಸ್ಟ್ ಅಂತೆ! ಖರೇ ಇದು ಗಿನ್ನೆಸ್ ರೆಕಾರ್ಡಿಗಾರ ಸೇರಬಕು, ಇಲ್ಲಾಂದ್ರ ಒಂದು ಸ್ಪೆಷಲ್ ಕೆಟಗರಿ ನೊಬೆಲ್ ಪ್ರಶಸ್ತಿನಾರೆ ಕೊಡಬಕು’ ಪೇಪರು ಹಿಡಿದಿದ್ದ ಬೆಕ್ಕಣ್ಣ ಒಂದೇ ಸಮನೆ ಖುಷಿಯಿಂದ ವದರಿತು.

‘ಹೌದೇನಲೇ... ಯಾವುದ್ರಾಗೆ ಫಸ್ಟ್?’ ನಾನೂ ಅಗದಿ ಹುರುಪಿನಿಂದಲೇ ಕೇಳಿದೆ.

‘ಆಪರೇಶನ್ ಕಮಲ ಫಸ್ಟ್ ಕಂಡುಹಿಡಿದಿದ್ದೇ ನಮ್ ಕರುನಾಡಿನೊಳಗ! ಇಲ್ಲಿ ಮೊದ್ಲು ಕಂಡುಹಿಡಿದು, ಪ್ರಯೋಗ ಮಾಡಿ, ಯಶಸ್ವಿ ಸೂತ್ರ ಅಂತ ಗೊತ್ತಾದ ಮೇಲೆ ಬ್ಯಾರೆ ರಾಜ್ಯದಾಗೆ ಪ್ರಯೋಗ ಶುರುಮಾಡಿ, ಎಲ್ಲಾ ಕಡಿಗೂ ನೂರಕ್ಕೆ ನೂರು ಸಕ್ಸೆಸ್’ ಬೆಕ್ಕಣ್ಣ ಇನ್ನೂ ಸಂಭ್ರಮದಲ್ಲಿಯೇ ತೇಲಾಡುತ್ತಿತ್ತು.

‘ಮಂಗ್ಯಾನಂಥವನೇ... ಏನರ ವಿಜ್ಞಾನದ ಅನ್ವೇಷಣೆ ಅಂದ್ಕಂಡೆ. ಇದಕ್ಕೆ ಸ್ಪೆಷಲ್ ಕೆಟಗರಿ ನೊಬೆಲ್ ಅಲ್ಲಲೇ, ಇಗ್ನೊಬೆಲ್ ಪ್ರಶಸ್ತಿ ಕೊಡಬೇಕಷ್ಟೆ’.

‘ಈ ಸೂತ್ರ ಮೊದ್ಲು ಕಂಡುಹಿಡಿದಿದ್ದೇ ನಮ್ ಯಡ್ಯೂರಜ್ಜಾರು, ಈಗ ಅವ್ರನ್ನೇ ಪಾಪ ಮೂಲಿಗಿ ಕುಂಡ್ರಸ್ಯಾರ’ ಬೆಕ್ಕಣ್ಣ ಲೊಚಗುಡುತ್ತಲೇ ‘ಆಪರೇಶನ್ ಕಮಲ ಸೂತ್ರ ಎಲ್ಲಾ ಕಡಿಗಿ ಯಶಸ್ವಿಯಾಗಿ ಅನ್ವಯಿಸಲಕ್ಕೆ ಹತ್ಯಾರ. ಲಗೂನೆ ನಿಮ್ಮ ಹೆಸರಿಗೆ ಆ ಸೂತ್ರಾನ ಪೇಟೆಂಟ್ ಮಾಡಿಸ್ಕೋರಿ ಅಂತ ಅಜ್ಜಾರಿಗೆ ಹೇಳತೀನಿ’ ಎಂದಿತು.

‘ಅಲ್ಲಲೇ... ವಿಧಾನಸಭೆ ಚುನಾವಣೆ ನಡೆಸಾಕೆ ಮಹಾರಾಷ್ಟ್ರ ಸರ್ಕಾರ ಆವಾಗ 900 ಕೋಟಿಗೂ ಹೆಚ್ಚು ರೊಕ್ಕ ಖರ್ಚು ಮಾಡೈತಿ. ಹಿಂಗ ಆಪರೇಶನ್ ಕಮಲ, ಖರೀದಿ ವ್ಯವಹಾರ ಮಾಡೂದಿದ್ದರ ಅಷ್ಟ್ ಖರ್ಚು ಮಾಡಿ ಚುನಾವಣೆ ಎದಕ್ಕ ಮಾಡಬೇಕಲೇ? ಎಲ್ಲಾ ಮಂತ್ರಿ ಕುರ್ಚಿನ ಹರಾಜಿಗಿಟ್ಟು, ಗೆದ್ದವರನ್ನ ಮಂತ್ರಿ ಮಾಡಿದರ ಮುಗೀತಿಲ್ಲೋ...’ ಎಂದೆ.

‘ಇನ್ ಸ್ವಲ್ಪೇ ದಿನದಾಗೆ ಅದಕ್ಕೂ ಒಂದು ಹೊಸ ತಂತ್ರ ಕಂಡುಹಿಡಿತಾರ! ಯಾವ ಪಕ್ಷ ಬಂದ್ರೂ ನಿಮಗ ಶ್ರೀಸಾಮಾನ್ಯರಿಗೆ ಸ್ವರ್ಗ ತಂದ್ಕೊಡಂಗಿಲ್ಲ. ಕುರ್ಚಿಗಾಗಿ ಒಳಗೊಳಗೇ ಕಿತ್ತಾಡೂವಂಥ ಹತ್ ಪಕ್ಷಗಳು ಎದಕ್ಕ ಬೇಕು... ಏಕ್ ಭಾರತ್ ಏಕ್ ಪಕ್ಷ’ ಎಂದು ಬೆಕ್ಕಣ್ಣ ಗಹಗಹಿಸಿತು!

ಸಂಗತ

ಚೌಕಾಸಿ ಎಂಬ ನುಂಗಲಾರದ ತುತ್ತು

ಏರುತ್ತಲೇ ಇರುವ ಬೆಲೆ ಎಷ್ಟೋ ವ್ಯಾಪಾರಿಗಳು ಹಾಗೂ ಸ್ವಉದ್ಯೋಗಗಳನ್ನು ನೆಚ್ಚಿಕೊಂಡವರ ಪಾಲಿಗೆ ಉಸಿರುಗಟ್ಟಿಸುವ ವಾತಾವರಣ ನಿರ್ಮಿಸಿದೆ

• ಎಚ್.ಕೆ.ಶರತ್

ಮಾರುಕಟ್ಟೆಯಲ್ಲಿ ಸೌತೆಕಾಯಿ ಮಾರುತ್ತಿದ್ದ ಯುವತಿಯ ಬಳಿ ವ್ಯಕ್ತಿಯೊಬ್ಬರು ಚೌಕಾಸಿ ಮಾಡತೊಡಗಿದರು. ‘10 ರೂಪಾಯಿಗೆ ಒಂದು’ ಎಂದು ಯುವತಿ ಹೇಳಿದರೆ, ‘ಇಪ್ಪತ್ತು ರೂಪಾಯಿಗೆ ಮೂರು ಮಾಡ್ಕೊಂಡು ಕೊಡು’ ಅಂತ ಆ ವ್ಯಕ್ತಿ ಕೇಳುತ್ತಿದ್ದರು. ತಾನು ಹೇಳಿದ ದರ ಸಡಿಲಿಸದ ಯುವತಿ, ‘ಬೇಕಿದ್ದರೆ 10 ರೂಪಾಯಿಗೆ ಒಂದರಂತೆ ತಗೊಂಡು ಹೋಗಿ’ ಅಂದರು ಕೊನೆಯದಾಗಿ. ಆ ವ್ಯಕ್ತಿ ಕೊಳ್ಳದೆ ಹಾಗೇ ಹೋದರು.

ಆನಂತರ ಪಕ್ಕದಲ್ಲೇ ತರಕಾರಿ ಮಾರುತ್ತಿದ್ದ ಮಹಿಳೆಯ ಬಳಿ, ‘ನೋಡಕ್ಕ, ನಾವಿಲ್ಲಿ ನಾಕು ಕಾಸು ಸಂಪಾದಿಸೋಣ ಅಂತ ವ್ಯಾಪಾರಕ್ಕೆ ಬಂದಿದ್ರೆ ಇವ್ರು ಹೇಗೆ ಚೌಕಾಸಿ ಮಾಡ್ತಾರೆ ಅಂತ? ಇವರಿಗೆ ಮನುಷ್ಯತ್ವನೇ ಇಲ್ಲ...’ ಅಂತ ಅಸಮಾಧಾನ ಹೊರಹಾಕಿದರು. ಚೌಕಾಸಿ ಮಾಡದೆ ಎರಡು ಸೌತೆಕಾಯಿ ಖರೀದಿಸಿದ ಗ್ರಾಹಕರೊಬ್ಬರಿಗೆ ಸ್ವಯಂಪ್ರೇರಿತರಾಗಿ ತಾವೇ ಒಂದು ಸೌತೆಕಾಯಿ ಹೆಚ್ಚುವರಿಯಾಗಿ ಕೊಟ್ಟರು.

ಆಟೊ ಚಾಲಕರೊಬ್ಬರು ಮೂರು ಕಿಲೊಮೀಟರ್ ದೂರದ ಪ್ರಯಾಣಕ್ಕೆ ₹ 200 ನೀಡುವಂತೆ ಕೇಳಿದರು. ‘ಕೇಳ್ತಿರೋದು ತೀರಾ ಹೆಚ್ಚಾಯ್ತಲ್ವೆ’ ಎಂದು ಕೇಳಿದ್ದಕ್ಕೆ, ‘ಎಲ್ಲ ರೇಟೂ ಜಾಸ್ತಿ ಆಗಿದೆ ಸರ್, ಏನ್ ಮಾಡೋಣ ಹೇಳಿ’ ಅಂದರು. ಆಟೊ ಓಡಿಸುವಾಗಲೇ ಅವರಿಗೊಂದು ಮೊಬೈಲ್ ಕರೆ ಬಂತು. ‘ಟೀವಿ ರಿಪೇರಿ ಮಾಡ್ಸೋಕೂ ನಿಮ್ ಕೈಯಲ್ಲಿ ಆಗಲ್ವಾ? ಟೀವಿ ಇಲ್ದೆ ಮನೇಲಿ ಸಮಯ ಕಳೆಯೋದು ಹೇಗೆ’ ಅಂತ ಹೆಂಡತಿ ದಬಾಯಿಸುತ್ತಿದ್ದಾಳೆ ಅಂತ ಕರೆಯ ಸಾರಾಂಶ ತಿಳಿಸಿದರು. ಅವರು ಓಡಿಸುತ್ತಿದ್ದ ಆಟೊ ಕೂಡ ರಿಪೇರಿ ಬೇಡುತ್ತಿತ್ತು. ಹರಿದ ಸೀಟಿಗೆ ಪ್ಲಾಸ್ಟಿಕ್ ಚೀಲದ ತೇಪೆ ಹಾಕಿದ್ದರು. ಇಳಿಯುವ ಸ್ಥಳ ತಲುಪಿದಾಗ ₹ 500ರ ನೋಟು ಕೊಟ್ಟರೆ, ‘ನನ್ ಹತ್ರ ಇರೋದೆ ನೂರೈವತ್ತು ರೂಪಾಯಿ’ ಅಂತ ಚಿಲ್ಲರೆ ಕೊಡಲೂ ಹಣವಿಲ್ಲದ ಪರಿಸ್ಥಿತಿ ಮನಗಾಣಿಸಿದರು.

ಹಲವು ವರ್ಷಗಳಿಂದ ಆಟೊ ಓಡಿಸುವುದನ್ನೇ ವೃತ್ತಿಯಾಗಿಸಿಕೊಂಡಿದ್ದ ಪರಿಚಿತರೊಬ್ಬರು ಇತ್ತೀಚೆಗೆ ರಸ್ತೆ ಬದಿ ಆಟೊ ನಿಲ್ಲಿಸಿ, ಪಕ್ಕದಲ್ಲೇ ತರಕಾರಿ ಗುಡ್ಡೆ ಹಾಕಿ ಮಾರುತ್ತಿದ್ದದ್ದು ಅಚಾನಕ್ಕಾಗಿ ಕಣ್ಣಿಗೆ ಬಿತ್ತು.

ಕಾರ್ಪೆಟ್ ಮಾರಲು ಮನೆಗಳತ್ತ ಬಂದ ಯುವಕನನ್ನು ತಡೆದು ನಿಲ್ಲಿಸಿದ ನಾಲ್ವರು ಮಹಿಳೆಯರು, ದರ ವಿಚಾರಿಸತೊಡಗಿದರು. ಯುವಕ ಒಂದು ಕಾರ್ಪೆಟ್‌ಗೆ ₹ 3,000 ಎಂದ. ಚೌಕಾಸಿ ಶುರು ಹಚ್ಚಿಕೊಂಡ ಮಹಿಳೆಯರು ‘800 ರೂಪಾಯಿ ಕೊಡ್ತೀವಿ’ ಅಂತ ಹೇಳಿದವರು, ಅದಕ್ಕೆ ಆ ಯುವಕ ಒಪ್ಪದೇ ಹೋದಾಗ ಕೊನೆಗೆ ₹ 1,600 ಕೊಟ್ಟರು. ಯುವಕ ‘ಇನ್ನೂ ನೂರು ರೂಪಾಯಿ ಆದ್ರೂ ಕೊಡಿ, ಏನೂ ಗಿಟ್ಟಲ್ಲ’ ಅಂದ. ‘ಕೊಡೋದಾದ್ರೆ ಇಷ್ಟಕ್ಕೆ ಕೊಡು, ಇಲ್ಲಾಂದ್ರೆ ತಗೊಂಡು ಹೋಗು’ ಅಂದವರ ಮಾತಿಗೆ ಮತ್ತಷ್ಟು ಬೇಸರ ಪಟ್ಟುಕೊಂಡು, ‘ಹೊತ್ತು ತಿರುಗೋಕಾದ್ರೂ ಲಾಭ ಬೇಡ್ವಾ?’ ಅಂತ ಹೇಳಿ ನೊಂದುಕೊಂಡು ಹೊರಟ. ಆತ ಹೋದ ಮೇಲೆ, ‘ಇದೇ ಕ್ವಾಲಿಟಿ ಕಾರ್ಪೆಟ್‌ಗೆ ಅಂಗಡಿಯಲ್ಲಾದ್ರೆ ಎರಡೂವರೆ ಸಾವಿರ ಕೇಳ್ತಾರೆ’ ಅಂತ ಹೇಳಿ ಮಹಿಳೆಯರು ಗೆಲುವಿನ ನಗೆ ಬೀರಿದರು.

ವ್ಯಾಪಾರಿಗಳು ಮತ್ತು ಗ್ರಾಹಕರ ನಡುವಿನ ಚೌಕಾಸಿ ಹೊಸದೇನೂ ಅಲ್ಲ. ಆದರೆ, ಕೆಲ ವರ್ಷಗಳಿಂದ ಏರುತ್ತಲೇ ಸಾಗಿರುವ ಬೆಲೆ ಎಷ್ಟೋ ವ್ಯಾಪಾರಿಗಳು ಹಾಗೂ ಸ್ವಉದ್ಯೋಗಗಳನ್ನು ನೆಚ್ಚಿಕೊಂಡವರ ಪಾಲಿಗೆ ಉಸಿರುಗಟ್ಟಿಸುವ ವಾತಾವರಣ ನಿರ್ಮಿಸಿದೆ. ‘ಮೊದಲಿನಷ್ಟು ಲಾಭ ಗಳಿಸಲು ಆಗುತ್ತಿಲ್ಲ’ ಎನ್ನುವ ಅಳಲು ವ್ಯಾಪಾರದಲ್ಲಿ ತೊಡಗಿರುವ ಬಹುತೇಕರದ್ದು. ಒಂದೆಡೆ ಆದಾಯದ ಮೂಲಗಳು ಬರಿದಾಗತೊಡಗಿರುವುದರಿಂದ ಹಲವರಲ್ಲಿ ಕೊಳ್ಳುವ ಶಕ್ತಿಯೇ ಕ್ಷೀಣಿಸತೊಡಗಿದ್ದರೆ, ಮತ್ತೊಂದೆಡೆ, ಕೆಲವರು ನಡೆಸುವ ವಿಪರೀತ ಚೌಕಾಸಿ ಎಷ್ಟೋ ವ್ಯಾಪಾರಸ್ಥರ ತಾಳ್ಮೆಯನ್ನು ಪರೀಕ್ಷೆಗೆ ಒಡ್ಡುತ್ತಿದೆ.



ಸಕಾಲಕ್ಕೆ ನಿಗದಿತ ಸಂಬಳ ಪಡೆಯಬಹುದಾದಂತಹ ಕೆಲಸಗಳು ಅಗತ್ಯಕ್ಕೆ ತಕ್ಕಷ್ಟು ಸೃಷ್ಟಿಯಾಗದ ಕಾರಣ, ಅನಿವಾರ್ಯವಾಗಿ ಹಲವರು ಸ್ವಉದ್ಯೋಗಗಳ ಮೊರೆ ಹೋಗುತ್ತಿದ್ದಾರೆ. ಬಹುತೇಕ ವ್ಯಾಪಾರಗಳಲ್ಲಿ ತುರುಸಿನ ಸ್ಪರ್ಧೆ ಏರ್ಪಟ್ಟಿದೆ. ಗ್ರಾಹಕರನ್ನು ಆಕರ್ಷಿಸಲು ತಮ್ಮ ಲಾಭದ ಪ್ರಮಾಣ ತಗ್ಗಿಸಿಕೊಳ್ಳುವ ಅನಿವಾರ್ಯವೂ ಸೃಷ್ಟಿಯಾಗುತ್ತಿದೆ. ಇದರ ಜೊತೆಗೆ ದೊಡ್ಡವರ ಜೊತೆಗೆ ಸ್ಪರ್ಧಿಸಬೇಕಿರುವ ಒತ್ತಡವೂ ಇದೆ. ಆನ್‌ಲೈನ್ ಖರೀದಿಗೆ ಗ್ರಾಹಕರು ಒಗ್ಗಿಕೊಳ್ಳುತ್ತಿರುವುದರಿಂದಲೂ ಹೊಡೆತ ತಿನ್ನಬೇಕಿದೆ. ನಿಯಮಿತವಾಗಿ ಖರೀದಿಸುತ್ತಿದ್ದ ವಸ್ತುಗಳ ಬೆಲೆಯಲ್ಲಿ ದಿಢೀರನೆ ಬಹಳಷ್ಟು ಏರಿಕೆಯಾದಾಗ ವಾಸ್ತವ ಅರಗಿಸಿಕೊಳ್ಳಲು ಗ್ರಾಹಕರು ಸಮಯಾವಕಾಶ ತೆಗೆದುಕೊಳ್ಳುತ್ತಿದ್ದಾರೆ. ತೀರಾ ಅನಿವಾರ್ಯ ಅಲ್ಲದಿದ್ದರೆ ಖರೀದಿಯನ್ನೇ ಮುಂದೂಡುತ್ತಿದ್ದಾರೆ.

ಚೌಕಾಸಿ ಮಾಡದೆ ಖರೀದಿಸಲು ಮುಂದಾಗುವುದು ದಡ್ಡತನವೆಂಬ ನಿಲುವು ನಮ್ಮಲ್ಲಿ ಆಳವಾಗಿ ಬೇರೂರಿದೆ. ಗ್ರಾಹಕರ ಚೌಕಾಸಿ ಪ್ರವೃತ್ತಿ ಮನಗಂಡ ವ್ಯಾಪಾರಿಗಳು ಮೊದಲಿಗೆ ತೀರಾ ದುಬಾರಿ ಬೆಲೆ ಹೇಳಿ ಆನಂತರ ಚೌಕಾಸಿ ವೇಳೆ ದರ ಇಳಿಸಿ ಮಾರುತ್ತಿದ್ದರು. ಬದಲಾದ ಸನ್ನಿವೇಶದಲ್ಲಿ ಚೌಕಾಸಿ ಎಂಬುದು ಎಷ್ಟೋ ವ್ಯಾಪಾರಿಗಳ ಪಾಲಿಗೆ ನುಂಗಲಾರದ ತುತ್ತಾಗಿ ಪರಿಣಮಿಸುತ್ತಿದೆ.

ವಾಚಕರ ವಾಣಿ

ಅತಿವೃಷ್ಟಿಯಾದರೆ ವಿಚ್ಛೇದನ?

ಮಳೆ ಬರಲಿ ಎಂಬ ಕಾರಣಕ್ಕೆ ಗ್ರಾಮಸ್ಥರೆಲ್ಲಾ ಸೇರಿ ಕತ್ತೆಗಳ ಮದುವೆ, ಕಪ್ಪೆಗಳ ಮದುವೆ ಮಾಡುತ್ತಿರುವ ಕುರಿತ ವರದಿಗಳನ್ನು ಓದಿ ನಗಬೇಕೋ ಅಳಬೇಕೋ ತಿಳಿಯುತ್ತಿಲ್ಲ. ಪ್ರಪಂಚದಾದ್ಯಂತ ಕಾಡುಗಳ ವ್ಯಾಪ್ತಿ ಕ್ಷೀಣಿಸುತ್ತಿದೆ, ಭಾರತದಲ್ಲಂತೂ ಕಾಡುಗಳು ಅಪಾಯಕಾರಿ ಮಟ್ಟದಲ್ಲಿ ಕ್ಷೀಣಿಸಿವೆ. ಇದರ ನೇರ ಪರಿಣಾಮ ಜಲಚಕ್ರದ ಮೇಲಾಗಿ ಅತಿವೃಷ್ಟಿ, ಅನಾವೃಷ್ಟಿ ಉಂಟಾಗುತ್ತಿವೆ. ಇದಕ್ಕೆ ಪರಿಹಾರವೆಂದರೆ ಕಾಡುಗಳನ್ನು ಪುನಶ್ಚೇತನಗೊಳಿಸುವುದು. ಕಾಡುಗಳ ವ್ಯಾಪ್ತಿಯನ್ನು ಹೆಚ್ಚಿಸಲು ಕೆಲವು ರಾಷ್ಟ್ರಗಳು ಕಾರ್ಯೋನ್ಮುಖ ಆಗಿವೆ. ಆದರೆ ನಮ್ಮಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಇಂತಹ ಕಾರ್ಯಗಳು ನಡೆಯುತ್ತಿಲ್ಲ.

ಪರಿಸರವನ್ನು ಸಂರಕ್ಷಿಸುವುದು, ಅರಣ್ಯ ಬೆಳೆಸುವುದು ಅರಣ್ಯ ಇಲಾಖೆಯ ಕೆಲಸ. ಸಾರ್ವಜನಿಕರಿಗೂ ಇದಕ್ಕೂ ಸಂಬಂಧವಿಲ್ಲ ಎಂಬುದು ನಮ್ಮಲ್ಲಿ ಹೆಚ್ಚಿನವರ ನಂಬಿಕೆ. ಜೊತೆಗೆ ಗಿಡಮರಗಳನ್ನು ಬೆಳೆಸಲು ನಮ್ಮಲ್ಲಿ ಸೋಮಾರಿತನ. ಜಲಚಕ್ರದ ಅಸಮತೋಲನವನ್ನು ಸರಿದೂಗಿಸಲು ಹೆಚ್ಚು ಹೆಚ್ಚು ಗಿಡಗಳನ್ನು ನೆಟ್ಟು ಬೆಳೆಸುವುದು ಮತ್ತು ಈಗಾಗಲೇ ನೆಟ್ಟಿರುವ ಗಿಡಗಳನ್ನು ರಕ್ಷಿಸುವ ಕೆಲಸಗಳಾಗಬೇಕೇ ವಿನಾ ಈ ರೀತಿ ಕತ್ತೆ , ಕಪ್ಪೆಗಳಿಗೆ ಮದುವೆ ಮಾಡುವುದಲ್ಲ. ಕತ್ತೆಗಳಿಗೆ ಮದುವೆ ಮಾಡಿದ ದಿನ ಮಳೆ ಬಂದರೆ ಅದು ಕಾಕತಾಳೀಯ. ಅದಕ್ಕೆ ಯಾವುದೇ ವೈಜ್ಞಾನಿಕ ಪುರಾವೆಗಳಿಲ್ಲ. ಒಂದು ವೇಳೆ ಕತ್ತೆಗಳು, ಕಪ್ಪೆಗಳ ಮದುವೆ ಮಾಡಿಸಿದ್ದರಿಂದಲೇ ಮಳೆ ಬಂದಿತು ಎನ್ನುವುದಾದರೆ, ಮುಂದೆ ಅತಿವೃಷ್ಟಿಯಾದರೆ ಅದನ್ನು ತಡೆಯಲು ಈಗ ಮದುವೆ ಮಾಡಿಸಿರುವ ಕತ್ತೆ, ಕಪ್ಪೆ ದಂಪತಿಗಳಿಗೆ ವಿಚ್ಛೇದನ ಕೊಡಿಸಬೇಕೆ? ಸಮಾಜ ಇನ್ನಾದರೂ ಇಂತಹ ಮೌಢ್ಯಗಳಿಂದ ಹೊರಬರಲಿ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಪುಢಾರಿಗಿರಿ!

ಗಣ್ಯ ರಾಜಕಾರಣಿಗಳೆಲ್ಲ ಎಂದೋ
ಇತಿಹಾಸ ಸೇರಿದ ಉದಾರಿಗಳು
ಈಗ ನಮ್ಮ ಮುಂದಿರುವುದು ಅವರ
ಮುಖವಾಡ ಹೊತ್ತ ಪುಢಾರಿಗಳು!

ಈರಪ್ಪ ಎಂ. ಕಂಬಳಿ, ಬೆಂಗಳೂರು

ಶಿಕ್ಷಕ ಪ್ರಶಸ್ತಿ: ಆಯ್ಕೆ ಮಾನದಂಡ ಬದಲಾಗಲಿ

ಮಕ್ಕಳು ಹಾಗೂ ಶಾಲೆಯ ಶ್ರೇಯೋಭಿವೃದ್ಧಿಗೆ ಶ್ರಮಿಸಿದ ಶಿಕ್ಷಕರಿಗೆ ಪ್ರತಿವರ್ಷ ಶಿಕ್ಷಕರ ದಿನಾಚರಣೆಯ ಸಂದರ್ಭದಲ್ಲಿ ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ‘ಉತ್ತಮ ಶಿಕ್ಷಕ’ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಪ್ರಶಸ್ತಿಯು ಶಿಕ್ಷಕರ ಕಾರ್ಯದಕ್ಷತೆಯನ್ನು ಹೆಚ್ಚಿಸಬಹುದು. ಆದರೆ ಪ್ರಶಸ್ತಿಗೆ ಶಿಕ್ಷಕರು ಅರ್ಜಿ ಸಲ್ಲಿಸಬೇಕಾಗಿದೆ. ಇದು ಬೇಸರದ ಸಂಗತಿ. ಈ ಪರಿಪಾಟ ತಪ್ಪಬೇಕು. ಸ್ವಾಭಿಮಾನಿಯಾಗಿರುವ ಶಿಕ್ಷಕ ತನಗೆ ಪ್ರಶಸ್ತಿ ಕೊಡಿ ಎಂದು ಕೇಳಲು ಮುಜುಗರಪಡಬಹುದು.

ಶಿಕ್ಷಕ ತನ್ನ ವೃತ್ತಿ ಬದುಕಿನಲ್ಲಿ ರೂಢಿಸಿಕೊಂಡು ಬಂದ ಪ್ರಾಮಾಣಿಕತೆ, ನಿಷ್ಠೆ ಹಾಗೂ ಕಾರ್ಯದಕ್ಷತೆಯನ್ನು ಶಿಕ್ಷಣ ಇಲಾಖೆಯೇ ಗುರುತಿಸಿ ಪ್ರಶಸ್ತಿ ನೀಡಿದರೆ ಉತ್ತಮ. ಅಲ್ಲದೆ ಎಷ್ಟೋ ಶಿಕ್ಷಕರು ಅರ್ಹತೆ ಇಲ್ಲದಿದ್ದರೂ ಪ್ರಶಸ್ತಿಗೆ ಅರ್ಜಿ ಸಲ್ಲಿಸಿ, ಪ್ರಭಾವಿ ರಾಜಕಾರಣಿಗಳ ಮೂಲಕ ಅಧಿಕಾರಿಗಳ ಮೇಲೆ ಒತ್ತಡ ಹೇರಿ ಪ್ರಶಸ್ತಿ ಪಡೆಯುತ್ತಿರುವುದು ದುರ್ದೈವದ ಸಂಗತಿ. ಹೀಗಾಗಿ ಶಿಕ್ಷಣ ಇಲಾಖೆಯು ಶಿಕ್ಷಕ ಪ್ರಶಸ್ತಿಯ ಆಯ್ಕೆಯ ಮಾನದಂಡವನ್ನು ಬದಲಿಸಲಿ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ವೈಯಕ್ತಿಕ ನಿಂದನೆ ಸಲ್ಲದು

ಮಧುಗಿರಿಯ ಕಾಂಗ್ರೆಸ್ ಮುಖಂಡ ಕೆ.ಎನ್.ರಾಜಣ್ಣ ಅವರು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರ ಬಗ್ಗೆ ಹಗುರವಾಗಿ ಮಾತನಾಡಿ ಜನರ ಆಕ್ರೋಶಕ್ಕೆ ಗುರಿಯಾಗಿದ್ದಾರೆ. ಕೆಲವರಿಗೆ ಅದೊಂದು ಖಯಾಲಿ. ಮೈಕು ಕಂಡ ತಕ್ಷಣ ಉದ್ರೇಕಗೊಂಡು ನಾಲಗೆಯನ್ನು ಎತ್ತ ಬೇಕಾದರೂ ಹೊರಳಿಸಿಬಿಡುತ್ತಾರೆ. ಅವರ ಬೆಂಗಲಿಗರು ಅಂತಹ ಮಾತಿಗೆ ಚಪ್ಪಾಳೆ ಮತ್ತು ಶಿಳ್ಳೆ ಹೊಡೆದರಂತೂ ಮತ್ತೂ ಹಿಗ್ಗಿ ಹೋಗುತ್ತಾರೆ. ದೊಡ್ಡವರ ಬಗ್ಗೆ ಮಾತನಾಡಿದಾಗ ತಾವೂ ಪ್ರಸಿದ್ಧಿ ಪಡೆಯುತ್ತೇವೆ ಎಂಬ ಹುಂಬತನ ಕೆಲವರದು. ಯಾರೇ ಆಗಲಿ ವೈಯಕ್ತಿಕ ನಿಂದನೆ ಸಲ್ಲದು.

ಮಲ್ಲತ್ತಹಳ್ಳಿ ಡಾ. ಎಚ್. ತುಕಾರಾಂ, ಬೆಂಗಳೂರು

ಮಣ್ಣಿನ ಮಕ್ಕಳನ್ನು ಬಿಡದ ಬಯಲು ಮಣ್ಣು!

ಬೀದರ್ ಜಿಲ್ಲೆಯ ಗಂಗನಬಿಡ ಎಂಬ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹಳೆಯ ಕಟ್ಟಡ ಶಿಥಿಲಗೊಂಡಿದ್ದು, ಶಿಕ್ಷಕರು ಬಯಲಲ್ಲೇ ಪಾಠ ಮಾಡುತ್ತಿರುವುದು ಚಿತ್ರಸಹಿತ ವರದಿಯಾಗಿದೆ (ಪ್ರ.ವಾ., ಜುಲೈ 3). ಇದು, ಗಂಗನಬಿಡ ಗ್ರಾಮದ ಸರ್ಕಾರಿ ಶಾಲೆಯ ದುಃಸ್ಥಿತಿ ಮಾತ್ರವಲ್ಲ, ಗ್ರಾಮೀಣ ಭಾಗದ ಅನೇಕ ಸರ್ಕಾರಿ ಶಾಲೆಗಳ ಸ್ಥಿತಿ ಹೀಗೇ ಇದೆ. ಶಿಕ್ಷಣ ಕ್ಷೇತ್ರದ ಸುಸ್ಥಿತಿಯನ್ನು ಸರ್ಕಾರ ಮತ್ತು ಸಾರ್ವಜನಿಕರು ಆದ್ಯತೆಯಾಗಿ ಪರಿಗಣಿಸಬೇಕಾಗಿತ್ತು. ಆದರೆ ನಮ್ಮಲ್ಲಿ ಅದು ಕಡೆಗಣನೆಗೆ ಒಳಗಾಗಿದೆ. ಶಾಲೆಗೆ ಸಂಬಂಧಿಸಿದ ಕೆಲವು ಮೂಲ ಸಮಸ್ಯೆಗಳನ್ನು, ಮುಖ್ಯೋಪಾಧ್ಯಾಯರು ಸಮರ್ಥರಾಗಿದ್ದರೆ ಪರಿಹರಿಸಲು ಸಾಧ್ಯ. ಆದರೆ ಶಾಲೆ ಇರುವುದು ಹಳ್ಳಿಯಲ್ಲಿ, ಮುಖ್ಯೋಪಾಧ್ಯಾಯರ ವಾಸ ಪಟ್ಟಣದಲ್ಲಿ ಎಂಬಂತಾಗಿದೆ. ಯಾಂತ್ರಿಕವಾಗಿ ಶಾಲೆಗೆ ಬಂದು ಹೋಗುವ ಮುಖ್ಯೋಪಾಧ್ಯಾಯರಿಂದ ಶಾಲೆಯ ಅಭಿವೃದ್ಧಿಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ.

ಶಾಲೆಯ ಅಭಿವೃದ್ಧಿಗೆ ದೇಣಿಗೆ ನೀಡುವ ಔದಾರ್ಯ ನಮ್ಮಲ್ಲಿ ಕಡಿಮೆ. ಶಾಲೆಯ ಕಟ್ಟಡಕ್ಕೆ ಅನುದಾನ ಮಂಜೂರು ಮಾಡಲು ಮತ್ತು ಅನುದಾನ ಬಿಡುಗಡೆ ಮಾಡಲು ಲಂಚಕ್ಕೆ ಬೇಡಿಕೆ ಇಡುವ ಅಧಿಕಾರಿಗಳು ಇರುವಾಗ, ಶಾಲೆಯ ಅಭಿವೃದ್ಧಿ ಹೇಗೆ ಸಾಧ್ಯ? ಇವೆಲ್ಲದರ ಪರಿಣಾಮವಾಗಿ, ಕೆಲವು ಹಳ್ಳಿಗಳ ಮಣ್ಣಿನ ಮಕ್ಕಳಿಗೆ ಶಾಲೆಯ ಬಯಲಿನ ಮಣ್ಣನ್ನು ಬಿಟ್ಟು ತರಗತಿಯ ಒಳಗೆ ಬೆಂಚಿನ ಮೇಲೆ ಕುಳಿತುಕೊಂಡು ಪಾಠ ಕೇಳುವ ಸೌಭಾಗ್ಯವಂತೂ ಇಲ್ಲ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಮಕ್ಕಳ ಪೌಷ್ಟಿಕ ಆಹಾರಕ್ಕೂ ಆಧಾರ್ ಕಡ್ಡಾಯ



ಪೂರಕ ಪೌಷ್ಟಿಕ ಆಹಾರ ಪಡೆದುಕೊಳ್ಳುತ್ತಿರುವ ಮಕ್ಕಳು ಮತ್ತು ತಾಯಂದಿರ ಆಧಾರ್ ನೋಂದಣಿಯ ಆಧಾರದಲ್ಲಿಯೇ ರಾಜ್ಯಗಳಿಗೆ ಹಣ ಬಿಡುಗಡೆ ಮಾಡಲಾಗುವುದು ಎಂದು ಕೇಂದ್ರವು ಹೇಳಿದೆ. ಇದರಿಂದಾಗಿ ಬಡ ಕುಟುಂಬಗಳ ಲಕ್ಷಾಂತರ ಮಕ್ಕಳು ಪೌಷ್ಟಿಕ ಆಹಾರದಿಂದ ವಂಚಿತರಾಗುವ ಅಪಾಯ ಎದುರಾಗಿದೆ. ಆಧಾರ್ ಸಂಖ್ಯೆ ಇಲ್ಲ ಎಂಬ ಕಾರಣಕ್ಕೆ ಯಾರಿಗೂ ಸಹಾಯಧನ ಅಥವಾ ಸವಲತ್ತು ನಿರಾಕರಿಸಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಹಾಗಿದ್ದರೂ ಆಧಾರ್ ಜೋಡಣೆಗೆ ಒತ್ತಡ ಹೇರಲಾಗುತ್ತಿದೆ.

ರಿಪೋರ್ಟರ್ಸ್ ಕಲೆಕ್ಟಿವ್ ವರದಿ

• ತಪಸ್ಯ

ದಕ್ಷಿಣ ದೆಹಲಿಯ ನಿವಾಸಿ ಸಮಿಧಾ ಖಾತೂನ್ (20), ಅವರ 3 ತಿಂಗಳು ಮತ್ತು 18 ತಿಂಗಳ ತಮ್ಮ ಎರಡು ಹಸುಳೆಗಳ ಪೌಷ್ಟಿಕ ಆಹಾರಕ್ಕೆ ಅಂಗನವಾಡಿಯನ್ನೇ ಆಶ್ರಯಿಸಿದ್ದಾರೆ. ಅವರ ಇಬ್ಬರೂ ಮಕ್ಕಳ ಆಧಾರ್ ನೋಂದಣಿ ಆಗಿಲ್ಲ. ಪೌಷ್ಟಿಕ ಆಹಾರ ಪಡೆಯಲು ಆಧಾರ್ ನೋಂದಣಿ ಕಡ್ಡಾಯವಾದರೆ ಈ ಎರಡೂ ಮಕ್ಕಳು ಪೌಷ್ಟಿಕ ಆಹಾರ ವಂಚಿತರಾಗುತ್ತಾರೆ. ಆಧಾರ್ ಅನ್ನು ಕಡ್ಡಾಯಗೊಳಿಸುವ ಕ್ರಮವು ಅತ್ಯಂತ ಬಡ ಮಕ್ಕಳು ಮತ್ತು ಮಹಿಳೆಯರ ಪೌಷ್ಟಿಕ ಆಹಾರ ಲಭ್ಯತೆಗೆ ಕುತ್ತು ತರುತ್ತದೆ ಎಂದು ಪರಿಣತರು ಹೇಳುತ್ತಾರೆ.

ಪೌಷ್ಟಿಕ ಆಹಾರ ಪಡೆಯಲು ಆಧಾರ್ ನೋಂದಣಿಯನ್ನು ಕೇಂದ್ರ ಸರ್ಕಾರವು 2022ರ ಮಾರ್ಚ್‌ನಲ್ಲಿ ಕಡ್ಡಾಯಗೊಳಿಸಿದೆ ಎಂಬುದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯದ ಮಾರ್ಗಸೂಚಿಗಳು ಮತ್ತು ಪತ್ರಗಳಿಂದ ದೃಢಪಟ್ಟಿದೆ. ಈ ಪತ್ರಗಳು ರಿಪೋರ್ಟರ್ಸ್ ಕಲೆಕ್ಟಿವ್‌ಗೆ ಲಭ್ಯವಾಗಿವೆ. ಆಧಾರ್ ಸಂಖ್ಯೆಯ ಮೂಲಕ ದೃಢಪಡಿಸಿಕೊಳ್ಳಲಾದ ಫಲಾನುಭವಿಗಳಿಗೆ ಪೌಷ್ಟಿಕ ಆಹಾರ ಒದಗಿಸುವುದಕ್ಕೆ ಅಗತ್ಯವಾದ ನಿಧಿಯನ್ನು ಮಾತ್ರ ನೀಡಲಾಗುವುದು ಎಂದು ಕೇಂದ್ರ ಸರ್ಕಾರವು ರಾಜ್ಯಗಳಿಗೆ 2021ರ ನವೆಂಬರ್‌ನಲ್ಲಿ ತಿಳಿಸಿತ್ತು. ಫಲಾನುಭವಿಗಳ ಗುರುತನ್ನು ಆಧಾರ್ ಮೂಲಕ ದೃಢಪಡಿಸಿಕೊಳ್ಳುವುದನ್ನು ತ್ವರಿತಗೊಳಿಸಿ ಎಂದು ಜೂನ್ 23ರಂದು ರಾಜ್ಯಗಳಿಗೆ ಕೇಂದ್ರ ಸೂಚಿಸಿತ್ತು.

ನಕಲಿ ಫಲಾನುಭವಿಗಳನ್ನು ಗುರುತಿಸುವುದು, ಫಲಾನುಭವಿಗಳು ಮತ್ತು ಅಂಗನವಾಡಿಗಳ ಮೂಲಕ ಅವರಿಗೆ ದೊರೆಯುವ ಸೇವೆಗಳ ಮೇಲೆ ನಿಗಾ ಇರಿಸುವ ಮೊಬೈಲ್ ಆ್ಯಪ್ ಬಳಕೆಯನ್ನು ಹೆಚ್ಚಿಸುವುದು ಇದರ ಉದ್ದೇಶ. ಆರು ತಿಂಗಳಿಂದ ಆರು ವರ್ಷದವರೆಗಿನ 7.9 ಕೋಟಿ ಮಕ್ಕಳು ಪೌಷ್ಟಿಕ ಆಹಾರ ಯೋಜನೆಯ ಪ್ರಯೋಜನವನ್ನು ಈಗ ಪಡೆಯುತ್ತಿದ್ದಾರೆ. ಆದರೆ, ಇವರಲ್ಲಿ ಶೇ 23ರಷ್ಟು ಮಕ್ಕಳ ಆಧಾರ್ ನೋಂದಣಿ ಮಾತ್ರ ಆಗಿದೆ. ಹಾಗಾಗಿ, ಆಧಾರ್ ಕಡ್ಡಾಯಗೊಳಿಸಿರುವ ಕಾನೂನುಬದ್ಧವಾಗಿ ದೊರೆಯಬೇಕಾದ ಸವಲತ್ತು ಹಲವು ಮಕ್ಕಳಿಗೆ ದೊರೆಯದೇ ಹೋಗಬಹುದು (ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆಯನ್ನು 2013ರಲ್ಲಿ ಅಂಗೀಕರಿಸಿದ್ದು ಪೂರಕ ಪೌಷ್ಟಿಕ ಆಹಾರ ಪೂರೈಕೆಯನ್ನು ಕಾನೂನುಬದ್ಧ ಹಕ್ಕಾಗಿಸಲಾಗಿದೆ).

ಮಕ್ಕಳಿಗೆ ನೀಡಲಾಗುವ ಯಾವುದೇ ಸವಲತ್ತನ್ನು ಆಧಾರ್ ನೋಂದಣಿ ಆಗಿಲ್ಲ ಎಂಬ ಕಾರಣಕ್ಕೆ ನಿರಾಕರಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ 2018ರಲ್ಲಿ ಹೇಳಿತ್ತು.

ಪೌಷ್ಟಿಕ ಆಹಾರ ಪೂರೈಕೆ ಕಾರ್ಯಕ್ರಮದ ಅಡಿಯಲ್ಲಿ ಪೂರೈಸುವ ಆಹಾರದ ವೆಚ್ಚದ ಅರ್ಧದಷ್ಟನ್ನು ಹಲವು ರಾಜ್ಯಗಳಿಗೆ ಕೇಂದ್ರವು ನೀಡುತ್ತದೆ. ಈಶಾನ್ಯ ಮತ್ತು ಹಿಮಾಲಯ ಸಮೀಪದ ರಾಜ್ಯಗಳಿಗೆ ಶೇ 90ರಷ್ಟನ್ನು ಮತ್ತು ವಿಧಾನಸಭೆ ಇಲ್ಲದ ಕೇಂದ್ರಾಡಳಿತ ಪ್ರದೇಶಗಳಿಗೆ ಶೇ ನೂರರಷ್ಟು ಮೊತ್ತವನ್ನು ಕೇಂದ್ರವೇ ನೀಡುತ್ತದೆ.

ಪೌಷ್ಟಿಕತೆಗೆ ಆಧಾರ್

ಫಲಾನುಭವಿಗಳಿಗೆ ಆಧಾರ್ ಕಡ್ಡಾಯಗೊಳಿಸಬೇಕು ಎಂಬ ಉದ್ದೇಶವನ್ನು ಕೇಂದ್ರವು ಹೊಂದಿದೆ ಎಂಬ ವಿಚಾರವು 2021ರಲ್ಲಿಯೇ ನಿಚ್ಚಳವಾಗಿತ್ತು. ವಿವಿಧ ಸಚಿವಾಲಯಗಳು ಅನುಷ್ಠಾನಗೊಳಿಸುತ್ತಿರುವ ಪೌಷ್ಟಿಕತೆ ಸಂಬಂಧಿ ಯೋಜನೆಗಳ ಮೇಲಿನ ನಿಗಾ, ನಿಯಂತ್ರಣ ಮತ್ತು ಅನುಷ್ಠಾನಕ್ಕೆ ಪೋಷಣ್ ಅಭಿಯಾನ್ ಎಂಬ ಕಾರ್ಯಕ್ರಮವನ್ನು 2018ರಲ್ಲಿ ಆರಂಭಿಸಲಾಗಿದೆ. ಪೂರಕ ಪೌಷ್ಟಿಕತೆ ಕಾರ್ಯಕ್ರಮವನ್ನು ಇದರಲ್ಲಿ ವಿಲೀನಗೊಳಿಸಲಾಗಿದೆ.

ಅಂಗನವಾಡಿ ಕಾರ್ಯಕರ್ತೆಯರ ಮೇಲೆ ಒತ್ತಡ

ಆಧಾರ್ ಜೋಡಿಸದಿದ್ದರೆ ಈ ಯೋಜನೆಯ ಅನುದಾನವನ್ನು ಕಡಿತ ಮಾಡುವ ಬೆದರಿಕೆಯನ್ನೂ ಕೇಂದ್ರ ಸರ್ಕಾರ ಒಡ್ಡಿತ್ತು. ಜತೆಗೆ, ಅಂಗನವಾಡಿ ಕಾರ್ಯಕರ್ತೆಯರ ಭತ್ಯೆಗಳನ್ನು ಕಡಿತ ಮಾಡುವ ಎಚ್ಚರಿಕೆಯನ್ನೂ ಪರೋಕ್ಷವಾಗಿ ನೀಡಿದೆ. ಅಂಗನವಾಡಿ ಕಾರ್ಯಕರ್ತೆಯರ ಭತ್ಯೆಯು, ಪೋಷಣ್ ಟ್ರ್ಯಾಕರ್‌ನಲ್ಲಿ ನಮೂದಾಗುವ ದತ್ತಾಂಶಗಳನ್ನು ಆಧರಿಸಿದೆ.

'ಎಲ್ಲ ಫಲಾನುಭವಿಗಳ ಆಧಾರ್ ವಿವರವನ್ನು ಪರಿಶೀಲಿಸುವಂತೆ ಸೂಚಿಸಲಾಗಿದೆ' ಎಂದು ದೆಹಲಿಯ ಅಂಗನವಾಡಿ ಕಾರ್ಯಕರ್ತೆಯೊಬ್ಬರು ಹೇಳಿದ್ದಾರೆ. ಈ ಬಗ್ಗೆ ಅವರ ಹಿರಿಯ ಅಧಿಕಾರಿಗಳು ವಾಟ್ಸ್‌ಆ್ಯಪ್ ಗುಂಪಿನಲ್ಲಿ ಕಳುಹಿಸಿರುವ ಸೂಚನೆಯನ್ನು ಅವರು ತೋರಿಸಿದರು. 'ಎಲ್ಲರ ಆಧಾರ್ ವಿವರ ಪರಿಶೀಲನೆಯಾಗಬೇಕು. ಆಧಾರ್ ಇಲ್ಲದ, ಯಾರಿಗೂ ಪಡಿತರ (ಟೇಕ್ ಹೋಂ ರೇಷನ್- ಟಿಎಚ್‌ಆರ್) ನೀಡಬಾರದು' ಎಂದು ಸಂದೇಶದಲ್ಲಿ ಸೂಚಿಸಲಾಗಿದೆ.

ಈ ಸ್ವರೂಪದ ಸೂಚನೆಗಳು ಮತ್ತು ಆಧಾರ್ ಇಲ್ಲದೇ ಇದ್ದರೆ ಟಿಎಚ್‌ಆರ್ ನಿರಾಕರಿಸುವ ಬಗ್ಗೆ ಬೇರೆ ರಾಜ್ಯಗಳಲ್ಲಿ ಸಂಬಂಧಿತ ಹಿರಿಯ ಅಧಿಕಾರಿಗಳನ್ನು ಪ್ರಶ್ನಿಸಲಾಯಿತು. 'ನಮ್ಮ ರಾಜ್ಯದ ಹಲವು ಗ್ರಾಮಗಳಲ್ಲಿ ಇಂಟರ್‌ನೆಟ್ ಸಂಪರ್ಕವೇ ಸಿಗುವುದಿಲ್ಲ. ಜತೆಗೆ ದೇಶದ ಪ್ರತಿ ನಾಲ್ಕರಲ್ಲಿ ಒಂದು ಮಗು ಮಾತ್ರ ಆಧಾರ್ ಹೊಂದಿದೆ. ಹೀಗಿದ್ದಾಗ ಎಲ್ಲರ ಆಧಾರ್ ವಿವರ ನಮೂದಿಸುವುದು ಹೇಗೆ ಸಾಧ್ಯ' ಎಂದು ಒಬ್ಬ ಅಧಿಕಾರಿ ಹೇಳಿದ್ದಾರೆ.

ಸಿಎಜಿ ಎಚ್ಚರಿಕೆ

ಯುಐಡಿಎಐನ ಕಾರ್ಯವಿಧಾನದ ಬಗ್ಗೆ ಮಹಾಲೇಖಪಾಲರು (ಸಿಎಜಿ) 2022ರ ಏಪ್ರಿಲ್‌ನಲ್ಲಿ ವರದಿಯೊಂದನ್ನು ಸಿದ್ಧಪಡಿಸಿದ್ದರು. ಐದು ವರ್ಷದ ಒಳಗಿನ ಮಕ್ಕಳ ಬಯೊಮೆಟ್ರಿಕ್ ವಿವರ ಸಂಗ್ರಹಿಸಲಾಗದು. ವಿಶಿಷ್ಟ ಗುರುತಿನ ಆಧಾರದಲ್ಲಿ ಆಧಾರ್ ನೋಂದಣಿಗೆ ಬಯೊಮೆಟ್ರಿಕ್ ವಿವರಗಳೇ ಮೂಲ. ಆದರೆ, ಮಕ್ಕಳ ನೋಂದಣಿ ಸಂದರ್ಭದಲ್ಲಿ ಈ ಮೂಲ ಅಗತ್ಯವನ್ನೇ ಪೂರೈಸಲಾಗದು ಎಂದು ವರದಿಯಲ್ಲಿ ಹೇಳಲಾಗಿದೆ.

ಬಯೊಮೆಟ್ರಿಕ್ ದತ್ತಾಂಶದ ಬದಲಿಗೆ ಸಂಗ್ರಹಿಸಲಾಗುವ ಇತರ ವಿವರಗಳು ಅಥವಾ ಭಾವಚಿತ್ರದ ಆಧಾರದಲ್ಲಿ ನಕಲಿ ಆಧಾರ್ ನೋಂದಣಿಯನ್ನು ಪತ್ತೆ ಮಾಡುವುದು ಸಾಧ್ಯವಿಲ್ಲ ಎಂಬುದನ್ನು ಯುಐಡಿಎಐ ಒಪ್ಪಿಕೊಂಡಿದೆ.

ಐದು ವರ್ಷದೊಳಗಿನ ಮಕ್ಕಳ ಆಧಾರ್ ನೋಂದಣಿಯಿಂದ ಹೆಚ್ಚಿನ ಪ್ರಯೋಜನ ಇಲ್ಲ ಎಂಬುದನ್ನು ಸಿಎಜಿ ವರದಿಯಲ್ಲಿಯೇ ಹೇಳಲಾಗಿದೆ. ಹಾಗಿದ್ದರೂ ಫಲಾನುಭವಿ ಮಕ್ಕಳ ಆಧಾರ್ ಜೋಡಣೆ ಕಡ್ಡಾಯ ಎಂದು ಸರ್ಕಾರ ಹೇಳುತ್ತಲೇ ಇದೆ.

ಐಸಿಡಿಎಸ್-ಸಿಎಎಸ್ (ಕಾಮನ್ ಅಪ್ಲಿಕೇಷನ್ ಸಾಫ್ಟ್‌ವೇರ್) ಎಂಬ ಸಾಫ್ಟ್‌ವೇರ್ ಅನ್ನು 2018ರಲ್ಲಿ ಅಭಿವೃದ್ಧಿಪಡಿಸಲಾಗಿದೆ. ಪೌಷ್ಟಿಕ ಯೋಜನೆಗಳ ಪರಿಣಾಮದ ಮೇಲೆ ನಿಗಾ ಇರಿಸುವುದಕ್ಕೆ ಈ ಸಾಫ್ಟ್‌ವೇರ್‌ಗೆ ಪೋಷಣ್ ಅಭಿಯಾನ್ ಅಡಿಯಲ್ಲಿ ಚಾಲನೆ ಕೊಡಲಾಗಿತ್ತು. ಆದರೆ, ಇದು ವಿಫಲವಾದ ಕಾರಣ ಮತ್ತೊಂದು ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ. ಪೋಷಣ್ ಟ್ರ್ಯಾಕರ್ ಎಂಬ ಹೆಸರಿನ ಈ ಆ್ಯಪ್ ಅನ್ನು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಅಭಿವೃದ್ಧಿಪಡಿಸಿದೆ.


ಐಸಿಡಿಎಸ್ ಅಡಿಯಲ್ಲಿ ಪೂರಕ ಆಹಾರ ಪೂರೈಸುವ ಅಂಗನವಾಡಿ ಕಾರ್ಯಕರ್ತೆಯರು ಫಲಾನುಭವಿಗಳ ವಿವರಗಳು, ಅವರ ಆರೋಗ್ಯ ಸ್ಥಿತಿ, ಅವರಿಗೆ ಒದಗಿಸಲಾದ ಸೇವೆಗಳು ಮುಂತಾದವುಗಳನ್ನು ಟ್ರ್ಯಾಕರ್‌ನಲ್ಲಿ ದಾಖಲಿಸಬೇಕು. ಅಂಗನವಾಡಿಯ ಮೂಲಕ ಒದಗಿಸಲಾಗುವ ಎಲ್ಲ ಸೇವೆಗಳ ಮೇಲೆ ಟ್ರ್ಯಾಕರ್ ಮೂಲಕ ಸರ್ಕಾರ ಕಣ್ಣಿರಿಸಿದೆ.

ಫಲಾನುಭವಿಗಳ ಆಧಾರ್ ವಿವರಗಳನ್ನು ಪೋಷಣ್ ಟ್ರ್ಯಾಕರ್‌ಗೆ ಡಿಸೆಂಬರ್ 15ರೊಳಗೆ ಜೋಡಿಸಬೇಕು ಎಂದು ಕೇಂದ್ರವು ರಾಜ್ಯಗಳಿಗೆ 2021ರ ನವೆಂಬರ್‌ನಲ್ಲಿ ಸೂಚಿಸಿತ್ತು. ಪೂರಕ ಆಹಾರ ಪೂರೈಕೆಗೆ ಕೇಂದ್ರವು ನೀಡುವ ಅನುದಾನವು ಟ್ರ್ಯಾಕರ್‌ನಲ್ಲಿ ನೀಡುವ ದತ್ತಾಂಶ ಆಧರಿಸಿರುತ್ತದೆ ಎಂದು ಕೇಂದ್ರ ತಿಳಿಸಿತ್ತು.

ವಿವರವಾದ ಮಾರ್ಗಸೂಚಿಯನ್ನು ಸಚಿವಾಲಯವು ರಾಜ್ಯಗಳಿಗೆ 2022ರ ಮಾರ್ಚ್‌ನಲ್ಲಿ ಕಳುಹಿಸಿತ್ತು. ಅಂಗನವಾಡಿಯಲ್ಲಿ ನೋಂದಣಿಯಾದ ಫಲಾನುಭವಿಗಳು ಮಾತ್ರ ಪೂರಕ ಪೌಷ್ಟಿಕ ಆಹಾರ ಪಡೆಯಲು ಅರ್ಹರು. ಫಲಾನುಭವಿಗಳು ಆಧಾರ್ ಕಾರ್ಡ್ ಹೊಂದಿರುವುದು ಕಡ್ಡಾಯ. ನೋಂದಣಿಯ ಸಂದರ್ಭದಲ್ಲಿ ಆಧಾರ್ ಸಂಖ್ಯೆಯನ್ನು ನೀಡಬೇಕು. ಅಂದರೆ, ಮಕ್ಕಳು ಸೇರಿದಂತೆ ಆಧಾರ್ ಸಂಖ್ಯೆ ಹೊಂದಿರುವವರು ಮಾತ್ರ ಪೌಷ್ಟಿಕ ಆಹಾರ ಪಡೆಯಲು ಅರ್ಹರು. ಪ್ರತಿ ಬಾರಿ ಪೌಷ್ಟಿಕ ಆಹಾರ ಪಡೆದುಕೊಳ್ಳಲು ಹೋದಾಗಲೂ ಆಧಾರ್ ಕಾರ್ಡ್ ಒಯ್ಯಬೇಕು ಎಂದೂ ಮಾರ್ಗಸೂಚಿಯಲ್ಲಿ ಹೇಳಲಾಗಿದೆ. ನೋಂದಣಿ ಆಗಿರುವ ಎಲ್ಲ ಫಲಾನುಭವಿಗಳ ಆಧಾರ್ ಸಂಖ್ಯೆಯನ್ನು ಟ್ರ್ಯಾಕರ್‌ಗೆ ಜೋಡಿಸಿ ಎಂದು ಜೂನ್ 23ರಂದು ಕೂಡ ಕೇಂದ್ರವು ಸೂಚಿಸಿತ್ತು.

ಪರಿಣತರ ಪ್ರಕಾರ, ವ್ಯಕ್ತಿಯೊಬ್ಬರ ಗುರುತು ದೃಢೀಕರಣಕ್ಕೆ ಆಧಾರ್ ಕಾರ್ಡ್ ಅಥವಾ ಆಧಾರ್ ಸಂಖ್ಯೆಯಷ್ಟೇ ಸಾಲದು ಎಂದು ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರವೇ (ಯುಐಡಿಎಐ) ಎಚ್ಚರಿಕೆ ನೀಡಿದೆ. ಹಾಗಾಗಿ, ಫಲಾನುಭವಿಯು ಯುಐಡಿಎಐಗೆ ಕಳುಹಿಸಿದ ಬಯೊಮೆಟ್ರಿಕ್ ಮಾಹಿತಿ ಅಥವಾ ವ್ಯಕ್ತಿಯ ಇತರ ವಿವರಗಳನ್ನು ಅಂಗನವಾಡಿ ಕಾರ್ಯಕರ್ತೆಯು ದೃಢೀಕರಿಸಬೇಕಾಗುತ್ತದೆ. ವ್ಯಕ್ತಿಯ ವಿವರಗಳು ಎಂದರೆ, ಹೆಸರು, ಜನನ ದಿನಾಂಕ, ವಿಳಾಸ ಮತ್ತು ಲಿಂಗ. ಬಯೊಮೆಟ್ರಿಕ್ ಮಾಹಿತಿಯಲ್ಲಿ ಮುಖದ ಚಿತ್ರ, ಬೆರಳಚ್ಚು ಮತ್ತು ಕಣ್ಣು ಪಾಪೆಯ ಚಿತ್ರ ಇರುತ್ತದೆ.

ಫಲಾನುಭವಿಯು ಪ್ರತಿ ಬಾರಿ ಆಹಾರ ಪಡೆಯಲು ಬಂದಾಗಲೂ ಅವರ ಆಧಾರ್ ಸಂಖ್ಯೆಯನ್ನು ದೃಢೀಕರಿಸುವುದು ವಾಸ್ತವಿಕವಾಗಿ ಕಾರ್ಯಸಾಧ್ಯವಲ್ಲ ಎಂದು ನಾವು ಮಾತನಾಡಿಸಿದ ಅಧಿಕಾರಿಗಳು ಮತ್ತು ಅಂಗನವಾಡಿ ಕಾರ್ಯಕರ್ತರು ಹೇಳಿದ್ದಾರೆ.



No. CD-III -17/11/2021-CD-III [e-96766]
भारत सरकार / Government of India
महिला एवं बाल विकास मंत्रालय
Ministry of Women & Child Development

शास्त्री भवन, नई दिल्ली
Shastri Bhawan, New Delhi
Date: 30th Nov, 2021

To,

The Principal Secretaries/ Secretaries in-charge of Anganwadi Services (under Umbrella ICDS) in the States/UTs of Andhra Pradesh, A&N Islands, Assam, Arunachal Pradesh, Bihar, Chandigarh, Chhattisgarh, Delhi, D&N Haveli, Daman & Diu, Goa, Gujarat, Haryana, Himachal Pradesh, Jammu & Kashmir, Jharkhand, Karnataka, Kerala, Ladakh, Lakshadweep, Madhya Pradesh, Maharashtra, Manipur, Meghalaya, Mizoram, Nagaland, Odisha, Puducherry, Punjab, Rajasthan, Sikkim, Tamil Nadu, Telangana, Tripura, Uttar Pradesh, Uttarakhand and West Bengal.

Subject: Aadhar seeding of beneficiary data of Integrated Child Development Scheme in Poshan Tracker -reg.

Sir/Ma'am,

In inviting a kind reference to this Ministry's letter no. CD-III-17/1/2021-CD-III dated 06.05.2021 and 26.07.2021 wherein States/UTs were directed to complete the exercise of uploading all beneficiary data in Poshan Tracker.

2. It is requested to complete the exercise of updating the Aadhar seeding of beneficiary data of Integrated Child Development Scheme in Poshan Tracker by 15th December 2021, as the future allocation of funds under SNP &food grains under WBNP will be made on the basis of this data only.

3. This issues with the approval of Competent Authority.

Yours faithfully,
(K Srinivasan) 30/11/21
Under Secretary to the Government of India
[E-mail: ksrinivasan.89@nic.in]

ಫಲಾನುಭವಿಗಳ ಆಧಾರ್ ಮಾಹಿತಿಯನ್ನು 2021ರ ಡಿಸೆಂಬರ್ 15ರೊಳಗೆ ಪೋಷಣ್ ಟ್ರ್ಯಾಕರ್‌ಗೆ ಜೋಡಿಸಬೇಕು ಎಂದು ಕೇಂದ್ರವು ರಾಜ್ಯಗಳಿಗೆ ಬರೆದ ಪತ್ರದ ಪ್ರತಿ

ಆಹಾರದ ಹಕ್ಕಿಗಿಂತ ಆಧಾರ್‌ಗೆ ಮಣೆ

ಶಿಶು ಮತ್ತು ಮಕ್ಕಳ ಆಧಾರ್ ನೋಂದಣಿ ಮಾಡಿಸುವುದು ಬಡ ಕುಟುಂಬಗಳಿಗೆ ದೊಡ್ಡ ಸವಾಲಿನ ಕೆಲಸ. ಮಕ್ಕಳ ಆಧಾರ್ ನೋಂದಣಿ ಮಾಡಿಸಲು ದಿನಗಟ್ಟಲೆ ಸರದಿಯಲ್ಲಿ ನಿಲ್ಲಬೇಕಾಗುತ್ತದೆ. ಹಾಗೆ ನಿಂತರೆ, ದಿನಗೂಲಿ ಕಳೆದುಕೊಳ್ಳಬೇಕಾಗುತ್ತದೆ. ಈ ಸ್ಥಿತಿಯಲ್ಲಿರುವ ಕುಟುಂಬಗಳು ಒಂದು ದಿನದ ಕೂಲಿ ಅಥವಾ ಆಧಾರ್ ನೋಂದಣಿಗೆ ಸರದಿಯಲ್ಲಿ ನಿಲ್ಲುವುದು, ಇವೆರಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ.

ಬಯೊಮೆಟ್ರಿಕ್ ಮತ್ತು ಇತರ ಮಾಹಿತಿಗಳನ್ನು ಅಪ್‌ಡೇಟ್ ಮಾಡಲು ಕ್ರಮವಾಗಿ ₹50 ಮತ್ತು ₹100ರ ಶುಲ್ಕ ವಿಧಿಸಲಾಗುತ್ತದೆ. ಆದರೆ, ಅಪ್‌ಡೇಟ್‌ಗಳನ್ನು ಮಾಡಿಸಿಕೊಳ್ಳಲು ಹಲವು ಹಂತದ ಪ್ರಕ್ರಿಯೆಗಳನ್ನು ಪೂರೈಸಬೇಕಿರುವುದರಿಂದ ಬಹುತೇಕ ಫಲಾನುಭವಿಗಳು ಮಧ್ಯವರ್ತಿಗಳ ಮೊರೆ ಹೋಗಬೇಕಾಗುತ್ತದೆ. ಅದಕ್ಕಾಗಿ ಅವರು ಹೆಚ್ಚಿನ ಹಣ ತೆರಬೇಕಾಗುತ್ತದೆ.

'ನನ್ನ ಗಂಡ ದಿನಗೂಲಿಗೆ ಹೋಗುತ್ತಾರೆ. ನಾನು ಮಕ್ಕಳನ್ನು ನೋಡಿಕೊಳ್ಳಬೇಕು. ನಾನೊಬ್ಬಳೇ ಹೋಗಿ ಆಧಾರ್ ನೋಂದಣಿ ಮಾಡಿಸಲು ಸಾಧ್ಯವಿಲ್ಲ. ಅದಕ್ಕೆ ಬೇಕಿರುವ ಹಣವೂ ನಮ್ಮ ಬಳಿ ಇಲ್ಲ' ಎನ್ನುತ್ತಾರೆ ದೆಹಲಿಯ ಸಮಿಧಾ. ದೇಶದ ರಾಜಧಾನಿ ದೆಹಲಿಯಲ್ಲಿಯೇ ಇಂತಹ ಸ್ಥಿತಿ ಇದೆ.

'ಆಧಾರ್ ಇಲ್ಲದಿರುವ ಮಕ್ಕಳಿಗೂ ನಾವು ಆಹಾರ ನೀಡುತ್ತಿದ್ದೇವೆ. ಆದರೆ, ಇನ್ನು ಮುಂದೆ ಅಧಾರ್ ಇದ್ದ ಮಕ್ಕಳಿಗಷ್ಟೇ ಆಹಾರ ನೀಡಿ ಎಂದು ಮೇಲ್ವಿಚಾರಕರು ಸೂಚನೆ ನೀಡಿದ್ದಾರೆ' ಎನ್ನುತ್ತಾರೆ ದಕ್ಷಿಣ ದೆಹಲಿಯ ಅಂಗನವಾಡಿ ಕೇಂದ್ರವೊಂದರ ಕಾರ್ಯಕರ್ತೆ.

ಫಲಾನುಭವಿಗಳ ಆಧಾರ್ ನೋಂದಣಿ ಮಾಡಿಸುವುದರ ಜತೆಗೆ ಪೋಷಣ್ ಅಭಿಯಾನದಲ್ಲಿ ಯಾವುದೇ ಅಡಚಣೆಯಾಗದಂತೆ ನೋಡಿಕೊಳ್ಳುವ ಹೊಣೆಯನ್ನು ರಾಜ್ಯದ ಅಧಿಕಾರಿಗಳ ಹೆಗಲಿಗೆ ಕೇಂದ್ರ ಸರ್ಕಾರ ಹೊರಿಸಿದೆ. ಆಧಾರ್ ಇಲ್ಲದ ಫಲಾನುಭವಿಗಳು ಆಧಾರ್ ಮಾಡಿಸಿಕೊಳ್ಳುವಲ್ಲಿ ನೆರವಾಗಿ ಎಂದು ಅಂಗನವಾಡಿ ಕಾರ್ಯಕರ್ತೆಯರಿಗೆ ಸೂಚಿಸಲಾಗಿದೆ. 'ಸರ್ಕಾರದ ಯೋಜನೆಯನ್ನು ವ್ಯವಸ್ಥಿತಗೊಳಿಸಲು ಆಧಾರ್ ನೆರವಾಗುತ್ತದೆ. ಆದರೆ, 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಎಲ್ಲಾ ಮಕ್ಕಳ ಆಧಾರ್ ವಿವರವನ್ನು ನೋಂದಣಿ ಮಾಡಿಸುವುದು ಸವಾಲಿನ ಕೆಲಸ. ಈ ವಯಸ್ಸಿನ ಮಕ್ಕಳಲ್ಲಿ ಆಧಾರ್ ಹೊಂದಿರುವವರ ಪ್ರಮಾಣ ತೀರಾ ಕಡಿಮೆ ಇದೆ' ಎಂದಿದ್ದಾರೆ ಐಎಎಸ್ ಅಧಿಕಾರಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯದ ವಿಶೇಷ ಕಾರ್ಯದರ್ಶಿಯಾಗಿದ್ದ ರಶ್ಮಿ ಸಿಂಗ್. 'ನಾವು ಯಾವ ಮಗುವಿಗೂ ಪೌಷ್ಟಿಕ ಆಹಾರವನ್ನು ನಿರಾಕರಿಸುತ್ತಿಲ್ಲ. ಆಧಾರ್ ವಿವರ ಇಲ್ಲದೆಯೇ ಪೋಷಣ್ ಟ್ರ್ಯಾಕರ್‌ನಲ್ಲಿ ನೋಂದಣಿ ಮಾಡಬಹುದು. ಆದರೆ, ಆಧಾರ್ ಅನ್ನು ಗರಿಷ್ಠ ಪ್ರಮಾಣದಲ್ಲಿ ಸೇರಿಸಲು ಯತ್ನಿಸುತ್ತಿದ್ದೇವೆ' ಎಂದು ಹೇಳಿದ್ದರು.

ಕೋಟ್ಯಂತರ ಮಕ್ಕಳಿಗೆ ತೊಂದರೆಯಾಗುವ, ಆಧಾರ್ ಕಡ್ಡಾಯದ ನಿರ್ಧಾರವನ್ನು ತೆಗೆದುಕೊಂಡದ್ದು ಏಕೆ ಎಂಬ ಪ್ರಶ್ನೆಯನ್ನು ಸಚಿವಾಲಯದ ಈಗಿನ ಅಧಿಕಾರಿಗಳಿಗೆ ಕಳುಹಿಸಲಾಗಿದೆ. ಆದರೆ, ಇನ್ನೂ ಉತ್ತರ ಬಂದಿಲ್ಲ.

ಲೇಖಕಿ: ರಿಪೋರ್ಟರ್ಸ್ ಕಲೆಕ್ಟಿವ್‌ನ ಸದಸ್ಯೆ

ಇಂಗ್ಲಿಷ್ ಲೇಖನವು 'ಆರ್ಟಿಕಲ್ 14' ಪೋರ್ಟಲ್‌ನಲ್ಲಿ ಪ್ರಕಟವಾಗಿದೆ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 163

ಸತಿಗೆ ಪರತತ್ತ್ವ ಹೇಳಿದ ಶಿವ

ಪತಿ ಪರಮೇಶ್ವರನೊಂದಿಗೆ ಸಂಸಾರಸುಖದಲ್ಲಿ ಮುಳುಗಿದ್ದ ಸತೀದೇವಿಗೆ ಕ್ರಮೇಣ ಅನುರಾಗ ಕಡಿಮೆಯಾಗಿ ಅಧ್ಯಾತ್ಮವಿಚಾರದತ್ತ ಅವಳ ಮನಸ್ಸು ಒರಳುತ್ತದೆ. ಹೀಗಿರಲು ಒಂದು ದಿನ ಸತೀದೇವಿಯು ಏಕಾಂತದಲ್ಲಿ ಶಂಕರನಿಗೆ ಕೇಳುತ್ತಾಳೆ: 'ಓ ಮಹಾದೇವ, ನೀನು ಮಹಾಯೋಗಿಯಾಗಿ ಪರಮಪುರುಷನಾಗಿರುವೆ. ಸತ್ತ್ವರಜಸ್ತಮೋರೂಪವಾದ ಪ್ರಕೃತಿಗಿಂತ ಭಿನ್ನನಾಗಿ ನಿರ್ಗುಣನಾಗಿರುವೆ. ಆದರೂ ಮಾಯೆಯ ನಿಮಿತ್ತದಿಂದ ಸಗುಣಭಾವವನ್ನು ಹೊಂದಿ ಸೃಷ್ಟಿ-ಸ್ಥಿತಿ-ಲಯಗಳನ್ನು ಮಾಡುವ ಈಶ್ವರನಾಗಿರುವೆ. ನನ್ನ ಭಕ್ತಿಗೆ ಅಧೀನನಾಗಿ ನೀನು ಪ್ರೇಮದಿಂದ ನನ್ನ ಪತಿಯಾಗಿರುವೆ. ನನ್ನ ಮನಸ್ಸು ಈಗ ಕಾಮಾಭಿಲಾಷೆಯಿಂದ ತೃಪ್ತವಾಗಿ, ಜಗತತ್ವದತ್ತ ಮನಸ್ಸು ಒರಳಿದೆ. ಇದಕ್ಕಾಗಿ ಯಾವ ವಸ್ತುವನ್ನು ತಿಳಿದರೆ ಜೀವಾತ್ಮಗಳು ಸಂಸಾರಸಾಗರವನ್ನು ದಾಟಬಹುದೋ, ಆ ಸುಖಸ್ವರೂಪವಾದ ಪರತತ್ತ್ವವನ್ನು ತಿಳಿದುಕೊಳ್ಳಲಿಚ್ಛಿಸಿದ್ದೇನೆ. ಯಾವುದನ್ನು ಅನುಷ್ಠಾನಮಾಡಿದರೆ ಜೀವಾತ್ಮಗಳು ಪರವಸ್ತುವನ್ನು ಪಡೆದು, ಮತ್ತೆ ಸಂಸಾರಿಯಾಗುವುದಿಲ್ಲವೋ ಅಂತಹ ಪರತತ್ತ್ವದ ಮುಕ್ತಿಯನ್ನು ನನಗೆ ತಿಳಿಸು' ಎಂದು ಕೋರುತ್ತಾಳೆ.

ಲೀಲಾವಿಗ್ರಹಧಾರಿಯಾದ ಶಿವನು ಸತೀದೇವಿಗೆ 'ಎಲೈ ದೇವಿ, ಪರತತ್ತ್ವವನ್ನು ತಿಳಿದ ಜೀವಾತ್ಮರು ಜೀವನ್ಮರಣದ ಸರಪಣಿಯಿಂದ ಮುಕ್ತರಾಗುವರು. ಆ ಪರತತ್ತ್ವವನ್ನು ನಿನಗೆ ಹೇಳುವೆನು ಕೇಳು' ಎಂದು ಮಹಾಯೋಗಿಯಾದ ಪರಮಶಿವ ಜಗತ್ತಿನ ಪರತತ್ವವನ್ನು ಹೇಳತೊಡಗುತ್ತಾನೆ.

'ಎಲೈ ಪರಮೇಶ್ವರಿ, ಮೊದಲಿಗೆ ಪರಮಾತ್ಮನನ್ನು ಗುರುಮುಖವಾಗಿ ವೇದಶಾಸ್ತ್ರಗಳಿಂದ ಶ್ರವಣಮಾಡಿ ತಿಳಿದುಕೊಳ್ಳಬೇಕು. ಬಳಿಕ ನಾನೇ ಆ ಪರಮಾತ್ಮವಸ್ತುವೆಂದು ಶುದ್ಧ ಮನಸ್ಸಿನಿಂದ ಚಿಂತಿಸಬೇಕು. ಪರತತ್ತ್ವವನ್ನು ತಿಳಿಯುವುದು ಬಹಳ ಕಷ್ಟ. ನಾನೇ ಆ ಸರ್ವೋತ್ಕೃಷ್ಟವಾದ ಪರಬ್ರಹ್ಮನೆಂದು ತಿಳಿಯುವುದು ಮತ್ತಷ್ಟು ಕಷ್ಟ. ಅಂತಹ ಜ್ಞಾನಿಗಳ ಸಂಖ್ಯೆ ವಿರಳವಾಗಿದೆ. ಶಾಸ್ತ್ರಾದಿಗಳಲ್ಲಿ ಹೇಳಿರುವ ಬ್ರಹ್ಮಸ್ವರೂಪವನ್ನು ಸುಮ್ಮನೆ ಓದಿ ಅರ್ಥಮಾಡಿಕೊಳ್ಳುವುದರಿಂದ ತಿಳಿದಂತಾಗುವುದಿಲ್ಲ. ಮೊದಲು ಶಾಸ್ತ್ರಾಧ್ಯಯನವನ್ನು ಗುರುಮುಖದಿಂದ ಮಾಡಿ, ಅದರ ರಹಸ್ಯಾರ್ಥಗಳನ್ನು ಮನಸ್ಸಿನಲ್ಲಿ ಚೆನ್ನಾಗಿ ವಿಮರ್ಶೆಮಾಡಬೇಕು. ವಿಮರ್ಶೆ ಮಾಡುವ ವಿಷಯವು ಕಾರಣಸಹಿತವಾಗಿಯೂ, ಲೋಕಾನುಭವಕ್ಕೆ ವಿರುದ್ಧವಲ್ಲದೆಯೂ ಇದ್ದರೆ ಮಾತ್ರ ಅದನ್ನು ಅಂಗೀಕರಿಸಬೇಕು. ಸುಮ್ಮನೆ ಮೂಢನಂಬಿಕೆಯಿಂದ ಯಾವುದನ್ನೂ ನಂಬಿ ಮಾಡಬಾರದು.

'ಎಲೈ ಕಾಳಿ, ಆ ಪರಬ್ರಹ್ಮನಲ್ಲಿ ಭಕ್ತಿಯನ್ನಿರಿಸಿದರೆ ಭೋಗಮುಕ್ತಿಗಳು ಲಭಿಸುವುದು. ಭಕ್ತಿ ಮತ್ತು ಜ್ಞಾನದಲ್ಲಿ ಅನೇಕ ವಿಧಗಳಿವೆ. ಭಕ್ತಿಯಿಂದ ಜ್ಞಾನ ಬರುತ್ತದೆ. ಜ್ಞಾನದಿಂದ ಭಕ್ತಿ ಬರುತ್ತದೆ. ಆದ್ದರಿಂದ ಭಕ್ತಿ ಮತ್ತು ಜ್ಞಾನ ಭಿನ್ನವಲ್ಲ. ಇವೆರಡೂ ಒಂದೇ ಆಗಿವೆ. ಇವುಗಳ ಫಲಗಳು ಸಹ ಒಂದೇ ರೀತಿ ನೀಡುತ್ತವೆ. ಭಕ್ತಿಯುಂಟಾಗದಿದ್ದರೆ ಜ್ಞಾನವು ಬರುವುದೇ ಇಲ್ಲ. ಅಂದರೆ ಜ್ಞಾನಕ್ಕೆ ಭಕ್ತಿಯು ದ್ವಾರವಾಗಿದೆ. ಭಕ್ತಿಯಿಂದ ಜ್ಞಾನವನ್ನು ಪಡೆದು, ಅದರ ಮೂಲಕ ಮುಕ್ತಿಯನ್ನು ಪಡೆಯಬೇಕು.

'ಎಲೈ ದೇವಿ, ಭಕ್ತಿಯು ಸಗುಣ ಮತ್ತು ನಿರ್ಗುಣ ಎಂದು ಎರಡು ವಿಧವಾಗಿರುವುದು. ಸ್ವಭಾವಜನ್ಯವಾಗಿಯೇ ಉಂಟಾಗುವ ನಿಜವಾದ ಭಕ್ತಿಯು ಶ್ರೇಷ್ಠವಾದುದು. ಪ್ರಾರ್ಥನಾವಿಧಿಯಿಂದ ಪ್ರಯತ್ನಪೂರ್ವಕವಾಗಿ ಉಂಟಾಗುವ ಭಕ್ತಿಯು ಅಷ್ಟು ಶ್ರೇಷ್ಠವಲ್ಲ. ನೈಷ್ಠಿಕೀ ಮತ್ತು ಅನೈಷ್ಠಿಕೀ ಎಂಬ ಎರಡು ವಿಧದ ಭಕ್ತಿಗಳಿವೆ. ಅದರಲ್ಲಿ ನೈಷ್ಠಿಕೀಭಕ್ತಿಯಲ್ಲಿ ಆರು ವಿಧವಿದ್ದರೆ, ಅನೈಷ್ಠಿಕೀಭಕ್ತಿಯಲ್ಲಿ ಒಂದೇ ವಿಧವಿದೆ. ಈ ಎಲ್ಲ ಭಕ್ತಿಗಳನ್ನು ವಿಹಿತಭಕ್ತಿ ಮತ್ತು ಅವಿಹಿತಭಕ್ತಿ ಎಂದು ಅನೇಕ ವಿಧವಾಗಿ ವಿಂಗಡಿಸಲಾಗಿದೆ. ಅವುಗಳ ಸ್ವರೂಪವು ವಿಸ್ತಾರವಾಗಿರುವುದರಿಂದ ಬೇರೆ ಬೇರೆ ಗ್ರಂಥಗಳಲ್ಲಿ ಪ್ರತ್ಯೇಕವಾಗಿ ವರ್ಣಿಸಲಾಗಿದೆ.

'ಎಲೈ ಪ್ರಿಯೆ. ವಿಹಿತಭಕ್ತಿ ಮತ್ತು ಅವಿಹಿತಭಕ್ತಿಗಳಿಗೆ ಮುನಿಗಳು ಒಂಬತ್ತು ಅಂಗಗಳನ್ನು ಹೇಳಿರುವರು. ಅವುಯಾವುದೆಂದರೆ: ಶ್ರವಣ, ಕೀರ್ತನ, ಸ್ಮರಣ, ಸೇವನ, ದಾಸ್ಯ, ಅರ್ಚನ, ವಂದನ, ಸಖ್ಯ, ಆತ್ಮಾರ್ಪಣೆ. ಇವುಗಳಲ್ಲದೆ, ಭಕ್ತಿಗೆ ಇನ್ನು ಅನೇಕ ಉಪಾಂಗಗಳು ಹೇಳಲ್ಪಟ್ಟಿವೆ. ಈಗ ಆ ಒಂಬತ್ತು ಅಂಗಗಳ ಲಕ್ಷಣಗಳನ್ನು ಬೇರೆ ಬೇರೆಯಾಗಿ ಹೇಳುವೆ. ಭೋಗ ಮತ್ತು ಮುಕ್ತಿ ಸಾಧಕಗಳಾದ ಆ ಲಕ್ಷಣಗಳನ್ನು ಸ್ಥಿರವಾದ ಮನಸ್ಸಿನಿಂದ ಕೇಳು' ಎಂದು ಮಹಾಶಿವ ಭಕ್ತಿಯ ಅಂಗಗಳ ಸ್ವರೂಪಗಳನ್ನು ಪತ್ನಿ ಸತಿದೇವಿಗೆ ಹೇಳತೊಡಗುತ್ತಾನೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಎರಡು ಮೌಲ್ಯಗಳು

ಎರಡುತೆರ ಮೌಲ್ಯಂಗಳೆಲ್ಲಕಂ ಲೋಕದಲಿ|
ಪರಮಾರ್ಥಕೊಂದು, ಸಾಂಪ್ರತದರ್ಥಕೊಂದು||
ಪರಿಕಿಸೆರಡಂ ನೀನು; ಹೊರ ಬೆಲೆಯ ಗುಣಿಪಂದು|
ಮರೆಯಬೇಡೊಳಬೆಲೆಯ – ಮಂಕುತಿಮ್ಮ
||**663**||

ಪದ-ಅರ್ಥ: ಎರಡು ತೆರ = ಎರಡು ರೀತಿಯ, ಮೌಲ್ಯಗಳೆಲ್ಲಕಂ = ಮೌಲ್ಯಗಳು + ಎಲ್ಲಕಂ (ಎಲ್ಲಕ್ಕೂ), ಸಾಂಪ್ರತದರ್ಥಕೊಂದು = ಸಾಂಪ್ರತದ (ಸಧ್ಯದ) + ಅರ್ಥಕ್ಕೆ + ಒಂದು, ಪರಿಕಿಸೆರಡಂ = ಪರಿಕಿಸು (ಪರೀಕ್ಷಿಸು) + ಎರಡಂ (ಎರಡನ್ನೂ), ಗುಣಿಪಂದು = ಪರಿಗಣಿಸುವಾಗ, ಮರೆಯಬೇಡೊಳಬೆಲೆಯ = ಮರೆಯಬೇಡ + ಒಳ ಬೆಲೆಯ

ವಾಚ್ಯಾರ್ಥ: ಪ್ರಪಂಚದಲ್ಲಿ ಎಲ್ಲದಕ್ಕೂ ಎರಡು ತೆರದ ಮೌಲ್ಯಗಳಿವೆ. ಪರಮಾರ್ಥಕ್ಕೆ ಒಂದು ಮೌಲ್ಯ ಮತ್ತು ಇಂದಿನ ಲೋಕವ್ಯವಹಾರಕ್ಕೆ ಒಂದು ಮೌಲ್ಯ. ಅವೆರಡನ್ನೂ ಸರಿಯಾಗಿ ಪರೀಕ್ಷಿಸು. ವಸ್ತುವಿನ ಹೊರಬೆಲೆಯನ್ನು ಅಳೆಯುವಾಗ ಅದರ ಒಳಬೆಲೆಯನ್ನು ಮರೆಯಬೇಡ.

ವಿವರಣೆ: ಕಗ್ಗ ಹೇಳುತ್ತದೆ, ಪ್ರತಿಯೊಂದು ವಸ್ತುವಿಗೆ ಎರಡು ಮೌಲ್ಯಗಳಿವೆ. ಒಂದು ದಿನನಿತ್ಯದ ವ್ಯವಹಾರದಲ್ಲಿ ಬಳಕೆಯಾಗುವ ಮೌಲ್ಯವಾದರೆ ಮತ್ತೊಂದು ಪರಮಾರ್ಥಕ್ಕೆ. ಪರಮಾರ್ಥವೆಂದರೆ ವಿಶೇಷ ಅರ್ಥ. ಪರಮವೆಂದರೆ, ವಿಶೇಷವಾದದ್ದು ಸರ್ವಶ್ರೇಷ್ಠವಾದದ್ದು, ಅತ್ಯುತ್ಕೃಷ್ಟವಾದದ್ದು. ಒಂದು ಪೆನ್ನಿನ ಬೆಲೆ ಐವತ್ತೋ ನೂರೋ ರೂಪಾಯಿಗಳಾದೀತು. ಅದು ವ್ಯಾವಹಾರಿಕ ಬೆಲೆ. ಆದರೆ ಆ ಪೆನ್ನು ನಿಮಗೆ ಅತ್ಯಂತ ಪ್ರಿಯರು, ಗೌರವಾನ್ವಿತರು ನೆನಪಿನ ಕಾಣಿಕೆಯೆಂದು ಕೊಟ್ಟಿದ್ದಾಗಿದ್ದರೆ ಅದರ ಬೆಲೆ ಅಷ್ಟೇ ಇರುತ್ತದೆಯೇ? ತಾವು ಕಂಡಿದ್ದೀರಿ, ಯಾರೋ ಮಹಾನುಭಾವರು ಹಿಂದೆ ಬಳಸಿದ ಕೊಡೆಯೋ, ಕೋಲೋ, ಕ್ರಿಕೆಟ್ ಬ್ಯಾಟೋ ಲಕ್ಷಾಂತರ ರೂಪಾಯಿಗಳಿಗೆ ಹರಾಜಾಗಿವೆ. ಅವುಗಳಿಗೆ ವ್ಯಾವಹಾರಿಕವಾಗಿ ಯಾವ ಬೆಲೆಯೂ ಇಲ್ಲ. ಆದರೆ ಮಹಾನುಭಾವರ ಸ್ಪರ್ಶದಿಂದ ಅದರ ಭಾವನಾತ್ಮಕ ಬೆಲೆ ತುಂಬ ಹೆಚ್ಚು.

ಮಹಾತ್ಮಾ ಗಾಂಧೀಜಿ ನಿತ್ಯ ಸ್ನಾನಮಾಡುವಾಗ ಕಾಲು ಉಜ್ಜಿಕೊಳ್ಳುವುದಕ್ಕೆ ಒಂದು ದುಂಡಗಿನ ಕಲ್ಲನ್ನು ಇಟ್ಟುಕೊಂಡಿದ್ದರು. ದಶಕಗಳಿಂದ ಅದನ್ನು ಜೋಪಾನವಾಗಿ ಇಟ್ಟುಕೊಂಡಿದ್ದರು. ಅದು ಒಮ್ಮೆ ಪ್ರವಾಸದಲ್ಲಿ ಕಳೆದುಹೋಯಿತು. ತಮ್ಮ ಸದಾ ಊರುಗೋಲಾಗಿದ್ದ ಮನುವನ್ನು ಹಿಂದಿನ ಗ್ರಾಮಕ್ಕೆ ಕಳುಹಿಸಿ, ಹುಡುಕಾಡಿಸಿ ತರಿಸಿದರು. ಹದಿನಾರು ಮೈಲಿ ನಡೆದು ಸುಸ್ತಾಗಿದ್ದ ಹುಡುಗಿ ಆ ಕಲ್ಲನ್ನು ತಂದು ಅವರ ಮುಂದೆ ಕುಕ್ಕಿ, 'ತೊಗೊಳ್ಳಿ ನಿಮ್ಮ ಕಲ್ಲು. ಇದೇ ನಿಮಗೆ ಬೇಕಿತ್ತು. ಇಂಥ ಕಲ್ಲು ಎಲ್ಲಿ ಬೇಕಾದರೂ ಸಿಗುತ್ತಿತ್ತು' ಎಂದು ಮೂತಿ ಸೊಟ್ಟ ಮಾಡಿದಳು. ಆಗ ಗಾಂಧೀ, 'ಮಗೂ, ಇದು ಬರೀ ಕಲ್ಲಲ್ಲ. ಮೀರಾಬೆನ್ ನನ್ನ ಸಲುವಾಗಿ ಕಲ್ಲನ್ನು ಬೇರೊಂದಿಗೆ ಕಲ್ಲಿಗೆ ಉಜ್ಜಿ ಉಜ್ಜಿ ನಯವಾಗುವಂತೆ ಮಾಡಿದ ಕಲ್ಲು. ಇದು ಆಕೆಯ ಪ್ರೀತಿಯ, ಗೌರವದ ಸಂಕೇತ. ಅದನ್ನು ಹೇಗೆ ಕಳೆದುಕೊಳ್ಳಲಿ?' ಎಂದರು! ವಾಸ್ತವದಲ್ಲಿ ಅದು ಒಂದು ಕಲ್ಲು ಮಾತ್ರ. ಆದರೆ ವಿಶೇಷ ಮೌಲ್ಯದಲ್ಲಿ ಅದು ಬೆಲೆ ಕಟ್ಟಲಾಗದ್ದು.

ಪರಮಾರ್ಥ ಪದಕ್ಕೆ ಇನ್ನೊಂದು ನೆಲೆಯಿದೆ. ಸತ್ಯಗಳಲ್ಲೆಲ್ಲ ಪರಮಸತ್ಯವಾದದ್ದು ಆತ್ಮವಸ್ತು ಅಥವಾ ಪರಮಾತ್ಮ ತತ್ವ. ಅದು ಸರ್ವಕಾಲದಲ್ಲೂ, ಅನಂತವಾಗಿ ಶಾಶ್ವತವಾಗಿ ಇರುವಂಥದ್ದು. ಅದರ ಅನ್ವೇಷಣೆ ಪಾರಮಾರ್ಥಿಕ ಚಿಂತನೆ. ಪೂಜೆ, ಅಲಂಕಾರ ಎಲ್ಲ ವ್ಯವಹಾರಿಕವಾದರೆ ಅದರ ಹಿಂದಿನ ಸಮರ್ಪಣಾ ಮನೋಭಾವ ಪಾರಮಾರ್ಥಿಕ. ಕಗ್ಗ ಅದನ್ನೇ ಒತ್ತಿ ಹೇಳುತ್ತದೆ, ವ್ಯವಹಾರಿಕ ಮತ್ತು ಪಾರಮಾರ್ಥಿಕ ಎಂಬ ಎರಡು ಮೌಲ್ಯಗಳಿವೆ. ವ್ಯವಹಾರಿಕ ಹೊರಬೆಲೆಯಾದರೆ ಪಾರಮಾರ್ಥಿಕ ಅದರ ಒಳ ಬೆಲೆ. ಬರೀ ಹೊರಬೆಲೆಯನ್ನು ನೋಡದೆ ಅದರ ಒಳಬೆಲೆಯನ್ನು ಗಮನಿಸಿ ಬದುಕುವುದು ಸಾತ್ವಿಕರ ಹಾದಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಜುಲೈ 4, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ಪಂಚಮಿ ಗಂ. 18-33 ನಕ್ಷತ್ರ: ಮಘಾ ಗಂ. 08-44 ಯೋಗ: ಸಿದ್ಧಿ (ಆಸ್ರಿಕ್) ಗಂ. 12-21, ಕರಣ: ಬವ ಗಂ. 05-54, ಮಿಥುನ ಮಾಸದ 19 ನೇ ದಿನ.
ರಾಹುಕಾಲ: ಬೆಳಿಗ್ಗೆ 07:30–09:00
ಸೂರ್ಯೋದಯ: 06-12 **ಸೂರ್ಯಾಸ್ತ:** 06-58
ಮುಸ್ಲಿಂ ದಿನಾಂಕ: 04 ಜುಲ್‌ಹಿಜಾ
ಅದೃಷ್ಟ ಸಂಖ್ಯೆ: 1, 4

ಮೇಷ: ನಿಮ್ಮ ಪ್ರಾಮಾಣಿಕತೆಗೆ ಸರಿಯಾದ ಫಲಗಳು ಈ ದಿನ ದೊರೆಯುವುದು. ಸರಳ ಸ್ವಭಾವದಿಂದ ಇರುವ ನಿಮಗೆ ಸಂಬಂಧಿಕರಲ್ಲಿ ಗೌರವ ಹೆಚ್ಚಾಗುವುದು. ನೂತನ ಕಟ್ಟಡಗಳ ನಿರ್ಮಾಣದ ಗುತ್ತಿಗೆ ಲಭಿಸುತ್ತದೆ.

ವೃಷಭ: ನಿರುದ್ಯೋಗಿಗಳಿಗೆ ಉದ್ಯೋಗ ದೊರೆತು ಹೆಚ್ಚಿನ ಸಂತಸ. ಹಳೆಯ ಕೆಲಸಕ್ಕಿಂತ ಹೊಸ ಉದ್ಯೋಗದಲ್ಲಿ ಹೆಚ್ಚಿನ ಸ್ವಾತಂತ್ರ್ಯ ಹಾಗೂ ಕೆಲಸದ ವೇಳೆಯೂ ನಿಮಗೆ ಅನುಕೂಲವಾಗಿರುತ್ತದೆ.

ಮಿಥುನ: ಉನ್ನತ ಪೊಲೀಸ್ ಅಧಿಕಾರಿಯೊಬ್ಬರ ಸಹಾಯದಿಂದ ಗಂಭೀರ ಸಮಸ್ಯೆಯೊಂದಕ್ಕೆ ಉತ್ತರ ದೊರೆತು ಬಗೆ ಹರಿಯುವುದು. ನಟ ನಟಿಯರಿಗೆ ವಿಪುಲ ಅವಕಾಶಗಳು ದೊರೆಯಲಿವೆ.

ಕರ್ಕಾಟಕ: ಇಂದಿನ ನಿಮ್ಮ ಸಲಹೆ ಸೂಚನೆಗಳನ್ನು ಹೆಚ್ಚು ಚರ್ಚಿಸದೆ ಮೇಲಧಿಕಾರಿಗಳು ಒಪ್ಪಿಕೊಳ್ಳುವರು. ಕಾರ್ಮಿಕರ ಬೇಡಿಕೆಗಳನ್ನು ಪರಿಶೀಲಿಸುವಿರಿ. ಹಣದ ವಿಚಾರದಲ್ಲಿ ಮಿತ ವ್ಯಯಿಗಳಾಗುವಿರಿ.

ಸಿಂಹ: ನಿಮ್ಮ ಅಧಿಕಾರಿಗಳು ನೀವಿಟ್ಟಿರುವ ಕರ್ತವ್ಯನಿಷ್ಠೆಯ ಬಗ್ಗೆ ಗಮನಿಸಲ್ಲಿದ್ದಾರೆ. ವ್ಯವಹಾರದಲ್ಲಿ ಯೋಚಿಸಿ ಮಾತನಾಡುವುದರಿಂದ ಸಮಸ್ಯೆಗಳಿಗೆ ಆಸ್ಪದಗಳಿರುವುದಿಲ್ಲ. ಧಾರ್ಮಿಕ ಕಾರ್ಯದಲ್ಲಿ ಆಸಕ್ತಿ.

ಕನ್ಯಾ: ನಿಮ್ಮೆದುರಿಗಿರುವ ಸವಾಲನ್ನು ಎದುರಿಸುವ ಶಕ್ತಿ ಹಾಗೂ ಪರಿಸ್ಥಿತಿಗೆ ಹೊಂದಿಕೊಳ್ಳುವ ಸ್ವಭಾವವು ನಿಮ್ಮಲ್ಲಿದೆ. ದಂತ ವೈದ್ಯರಿಗೆ ಈ ದಿನ ಅನುಕೂಲವಾಗಿರುವುದು.

ತುಲಾ: ಸಾರಿಗೆ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ಬಡ್ತಿ. ನಿಮ್ಮ ಸಹಭಾಗಿಗೆ ಅಥವಾ ಮಕ್ಕಳಿಗೆ ಸಹಾಯ ಮಾಡುವುದರಲ್ಲಿ ನಿಮಗೆ ಹೆಚ್ಚಿನ ಆನಂದ ಸಿಗುವುದು. ತರಕಾರಿ ವ್ಯಾಪಾರಸ್ಥರಿಗೆ ಲಾಭಾಂಶದಲ್ಲಿ ಕೊರತೆ.

ವೃಶ್ಚಿಕ: ಮನೆಯವರ ಸಹಾಯದಿಂದ ನಿಮ್ಮ ಹಣಕಾಸಿನ ತೊಂದರೆಗಳು ದೂರಾಗಿ, ಹೊಸ ಯೋಜನೆಗೆ ಚಾಲನೆ ದೊರೆಯಲಿದೆ. ಎಲ್ಲಾ ವಿಷಯಗಳಲ್ಲಿಯೂ ಸ್ವಭಾವಕ್ಕಿಂತ ಹೆಚ್ಚಿಗೆ ಸಮಾಧಾನದಿಂದ ಇರುವುದು ಉತ್ತಮ.

ಧನು: ಇಲಾಖೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಭಡ್ತಿ ದೊರೆಯುವ ಸಂಭವ. ವ್ಯವಹಾರದಲ್ಲಿ ಹೆಚ್ಚಿನ ಬಂಡವಾಳ ಹೂಡಲು ತಂದೆಯವರ ಸಮ್ಮತಿ ಪಡೆಯುವುದು ಒಳ್ಳೆಯದು. ಹಿರಿಯರ ಅನುಗ್ರಹದಿಂದ ಬದುಕು ಉತ್ತಮ.

ಮಕರ: ಕುಟುಂಬದ ಸಮಸ್ಯೆಗಳಿಂದ ಮುಕ್ತಿ ಕಾಣಲಿದ್ದೀರಿ. ರಫ್ತು ಉದ್ಯಮದವರಿಗೆ ಅಡೆತಡೆಗಳು ಉಂಟಾಗಬಹುದು. ಹಣಕಾಸು ಪರಿಸ್ಥಿತಿ ದುರ್ಬಲವಾಗುವುದರಿಂದ ಒತ್ತಡ ತರುವಂತಹ ಯಾವುದೇ ಕೆಲಸಗಳಿಂದ ದೂರವಿರಿ.

ಕುಂಭ: ಮಾತಿನಿಂದ ಕಾರ್ಯ ಸಾಧಿಸುವ ನಿಮ್ಮ ಗುಣದಿಂದ ಲಾಭ ಕಾಣಲಿದ್ದೀರಿ. ಆಭರಣ ಮಾರಾಟಗಾರರು, ವಕೀಲ ವೃತ್ತಿಯವರಿಗೆ ಹೆಚ್ಚಿನ ಕೆಲಸವಿರುವುದು.


ಮೀನ: ಯಾವುದೇ ವಾದ ವಿವಾದಗಳು ನಡೆದರೂ ನಿಮ್ಮ ಕಾರ್ಯ ಸಾಧನೆಗೆ ಯಾವುದೂ ಅಡ್ಡಿಯಾಗಲಾರದು. ಖಾಸಗಿ ಸಂಸ್ಥೆಗಳ ಉದ್ಯೋಗಸ್ಥರಿಗೆ ಉನ್ನತ ಸ್ಥಾನಮಾನ ಪ್ರಾಪ್ತಿಯಾಗಲಿದೆ. ನಿಮ್ಮಲ್ಲಿನ ಏಕಾಗ್ರತೆ ನಿಮಗೆ ಜಯ ತರಲಿದೆ.

ಪದಬಂಧ 5008

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮರಣ ಹೊಂದುವುದು (5)
4.ಬಿಡಿಸಲು ಕಷ್ಟವಾಗಿರುವ ಪ್ರಶ್ನೆ (3)
5.ಮರಿಗೆ ನೀಡಿರುವ ವೇತನ! (3)
6.ವಾತಾಯನ ಇಲ್ಲಿದೆ (3)
7.ಮೆಣಸು ನೋಡುವಾಗ ಈ ಕಂದಮೂಲ ಕಾಣಿಸಿತೇ? (3)
9.ಹಗರಣದಲ್ಲಿ ಸಿಕ್ಕಿರುವ ದುಡ್ಡು (2)
10.ಹರಸುವಾಗ ಆಕಳು ಬಂದಿತಲ್ಲಾ! (2)
12.ಇದು ಶ್ರೇಷ್ಠವಾದುದು (3)
14.ತಿರುಗಿರುವ ಮುಖ! (3)
15.ಸರಿಸಮನಾದವನು ತಿರುಗಿ ನಿಂತಿದ್ದಾನಲ್ಲಾ! (3)
16.ಹೆಂಡತಿಯನ್ನು ಕಳೆದುಕೊಂಡವನು (3)
17.ಮಾತಿಗೆ ತಪ್ಪುವವನು (5)

ಮೇಲಿಂದ ಕೆಳಕ್ಕೆ
1.ಆಯುಧಗಳನ್ನಿಡುವ ಕಟ್ಟಡ (4)
2.ಸೂರ್ಯನ ರಶ್ಮಿ (5)
3.ಗಮಕವನ್ನು ಹೇಳುವವನು (3)
4.ಸರಿಯಾಗಿ ಹೊಂದಿಕೆಯಾದ ಕಂಠಾಭರಣ! (3)
8.ಒಳ್ಳೆಯ ಸ್ವಭಾವವಿಲ್ಲಿ ಉಲ್ಟಾಪಲ್ಟಾ ಆಗಿಬಿಟ್ಟಿದೆ (3)
9.ಭಾರವಲ್ಲದ್ದು ಇದು! (3)
10.ಇದು ಕುದುರೆಯ ಮುಖ (5)
11.ದೃಢಕಾಯವನ್ನು ಹೀಗೆ ಹೇಳಿ (4)
13.ಮರದ ಹತ್ತಿರವಿರುವ ಮೊಸಳೆ (3)
14.ವನದಲ್ಲಿರುವ ಬಟ್ಟೆ ಉಲ್ಟಾಪಲ್ಟಾ ಆಗಿಬಿಟ್ಟಿದೆ (3)



5007ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರತಿಕೃತಿ
3.ಅಂತರ್ಜ್ಯೋತಿ 4.ಮಿಡಿತ
5.ವನಚರ 7.ರಸಿಕ
9.ಕಾನನ 10.ಅರಿವೆ
11.ಸುಗಮ
3.ಮನೋಗತ 15.ಮಲರು
16.ಮಾದಕತೆ 17.ಕಡಿವಾಣ

ಮೇಲಿಂದ ಕೆಳಕ್ಕೆ:
1.ಪ್ರಭವ 2.ತಿಮಿರ
3.ಅಂತರ 6.ನಳನಳಿಸು
8.ಕಸ್ತೂರಿಮೃಗ 12.ಮಮತೆ
13.ಮರುಕ 14.ತರುಣ

ಸುಡೊಕು 5394

		3	5		6		4	7
	9			4			8	
7		4	9			5		3
	1				5			
		7		9				5
5	2		6		3			
8		1		5			6	
			1		4	8		9
4		9		6			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5393 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ವಿದ್ಯಾರ್ಥಿ ವೇತನ ಕೈಪಿಡಿ

ನ್ಯಾಷನಲ್ ಓವರ್‌ಸೀಸ್ ಸ್ಕಾಲರ್‌ಶಿಪ್ ಫಾರ್ ಎಸ್‌ಟಿ 2022-23

ವಿವರ: ವಿದೇಶದಲ್ಲಿ ಅಧ್ಯಯನ ಮಾಡಲು ಬಯಸುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹತೆ: 2022ರ ಜುಲೈ 1ಕ್ಕೆ 35 ವರ್ಷಕ್ಕಿಂತ ಕಡಿಮೆ ವಯಸ್ಸಿನ ಎಸ್‌ಟಿ ವರ್ಗದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಪದವಿ, ಸ್ನಾತಕೋತ್ತರ, ಪಿಎಚ್.ಡಿ ಮುಗಿಸಿರಬೇಕು. ಕುಟುಂಬದ ವಾರ್ಷಿಕ ಆದಾಯವು ₹6 ಲಕ್ಷಕ್ಕಿಂತ ಹೆಚ್ಚಿರಬಾರದು.


ಆರ್ಥಿಕ ಸಹಾಯ: ವಿವಿಧ ಸೌಲಭ್ಯ ಹಾಗೂ ನೆರವು (ಸಂದರ್ಭಕ್ಕೆ ಅನುಗುಣವಾಗಿ)

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30, ಜುಲೈ 2022

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ ಮಾತ್ರ

ಹೆಚ್ಚಿನ ಮಾಹಿತಿಗೆ: www.b4s.in/praja/NSS9

ಕೃಪೆ: buddy4study.com



ದೇಶದ 22 ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯಗಳಲ್ಲಿನ ಪ್ರವೇಶಕ್ಕಾಗಿ ನಡೆದ 'ಸಾಮಾನ್ಯ ಕಾನೂನು ಪ್ರವೇಶ ಪರೀಕ್ಷೆ' (ಕ್ಲಾಟ್)ಯಲ್ಲಿ ರಾಜ್ಯದ ಹಲವು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಅವರಲ್ಲಿ ಉತ್ತಮ ಸಾಧನೆ ಮಾಡಿರುವ ಇಬ್ಬರು ವಿದ್ಯಾರ್ಥಿಗಳು ತಮ್ಮ ಸಾಧನೆಯ ಹೆಜ್ಜೆಗಳು, ಪರೀಕ್ಷಾ ಸಿದ್ಧತೆಗಳನ್ನು 'ಪ್ರಜಾವಾಣಿ'ಯೊಂದಿಗೆ ಹಂಚಿಕೊಂಡಿದ್ದಾರೆ.

ಕ್ಲಾಟ್ ಹಾದಿ ಸುಗಮಗೊಳಿಸಿದ ಇಂಗ್ಲಿಷ್ ಕಲಿಕೆ

ಕ್ಲಾಟ್– ಪರೀಕ್ಷೆಯ ಪರಿಶಿಷ್ಟ ಜಾತಿ (ಎಸ್‌ಸಿ) ಕೆಟಗರಿಯಲ್ಲಿ ಮೈಸೂರು ಜಿಲ್ಲೆ ನಂಜನಗೂಡಿನ ವಿದ್ಯಾರ್ಥಿ ಜ್ಞಾನಾಂಕಿತ್ ಜಿ.ಎ. ಪ್ರಥಮ ರ‍್ಯಾಂಕ್ ಪಡೆದಿದ್ದಾರೆ. ಅಖಿಲ ಭಾರತ ಮಟ್ಟದಲ್ಲಿ 292ನೇ ರ‍್ಯಾಂಕ್ ಗಳಿಸಿ ಮಿಂಚಿರುವ ಅವರು, ಪರೀಕ್ಷೆಯ ಸ್ವರೂಪ, ಅದನ್ನು ಎದುರಿಸಲು ಹೇಗೆ ಸಿದ್ಧತೆ ಮಾಡಿಕೊಳ್ಳಬೇಕು ಎಂಬುದರ ಕುರಿತು ಮಾತನಾಡಿದ್ದಾರೆ.

ಎಂ.ಮಹೇಶ

• ನಿಮ್ಮ ಹಿನ್ನೆಲೆ ತಿಳಿಸಿರಿ.

ನಂಜನಗೂಡಿನ ನಿವಾಸಿ. ತಾಯಿ ಎಚ್.ಆರ್. ಶೈಲಜಾ ಹದಿನಾರು ಸರ್ಕಾರಿ ಪ್ರೌಢಶಾಲೆಯಲ್ಲಿ ಗಣಿತ ಶಿಕ್ಷಕಿ. ತಂದೆ ಅಂಕಯ್ಯ. ಸೇನೆಯಲ್ಲಿದ್ದರು. 10ನೇ ತರಗತಿವರೆಗೆ ನಂಜನಗೂಡಿನ ಸಿಟಿಜನ್ ಪಬ್ಲಿಕ್ ಶಾಲೆಯಲ್ಲಿ ಓದಿದೆ. ಈಗ ಮೈಸೂರಿನ ಡಿಎಂಎಸ್ ಶಾಲೆಯಲ್ಲಿ ಪಿಯುಸಿ ಓದುತ್ತಿರುವೆ. ವೈದ್ಯರಾಗಿರುವ ಮಾವ ಸುರೇಶ್ 'ಕ್ಲಾಟ್' ಬರೆಯುವಂತೆ ಪ್ರೋತ್ಸಾಹಿಸಿದ್ದರು. ದೊಡ್ಡಮ್ಮನ ಮಗ ಗೌತಮ್ ಕೆ.ಆರ್. ಕೂಡ 2020ರಲ್ಲಿ ಪರಿಶಿಷ್ಟ ಜಾತಿ ಕೆಟಗರಿಯಲ್ಲಿ ರ‍್ಯಾಂಕ್ ಪಡೆದು ಸದ್ಯ ಜೋಧಪುರ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದಾರೆ. ಅಣ್ಣನೂ ನನಗೆ ನೆರವಾದ.

• ಪರೀಕ್ಷೆಯ ಸ್ವರೂಪ ಹೇಗಿರುತ್ತದೆ?

ಇದು ಅಖಿಲ ಭಾರತ ಮಟ್ಟದ ಪರೀಕ್ಷೆ. ಉತ್ತಮ ರ‍್ಯಾಂಕ್‌ಗಳಿಸಿದವರು ಅಲ್ಲಿ ಬಿ.ಎ. ಎಲ್‌ಎಲ್‌ಬಿ ಸೇರಲು ಅವಕಾಶ ಸಿಗುತ್ತದೆ. ಸುಪ್ರೀಂ ಕೋರ್ಟ್‌ನಲ್ಲಿ ವಕೀಲನಾಗಬೇಕು ಎಂದುಕೊಂಡವರಿಗೆ ಅನುಕೂಲ. ಪ್ರತಿ ವರ್ಷ ಸರಾಸರಿ 60 ಸಾವಿರ ಮಂದಿ ಪರೀಕ್ಷೆ ಬರೆಯುತ್ತಾರೆ. 1,800 ಮಂದಿಗೆ ಮಾತ್ರ ಪ್ರವೇಶಕ್ಕೆ ಅರ್ಹತೆ ಸಿಗುತ್ತದೆ. ಮುಖ್ಯವಾಗಿ, ಇಂಗ್ಲಿಷ್‌ನ ಜ್ಞಾನ ಅಗತ್ಯ. 150 ಪ್ರಶ್ನೆಗಳಿಗೆ 120 ನಿಮಿಷಗಳಲ್ಲಿ ಉತ್ತರಿಸಬೇಕು. ವೇಗವಾಗಿ ಓದುವ, ಅರ್ಥ ಮಾಡಿಕೊಳ್ಳುವ ಮತ್ತು ಬರೆಯುವ ಸಾಮರ್ಥ್ಯ ಬೇಕಾಗುತ್ತದೆ. ಈ ಪರೀಕ್ಷೆಯಲ್ಲಿ ಪರಿಶಿಷ್ಟ ಜಾತಿ ವಿಭಾಗದಲ್ಲಿ ರಾಜ್ಯಕ್ಕೆ ಪ್ರಥಮ ರ‍್ಯಾಂಕ್ ಗಳಿಸಿದ ನನಗೆ ಸಿಕ್ಕಿರುವುದು 95.50 ಅಂಕಗಳು. ಅಷ್ಟು ಕಠಿಣವಾದ ಪರೀಕ್ಷೆ ಇದು. ಮೈಸೂರು, ಬೆಂಗಳೂರು, ಹುಬ್ಬಳ್ಳಿಯಂತಹ ಪ್ರಮುಖ ನಗರಗಳಲ್ಲಿ ಮಾತ್ರ ಪರೀಕ್ಷೆ ನಡೆಸಲಾಗುತ್ತದೆ. ಅರ್ಜಿ ಸಲ್ಲಿಸುವಾಗಲೇ ಸ್ಥಳ ಆಯ್ಕೆ ಮಾಡಿಕೊಳ್ಳಬಹುದು.

• ಯಾವ್ಯಾವ ವಿಷಯಗಳ ಬಗ್ಗೆ ತಿಳಿದಿರಬೇಕಾಗುತ್ತದೆ?

ಇಂಗ್ಲಿಷ್ ಗೊತ್ತಿರುವುದು ಅತ್ಯಗತ್ಯ. ಜೊತೆಗೆ, ಲೀಗಲ್ ರೀಸನಿಂಗ್, ಲಾಜಿಕಲ್ ರೀಸನಿಂಗ್, ಪ್ರಚಲಿತ ವಿದ್ಯಮಾನ, ಕ್ವಾಂಟಿಟೇಟಿವ್ ಟೆಕ್ನಿಕ್ಸ್ ವಿಭಾಗಗಳಿರುತ್ತವೆ. ಕೋಚಿಂಗ್ ಇಲ್ಲದೆ ಪರೀಕ್ಷೆ ಎದುರಿಸುವುದು ಕಷ್ಟವಾಗಬಹುದು. ಏಕೆಂದರೆ, ಕೋಚಿಂಗ್ ಸೇರಿದರೆ ಮಾರ್ಗದರ್ಶನ ಸಿಗುತ್ತದೆ. ನಾನು ಎರಡು ಅಕಾಡೆಮಿಗಳಲ್ಲಿ ಆನ್‌ಲೈನ್‌ನಲ್ಲಿ ಕೋಚಿಂಗ್ ಪಡೆದಿರುವೆ. ಪ್ರಚಲಿತ ವಿದ್ಯಮಾನಗಳನ್ನು ತಿಳಿದುಕೊಳ್ಳುವುದಕ್ಕೋಸ್ಕರ ನಿತ್ಯವೂ ಇಂಗ್ಲಿಷ್ ದಿನಪತ್ರಿಕೆಗಳನ್ನು ಓದಬೇಕು. ಪ್ರಮುಖ ವಿದ್ಯಮಾನಗಳು ಮತ್ತು ಸಾಮಾನ್ಯ ಜ್ಞಾನದ ಬಗ್ಗೆ ಗೊತ್ತಿರಬೇಕು.



ಜ್ಞಾನಾಂಕಿತ್

• ಬಡ ಮಕ್ಕಳಿಗೆ ಕೈಗೆಟಕುವುದೇ?

ಅಕಾಡೆಮಿಗಳು ನಡೆಸುವ ಸ್ಕಾಲರ್‌ಶಿಪ್ ಟೆಸ್ಟ್ ಪರೀಕ್ಷೆಯಲ್ಲಿ ತೇರ್ಗಡೆಯಾದರೆ ಶುಲ್ಕದಲ್ಲಿ ರಿಯಾಯಿತಿ ಸಿಗುತ್ತದೆ. ಎನ್‌ಟಿಎಸ್‌ಇ (National Talent Search Examination) ಪಾಸಾದವರಿಗೂ ಶುಲ್ಕ ಕಡಿಮೆ ಮಾಡಲಾಗುತ್ತದೆ. ನಾನು ಆ ಪರೀಕ್ಷೆ ಪಾಸಾಗಿದ್ದು ಅನುಕೂಲವಾಯಿತು. ಕೋಚಿಂಗ್ ಅಕಾಡೆಮಿ ಸೇರಲು ಹಣ ಬೇಕಾಗುತ್ತದೆ. ಸ್ವಯಂ ಕಲಿಕೆಗೂ ಪುಸ್ತಕಗಳು ಲಭ್ಯ ಇವೆ. ರೀಡಿಂಗ್ ಕಾಂಪ್ರಹೆನ್ಶನ್, ಆರ್. ಎಸ್. ಅಗರ್‌ವಾಲ್ ಲಾಜಿಕಲ್ ರೀಜನಿಂಗ್ ಪುಸ್ತಕಗಳಿಂದ ನೆರವಾಗುತ್ತದೆ. ಪ್ರಚಲಿತ ವಿದ್ಯಮಾನ ತಿಳಿದುಕೊಳ್ಳಲು ದಿನಪತ್ರಿಕೆ ಓದಬೇಕು.

• ಯಾವಾಗ ಸಿದ್ಧತೆ ಆರಂಭಿಸಿದ್ದಿರಿ?

ಸದ್ಯ ಪಿಯುಸಿ 2ನೇ ವರ್ಷದಲ್ಲಿದ್ದೇನೆ. ಹೋದ ವರ್ಷ ಆಗಸ್ಟ್‌ನಿಂದಲೇ ಕ್ಲಾಟ್‌ಗೆ ಸಿದ್ಧತೆ ಆರಂಭಿಸಿದ್ದೆ. ಜೂನ್ 19ರಂದು ಪರೀಕ್ಷೆ ನಡೆದಿತ್ತು. ನಿಗದಿತ ಶುಲ್ಕ ಪಾವತಿಸಿ, ಶ್ರೀರಾಮ ಲಾ ಅಕಾಡೆಮಿ ಹಾಗೂ ಲಾ ಪ್ರಿಪ್ ಟ್ಯುಟೋರಿಯಲ್‌ನಲ್ಲಿ ಆನ್‌ಲೈನ್ ಕೋಚಿಂಗ್ (ಸಂಜೆ ವೇಳೆ ತರಗತಿಗಳು) ಸೇರಿದ್ದೆ. ಒಂದು ತಿಂಗಳು ಆಫ್‌ಲೈನ್ ಕೋಚಿಂಗ್‌ಗೆ ಹೋಗಿದ್ದೆ. ಆಗಸ್ಟ್‌ನಿಂದ ಡಿಸೆಂಬರ್‌ವರೆಗೆ ನಿತ್ಯ 2 ರಿಂದ 3 ಗಂಟೆ, ಬಳಿಕ 4 ರಿಂದ 5 ಗಂಟೆ ಮತ್ತು ಪರೀಕ್ಷೆ ಇನ್ನೊಂದು ತಿಂಗಳಿದ್ದಾಗ 8 ರಿಂದ 10 ಗಂಟೆವರೆಗೆ ಕ್ಲಾಟ್‌ಗಾಗಿಯೇ ಅಭ್ಯಾಸ ಮಾಡುತ್ತಿದ್ದೆ. ದಿನಪತ್ರಿಕೆಗಳನ್ನು ಓದುತ್ತಿದ್ದೆ. ಇಂಗ್ಲಿಷ್ ಸಾಹಿತ್ಯದ ಪುಸ್ತಕಗಳನ್ನು ಓದುತ್ತಿದ್ದೆ. ಇದು ಇಂಗ್ಲಿಷ್ ಪ್ಯಾಸೇಜ್‌ಗಳನ್ನು ಬರೆಯುವಾಗ ನೆರವಾಗುತ್ತದೆ.

• ಪಿಯುಸಿ ಓದಿಗೆ ತೊಂದರೆ ಆಗುವುದಿಲ್ಲವೇ?

'ಕ್ಲಾಟ್' ಉದ್ದೇಶ ಇದ್ದಿದ್ದರಿಂದಲೇ ಪಿಯುಸಿಯಲ್ಲಿ ಕಲಾ ವಿಭಾಗ ಸೇರಿದ್ದೆ. ಪ್ರತಿ ವರ್ಷ ಡಿಸೆಂಬರ್‌ನಲ್ಲಿ ಮಾತ್ರ ಕ್ಲಾಟ್ ಪರೀಕ್ಷೆ ನಡೆಯುತ್ತದೆ. ಈ ಬಾರಿ ವಿಶೇಷವಾಗಿ ಜೂನ್‌ನಲ್ಲೊಂದು ಪರೀಕ್ಷೆ ನಡೆಸಿದ್ದರು. ಅನುಭವಕ್ಕಾಗಿ ಹಾಜರಾಗಿದ್ದೆ. ಒಳ್ಳೆಯ ಫಲಿತಾಂಶವೇ ಬಂದಿದೆ. ಫಲಿತಾಂಶ ವೃದ್ಧಿಸಿಕೊಳ್ಳಲು ಡಿಸೆಂಬರ್‌ನಲ್ಲೂ ಬರೆಯುತ್ತೇನೆ. ಕೋರ್ಸ್ ಪ್ರವೇಶಕ್ಕೆ ಆ ಪರೀಕ್ಷೆಯ ಫಲಿತಾಂಶವನ್ನಷ್ಟೆ ಪರಿಗಣಿಸಲಾಗುತ್ತದೆ. ಬಹುತೇಕರು ವಿಜ್ಞಾನದ ಕ್ಷೇತ್ರಕ್ಕೆ ಗಮನಹರಿಸುತ್ತಿದ್ದಾರೆ. ಕಾನೂನು ಕ್ಷೇತ್ರದಲ್ಲೂ ಬಹಳಷ್ಟು ಒಳ್ಳೆಯ ಅವಕಾಶಗಳಿವೆ. ಅದನ್ನು ಬಳಸಿಕೊಳ್ಳಲು 'ಕ್ಲಾಟ್' ಪಾಸಾಗಬೇಕಾಗುತ್ತದೆ.

• ಸಾಮಾಜಿಕ ಜಾಲತಾಣ ಬಳಕೆ ಅನುಕೂಲವೋ, ಅನನುಕೂಲವೋ?

ಹೇಗೆ ಬಳಸಿಕೊಳ್ಳುತ್ತೇವೆ ಎನ್ನುವುದರ ಮೇಲೆ ಅವಲಂಬಿತವಾಗುತ್ತದೆ. ನಾನು, ಮಾದರಿ ಪ್ರಶ್ನೆಪತ್ರಿಕೆ ಮತ್ತು ಉತ್ತರಪತ್ರಿಕೆಗಳನ್ನು ವಾಟ್ಸ್‌ಆ್ಯಪ್, ಟೆಲಿಗ್ರಾಂ ಮೂಲಕವೇ ತರಿಸಿಕೊಳ್ಳುತ್ತಿದ್ದೆ. ಒಳಿತನ್ನಷ್ಟೆ ಪಡೆದುಕೊಳ್ಳಲು ಅವಕಾಶವಿದೆ.

'ಸಾಮಾನ್ಯ ಜ್ಞಾನಕ್ಕೆ ಒತ್ತು ಕೊಡಿ'

ಬೆಂಗಳೂರಿನ ಸಂಜನಾ ರಾವ್ ಕ್ಲಾಟ್– ಪರೀಕ್ಷೆಯಲ್ಲಿ ರಾಜ್ಯಕ್ಕೆ ಟಾಪರ್. ಅಖಿಲ ಭಾರತ ಮಟ್ಟದಲ್ಲಿ 7ನೇ ರ‍್ಯಾಂಕ್ ಪಡೆದವರು. ವಿಜ್ಞಾನದ ವಿದ್ಯಾರ್ಥಿನಿಯಾಗಿದ್ದ ಅವರು, ಕಲಿಕೆಯ ಖುಷಿಗಾಗಿ ಕಾನೂನು ಶಿಕ್ಷಣ ಆಯ್ಕೆ ಮಾಡಿಕೊಂಡವರು. ತಮ್ಮ ಈ ಸಾಧನೆಯ ಹೆಜ್ಜೆಗಳು, ಪರೀಕ್ಷಾ ಸಿದ್ಧತೆ ಕುರಿತು ಇಲ್ಲಿ ಹಂಚಿಕೊಂಡಿದ್ದಾರೆ.

ಶರತ್ ಹೆಗ್ಡೆ

• ನಿಮ್ಮ ಕುಟುಂಬದ ಹಿನ್ನೆಲೆ ಏನು?

ನನ್ನ ತಂದೆ ಸಾಫ್ಟ್‌ವೇರ್ ಎಂಜಿನಿಯರ್. ತಾಯಿ ಉದ್ಯಮಿ. ನಮ್ಮ ಕುಟುಂಬದಲ್ಲಿ ಕಾನೂನು ಓದಿದವರು ಯಾರೂ ಇಲ್ಲ. ನನಗೆ ಈ ಕೋರ್ಸ್ ತುಂಬಾ ಇಷ್ಟವಾಯಿತು. ಹಾಗಾಗಿ ಕ್ಲಾಟ್ ಪರೀಕ್ಷೆ ತೆಗೆದುಕೊಂಡೆ.

• ಕಾನೂನು ಓದಬೇಕು ಎಂಬ ಆಸಕ್ತಿ ಏಕೆ ಬಂದಿತು?

ನಾನು ಓದಿದ್ದು ಸಿಬಿಎಸ್‌ಇ ಪಠ್ಯಕ್ರಮ. 11ನೇ ತರಗತಿಯವರೆಗೆ ವಿಜ್ಞಾನ ಓದಿದವಳು. ಆದರೆ, ಆ ಕಲಿಕೆಯಲ್ಲಿ ನಾನು ಖುಷಿ ಅನುಭವಿಸಲಾಗಲಿಲ್ಲ. ಹಾಗಾಗಿ ನಾನು ಬೇರೆ ಕೋರ್ಸ್‌ಗಳತ್ತ ಕಣ್ಣು ಹಾಯಿಸಿದೆ. ಆಗ ಕಾನೂನು ಕಲಿಕೆಗೆ ಒಳ್ಳೆಯ ಭವಿಷ್ಯವಿದೆ ಎಂದು ಗೊತ್ತಾಯಿತು. ಆಗ ಈ ಕೋರ್ಸ್‌ಗೆ ಮನಸ್ಸು ಮಾಡಿದೆ.

• ನಿಮ್ಮ ಅಧ್ಯಯನ ಕ್ರಮ ಹೇಗಿತ್ತು?

ಇಂಥ ಪರೀಕ್ಷೆಯಲ್ಲಿ ಸಾಮಾನ್ಯ ಜ್ಞಾನ ಸ್ವಲ್ಪ ಹೆಚ್ಚೇ ತಿಳಿದುಕೊಂಡಿರಬೇಕು. ಸ್ವಲ್ಪ ಕಷ್ಟವಾಗಿಯೂ ಇರುತ್ತವೆ. ಅದರತ್ತ ಹೆಚ್ಚು ಗಮನ ಹರಿಸಿದೆ. ಸ್ನೇಹಿತರೊಂದಿಗೆ ಗುಂಪು ಅಧ್ಯಯನ ಮಾಡಿದೆ. ಅವರಿಗೂ ಕೂಡಾ ಅಖಿಲ ಭಾರತಮಟ್ಟದಲ್ಲಿ ಒಳ್ಳೆಯ ರ‍್ಯಾಂಕ್‌ಗಳು ಬಂದಿವೆ. ಸ್ವಲ್ಪ ತರಬೇತಿ ಪಡೆದೆ. 11ನೇ ತರಗತಿಯ ನಂತರ ನಾನು ಓಪನ್ ಸ್ಕೂಲ್‌ನಲ್ಲಿ ಓದಿದವಳು. ಹಾಗಾಗಿ ಈ ಪರೀಕ್ಷೆಗಾಗಿ ಪ್ರತ್ಯೇಕ ತರಬೇತಿ ಪಡೆದೆ. ಈ ಮಧ್ಯೆ ಸಾಕಷ್ಟು ಅಣಕು ಪರೀಕ್ಷೆಗಳನ್ನು ಎದುರಿಸಿದ್ದೇನೆ. ಅದು ತುಂಬಾ ಸಹಾಯವಾಯಿತು.

• ಸ್ಪರ್ಧಾತ್ಮಕ ಪರೀಕ್ಷೆಗೆ ಬರೀ ಓದು ಓದು ಓದು ಮಾತ್ರವೇ?

ಖಂಡಿತಾ ಅಲ್ಲ. ಬರೀ ಓದುತ್ತಿದ್ದರೆ ಇನ್ನಷ್ಟು ಒತ್ತಡ ಆಗುತ್ತದೆ. ನಾನು ಸಾಕಷ್ಟು ಬ್ರೇಕ್ ತೆಗೆದುಕೊಂಡಿದ್ದೇನೆ. ಬಿಡುವಿನ ವೇಳೆಯಲ್ಲಿ ಬ್ಯಾಡ್ಮಿಂಟನ್ ಆಡುತ್ತಿದ್ದೆ. ಅಲ್ಲಿಯೂ ಅಧ್ಯಯನಾಸಕ್ತರು ಸಿಕ್ಕಿದರು. ಪರೀಕ್ಷೆಯ ಮುನ್ನಾ ದಿನವೂ ಒತ್ತಡರಹಿತವಾಗಿಯೇ ಇದ್ದೆ.



ಸಂಜನಾ ರಾವ್

• ಕ್ಲಾಟ್ ಬರೆಯುವವರಿಗೆ ನಿಮ್ಮ ಸಲಹೆ?


ಸಾಮಾನ್ಯ ಜ್ಞಾನದ ಕಡೆಗೆ ಗಮನ ಕೇಂದ್ರೀಕರಿಸಿ. ಅದಕ್ಕಾಗಿಯೇ ಸಾಕಷ್ಟು ವೆಬ್‌ಸೈಟ್‌ಗಳಿವೆ. ಅವುಗಳನ್ನು ಗಮನಿಸಿ. ತರಬೇತಿ ಸಂಸ್ಥೆಗಳ ನೆರವೂ ಪಡೆಯಬಹುದು. ಕೆಲವು ತರಬೇತಿ ಸಂಸ್ಥೆಯವರೂ ಅವರದ್ದೇ ಆದ ಸಾಕಷ್ಟು ಅಧ್ಯಯನ ಪರಿಕರಗಳನ್ನು ಕೊಡುತ್ತಾರೆ. ಅವುಗಳನ್ನೂ ಬಳಸಿಕೊಳ್ಳಬಹುದು. ಆನ್‌ಲೈನ್ ಅಧ್ಯಯನ ಹೆಚ್ಚು ಪೂರಕ.

• ಮುಂದಿನ ಕನಸು?

ಸದ್ಯ ರಾಷ್ಟ್ರೀಯ ಕಾನೂನು ಶಾಲೆಗೆ ಸೇರಬೇಕು. ಇನ್ನು ಚೆನ್ನಾಗಿ ಓದಬೇಕು. ಐದು ವರ್ಷಗಳ ಬಳಿಕ ದಾರಿ ಸ್ಪಷ್ಟವಾಗಲಿದೆ.

ಚಾರ್ಟೆಡ್ ಅಕೌಂಟೆಂಟ್ (ಸಿಎ) ಅಧ್ಯಯನ ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್ ಕುಮಾರ್

1. ನಾನು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದು, ಮುಂದೆ ಚಾರ್ಟೆಡ್ ಅಕೌಂಟೆಂಟ್ ಆಗಬೇಕೆಂದಿದ್ದೇನೆ. ನಾನು ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕು?

ಹೆಸರು, ಊರು ತಿಳಿಸಿಲ್ಲ

ಚಾರ್ಟೆಡ್ ಅಕೌಂಟೆಂಟ್ (ಸಿಎ) ಕೋರ್ಸ್ ಮಾಡುವುದಕ್ಕೆ ಐದು ಪ್ರಮುಖ ಹಂತಗಳಿವೆ.

- ಎಸ್‌ಎಸ್‌ಎಲ್‌ಸಿ ನಂತರ, ಸಿಎ ಫೌಂಡೇಷನ್ ಕೋರ್ಸ್‌ಗೆ ನೋಂದಾಯಿಸಿಕೊಂಡು ಫೌಂಡೇಷನ್ ಕೋರ್ಸ್ ಪರೀಕ್ಷೆಗೆ ತಯಾರಿ ಮಾಡಿಕೊಳ್ಳಬಹುದು. ಈ ಪರೀಕ್ಷೆಗೆ ಪಿಯುಸಿ ನಂತರ ಅರ್ಹತೆ ಸಿಗುತ್ತದೆ. ಈಗಲೇ ನೋಂದಾಯಿಸುವುದರಿಂದ, ಪರೀಕ್ಷೆಯ ತಯಾರಿಗೆ ಹೆಚ್ಚಿನ ಸಮಯ ಸಿಗುತ್ತದೆ. ಫೌಂಡೇಷನ್ ಕೋರ್ಸ್ ಪರೀಕ್ಷೆಯಲ್ಲಿ ಕನಿಷ್ಠ ಶೇ 50 ಅಂಕಗಳಲ್ಲಿ ಉತ್ತೀರ್ಣರಾಗಬೇಕು ಮತ್ತು ಪ್ರತಿ ವಿಷಯದಲ್ಲಿ ಕನಿಷ್ಠ ಶೇ 40 ಅಂಕಗಳು ಇರಬೇಕು.
- ಫೌಂಡೇಷನ್ ಕೋರ್ಸ್ ನಂತರ ಸಿಎ ಮಧ್ಯಂತರ (ಇಂಟರ್‌ಮೀಡಿಯೆಟ್) ಕೋರ್ಸ್‌ಗೆ ನೋಂದಾಯಿಸಬೇಕು.
- ಮಧ್ಯಂತರ ಪರೀಕ್ಷೆಯ ನಂತರ ಮೂರು ವರ್ಷದ ಆರ್ಟಿಕಲ್‌ಶಿಪ್ ತರಬೇತಿಗಾಗಿ ಪ್ರಾಕ್ಟೀಸ್ ಮಾಡುತ್ತಿರುವ ಚಾರ್ಟೆಡ್ ಅಕೌಂಟೆಂಟ್ ಅವರಲ್ಲಿ ಸೇರಬೇಕು.
- ಕನಿಷ್ಠ ಎರಡೂವರೆ ವರ್ಷದ ತರಬೇತಿಯ ನಂತರ, ನೀವು ಸಿಎ ಅಂತಿಮ ಪರೀಕ್ಷೆಗೆ ನೋಂದಾಯಿಸಿಕೊಳ್ಳಬಹುದು.
- ಅಂತಿಮ ಪರೀಕ್ಷೆಗೆ ಮುಂಚೆ, ನಾಲ್ಕು ವಾರಗಳ ಐಟಿ ಮತ್ತು ಸಾಫ್ಟ್ ಸ್ಕಿಲ್ ಕೋರ್ಸ್ ಮಾಡಿರಬೇಕು. ಒಟ್ಟಾರೆ, ಎಸ್‌ಎಸ್‌ಎಲ್‌ಸಿ ನಂತರ ಸಿಎ ಕೋರ್ಸ್ ಮಾಡಲು, 6 ವರ್ಷ ಬೇಕಾಗಬಹುದು.

ಈ ವೃತ್ತಿಯಲ್ಲಿ ಯಶಸ್ವಿಯಾಗಲು ನಿಷ್ಠೆ, ಪ್ರಾಮಾಣಿಕತೆಯ ಜೊತೆಗೆ ಸಂಖ್ಯಾ ಕೌಶಲ, ವಿಶ್ಲೇಷಣಾತ್ಮಕ ಕೌಶಲ, ಆರ್ಥಿಕ ನಿರ್ವಹಣೆ ಮತ್ತು ವ್ಯಾಪಾರೋದ್ಯಮ ಕೌಶಲಗಳನ್ನು ಬೆಳೆಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ, ಈ ವಿಡಿಯೊ ವೀಕ್ಷಿಸಿ: https://www.youtube.com/c/EducationalExpertManagementCareerConsultant

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಕೃಷಿ ಸಂಬಂಧಿತ ಪದವಿಗಳಿಗೆ ಪ್ರವೇಶಾವಕಾಶ

ಕೃಷಿಕರ ಕೋಟಾ: ಸಿಇಟಿ ಪ್ರಾಯೋಗಿಕ ಪರೀಕ್ಷೆ



ನಾಗೇಂದ್ರ ಟಿ.ಸಿ

ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶ ಪ್ರಕಟವಾಗಿದೆ. ಎಂಜಿನಿಯರಿಂಗ್, ಮೆಡಿಕಲ್ ಮತ್ತಿತರ ಪದವಿ ತರಗತಿಗಳಿಗೆ ಪ್ರವೇಶ ಬಯಸುವವರು 'ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ)' ಬರೆದಾಗಿದೆ. ಫಲಿತಾಂಶದ ನಿರೀಕ್ಷೆಯಲ್ಲಿದ್ದಾರೆ. ಈ ನಡುವೆ ಜುಲೈ 12ರಂದು ಬೆಳಿಗ್ಗೆ 9 ಗಂಟೆಗೆ, ರಾಜ್ಯದ ಎಲ್ಲ ಕೃಷಿ ಸಂಬಂಧಿತ ವಿಶ್ವವಿದ್ಯಾಲಯಗಳ 16 ಕೇಂದ್ರಗಳಲ್ಲಿ ಮತ್ತೊಂದು ಸಿಇಟಿ ಪ್ರಾಯೋಗಿಕ ಪರೀಕ್ಷೆ ನಡೆಯಲಿದೆ.

ಕೃಷಿ ಸಂಬಂಧಿತ ಪದವಿ ಮತ್ತು ಸ್ನಾತಕೋತ್ತರ ಪದವಿ ಪ್ರವೇಶಿಸಲು ಬಯಸುವ ರೈತರ ಮಕ್ಕಳಿಗೆ ಶೇ 50ರಷ್ಟು ಸೀಟುಗಳನ್ನು ಮೀಸಲಿರಿಸಲಾಗಿದೆ. ಈ ಕೋಟಾದಡಿ ಪ್ರವೇಶ ಬಯಸುವ ವಿದ್ಯಾರ್ಥಿಗಳು ಕರ್ನಾಟಕ ಪರೀಕ್ಷಾ ಮಂಡಳಿ ನಡೆಸುವ ಈ ಸಿಇಟಿ ಪ್ರಾಯೋಗಿಕ ಪರೀಕ್ಷೆ ಬರೆಯಬೇಕು.

ಈ ಪರೀಕ್ಷೆಯು 50 ಪ್ರಶ್ನೆಗಳ 200 ಅಂಕಗಳಿಗೆ ವಿನ್ಯಾಸಗೊಂಡಿದ್ದು, ಕೃಷಿಕರು ಮತ್ತು ಕೃಷಿ ಕೂಲಿ ಕಾರ್ಮಿಕರ ಮಕ್ಕಳಿಗೆ ಮಾತ್ರ ಅವಕಾಶವಿರುತ್ತದೆ. ಉತ್ತಮ ಪ್ರದರ್ಶನ ನೀಡುವ ವಿದ್ಯಾರ್ಥಿಗಳಿಗೆ ಕೃಷಿ ವಿಜ್ಞಾನ ಪದವಿಗಳಿಗೆ ಸಿಇಟಿ ಅಂಕಪಟ್ಟಿಯಲ್ಲಿ ಪ್ರತ್ಯೇಕ ರ‍್ಯಾಂಕ್ ನೀಡಲಾಗುತ್ತದೆ. ಈ ರ‍್ಯಾಂಕ್‌ಗಳ ಸಹಾಯದಿಂದ ವಿದ್ಯಾರ್ಥಿಗಳು ರಾಜ್ಯದ ಸರ್ಕಾರಿ ಕೃಷಿ ವಿಶ್ವವಿದ್ಯಾಲಯಗಳಲ್ಲಿನ ಅಗ್ರಿಕಲ್ಚರ್ (ಕೃಷಿ), ಹಾರ್ಟಿಕಲ್ಚರ್ (ತೋಟಗಾರಿಕೆ), ಸೆರಿಕಲ್ಚರ್ (ರೇಷ್ಮೆ), ವೆಟರ್ನರಿ ಸೈನ್ಸ್ (ಪಶುವೈದ್ಯಕೀಯ), ಫುಡ್ ಟೆಕ್ನಾಲಜಿ (ಆಹಾರ ತಂತ್ರಜ್ಞಾನ), ಫಾರೆಸ್ಟ್ರಿ (ಅರಣ್ಯ ವಿಜ್ಞಾನ), ಫಿಷರೀಸ್ (ಮೀನುಗಾರಿಕೆ), ಹೋಮ್ ಸೈನ್ಸ್ (ಗೃಹ ವಿಜ್ಞಾನ), ಅಗ್ರಿಕಲ್ಚರ್ ಎಂಜಿನಿಯರಿಂಗ್, ಡೇರಿ ಟೆಕ್ನಾಲಜಿ (ಪಶುಸಂಗೋಪನೆ ತಂತ್ರಜ್ಞಾನ), ಬಯೋ ಟೆಕ್ನಾಲಜಿ ಹಾಗೂ ಅಗ್ರಿಕಲ್ಚರಲ್ ಮಾರ್ಕೆಟಿಂಗ್ ವಿಭಾಗಗಳಲ್ಲಿ ಪದವಿ ಪಡೆಯಲು ಅರ್ಹರಾಗುತ್ತಾರೆ.

ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ ಕೃಷಿ ವಿಶ್ವವಿದ್ಯಾನಿಲಯ, ಬಾಗಲಕೋಟೆ ತೋಟಗಾರಿಕಾ ವಿಶ್ವವಿದ್ಯಾನಿಲಯ, ಶಿವಮೊಗ್ಗ ಹಾಗೂ ಬೀದರ್‌ನ ಪಶುಸಂಗೋಪನಾ ವಿಶ್ವವಿದ್ಯಾನಿಲಯ, ರಾಯಚೂರಿನ ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ವಿಶೇಷ ಪದವಿಗಳಿಗೆ ಪ್ರವೇಶಾವಕಾಶದ ಜೊತೆಗೆ ಈ ವಿಶ್ವವಿದ್ಯಾನಿಲಯಗಳ ಸಬ್ ಕ್ಯಾಂಪಸ್ಸುಗಳಲ್ಲಿ (ಮಂಡ್ಯ, ಹಾಸನ, ಹಿರಿಯೂರು, ಕೋಲಾರ, ಹೊಸಪೇಟೆ, ಗಂಗಾವತಿ, ಕಲಬುರಗಿ, ಶಿರಸಿ, ಮೂಡಿಗೆರೆ, ಚಿಂತಾಮಣಿ, ಬೆಳಗಾವಿ, ಇಲವಾಲ (ಮೈಸೂರು), ಕೊಪ್ಪಳ, ಪೊನ್ನಂಪೇಟೆ, ವಿಜಯಪುರ, ಹಾವೇರಿ ಹಾಗೂ ಭೀಮರಾಯನಗುಡಿ) ಪ್ರವೇಶಾವಕಾಶವಿದೆ.

ಈ ಪದವಿಗಳನ್ನು ಪಡೆಯುವ ವಿದ್ಯಾರ್ಥಿಗಳು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಹುದ್ದೆಗಳ ಜೊತೆಗೆ ಬ್ಯಾಂಕಿನಲ್ಲಿ ಫೀಲ್ಡ್ ಆಫೀಸರ್ಸ್, ಪಶುವೈದ್ಯರು, ಕೃಷಿ ವಿಜ್ಞಾನಿಗಳು, ಬೀಜ-ಗೊಬ್ಬರ-ಕೀಟನಾಶಕ ಕಂಪನಿಗಳಲ್ಲಿ ತಂತ್ರಜ್ಞರು, ಖಾದ್ಯ ವಲಯಗಳಲ್ಲಿ ಅಧಿಕಾರಿಗಳಾಗಿ ಸೇವೆ ಸಲ್ಲಿಸುವ ಅವಕಾಶ ಪಡೆಯುತ್ತಾರೆ.

ಪರೀಕ್ಷೆಗೆ ಅಗತ್ಯವಿರುವ ಎಲ್ಲ ದಾಖಲಾತಿಗಳನ್ನು ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡುವ ಪ್ರಕ್ರಿಯೆ ಜು.1ರಿಂದ ಆರಂಭವಾಗಿದೆ. ಜುಲೈ 5 (ಮಧ್ಯರಾತ್ರಿ 12 ಗಂಟೆಯೊಳಗೆ) ದಾಖಲಾತಿ ಸಲ್ಲಿಕೆಗೆ ಕೊನೆ ದಿನವಾಗಿದೆ. ಕೃಷಿ ಕೋಟಾದಡಿ ಅರ್ಹ / ಅರ್ಹರಲ್ಲದ ವಿದ್ಯಾರ್ಥಿಗಳ ಪಟ್ಟಿಯನ್ನು ಎಲ್ಲಾ ಕೃಷಿ ಮತ್ತು ಕೃಷಿ ಸಂಬಂಧಿತ ವಿಶ್ವ ವಿದ್ಯಾಲಯಗಳು ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧಿಕೃತ ಅಂತರ್ಜಾಲದಲ್ಲಿ ಜುಲೈ 8ರಂದು ಪ್ರಕಟಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ಈ ಮೇಲ್ ಮೂಲಕ ಸಂಪರ್ಕಿಸಬಹುದು: nagendra.tc@pranavasya.in

(ಲೇಖಕರು: ಸಂಸ್ಥಾಪಕರು ಹಾಗೂ ಕಾರ್ಯನಿರ್ವಾಹಕ ಅಧಿಕಾರಿ, ಪ್ರಣವಸ್ಯ ಅಕಾಡೆಮಿ, ತುಮಕೂರು)

ಆನ್‌ಲೈನ್ ಪರಿಶೀಲನೆಗೆ ಸಲ್ಲಿಸಬೇಕಾದ ದಾಖಲೆಗಳು

1. ಸಿಇಟಿ ಪರೀಕ್ಷಾ ಪ್ರವೇಶ ಪತ್ರ
2. ವ್ಯವಸಾಯಗಾರರ ಪ್ರಮಾಣ ಪತ್ರ - ಕಂದಾಯ ಇಲಾಖೆ ಆರ್‌ಡಿ ಸಂಖ್ಯೆಯೊಂದಿಗೆ ನೀಡುವ ಪತ್ರ
3. ಅವಿಭಾಜ್ಯ ಕುಟುಂಬವಾದಲ್ಲಿ ಪೂರಕವಾಗಿ ವಂಶವೃಕ್ಷ ಪ್ರಮಾಣ ಪತ್ರ ಕಡ್ಡಾಯವಾಗಿ
4. ಆದಾಯ ಪ್ರಮಾಣ ಪತ್ರ - ಕಂದಾಯ ಇಲಾಖೆ ಆರ್‌ಡಿ ಸಂಖ್ಯೆ ಹಾಗೂ ಕ್ಯೂಆರ್ ಕೋಡ್‌ನೊಂದಿಗೆ ನೀಡುವ ಪತ್ರ
5. ಅಫಿಡವಿಟ್ - 1, ಆದಾಯ ಪ್ರಮಾಣ ಪತ್ರದೊಂದಿಗೆ, ಅಭ್ಯರ್ಥಿ / ಪೋಷಕರು ಕಡ್ಡಾಯವಾಗಿ ಕೇವಲ ಕೃಷಿಯೊಂದೇ ಆದಾಯ ಮೂಲವೆಂದು ಸ್ವಯಂಘೋಷಣೆಯೊಂದಿಗೆ ಕಡ್ಡಾಯವಾಗಿ ಲಗತ್ತಿಸಬೇಕು
6. ವೇತನ ದೃಢೀಕರಣ ಪತ್ರ (ನೌಕರಿಯಿದ್ದಲ್ಲಿ)
7. ಖಾಸಗಿ ವೃತ್ತಿಯಿಂದ ಆದಾಯ ಪತ್ರ
8. ಅಫಿಡವಿಟ್ - 2 ಆದಾಯ ಪ್ರಮಾಣ (ಕೃಷಿ ಮತ್ತು ನೌಕರಿಯಿಂದ ಒಟ್ಟು ಆದಾಯ)

ಅಭ್ಯರ್ಥಿಗಳು ಆನ್‌ಲೈನ್ ಪರಿಶೀಲನೆಗೆ ಸಲ್ಲಿಸಬೇಕಾದ ಶುಲ್ಕ ₹1000 (ಸಾಮಾನ್ಯ ವರ್ಗ) ಹಾಗೂ ಇತರೆ ₹ 500 (ಪ.ಜಾ/ಪ.ವ) ಶುಲ್ಕವನ್ನು ಕೃಷಿವಿಶ್ವವಿದ್ಯಾನಿಲಯಗಳ ಅಧಿಕೃತ ಜಾಲತಾಣಗಳಲ್ಲಿ ನೀಡಲಾಗುವ ಆನ್‌ಲೈನ್ ಸೌಲಭ್ಯದ ಮೂಲಕ ಪಾವತಿಸಬಹುದು. ಶುಲ್ಕ ಪಾವತಿಸಿದ ನಂತರವೇ ರಶೀದಿ ಹಾಗೂ ದಾಖಲೆಗಳನ್ನು ಸಲ್ಲಿಸಿದ ಮಾಹಿತಿಯನ್ನು ಅಭ್ಯರ್ಥಿಗಳು ಡೌನ್‌ಲೋಡ್ ಮಾಡಿಕೊಳ್ಳಲು ಸಾಧ್ಯ.

ಸಾರಂಗ ಜೀರುಂಡೆ

ನೂರ್ ಸಮದ್ ಅಬ್ಬಲಗೆರೆ



ಗಂಡು ಸಾರಂಗ ಜೀರುಂಡೆ



ಹೆಣ್ಣು ಸಾರಂಗ ಜೀರುಂಡೆ

ಅಬ್ಬಾ! ನೋಡಲು ಎಷ್ಟು ಭಯಾನಕವಾಗಿವೆ ಈ ಕೀಟಗಳು. ಗಂಡು ಸಾರಂಗ ಅಥವ ಜಿಂಕೆಗಳಿಗಿರುವ ಕವಲೊಡೆದ ಕೋಡುಗಳಿವೆಯೆಲ್ಲಾ. ಆಕಸ್ಮಾತ್ ನಾವೇನಾದರೂ ಇದನ್ನು ಕೈಗೆತ್ತುಕೊಂಡರೆ ನಮ್ಮ ಬೆರಳನ್ನೇ ಕತ್ತರಿಸಬಹುದೆ? ಎಂದೆಲ್ಲಾ ನಮ್ಮ ಮನದಲ್ಲಿ ಹಲವಾರು ಪ್ರಶ್ನೆಗಳು ಮೂಡಿಸುತ್ತದೆ ಈ ಜೀರುಂಡೆ.

ಆದರೆ, ಇವು ಕೋಡುಗಳಲ್ಲ. ಇವಕ್ಕಿರುವ ಎರಡು ದವಡೆಗಳಿವು. ಇವಕ್ಕೆ ಸ್ಟ್ಯಾಗ್ ಬೀಟಲ್ (Stag Beetles)ಗಳೆಂದು ಕರೆಯುತ್ತಾರೆ. ನಾನು ಇದಕ್ಕೆ ಸಾರಂಗ ಜೀರುಂಡೆ ಎಂದು ಹೆಸರಿಸಿದ್ದೇನೆ. ಲುಕ್ಯಾನಿಡೆ (Lucanidae) ಇದರ ಕುಟುಂಬ. ಇಂತಹ ಬಲಿಷ್ಠ ಭಯಾನಕ ದವಡೆಗಳಿದ್ದರೂ ಇವು ಮನುಷ್ಯರಿಗಾಗಲೀ ಅಥವ ಇತರೇ ಕೀಟಗಳಿಗಾಗಲೀ ಯಾವುದೇ ಹಾನಿಯನ್ನುಂಟು ಮಾಡುವುದಿಲ್ಲ. ಏಕೆಂದರೆ, ಇದು ಪರಭಕ್ಷಕ ಕೀಟವೂ ಅಲ್ಲ. ಈ ಪ್ರೌಢ ಜೀರುಂಡೆಗಳು ತಿನ್ನುವುದು ಕೊಳೆತ ಹಣ್ಣು ಹಂಪಲುಗಳು ಮತ್ತು ಮರದಿಂದ ಸೋರುವ ಅಂಟಿನ ರಸ ಮಾತ್ರ.

ಕೀಟ–ನೋಟ

ಇದು ಒಂದು ರೀತಿಯ ಸಾಧು ಕೀಟ ಎನ್ನುವುದರಲ್ಲಿ ತಪ್ಪೇನಿಲ್ಲ. ಆದರೇಕೆ ಇಷ್ಟು ಭಯಾನಕವಾದ ದವಡೆಗಳಿವೆ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಏಕೆಂದರೆ, ತನ್ನ ಆಹಾರ ಇತರೇ ಕೀಟಗಳು ಕಸಿದುಕೊಳ್ಳಬಾರದೆಂದು ಜಗಳವಾಡಲು ಈ ದವಡೆಗಳು ಒಂದೆಡೆ ಸಹಾಯವಾದರೇ, ಮತ್ತೊಂದೆಡೆ ಬಹಳ ಮುಖ್ಯವಾದ ದೃಶ್ಯಾವಳಿಗಳನ್ನು ನಾವು ನೋಡಬಹುದಾಗಿದೆ.

ಗಂಡು ಹೆಣ್ಣಿನ ಸಮಾಗಮ ಸಮಯದಲ್ಲಿ, ಹೆಣ್ಣು ಜೀರುಂಡೆಯು ಗಂಡನ್ನು ಆಕರ್ಷಿಸಲು ವಿಶೇಷವಾದ ರಾಸಾಯನಿಕ ವಸ್ತು (Pheromone) ವನ್ನು ದೇಹದಿಂದ ಹೊರಸೂಸುತ್ತದೆ. ಇದಕ್ಕುನುಗುಣವಾಗಿ ಆ ಸಮಯಕ್ಕೆ ಎರಡು ಅಥವ ಮೂರು ಗಂಡುಗಳೇನಾದರೂ ಎದುರಾದರೇ, ಅಲ್ಲಿ ಹೆಣ್ಣನ್ನು ಪಡೆಯಲು ಯುದ್ಧ ಶುರುವಾಗುತ್ತದೆ. ಇದು ಮನುಷ್ಯರಲ್ಲಷ್ಟೇ ಅಲ್ಲದೇ ಕೀಟಗಳಲ್ಲಿರುವುದೂ ವಿಸ್ಮಯ. ಇದನ್ನು ಕೀಟಶಾಸ್ತ್ರದಲ್ಲಿ 'ಗಂಡುಗಳ ನಡುವಣ ಸಮರ' (Male-Male Competition) ಎಂದು ಕರೆಯುತ್ತಾರೆ.

ಈ ಯುದ್ಧದಲ್ಲಿ ಪ್ರಬಲ ಗಂಡು ತನ್ನ ದವಡೆಗಳಿಂದ ದುರ್ಬಲ ಗಂಡನ್ನು ಮೇಲಕ್ಕೆತ್ತಿ ಎಸೆಯುತ್ತದೆ. ಹೆಣ್ಣು ತಾನು ಯಾವ ಗಂಡನ್ನು ಆರಿಸಿಕೊಳ್ಳಬೇಕೆಂಬ ಆಯ್ಕೆಗೆ ಈ ಜಗಳ ಸಂಪೂರ್ಣ ಕೊನೆಗೊಳ್ಳುವವರೆಗೆ ಕಾಯುತ್ತಾ ಸಮರ ಗೆದ್ದ ಗಂಡನ್ನು ಸೂಕ್ತವಾದವನು ಎಂದು ನಿರ್ಧರಿಸಿ ಅದರೊಡನೆ ಸಮಾಗಮವಾಗುತ್ತದೆ. ಈ ಪ್ರಕ್ರಿಯೆಗೆ 'ಹೆಣ್ಣಿನ ತೀರ್ಮಾನ' (Female Choice) ಎನ್ನುವರು. ಸೂಕ್ತ ಗಂಡು-ಹೆಣ್ಣಿನ ಆಯ್ಕೆಗಳಿಗೆ 'Sexual Selection in Insects' ಎನ್ನುವ ಈ ಪ್ರಕ್ರಿಯೆ ಹಲವಾರು ಕೀಟಗಳಲ್ಲಿ ಬಹಳ ವ್ಯಾಪಕವಾಗಿಯೇ ಅಧ್ಯಯನ ನಡೆಸಿದ್ದಾರೆ ಕೀಟಶಾಸ್ತ್ರಜ್ಞರು.

ಹೆಣ್ಣು ಸಾರಂಗ ಜೀರುಂಡೆಗಳು ಎಲ್ಲಿ ಕೊಳೆತ ಮರದ ದಿಮ್ಮಿಗಳಿರುತ್ತದೋ ಅದರ ಸುತ್ತಮುತ್ತ ನೆಲದ 30 ಸೆಂಟಿಮೀಟರ್ ಆಳಕ್ಕೆ ಹೊಕ್ಕಿ ಮರಿಗಳಿಗೆ ಥಟ್ಟನೆ ಆಹಾರ ಸಿಗಲೆಂದು ಮೊಟ್ಟೆಗಳನ್ನಿಡುತ್ತವೆ. ಮೊಟ್ಟೆಗಳಿಂದ ಹೊರಹೊಮ್ಮಿದ ಮರಿಗಳು ಸುಮಾರು 4 ರಿಂದ 5 ವರ್ಷಗಳ ಕಾಲ ಕೊಳೆತ ಮರದ ದಿಮ್ಮಿನೊಳಗಿದ್ದು ಅದನ್ನು ತಿನ್ನುತ್ತಾ ನೆಲದಲ್ಲಿ ಕೋಶಾವಸ್ಥೆ ಮುಗಿಸಿ ಪ್ರೌಢ ಜೀರುಂಡೆಗಳಾಗಿ ಹೊರಬರುತ್ತವೆ. ಪ್ರೌಢ ಜೀರುಂಡೆಗಳಲ್ಲಿ ಗಂಡು ಜೀರುಂಡೆಗಿಂತ ಬಹಳ ಪುಟ್ಟದಾದ ದವಡೆಗಳು ಹೆಣ್ಣು ಕೀಟಕ್ಕಿದ್ದರೂ, ಹೆಣ್ಣು ಇಲ್ಲಿ ಶಕ್ತಿಶಾಲಿಯಾದುದು ಆಶ್ಚರ್ಯ.

ಪೂರ್ಣ ಲೇಖನಕ್ಕೆ prajavani. net ನೋಡಿ

(ಲೇಖಕರು: ಕೃಷಿ ಅಧಿಕಾರಿ) ಚಿತ್ರಗಳು: ಲೇಖಕರವು

ರಾಜ್ಯವರ್ಧನ ರಾಥೋಡ್, ಇತರರ ವಿರುದ್ಧ ಎಫ್‌ಐಆರ್

ಜೈಪುರ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ತಿರುಚಿದ್ದ ವಿಡಿಯೊ ಹಂಚಿಕೊಂಡಿರುವ ಆರೋಪದಲ್ಲಿ ಬಿಜೆಪಿಯ ರಾಷ್ಟ್ರೀಯ ವಕ್ತಾರ ರಾಜ್ಯವರ್ಧನ ಸಿಂಗ್ ರಾಥೋಡ್, ಟಿ.ವಿ ವಾಹಿನಿಯ ನಿರೂಪಕ ಹಾಗೂ ಇತರರ ವಿರುದ್ಧ ಶನಿವಾರ ಇಲ್ಲಿ ಎಫ್‌ಐಆರ್ ದಾಖಲಾಗಿದೆ.

ಸ್ಥಳೀಯ ಕಾಂಗ್ರೆಸ್ ಮುಖಂಡ ರಾಮ್ ಸಿಂಗ್ ಅವರು ಬನಿಪಾರ್ಕ್ ಪೊಲೀಸ್ ಠಾಣೆಗೆ ನೀಡಿದ ದೂರಿನ ಅನ್ವಯ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಝೀ ನ್ಯೂಸ್ ವಾಹಿನಿಯ ನಿರೂಪಕ ರೋಹಿತ್ ರಂಜನ್ ಅವರು, ಎಸ್‌ಎಫ್‌ಐ ಕಾರ್ಯಕರ್ತರ ಕುರಿತು ರಾಹುಲ್ ಗಾಂಧಿ ಮಾತನಾಡಿರುವ ವಿಡಿಯೊವನ್ನು ವಾಹಿನಿಯಲ್ಲಿ ಪ್ರಸಾರ ಮಾಡಿ ಅದನ್ನು ಉದಯಪುರದಲ್ಲಿ ನಡೆದ ಟೇಲರ್ ಹತ್ಯೆ ಪ್ರಕರಣಕ್ಕೆ ಅನ್ವಯಿಸಿ ಹೇಳಿಕೆ ನೀಡಿದ್ದರು ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಈ ವಿಚಾರವಾಗಿ ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಟಿ.ವಿ. ವಾಹಿನಿಯನ್ನು ಟೀಕಿಸಿದ ಬೆನ್ನಲ್ಲೇ ಎಫ್‌ಐಆರ್ ದಾಖಲಾಗಿದೆ.

ರಾಜ್ಯವರ್ಧನ ರಾಥೋಡ್, ಮೇಜರ್ ಸುರೇಂದ್ರ ಪೂನಿಯಾ (ನಿವೃತ್ತ) ಮತ್ತು ಕಮಲೇಶ್ ಸೈನಿ ಜೊತೆ ಸೇರಿ ಮಾಧ್ಯಮ ಸಂಸ್ಥೆಯು ಪಿತೂರಿ ನಡೆಸಿದೆ. ಇವರೆಲ್ಲರೂ ಟ್ವಿಟರ್‌ನಲ್ಲಿ ತಿರುಚಿದ್ದ ವಿಡಿಯೊವನ್ನು ಹಂಚಿಕೊಂಡಿದ್ದಾರೆ. ರಾಜಕೀಯ ಲಾಭಕ್ಕಾಗಿ ಈ ರೀತಿ ಮಾಡಿದ್ದಾರೆ ಎಂದೂ ದೂರಿನಲ್ಲಿ ಹೇಳಲಾಗಿದೆ.

ರಾಹುಲ್ ಗಾಂಧಿ ಅವರು ವಯನಾಡಿನ ಯುವಕರನ್ನು ಉದ್ದೇಶಿಸಿ ಮಾತನಾಡಿದ್ದರು ಎಂಬುದು ಟಿ.ವಿ ವಾಹಿನಿಯ ನಿರೂಪಕರಿಗೆ ತಿಳಿದಿತ್ತು ಎಂದೂ ದೂರಿದ್ದಾರೆ. ಕೇರಳದಲ್ಲಿ ತಮ್ಮ ಸಂಸದರ ಕಚೇರಿ ಗುರಿಯಾಗಿಸಿ ಗಲಾಟೆ ಮಾಡಿದ್ದ ಎಸ್‌ಎಫ್‌ಐ ಕಾರ್ಯಕರ್ತರನ್ನು ಕ್ಷಮಿಸಬೇಕು ಎಂದು ರಾಹುಲ್ ಗಾಂಧಿ ಹೇಳಿದ್ದರು. ಈ ಹೇಳಿಕೆಯನ್ನು ತಿರುಚಿ ಉದಯಪುರದಲ್ಲಿ ನಡೆದ ಟೇಲರ್ ಹತ್ಯೆ ಪ್ರಕರಣಕ್ಕೆ ಅನ್ವಯಿಸಿ ಹೇಳಿದಂತೆ ವಿಡಿಯೊವನ್ನು ರೂಪಿಸಿದ್ದು, ಬಿಜೆಪಿಯ ಹಲವರು ಇದನ್ನು ಹಂಚಿಕೊಂಡಿದ್ದರು. ತಿರುಚಿದ್ದ ವಿಡಿಯೊ ಪ್ರಸಾರ ಮಾಡಿದ್ದಕ್ಕಾಗಿ ಟಿ.ವಿ ವಾಹಿನಿಯು ಕ್ಷಮೆ ಕೋರಿತ್ತು.

ಅಮರಾವತಿ ಔಷಧ ವ್ಯಾಪಾರಿ ಉಮೇಶ್ ಪ್ರಹ್ಲಾದರಾವ್ ಕೊಲ್ಹೆ ಹತ್ಯೆ ಪ್ರಕರಣ

ಪೊಲೀಸ್ ವಶಕ್ಕೆ ಸಂಚುಕೋರ

ಮುಂಬೈ (ಪಿಟಿಐ): ಪೂರ್ವ ಮಹಾರಾಷ್ಟ್ರದ ಅಮರಾವತಿಯಲ್ಲಿ ಔಷಧ ವ್ಯಾಪಾರಿ ಉಮೇಶ್ ಪ್ರಹ್ಲಾದರಾವ್ ಕೊಲ್ಹೆ ಅವರ ಹತ್ಯೆಯು ನೂಪುರ್ ಶರ್ಮಾ ಅವರನ್ನು ಬೆಂಬಲಿಸಿದ ಸಾಮಾಜಿಕ ಮಾಧ್ಯಮ ಪೋಸ್ಟ್‌ಗೆ ಸಂಬಂಧಿಸಿದಂತೆ ನಡೆದಿದೆ. ಪ್ರಕರಣದ ಸಂಚುಕೋರನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

'ಇರ್ಫಾನ್ ಖಾನ್‌ನನ್ನು ಜುಲೈ 7ರ ವರೆಗೂ ಪೊಲೀಸ್ ವಶಕ್ಕೆ ನೀಡಿ ಅಮರಾವತಿ ಜಿಲ್ಲಾ ನ್ಯಾಯಾಲಯವು ಆದೇಶಿಸಿದೆ' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇರ್ಫಾನ್ ಶೇಖ್ ರಹೀಮ್ ಅಲಿಯಾಸ್ ಇರ್ಫಾನ್ ಖಾನ್ ಪ್ರಕರಣದ ಏಳನೇ ಆರೋಪಿಯಾಗಿದ್ದಾನೆ. ಅಮರಾವತಿ ನಗರ ಅಪರಾಧ ವಿಭಾಗದ ಪೊಲೀಸರು ಸ್ಥಳೀಯ ನಿವಾಸಿ ಇರ್ಫಾನ್ ಖಾನ್ ನನ್ನು (32) ನಾಗ್ಪುರದಲ್ಲಿ ಸಂಜೆ ಬಂಧಿಸಿದರು. ಅಮರಾವತಿಯಲ್ಲಿ ಮೆಡಿಕಲ್ ಶಾಪ್ ನಡೆಸುತ್ತಿದ್ದ ಉಮೇಶ್ ಪ್ರಹ್ಲಾದರಾವ್ ಕೊಲ್ಹೆ (54) ಅವರನ್ನು ಕೊಲೆ ಮಾಡಲು ಈತ ಸಂಚು ರೂಪಿಸಿದ್ದ ಎಂದು ನಗರ ಪೊಲೀಸ್ ಆಯುಕ್ತ ಡಾ.ಆರತಿ ಸಿಂಗ್ ಹೇಳಿದ್ದಾರೆ.

ಇರ್ಫಾನ್ ಖಾನ್ ಸರ್ಕಾರೇತರ ಸಂಸ್ಥೆ (ಎನ್‌ಜಿಒ)'ರಹ್‌ಬಾರ್' ನಿರ್ದೇಶಕನಾಗಿದ್ದು, ಪೊಲೀಸರು ಸಂಘಟನೆಯ ಬ್ಯಾಂಕ್ ಖಾತೆಯ ಕುರಿತೂ ತನಿಖೆ ನಡೆಸುತ್ತಿದ್ದಾರೆ ಎಂದೂ ಹಿರಿಯ ಅಧಿಕಾರಿ ತಿಳಿಸಿದ್ದಾರೆ.

'ರಾಜಸ್ಥಾನದ ಟೇಲರ್ ಕನ್ಹಯ್ಯ ಲಾಲ್ ಹತ್ಯೆ ಮತ್ತು ಉಮೇಶ್ ಪ್ರಹ್ಲಾದರಾವ್ ಕೊಲ್ಹೆ ಅವರ ಹತ್ಯೆಗೆ ಸಾಮ್ಯತೆ ಇದೆ. ಇಬ್ಬರೂ ವಿವಾದಾತ್ಮಕ ಹೇಳಿಕೆ ನೀಡಿದ್ದಕ್ಕಾಗಿ ಬಿಜೆಪಿಯಿಂದ ಅಮಾನತುಗೊಂಡಿರುವ ನೂಪುರ್ ಶರ್ಮಾ ಅವರನ್ನು ಬೆಂಬಲಿಸಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಹಾಕಿದ್ದರು' ಎಂದು ಅವರು ತಿಳಿಸಿದ್ದಾರೆ.

ಅಮರಾವತಿಯ ಶ್ಯಾಮ್ ಚೌಕ್ ಪ್ರದೇಶದ ಘಂಟಾಘರ್ ಬಳಿ ಜೂನ್ 21 ರಂದು ರಾತ್ರಿ 10.30 ರ ಸುಮಾರಿಗೆ ಪ್ರಹ್ಲಾದರಾವ್ ಕೊಲ್ಹೆ ಅವರನ್ನು ಇರಿದು ಹತ್ಯೆ ಮಾಡಲಾಗಿತ್ತು. ಪ್ರವಾದಿ ಮಹಮ್ಮದ್ ಕುರಿತು ವಿವಾದಾತ್ಮಕ ಹೇಳಿಕೆ ನೀಡಿದ್ದಕ್ಕಾಗಿ ಬಿಜೆಪಿಯಿಂದ ಅಮಾನತುಗೊಂಡಿರುವ ನೂಪುರ್ ಶರ್ಮಾ ಅವರನ್ನು ಬೆಂಬಲಿಸಿ, ಕೊಲ್ಹೆ ವಾಟ್ಸಾಪ್ ಗ್ರೂಪ್‌ಗಳಲ್ಲಿ ಪೋಸ್ಟ್ ಶೇರ್ ಮಾಡಿದ್ದರು. ಇದಕ್ಕಾಗಿ ಕೊಲೆ ನಡೆದಿರಬಹುದು ಎಂದು ಉಪ ಪೊಲೀಸ್ ಆಯುಕ್ತ ವಿಕ್ರಮ್ ಸಾಲಿ ಸುದ್ದಿಗಾರರಿಗೆ ತಿಳಿಸಿದರು.

'ಔಪಚಾರಿಕವಾಗಿ ಪ್ರಕರಣದ ತನಿಖೆ ವಹಿಸಿಕೊಳ್ಳದ ಎನ್‌ಐಎ'

'ಹತ್ಯೆ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಇನ್ನೂ ಔಪಚಾರಿಕವಾಗಿ ವಹಿಸಿಕೊಂಡಿಲ್ಲ' ಎಂದು ಅಮರಾವತಿ ನಗರ ಪೊಲೀಸ್ ಕಮಿಷನರ್ ಡಾ.ಆರತಿ ಸಿಂಗ್ ಭಾನುವಾರ ತಿಳಿಸಿದ್ದಾರೆ. 'ಪ್ರಕರಣವನ್ನು ಎನ್‌ಐಎಗೆ ವರ್ಗಾಯಿಸುವ ಬಗ್ಗೆ ನಮಗೆ ಇನ್ನೂ ಯಾವುದೇ ಆದೇಶ ಬಂದಿಲ್ಲ, ಸೋಮವಾರದ ವೇಳೆಗೆ ನಾವು ಆದೇಶಗಳನ್ನು ಸ್ವೀಕರಿಸುತ್ತೇವೆ. ನಂತರ ನಾವು ಔಪಚಾರಿಕವಾಗಿ ಪ್ರಕರಣವನ್ನು ಕೇಂದ್ರ ಏಜೆನ್ಸಿಗೆ ಹಸ್ತಾಂತರಿಸುತ್ತೇವೆ' ಎಂದೂ ಅವರು ಹೇಳಿದ್ದಾರೆ.

ರಾಷ್ಟ್ರದ ಗಮನ ಸೆಳೆದಿರುವ ಈ ಪ್ರಕರಣವನ್ನು ಎನ್‌ಐಎ ತನಿಖೆಗೆ ವಹಿಸಲಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯವು ಶನಿವಾರ ಟ್ವೀಟ್ ಮಾಡಿತ್ತು. ಪ್ರಕರಣದ ತನಿಖೆಗಾಗಿ ಅಮರಾವತಿಗೆ ಎನ್‌ಐಎ ತಂಡ ಭೇಟಿ ನೀಡಿದ ಒಂದು ದಿನದ ನಂತರ ಡಾ. ಆರತಿ ಅವರು ಈ ಹೇಳಿಕೆ ನೀಡಿದ್ದಾರೆ.

ಇಬ್ಬರು ಉಗ್ರರನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ ಗ್ರಾಮಸ್ಥರು

ಬಂಧಿತ ಉಗ್ರ ಬಿಜೆಪಿ ಐಟಿ ವಿಭಾಗದ ಮುಖ್ಯಸ್ಥ?

ಪ್ರಜಾವಾಣಿ ವಾರ್ತೆ

ಜಮ್ಮು: ರಿಯಾಸಿ ಜಿಲ್ಲೆಯಲ್ಲಿ ಗ್ರಾಮಸ್ಥರು ಭಾನುವಾರ ಸೆರೆಹಿಡಿದು ಪೊಲೀಸರಿಗೆ ಒಪ್ಪಿಸಿರುವ ಇಬ್ಬರು ಉಗ್ರರ ಪೈಕಿ ಓರ್ವ ಬಿಜೆಪಿಯ ಜಮ್ಮು ಪ್ರಾಂತ್ಯದ ಅಲ್ಪಸಂಖ್ಯಾತ ಮೋರ್ಚಾದ ಐಟಿ ಮತ್ತು ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥ ಎಂದು ಹೇಳಲಾಗಿದೆ.

ಲಷ್ಕರ್–ಎ–ತಯಬಾಗೆ (ಎಲ್‌ಇಟಿ) ಸೇರಿರುವ ಉಗ್ರ ತಾಲಿಬ್ ಹುಸೇನ್ ರಜೌರಿ ಜಿಲ್ಲೆಯ ನಿವಾಸಿ. ಈತ ಎಲ್‌ಇಟಿ ಕಮಾಂಡರ್ ಆಗಿದ್ದ. ಈತನ ಸಹಚರ ಪುಲ್ವಾಮಾ ಜಿಲ್ಲೆಯ ಫೈಜಲ್ ಅಹ್ಮದ್‌ನನ್ನೂ ಗ್ರಾಮಸ್ಥರು ಸೆರೆಹಿಡಿದಿದ್ದರು.



ಟ್ವಿಟರ್ ಚಿತ್ರ

'ಹುಸೇನ್, ಪಾಕಿಸ್ತಾನದಲ್ಲಿ ವಾಸವಿರುವ ಎಲ್‌ಇಟಿ ಉಗ್ರ ಕಾಸಿಮ್ ಜೊತೆ ಒಡನಾಟ ಹೊಂದಿದ್ದ. ರಜೌರಿ ಜಿಲ್ಲೆಯಲ್ಲಿ ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣದ ರೂವಾರಿಯೂ ಆಗಿದ್ದ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಹುಸೇನ್, ಬಿಜೆಪಿಯ ಸಕ್ರಿಯ ಕಾರ್ಯಕರ್ತ ಎಂದು ಕಾಂಗ್ರೆಸ್ ಆರೋಪಿಸಿದ್ದು, ಇದು ಉಭಯ ಪಕ್ಷಗಳ ನಡುವಣ ವಾಗ್ಯುದ್ಧಕ್ಕೂ ಕಾರಣವಾಗಿದೆ.

ಮೇ 9 ರಂದು ನಡೆದ ಕಾರ್ಯಕ್ರಮದಲ್ಲಿ ಜಮ್ಮು ಮತ್ತು ಕಾಶ್ಮೀರದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ರವಿಂದರ್ ರೈನಾ ಅವರು ತಾಲಿಬ್‌ಗೆ ಹೂಗುಚ್ಛ ನೀಡುತ್ತಿರುವ ಫೋಟೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿರುವ ಕಾಂಗ್ರೆಸ್, ಆತ ಬಿಜೆಪಿಯ ಹಲವು ಕಾರ್ಯಕ್ರಮಗಳಲ್ಲೂ ಪಾಲ್ಗೊಂಡಿದ್ದ ಎಂದು ದೂರಿದೆ.

ಉಗ್ರನೊಬ್ಬನನ್ನು ಪಕ್ಷದಲ್ಲಿ ಸೇರಿಸಿಕೊಂಡಿರುವ ಬಿಜೆಪಿ ತನ್ನ ನಿಲುವಿನ ಬಗ್ಗೆ ದೇಶದ ಜನರಿಗೆ ಉತ್ತರಿಸಬೇಕು ಎಂದು ಪ್ರದೇಶ ಕಾಂಗ್ರೆಸ್ ಸಮಿತಿಯ ಮುಖ್ಯ ವಕ್ತಾರ ರವಿಂದರ್ ಶರ್ಮಾ ಆಗ್ರಹಿಸಿದ್ದಾರೆ.

ಗ್ರಾಮಸ್ಥರ ಧೈರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿರುವ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ₹5 ಲಕ್ಷ ನಗದು ಬಹುಮಾನ ಘೋಷಿಸಿದ್ದಾರೆ. ಡಿಜಿಪಿ ದಿಲ್ಬಾಗ್ ಸಿಂಗ್ ಅವರು ₹2 ಲಕ್ಷ ನಗದು ಬಹುಮಾನ ಪ್ರಕಟಿಸಿದ್ದಾರೆ.

ಸೆರೆಸಿಕ್ಕ ಉಗ್ರರಿಂದ ಎರಡು ಎ.ಕೆ ರೈಫಲ್‌ಗಳು, ಏಳು ಗ್ರೆನೇಡ್‌ಗಳು ಮತ್ತು ಪಿಸ್ತೂಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.



ಜಗನ್ನಾಥ ಯಾತ್ರೆ

ಹರಿಯಾಣದ ಗುರುಗ್ರಾಮದಲ್ಲಿ ನಡೆದ ಜಗನ್ನಾಥ ರಥ ಯಾತ್ರೆಯಲ್ಲಿ ನೂರಾರು ಭಕ್ತರು ಪಾಲ್ಗೊಂಡಿದ್ದರು. –ಪಿಟಿಐ ಚಿತ್ರ

ಪಕ್ಷದ ಎಲ್ಲ ಘಟಕ ವಿಸರ್ಜಿಸಿದ ಅಖಿಲೇಶ್

ಲಖನೌ: ಸಮಾಜವಾದಿ ಪಕ್ಷದ (ಎಸ್‌ಪಿ) ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ತಕ್ಷಣದಿಂದಲೇ ಜಾರಿಗೆ ಬರುವಂತೆ ಪಕ್ಷದ ಎಲ್ಲ ಘಟಕಗಳನ್ನು ಭಾನುವಾರ ವಿಸರ್ಜಿಸಿದ್ದಾರೆ.

ಯುವ, ಮಹಿಳಾ ವಿಭಾಗ ಸೇರಿದಂತೆ ರಾಷ್ಟ್ರೀಯ, ರಾಜ್ಯ ಹಾಗೂ ಜಿಲ್ಲಾ ಘಟಕಗಳನ್ನು ವಿಸರ್ಜಿಸಿದ್ದಾರೆ. ಆದರೆ ಇದಕ್ಕೆ ಕಾರಣವನ್ನು ತಿಳಿಸಿಲ್ಲ.

ಇತ್ತೀಚೆಗೆ ನಡೆದ ರಾಂಪುರ, ಅಜಂಗಡ ಲೋಕಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಪಕ್ಷದ ಕಳಪೆ ಪ್ರದರ್ಶನದ ಬಳಿಕ, ಪಕ್ಷವನ್ನು ಬಲಪಡಿಸುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಆದರೆ ಉತ್ತರ ಪ್ರದೇಶ ಘಟಕದ ಅಧ್ಯಕ್ಷ ನರೇಶ್ ಉತ್ತಮ್ ಅವರು ತಮ್ಮ ಸ್ಥಾನದಲ್ಲಿ ಮುಂದುವರಿಯಲಿದ್ದಾರೆ ಎಂದು ಪಕ್ಷವು ಹೇಳಿದೆ.

ಗೋಧ್ರಾ ಹತ್ಯಾಕಾಂಡ: 35ನೇ ಅಪರಾಧಿಗೆ ಜೀವಾವಧಿ ಶಿಕ್ಷೆ

ಗೋಧ್ರಾ: 2002ರಲ್ಲಿ ಗುಜರಾತ್‌ನಲ್ಲಿ ಅತ್ಯಂತ ಭೀಕರ ಗಲಭೆಗೆ ಕಾರಣವಾಗಿದ್ದ 59 ಕರಸೇವಕರನ್ನು ಹತ್ಯೆಗೈದ ಗೋಧ್ರಾ ರೈಲು ಹತ್ಯಾಕಾಂಡ ಪ್ರಕರಣದ ಆರೋಪಿಗೆ ಇಲ್ಲಿನ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ.

ಗುಜರಾತ್‌ನ ಪಂಚಮಹಲ್ ಜಿಲ್ಲೆಯ ಗೋಧ್ರಾದಲ್ಲಿರುವ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯವು ಆರೋಪಿ ರಫೀಕ್ ಬಟುಕ್‌ಗೆ ಶನಿವಾರ ಜೀವಾವಧಿ ಶಿಕ್ಷೆಯನ್ನು ವಿಧಿಸಿತು. ಆತನನ್ನು 2021ರ ಫೆಬ್ರುವರಿಯಲ್ಲಿ ಬಂಧಿಸಲಾಗಿತ್ತು.

ಅಯೋಧ್ಯೆಯಿಂದ ಹಿಂತಿರುಗುತ್ತಿದ್ದ, ಕರಸೇವಕರಿದ್ದ ರೈಲಿಗೆ 2002 ರ ಫೆಬ್ರುವರಿ 27ರಂದು ಬೆಂಕಿ ಹಚ್ಚಲಾಗಿತ್ತು. ಘಟನೆಯಲ್ಲಿ 59 ಕರಸೇವಕರು ಮೃತಪಟ್ಟಿದ್ದರು. ಪ್ರಕರಣದಲ್ಲಿ ರಫೀಕ್ ಭಾಗಿಯಾಗಿದ್ದ ಎಂದು ಆರೋಪಿಸಲಾಗಿತ್ತು. ಈ ಘಟನೆಯು ರಾಜ್ಯದಲ್ಲಿ ಕೋಮು ಗಲಭೆಗೆ ಕಾರಣವಾಗಿತ್ತು. 1,200 ಕ್ಕೂ ಹೆಚ್ಚು ಜನರನ್ನು ಕೊಲ್ಲಲಾಗಿತ್ತು. ಇದರಲ್ಲಿ ಅನೇಕರು ಅಲ್ಪಸಂಖ್ಯಾತ ಸಮುದಾಯದವರೇ ಆಗಿದ್ದರು.

'ಸಾಮಾಜಿಕ ಮಾಧ್ಯಮ: ನಿಯಂತ್ರಣ ಅಗತ್ಯ'

ಕಾನೂನು ರೂಪಿಸಲು ಸಂಸತ್‌ಗೆ ಸುಪ್ರೀಂಕೋರ್ಟ್ ನ್ಯಾ. ಪರ್ದಿವಾಲಾ ಸಲಹೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸೂಕ್ಷ್ಮ ಮತ್ತು ನ್ಯಾಯಾಂಗಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಡಿಜಿಟಲ್ ಮತ್ತು ಸಾಮಾಜಿಕ ಮಾಧ್ಯಮಗಳನ್ನು ನಿಯಂತ್ರಿಸುವ ಅಗತ್ಯವಿದೆ ಎಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಜೆ.ಬಿ. ಪರ್ದಿವಾಲಾ ಭಾನುವಾರ ಹೇಳಿದರು.

ಇಲ್ಲಿ ಭಾನುವಾರ ನಡೆದ ಸುಪ್ರೀಂಕೋರ್ಟ್‌ನ ಎರಡನೇ ನ್ಯಾಯಮೂರ್ತಿ ಎಚ್.ಆರ್. ಖನ್ನಾ ಸ್ಮಾರಕ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

ನ್ಯಾಯಾಂಗದ ಪ್ರಕ್ರಿಯೆಯಲ್ಲಿ ಅನವಶ್ಯಕವಾಗಿ ಮಧ್ಯ ಪ್ರವೇಶಿಸಿ ಮಾಧ್ಯಮಗಳೇ ವಿಚಾರಣೆ ನಡೆಸುವುದನ್ನು ನಿಯಂತ್ರಿಸಲು ಸಂಸತ್ತು ಕಾನೂನುಗಳನ್ನು ಜಾರಿಗೆ ತರಬೇಕು ಎಂದರು.

ತೀರ್ಪುಗಳನ್ನು ಟೀಕಿಸುವ ಅಭಿಪ್ರಾಯಗಳನ್ನು ಹಂಚಿಕೊಳ್ಳುವ ಬದಲು, ನ್ಯಾಯಾಧೀಶರ ವಿರುದ್ಧ ವೈಯಕ್ತಿಕ ದಾಳಿಗೆ ಸಾಮಾಜಿಕ ಮಾಧ್ಯಮಗಳನ್ನು ಬಳಸಲಾಗುತ್ತಿದೆ.

ಇದರಿಂದ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗುತ್ತದೆ. ತಾವು ನೀಡುತ್ತಿರುವ ತೀರ್ಪುಗಳಿಗಾಗಿ ನ್ಯಾಯಾಧೀಶರ ಮೇಲೆ ನಡೆಯುತ್ತಿರುವ ವೈಯಕ್ತಿಕ ದಾಳಿಗಳು ಅಪಾಯಕಾರಿ ಬೆಳವಣಿಗೆ. ಕಾನೂನು ಏನು ಹೇಳುತ್ತದೆ ಎಂದು ಯೋಚಿಸುವ ಬದಲು, ಮಾಧ್ಯಮದ ಯೋಚನೆ ಏನಿರಬಹುದೆಂದು ನ್ಯಾಯಾಧೀಶರು ಯೋಚಿಸುವಂತಾಗಲಿದೆ. ಇದರಿಂದ ದೇಶದ ನ್ಯಾಯಾಂಗ ವ್ಯವಸ್ಥೆಗೆ ಹಾನಿಯಾಗಲಿದೆ ಎಂದು ಹೇಳಿದರು.

ಪ್ರವಾದಿ ಮಹಮ್ಮದ್ ಅವಹೇಳನ ಸಂಬಂಧ ಬಿಜೆಪಿಯ ಉಚ್ಚಾಟಿತ ನಾಯಕಿ ನೂಪುರ್ ಶರ್ಮಾ ವಿರುದ್ಧ ದೇಶದ ವಿವಿಧೆಡೆ ದಾಖಲಾಗಿರುವ ಹಲವು ಎಫ್‌ಐಆರ್‌ಗಳನ್ನು ಒಟ್ಟುಗೂಡಿಸುವಂತೆ ಕೋರಿ ಸಲ್ಲಿಸಲಾದ ಅರ್ಜಿಯನ್ನು 'ನಾನು ಮತ್ತು ನ್ಯಾಯಮೂರ್ತಿ ಸೂರ್ಯ ಕಾಂತ್ ಅವರಿದ್ದ ಪೀಠವು ಕಳೆದ ವಾರ ವಜಾಗೊಳಿಸಿತ್ತು. ಅಲ್ಲದೇ, ಉದಯಪುರದ ಟೇಲರ್ ಹತ್ಯೆಗೆ ಹೊಣೆ ಎಂದು ನೂಪುರ್ ಶರ್ಮಾ ಅವರಿಗೆ ದೇಶದ ಕ್ಷಮೆಯಾಚಿಸುವಂತೆ ಸೂಚಿಸಲಾಗಿತ್ತು. ಪೀಠದಲ್ಲಿದ್ದ ಇಬ್ಬರೂ ನ್ಯಾಯಾಧೀಶರು ಸಾಮಾಜಿಕ ಮಾಧ್ಯಮಗಳಲ್ಲಿ ದೂಷಣೆಯ ದಾಳಿಯನ್ನು ಎದುರಿಸುತ್ತಿದ್ದೇವೆ ಎಂದರು.

'ಮಾಧ್ಯಮಗಳ ಪಾತ್ರದ ಬಗ್ಗೆಯೂ ನಾನು ಮಾತನಾಡುವೆ. ಪ್ರಕರಣಗಳ ವಿಚಾರಣೆ ನ್ಯಾಯಾಲಯಗಳಲ್ಲಿ ನಡೆಯಬೇಕು. ಡಿಜಿಟಲ್ ಮಾಧ್ಯಮಗಳಲ್ಲಿ ನಡೆಸುವುದು ನ್ಯಾಯಾಂಗದಲ್ಲಿ ಹಸ್ತಕ್ಷೇಪ ಮಾಡಿದಂತೆ. ಕೇವಲ ಅರ್ಧ ಸತ್ಯವನ್ನು ಅನುಸರಿಸಿದರೆ ಅದೇ ಹೆಚ್ಚಿನ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಇದು ಲಕ್ಷ್ಮಣ ರೇಖೆಯನ್ನೂ ದಾಟಿದಂತಾಗುತ್ತದೆ. ಭಾರತದ ಸಂವಿಧಾನವೇ ಪವಿತ್ರ ಗ್ರಂಥ ಎಂಬುದನ್ನು ಪ್ರತಿಯೊಬ್ಬ ವ್ಯಕ್ತಿಯೂ ನೆನಪಿನಲ್ಲಿಟ್ಟುಕೊಳ್ಳಲಿ' ಎಂದು ಹೇಳಿದರು.

'ತೀರ್ಪುಗಳು ಯಾವುದೇ ಕಾರಣಕ್ಕೂ ಸಾರ್ವಜನಿಕರ ಅಭಿಪ್ರಾಯದ ಪ್ರಭಾವಕ್ಕೆ ಒಳಗಾಗಬಾರದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನ್ಯಾಯಾಲಯ ನೀಡುವ ತೀರ್ಪಿನಂತೆಯೇ ನಾವು ಬದುಕುತ್ತೇವೆ. ಹಾಗೆಂದ ಮಾತ್ರಕ್ಕೆ ಕೋರ್ಟ್ ನೀಡುವ ತೀರ್ಪುಗಳೆಲ್ಲವೂ ಸರಿ ಎಂದರ್ಥವಲ್ಲ. ಆದಾಗ್ಯೂ ಅವುಗಳನ್ನು ಒಪ್ಪಿಕೊಂಡು ಬದುಕುತ್ತಿದ್ದೇವೆ.ಇದಕ್ಕೆ ನವತೇಜ್ ಸಿಂಗ್ ಜೋಹರ್ ಪ್ರಕರಣ ಮತ್ತು ಶಬರಿಮಲೆ ಪ್ರಕರಗಳ ತೀರ್ಪು ಉತ್ತಮ ಉದಾಹರಣೆ' ಎಂದರು.

ಕೇಂದ್ರೀಯ ದತ್ತು ಪ್ರಾಧಿಕಾರ ಮಾಹಿತಿ

ಮಗು ದತ್ತುಗೆ ಕಾಯುತಿರುವ 16 ಸಾವಿರಕ್ಕೂ ಹೆಚ್ಚು ದಂಪತಿ

ನವದೆಹಲಿ (ಪಿಟಿಐ): ಮಗುವನ್ನು ದತ್ತು ತೆಗೆದುಕೊಳ್ಳಲು ಕಳೆದ ಮೂರು ವರ್ಷಗಳಿಂದ ಕಾಯುತ್ತಿರುವ ದಂಪತಿ ಸಂಖ್ಯೆ 16 ಸಾವಿರಕ್ಕೂ ಅಧಿಕ ಎಂದು ಕೇಂದ್ರೀಯ ದತ್ತು ಸಂಪನ್ಮೂಲ ಪ್ರಾಧಿಕಾರ (ಸಿಎಆರ್‌ಎ) ಹೇಳಿದೆ.

ಕಾನೂನಾತ್ಮಕವಾಗಿ ದತ್ತು ತೆಗೆದು ಕೊಳ್ಳಲು ಅರ್ಹ ಮಕ್ಕಳ ಸಂಖ್ಯೆ ಕಡಿಮೆ ಇರುವುದೇ ಕಾಯುವಿಕೆ ದೀರ್ಘವಾಗಲು ಕಾರಣ ಎಂದು ಪ್ರಾಧಿಕಾರದ ಅಧಿಕಾರಿಗಳು ಹೇಳಿದ್ದಾರೆ. ಸುದ್ದಿಸಂಸ್ಥೆ ಪಿಟಿಐ ಸಲ್ಲಿಸಿದ್ದ ಆರ್‌ಟಿಐ ಅರ್ಜಿಗೆ ನೀಡಿರುವ ಉತ್ತರದಲ್ಲಿ ಸಿಎಆರ್‌ಎ ಈ ಮಾಹಿತಿ ನೀಡಿದೆ.

ಮಗು ದತ್ತು ತಗೆದುಕೊಳ್ಳಲು 28,501 ದಂಪತಿ ಅರ್ಜಿ ಸಲ್ಲಿಸಿದ್ದು, ದತ್ತು ಸ್ವೀಕಾರಕ್ಕೆ ಅವರಿಗೆ ಅನುಮೋದನೆಯನ್ನು ಸಹ ನೀಡಲಾಗಿದೆ. ಈ ಪೈಕಿ, 16,155 ದಂಪತಿ ಕಳೆದ 3 ವರ್ಷ ಗಳಿಂದ ಮಗುವನ್ನು ದತ್ತು ಪಡೆಯುವ ತಮ್ಮ ಸರದಿಗಾಗಿ ಕಾಯುತ್ತಿದ್ದಾರೆ ಎಂದು ಪ್ರಾಧಿಕಾರ ಮಾಹಿತಿ ನೀಡಿದೆ.

ಈ ಮೊದಲು ಮಗುವೊಂದನ್ನು ದತ್ತು ಪಡೆಯುವ ಪ್ರಕ್ರಿಯೆ ನ್ಯಾಯಾಲಯಗಳ ವ್ಯಾಪ್ತಿಗೆ ಒಳಪಟ್ಟಿತ್ತು. ಕಳೆದ ವರ್ಷ ಕೇಂದ್ರ ಸರ್ಕಾರ ಬಾಲ ನ್ಯಾಯ ಕಾಯ್ದೆಗೆ ತಿದ್ದುಪಡಿ ತಂದಿದ್ದು, ಮಗು ದತ್ತು ಪಡೆಯುವುದಕ್ಕೆ ಸಂಬಂಧಿಸಿ ಜಿಲ್ಲಾಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ನೀಡಲಾಗಿದೆ.

ತಮಿಳುನಾಡಿನಲ್ಲಿ ಇ.ಡಿ ಮುಟ್ಟುಗೋಲು

₹400 ಕೋಟಿ ಆಸ್ತಿ ವಶಕ್ಕೆ

ನವದೆಹಲಿ(ಪಿಟಿಐ): ತಮಿಳುನಾಡಿನಲ್ಲಿ ಬ್ಯಾಂಕ್ ಮತ್ತು ಲಾಟರಿ ವಂಚನೆ ಹಾಗೂ ಹಣ ಅಕ್ರಮ ವರ್ಗಾವಣೆಯ ಸಂಬಂಧ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಸುಮಾರು ₹400 ಕೋಟಿಗೂ ಹೆಚ್ಚಿನ ಆಸ್ತಿಯನ್ನು ಕೇಂದ್ರೀಯ ತನಿಖಾ ಸಂಸ್ಥೆ ಇ.ಡಿ (ಜಾರಿ ನಿರ್ದೇಶನಾಲಯ) ಮುಟ್ಟುಗೋಲು ಹಾಕಿಕೊಂಡಿದೆ.

ಇಂಡಿಯನ್ ಬ್ಯಾಂಕಿಗೆ ವಂಚಿಸಿರುವ ಚೆನ್ನೈನ ಸರವಣ ಸ್ಟೋರ್ಸ್‌ಗೆ (ಗೋಲ್ಡ್ ಪ್ಯಾಲೇಸ್) ಸೇರಿದ ₹234.75 ಕೋಟಿ ಮೌಲ್ಯದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಇ.ಡಿ ತಿಳಿಸಿದೆ.

ಸರವಣ ಸ್ಟೋರ್ಸ್ ಪಾಲುದಾರರಾದ ದಿವಂಗತ ಪಲ್ಲಕುದುರೈ, ಪಿ.ಸುಜಾತಾ ಮತ್ತು ವೈ.ಪಿ.ಶಿರ ವನ್, ಅಪರಿಚಿತ ಅಧಿಕಾರಿಗಳು ಮತ್ತು ಇನ್ನಿತರರು ಚೆನ್ನೈನ ಟಿ.ನಗರದ ಇಂಡಿಯನ್ ಬ್ಯಾಂಕ್ ಶಾಖೆಗೆ ವಂಚಿಸಿರುವ ಬಗ್ಗೆ ಸಿಬಿಐ ಪ್ರಕರಣ ದಾಖಲಿಸಿತ್ತು.

ತನಿಖೆ ಕೈಗೆತ್ತಿಕೊಂಡ ಇ.ಡಿ, ಸರವಣ ಸ್ಟೋರ್ಸ್ ಪಾಲುದಾರರು ತಮ್ಮ ಉದ್ಯಮ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದೆ ಎಂದು ಬಿಂಬಿಸಿ, ವಾರ್ಷಿಕ ವಹಿವಾಟಿನ ಉತ್ಪ್ರೇಕ್ಷಿತ ಚಿತ್ರಣ ನೀಡಿ ಬ್ಯಾಂಕಿನಿಂದ ಹೆಚ್ಚಿನ ಸಾಲ ಪಡೆದಿದ್ದರು. ಆದರೆ, ಮಾರಾಟ ವರದಿ ಮತ್ತು ಜಮಾ ನಮೂದಿನಲ್ಲಿ ಭಾರಿ ವ್ಯತ್ಯಾಸಗಳು ಇರುವುದು, ಉದ್ಯಮ ಪಾಲುದಾರರು ವೈಯಕ್ತಿಕ ಲಾಭಕ್ಕಾಗಿ ವೇಲೂರಿನಲ್ಲಿ ಮಾರುಕಟ್ಟೆ ಮೌಲ್ಯಕ್ಕಿಂತ ಹೆಚ್ಚಿನ ಮೌಲ್ಯಕ್ಕೆ ಆಸ್ತಿ ಖರೀದಿಸಿ, ಬ್ಯಾಂಕಿಗೆ ಉದ್ದೇಶಪೂರ್ವಕ ನಷ್ಟ ಮಾಡಿರುವುದು ತನಿಖೆಯಲ್ಲಿ ಪತ್ತೆಯಾಗಿದೆ ಎಂದು ಹೇಳಿದೆ.

ಮತ್ತೊಂದು ಪ್ರಕರಣದಲ್ಲಿ ತಮಿಳುನಾಡಿನ 'ಲಾಟರಿ ಕಿಂಗ್' ಸ್ಯಾಂಟಿಯಾಗೊ ಮಾರ್ಟಿನ್ ಅವರಿಗೆ ಸೇರಿದ ಸುಮಾರು ₹173.48 ಕೋಟಿ ಯ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಇದರಲ್ಲಿ ಮಾರ್ಟಿನ್ ಅವರ ಹೆಸರಿನಲ್ಲಿರುವ ಹಲವು ಕಂಪನಿಗಳ ಆಸ್ತಿ ಮತ್ತು ಬ್ಯಾಂಕ್ ಖಾತೆಗಳು, ಚರ ಹಾಗೂ ಸ್ಥಿರ ಆಸ್ತಿಗಳು ಸೇರಿವೆ.

ಎಂ.ಜೆ. ಅಸೋಸಿಯೇಟ್ಸ್ ಪಾಲುದಾರರಾದ ಸ್ಯಾಂಟಿಯಾಗೊ ಮತ್ತು ಎನ್.ಜಯಮುರುಗನ್ ಅವರು 2009 ರಿಂದ 2010ರ ಅವಧಿಯಲ್ಲಿ ಲಾಟರಿ ವಿಜೇತರ ಬಹುಮಾನ ಮೊತ್ತವನ್ನು ಅನಧಿಕೃತವಾಗಿ ಹೆಚ್ಚಿಸಿ, ಅಸ್ಸಾಂ ಸರ್ಕಾರಕ್ಕೆ ಸುಮಾರು ₹910.29 ಕೋಟಿ ನಷ್ಟ ಮಾಡಿದ್ದರು. ಈ ಸಂಬಂಧ ಎಂ.ಜೆ. ಅಸೋಸಿಯೇಟ್ಸ್ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿತ್ತು.

ಇಂದು ವಿಶ್ವಾಸಮತ ಯಾಚನೆ

ಮುಂಬೈ: ಮಹಾರಾಷ್ಟ್ರದ ವಿಧಾನ ಸಭೆಯಲ್ಲಿ ಮುಖ್ಯಮಂತ್ರಿ ಏಕನಾಥ ಶಿಂಧೆ ಅವರು ಜುಲೈ 4ರಂದು ವಿಶ್ವಾಸಮತ ಯಾಚಿಸಲಿದ್ದಾರೆ.



ಏಕನಾಥ ಶಿಂಧೆ

ಶಿಂಧೆ ಅವರು ಮುಖ್ಯಮಂತ್ರಿಯಾಗಿ ಹಾಗೂ ದೇವೇಂದ್ರ ಫಡಣವೀಸ್ ಅವರು ಉಪಮುಖ್ಯಮಂತ್ರಿಯಾಗಿ ಜೂನ್ 30ರಂದು ಪ್ರಮಾಣವಚನ ಸ್ವೀಕರಿಸಿದ್ದರು. ಮುಖ್ಯಮಂತ್ರಿ ಏಕನಾಥ ಶಿಂಧೆ ಅವರ ಜೊತೆಗಿರುವ ಶಿವಸೇನಾದ 39 ಶಾಸಕರು ಸೇರಿದಂತೆ 50 ಶಾಸಕರು ಶನಿವಾರವೇ ಗೋವಾದಿಂದ ಮುಂಬೈಗೆ ತಲುಪಿದ್ದಾರೆ.

'ಕಸಬ್‌ಗೂ ಇಷ್ಟು ಭದ್ರತೆ ಇರಲಿಲ್ಲ'

ಮುಂಬೈ (ಪಿಟಿಐ): ಏಕನಾಥ್ ಶಿಂಧೆ ನೇತೃತ್ವದ ಸರ್ಕಾರದ ಬಂಡಾಯ ಶಿವಸೇನಾ ಶಾಸಕರಿಗೆ ಬಿಗಿ ಪೊಲೀಸ್ ಭದ್ರತೆ ಒದಗಿಸಿರುವುದನ್ನು ಶಿವಸೇನಾ ನಾಯಕ ಆದಿತ್ಯ ಠಾಕ್ರೆ ಟೀಕಿಸಿದ್ದಾರೆ.

ಬಿಗಿ ಭದ್ರತೆಯಲ್ಲಿ ಐಷಾರಾಮಿ ಹೋಟೆಲ್‌ನಿಂದ ವಿಧಾನ ಭವನ ಪ್ರವೇಶಿಸಿದ ಶಿವಸೇನಾ ಶಾಸಕ ರನ್ನು ಉದ್ದೇಶಿಸಿ ಮಾತನಾಡಿದ ಆದಿತ್ಯ, 'ಕಸಬ್‌ಗೂ ಇಷ್ಟೊಂದು ಭದ್ರತೆ ಇರಲಿಲ್ಲ. ಈ ರೀತಿ ಭದ್ರತೆ ಮುಂಬೈನಲ್ಲಿ ನಾವು ನೋಡಿರಲಿಲ್ಲ. ಯಾಕೆ ಹೆದರುತ್ತೀರಾ? ಯಾರಾದರೂ ಓಡಿ ಹೋಗುತ್ತಾರೆಯೇ? ಯಾಕಿಷ್ಟು ಭಯ?' ಎಂದು ಪ್ರಶ್ನಿಸಿದರು.

2008ರಲ್ಲಿ ಮುಂಬೈ ದಾಳಿ ವೇಳೆ ಸೆರೆಸಿಕ್ಕ ಪಾಕಿಸ್ತಾನದ ಭಯೋತ್ಪಾದಕ ಅಜ್ಮಲ್ ಕಸಬ್‌ನಿಗೆ ಯರವಾಡ ಕೇಂದ್ರ ಕಾರಾಗೃಹದಲ್ಲಿ ಮರಣ ದಂಡನೆ ವಿಧಿಸಲಾಯಿತು.

ಸಂಕ್ಷಿಪ್ತ ಸುದ್ದಿ

ಮಣಿಪುರ: ಸಾವಿನ ಸಂಖ್ಯೆ 42ಕ್ಕೆ ಏರಿಕೆ

ಗುವಾಹಟಿ / ಇಂಫಾಲ್ (ಪಿಟಿಐ): 'ಮಣಿಪುರದ ನೋನಿ ಜಿಲ್ಲೆಯಲ್ಲಿ ರೈಲ್ವೆ ಕಾಮಗಾರಿ ಪ್ರದೇಶದಲ್ಲಿ ಸಂಭವಿಸಿದ ಭೂಕುಸಿತದಲ್ಲಿ ಭಾನುವಾರ ಮತ್ತೆ ಮೂರು ಮೃತದೇಹಗಳು ಪತ್ತೆಯಾಗುವ ಮೂಲಕ ಸಾವಿಗೀಡಾದವರ ಸಂಖ್ಯೆ 42 ಕ್ಕೆ ಏರಿಕೆಯಾಗಿದೆ. ಕಾಣೆಯಾದ ಇನ್ನೂ 20 ಮಂದಿಗಾಗಿ ಶೋಧ ಕಾರ್ಯಾಚರಣೆ ನಡೆಯುತ್ತಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರವಾಹಕ್ಕೆ ಕೊಚ್ಚಿ ಹೋದ ಸೇತುವೆ

ಇಟಾನಗರ (ಪಿಟಿಐ): ಅರುಣಾಚಲ ಪ್ರದೇಶದ ಕುರುಂಗ್ ಕುಮೆ ಜಿಲ್ಲೆಯಲ್ಲಿ ಚೀನಾ ಗಡಿಗೆ ಹೊಂದಿಕೊಂಡಿರುವ ಎರಡು ಆಯಕಟ್ಟಿನ ಸ್ಥಳಗಳನ್ನು ಸಂಪರ್ಕಿಸುವ ಬೈಲಿ ಸೇತುವೆಯು ಪ್ರವಾಹದಲ್ಲಿ ಕೊಚ್ಚಿಹೋಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಇದು ಭಾರತ-ಚೀನಾ ಗಡಿಯಲ್ಲಿ ಪ್ರಮುಖ ಸಂಪರ್ಕ ಕೊಂಡಿಯಾಗಿತ್ತು.

ಸಂಜಯ್ ಪಾಂಡೆಗೆ ಇ.ಡಿ ಸಮನ್ಸ್

ಮುಂಬೈ (ಪಿಟಿಐ): ಅಕ್ರಮ ಹಣ ವರ್ಗಾವಣೆ ಪ್ರಕರಣ ಸಂಬಂಧ ಜುಲೈ 5ರಂದು ವಿಚಾರಣೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯ (ಇ.ಡಿ) ಮುಂಬೈ ಮಾಜಿ ಪೊಲೀಸ್ ಆಯುಕ್ತ ಸಂಜಯ್ ಪಾಂಡೆಗೆ ಸಮನ್ಸ್ ಜಾರಿ ಮಾಡಿದೆ ಎಂದು ಕೇಂದ್ರೀಯ ಸಂಸ್ಥೆಯ ಅಧಿಕಾರಿ ತಿಳಿಸಿದ್ದಾರೆ. ಪೊಲೀಸ್ ಇಲಾಖೆಯಿಂದ ಜೂನ್ 30 ರಂದು ನಿವೃತ್ತರಾದ ಪಾಂಡೆಗೆ ಶನಿವಾರ ಸಮನ್ಸ್ ಕಳುಹಿಸಲಾಗಿದೆ.

ಹೊಸ ಯುದ್ಧವಿಮಾನ ಖರೀದಿ ಆಯ್ಕೆಯಲ್ಲಿ ಅಗ್ರಸ್ಥಾನ ಪಡೆದ ದೇಶೀಯ ವಿಮಾನ

ಮಲೇಷ್ಯಾ ಸೇನೆಗೆ 'ತೇಜಸ್'?

ನವದೆಹಲಿ (ಪಿಟಿಐ): ಆಗ್ನೇಯ ಏಷ್ಯಾ ರಾಷ್ಟ್ರ ಮಲೇಷ್ಯಾವು ತನ್ನ ಹಳೆಯ ಯುದ್ಧವಿಮಾನಗಳನ್ನು ಬದಲಿಸಲು ಚಿಂತನೆ ನಡೆಸಿದ್ದು, ಭಾರತದ 'ತೇಜಸ್' ಲಘುಯುದ್ಧ ವಿಮಾನ ಆಯ್ಕೆಯ ಮುಂಚೂಣಿಯಲ್ಲಿದೆ. 'ತೇಜಸ್' ಖರೀದಿಯನ್ನು ದೃಢಪಡಿಸುವ ಸಲುವಾಗಿ ಎರಡೂ ರಾಷ್ಟ್ರಗಳ ನಡುವೆ ಮಾತುಕತೆ ನಡೆಯುತ್ತಿವೆ.

ಚೀನಾದ ಜೆಎಫ್–17 ಜೆಟ್, ದಕ್ಷಿಣ ಕೊರಿಯಾದ ಎಫ್‌ಎ–50 ಮತ್ತು ರಷ್ಯಾದ ಮಿಗ್–35 ಮತ್ತು ಯಾಕ್–130 ಯುದ್ಧವಿಮಾನಗಳ ತೀವ್ರ ಪೈಪೋಟಿಗಳ ನಡುವೆಯೂ ಮಲೇಷ್ಯಾವು ಭಾರತದ ದೇಶೀಯ ನಿರ್ಮಿತ 'ತೇಜಸ್'ನತ್ತ ಒಲವು ತೋರುತ್ತಿದೆ ಎಂದು ಹಿಂದೂಸ್ತಾನ ಏರೋನಾಟಿಕ್ಸ್ ಲಿಮಿಟೆಡ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರೂ ಆದ ಆರ್. ಮಾಧವನ್ ಅವರು ಸಂದರ್ಶನ-ವೊಂದರಲ್ಲಿ ತಿಳಿಸಿದ್ದಾರೆ.

ಯುದ್ಧವಿಮಾನಗಳ ಖರೀದಿಯ ಒಪ್ಪಂದವು ಶೀಘ್ರದಲ್ಲೇ ಆಗಲಿದೆಯೇ ಎನ್ನುವ ಪ್ರಶ್ನೆಗೆ, 'ಕೆಲವು ರಾಜಕೀಯ ಬದಲಾವಣೆಗಳು ನಡೆಯದ ಹೊರತು ಈ ಬಗ್ಗೆ ನಾನು ತುಂಬಾ ವಿಶ್ವಾಸ ಹೊಂದಿದ್ದೇನೆ' ಎಂದು ಅವರು ಉತ್ತರಿಸಿದ್ದಾರೆ.



ತೇಜಸ್ ಲಘು ಯುದ್ಧ ವಿಮಾನ

ಮುಖ್ಯಾಂಶಗಳು

- ಖರೀದಿ ದೃಢಪಡಿಸುವ ಸಲುವಾಗಿ ಎರಡೂ ರಾಷ್ಟ್ರಗಳ ನಡುವೆ ಮಾತುಕತೆ
- ರಷ್ಯಾದಿಂದ ವಿಮಾನಗಳ ಬಿಡಿಭಾಗ ಸಂಗ್ರಹಣೆಯಲ್ಲಿ ಮಲೇಷ್ಯಾಗೆ ತೊಂದರೆ
- ಭಾರತದ ತೇಜಸ್ ಉತ್ಕೃಷ್ಟ-ಮಟ್ಟದ ವಿಮಾನವಾಗಿದೆ

'ಈ ಒಪ್ಪಂದಕ್ಕೆ ಸಹಿ ಹಾಕಿದರೆ, ತೇಜಸ್ ಖರೀದಿ ಮಾಡಬಯಸುವ ಇತರ ದೇಶಗಳಿಗೆ ಇದು ಉತ್ತಮ ಸಂದೇಶವನ್ನು ರವಾನಿಸಿದಂತಾಗಲಿ-ದೆ. ಒಟ್ಟಾರೆ ರಫ್ತು ಸಾಮರ್ಥ್ಯವನ್ನೂ ಹೆಚ್ಚಿಸಿದಂತಾಗುತ್ತದೆ. ಮಾತುಕತೆಯು ಅಂತಿಮ ಹಂತದಲ್ಲಿದ್ದು, ಖರೀದಿ ಪ್ರಕ್ರಿಯೆಯನ್ನು ಮುಂದುವರಿಸಲು ಮಲೇಷ್ಯಾದ ಉನ್ನತಮಟ್ಟದ ಅಧಿಕಾರಿಗಳು ಮತ್ತು ತಜ್ಞರ ತಂಡವು ಶೀಘ್ರದಲ್ಲೇ ಭಾರತಕ್ಕೆ ಭೇಟಿ ನೀಡುವ ನಿರೀಕ್ಷೆಯಿದೆ' ಎಂದೂ ಅವರು ಮಾಹಿತಿ ನೀಡಿದ್ದಾರೆ.

ಸುಖೊಯ್–30 ಎಂಆರ್‌ಒ ಘಟಕ ಸ್ಥಾಪನೆ: 'ಮಾಸ್ಕೊ ವಿರುದ್ಧ ಪಾಶ್ಚಾತ್ಯ ರಾಷ್ಟ್ರಗಳು ನಿರ್ಬಂಧ ವಿಧಿಸಿರುವುದರಿಂದ ರಷ್ಯಾದಿಂದ ವಿಮಾನಗಳ ಬಿಡಿಭಾಗಗಳ ಸಂಗ್ರಹಣೆ ಯಲ್ಲಿ ಮಲೇಷ್ಯಾ ತೊಂದರೆ ಎದುರಿಸುತ್ತಿದೆ. ಹಾಗಾಗಿ, ಖರೀದಿಯ ಭಾಗವಾಗಿ ಭಾರತವು ಮಲೇಷ್ಯಾದಲ್ಲಿ ರಷ್ಯಾ ಮೂಲದ ಸುಖೊಯ್ –30 ಯುದ್ಧ ವಿಮಾನಗಳ ಎಂಆರ್‌ಒ (ನಿರ್ವಹಣೆ, ರಿಪೇರಿ ಮತ್ತು ಕೂಲಂಕುಷ ಪರೀಕ್ಷೆ) ಘಟಕ ಸ್ಥಾಪಿಸಲು ಭರವಸೆ ನೀಡಿದೆ' ಎಂದೂ ಅವರು ಹೇಳಿದ್ದಾರೆ.

ಎಚ್‌ಎಎಲ್‌ನಿಂದ ಸ್ವದೇಶದಲ್ಲೇ ನಿರ್ಮಿತವಾಗಿರುವ 'ತೇಜಸ್' ಅತ್ಯಂತ ಚುರುಕುತನದಿಂದ ಕೂಡಿದ ಬಹುಕಾರ್ಯ ನಿರ್ವಹಿಸುವ ಸೂಪರ್ ಸಾನಿಕ್ ಯುದ್ಧವಿಮಾನವಾಗಿ-ದೆ. ಚೀನಾದ ಜೆಎಫ್–17 ಮತ್ತು ದಕ್ಷಿಣ ಕೊರಿಯಾದ ಎಫ್‌ಎ–50 ಯುದ್ಧವಿಮಾನಗಳಿಗೆ ಹೋಲಿಸಿದರೆ ಭಾರತದ ತೇಜಸ್ ಉತ್ಕೃಷ್ಟಮಟ್ಟದ ವಿಮಾನವಾಗಿದೆ.

'ವಿದೇಶಿ ಕಂಪನಿಗಳೊಂದಿಗೆ ಕೈಜೋಡಿಸಲು ಎಚ್‌ಎಎಲ್ ಸಶಕ್ತ'

'ಬಹು ಕಾರ್ಯ ಯುದ್ಧವಿಮಾನ' (ಎಂಆರ್‌ಎಫ್‌ಎ) ಕಾರ್ಯಕ್ರಮದಡಿ, ಭಾರತದಲ್ಲಿ ಯುದ್ಧವಿಮಾನಗಳನ್ನು ತಯಾರಿಸಲು ಯಾವುದೇ ವಿದೇಶಿ ಕಂಪನಿಗಳೊಂದಿಗೆ ಕೈಜೋಡಿಸಲು ಸಂಸ್ಥೆ ಸಶಕ್ತವಾಗಿದೆ ಎಂದು ಆರ್.ಮಾಧವನ್ ಭಾನುವಾರ ಹೇಳಿದ್ದಾರೆ.

'ಎಂಆರ್‌ಎಫ್‌ಎ ಕಾರ್ಯಕ್ರಮದಡಿ ಭಾರತೀಯ ವಾಯುಪಡೆಗೆ ಯಾವ ರೀತಿಯ ಯುದ್ಧವಿಮಾನ ಬೇಕು ಎಂಬುದನ್ನು ಸರ್ಕಾರ ನಿರ್ಧರಿಸಬೇಕು. ಭಾರತದ ಯಾವ ಸಂಸ್ಥೆಯ ಸಹಭಾಗಿತ್ವ ಹೊಂದಬೇಕು ಎಂಬ ನಿರ್ಧಾರ ಕೈಗೊಳ್ಳುವ ಆಯ್ಕೆಯನ್ನು ಯುದ್ಧವಿಮಾನ ತಯಾರಿಸುವ ವಿದೇಶಿ ಕಂಪನಿಗೆ ನೀಡಬೇಕು' ಎಂದು ತಿಳಿಸಿದ್ದಾರೆ.

'ಅತ್ಯಾಧುನಿಕ ಯುದ್ಧವಿಮಾನಗಳನ್ನು ತಯಾರಿಸಲು ಬೇಕಾದ ಮೂಲಸೌಕರ್ಯ ಹಾಗೂ ಅನುಭವವನ್ನು ಎಚ್‌ಎಎಲ್ ಹೊಂದಿದೆ. ಹೀಗಾಗಿ, ಭಾರತೀಯ ವಾಯುಪಡೆಗೆ ಯುದ್ಧವಿಮಾನಗಳನ್ನು ತಯಾರಿಸುವ ಕಾರ್ಯಕ್ರಮದಲ್ಲಿ ಭಾರತೀಯ ಭಾಗಿದಾರ ಸಂಸ್ಥೆಯಾಗಲು ಎಚ್‌ಎಎಲ್ ಉತ್ಸುಕವಾಗಿದೆ' ಎಂದು ಅವರು ಹೇಳಿದ್ದಾರೆ.



ಬುಡಕಟ್ಟು ನೃತ್ಯ ಪಶ್ಚಿಮ ಬಂಗಾಳದ ಬಿರ್‌ಭೂಮ್ ಜಿಲ್ಲೆಯಲ್ಲಿ ಸಂತಾಲ್ ದಂಗೆಯ ನೆನಪಿಗಾಗಿ ಭಾನುವಾರ ಆಯೋಜಿಸಿದ್ದ 'ಹುಲ್ ಉತ್ಸವ'ದಲ್ಲಿ ಬುಡಕಟ್ಟು ಜನರು ನೃತ್ಯ ಮಾಡಿದರು –ಪಿಟಿಐ ಚಿತ್ರ

ಅಕ್ರಮ ವಲಸೆ: 51 ಮಂದಿ ಬಂಧನ

ಕೊಲಂಬೊ (ಪಿಟಿಐ): ಆರ್ಥಿಕ ಬಿಕ್ಕಟ್ಟಿನ ಕಾರಣ ಶ್ರೀಲಂಕಾದಿಂದ ಅಕ್ರಮವಾಗಿ ಸಮುದ್ರ ಮಾರ್ಗದ ಮೂಲಕ ಆಸ್ಟ್ರೇಲಿ-ಯಾಕ್ಕೆ ವಲಸೆ ಹೋಗಲು ಯೋಜಿಸಿದ್ದ 51 ಜನರನ್ನು ಶ್ರೀಲಂಕಾದ ನೌಕಾಪಡೆ ಭಾನುವಾರ ಬಂಧಿಸಿದೆ.

'ನೌಕಾಪಡೆಯು ಭಾನುವಾರ ಬೆಳಿಗ್ಗೆ ಪೂರ್ವ ಸಮುದ್ರದಲ್ಲಿ ನಡೆಸಿದ ಶೋಧ ಕಾರ್ಯಾಚರಣೆ ವೇಳೆ ಈ 51 ಜನರನ್ನು ಬಂಧಿಸಿದೆ. ಇವರು ಅಕ್ರಮವಾಗಿ ವಿದೇಶಕ್ಕೆ ಹೋಗುವ ಯತ್ನದಲ್ಲಿದ್ದರು ಎಂದು ಶಂಕಿಸಲಾಗಿದೆ' ಎಂದು ಶ್ರೀಲಂಕಾ ನೌಕಾಪಡೆ ಪ್ರಕಟಣೆ ತಿಳಿಸಿದೆ.

ಶನಿವಾರ ಶ್ರೀಲಂಕಾ ಕರಾವಳಿ ಕಾವಲು ಪಡೆ ಮತ್ತು ಪೊಲೀಸ್ ತಂಡವು ಮಾರವಿಲಾದಲ್ಲಿ ಆಸ್ಟ್ರೇಲಿಯಾಕ್ಕೆ ಅಕ್ರಮವಾಗಿ ವಲಸೆ ಹೋಗುತ್ತಿದ್ದ 24 ಜನರನ್ನು ಬಂಧಿಸಿತ್ತು. ಅದೇ ರೀತಿ ಜೂನ್ 27 ಮತ್ತು 28 ರಂದು 100ಕ್ಕೂ ಹೆಚ್ಚು ಅಕ್ರಮ ವಲಸಿಗರನ್ನು ಬಂಧಿಸಲಾಗಿತ್ತು.

ನೇಪಾಳಕ್ಕೆ ಭಾರತದಿಂದ 75 ಆಂಬುಲೆನ್ಸ್, 17 ಶಾಲಾ ಬಸ್ ಕೊಡುಗೆ

ಕಠ್ಮಂಡು (ಪಿಟಿಐ): ಭಾರತವು ನೇಪಾಳಕ್ಕೆ 75 ಅಂಬುಲೆನ್ಸ್ ಮತ್ತು 17 ಶಾಲಾ ಬಸ್‌ಗಳನ್ನು ಭಾನುವಾರ ಕೊಡುಗೆಯಾಗಿ ನೀಡಿದೆ.

ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧ ವೃದ್ಧಿ ಹಾಗೂ ನೇಪಾಳದ ಆರೋಗ್ಯ, ಶೈಕ್ಷಣಿಕ ಕ್ಷೇತ್ರದ ಮೂಲ ಸೌಕರ್ಯ ವೃದ್ಧಿಗೆ ನೆರವಾಗುವ ಉದ್ದೇಶದಿಂದ ಈ ಕೊಡುಗೆ ನೀಡಿದೆ.

'ನೇಪಾಳದಲ್ಲಿನ ಭಾರತ ರಾಯಭಾರಿ ನವೀನ್ ಶ್ರೀವಾಸ್ತವ ಅವರು, ನೇಪಾಳದ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ದೇವೇಂದ್ರ ಪೌದೆಲ್ ಅವರ ಸಮ್ಮುಖದಲ್ಲಿ ಶಾಲಾ ವಾಹನಗಳ ಕೀಲಿಗಳನ್ನು ಹಸ್ತಾಂತರಿಸಿ-ದರು. ಇದೇ ವೇಳೆ ಭಾರತ ಸ್ವಾತಂತ್ರ್ಯದ ಅಮೃತಮಹೋತ್ಸವ ಸ್ಮರಣಾರ್ಥ 75 ಅಂಬುಲೆನ್ಸ್‌ಗಳನ್ನು ಕೊಡುಗೆ ನೀಡಿದರು' ಎಂದು ಭಾರತ ರಾಯಭಾರ ಕಚೇರಿ ತಿಳಿಸಿದೆ.

2021ರ ಕೊರೊನಾ ಸಾಂಕ್ರಾಮಿಕ ಸಂದರ್ಭದಲ್ಲಿ ಭಾರತ 39 ವೆಂಟಿಲೇಟರ್ ಸಹಿತ ಆಂಬುಲೆನ್ಸ್‌ಗಳನ್ನು ನೇಪಾಳಕ್ಕೆ ಕೊಡುಗೆಯಾಗಿ ನೀಡಿತ್ತು.

ಸಾರ್ವಜನಿಕ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ

'ತೆಲಂಗಾಣಕ್ಕೆ ಬೇಕು ಡಬಲ್ ಎಂಜಿನ್'

ಹೈದರಾಬಾದ್ (ಪಿಟಿಐ): 'ತೆಲಂಗಾಣದ ಜನರು 'ಡಬಲ್ ಎಂಜಿನ್ ಸರ್ಕಾರ'ಕ್ಕಾಗಿ (ಕೇಂದ್ರ ಮತ್ತು ರಾಜ್ಯ ಎರಡರಲ್ಲೂ ಬಿಜೆಪಿ ಸರ್ಕಾರ) ಹಾತೊರೆಯುತ್ತಿದ್ದಾರೆ. ಇಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ತಕ್ಷಣ ಅಭಿವೃದ್ಧಿಗೆ ವೇಗ ದೊರೆಯಲಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಇಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ಕುಟುಂಬ ರಾಜಕಾರಣದಿಂದ ಅಭಿವೃದ್ಧಿ ಸಾಧ್ಯವಿಲ್ಲ. ಬಿಜೆಪಿ ಜನರ ಅಭಿವೃದ್ಧಿಗೆ ದುಡಿಯುತ್ತದೆ. ವಿರೋಧ ಪಕ್ಷಗಳು ಕುಟುಂಬದ ಅಭಿವೃದ್ಧಿಗೆ ದುಡಿಯುತ್ತವೆ. ಹೀಗಾಗಿ ಇಲ್ಲಿನ ಜನರು ಡಬಲ್ ಎಂಜಿನ್ ಸರ್ಕಾರಕ್ಕಾಗಿ ಹಾತೊ-ರೆಯುತ್ತಿದ್ದಾರೆ ಎಂದು ಹೇಳಿದ್ದಾರೆ.

ಇಲ್ಲಿ ನಡೆದ ಬಿಜೆಪಿ ಕಾರ್ಯಕಾ-ರಿಣಿಯಲ್ಲಿ ಮಾತನಾಡಿದ ಮೋದಿ, 'ಈ ಹಿಂದೆ ದೇಶವನ್ನು ಆಳಿದ ಪಕ್ಷಗಳು ಮಾಡಿದ ತಪ್ಪಿನಿಂದ ನಾವು ಪಾಠ ಕಲಿಯಬೇಕು. ಆ ಪಕ್ಷಗಳು ನಿರ್ನಾಮದತ್ತ ಸಾಗುತ್ತಿವೆ. ಜನರ ಪರವಾದ ಮತ್ತು ಉತ್ತಮ ಆಡಳಿತ ನೀಡುವುದು ನಮ್ಮ ಗುರಿಯಾಗಬೇಕು' ಎಂದು ಕರೆ ನೀಡಿದ್ದಾರೆ. 'ಇದು ಸರ್ವರ ವಿಕಾಸಕ್ಕೆ ದಾರಿ ಮಾಡಿಕೊಡುತ್ತದೆ' ಎಂದು ಅವರು ಹೇಳಿದ್ದಾರೆ.



ಭಾಗ್ಯಲಕ್ಷ್ಮಿ ದೇವಾಲಯದಲ್ಲಿ ಯೋಗಿ ಆದಿತ್ಯನಾಥ ಅವರು ಪೂಜೆ ಸಲ್ಲಿಸಿದರು –ಪಿಟಿಐ ಚಿತ್ರ

> **ಎಂಟು ವರ್ಷಗಳ ಆಡಳಿತದಲ್ಲಿ ಬಿಜೆಪಿಯು ಪ್ರತಿ ಭಾರತೀಯರ ಜೀವನದಲ್ಲಿ ಧನಾತ್ಮಕ ಬದಲಾವಣೆ ತರಲು ಯತ್ನಿಸುತ್ತಿದೆ**
> **ನರೇಂದ್ರ ಮೋದಿ,** ಪ್ರಧಾನಿ

'2016ರಲ್ಲಿ ನಡೆದಿದ್ದ ಕಾರ್ಯಕಾ-ರಿಣಿಯಲ್ಲಿ ಭಾಗಿಯಾಗಿದ್ದ ಕಾರ್ಯಕ-ರ್ತರಲ್ಲಿ ಸೇವಾಭಾವ, ಸಮತೋಲನ, ಸಂಯಮ, ಸಮನ್ವಯ, ಸದ್ಭಾವನೆ ಮತ್ತು ಸಂವಾದದ ಗುಣಗಳು ಇದ್ದವು. ಅದು ಎಲ್ಲರಲ್ಲೂ ಇರಬೇಕು. ದೇಶವನ್ನು ತುಷ್ಟೀಕರಣದಿಂದ ಗುರಿ ಸಾಧನೆಯತ್ತ ಕೊಂಡೊಯ್ಯಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದ್ದಾರೆ.

ಭಾಗ್ಯಲಕ್ಷ್ಮಿಗೆ ಯೋಗಿ ಆರತಿ: ಹೈದರಾಬಾದ್‌ನ ಐತಿಹಾಸಿಕ ಚಾರ್ ಮಿನಾರ್‌ನ ಬಳಿ ಇರುವ ಭಾಗ್ಯಲಕ್ಷ್ಮಿ ದೇವಾಲಯಕ್ಕೆ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಭೇಟಿ ನೀಡಿ, ಆರತಿ ಬೆಳಗಿದ್ದಾರೆ.

ಲಿಸಿಚಾನ್‌ಸ್ಕ್ ರಷ್ಯಾ ವಶ

ಕೀವ್/ ಮಾಸ್ಕೊ (ರಾಯಿಟರ್ಸ್/ ಎಎಫ್‌ಪಿ): ಪೂರ್ವ ಉಕ್ರೇನಿನ ಆಯಕಟ್ಟಿನ ಲಿಸಿಚಾನ್‌ಸ್ಕ್ ಸುತ್ತುವ-ರಿದಿದ್ದು, ಇಡೀ ಲುಹಾನ್‌ಸ್ಕ್ ರಷ್ಯಾ ಪಡೆಗಳ ನಿಯಂತ್ರಣಕ್ಕೆ ಸಿಕ್ಕಿದೆ ಎಂದು ರಷ್ಯಾ ರಕ್ಷಣಾ ಸಚಿವ ಸರ್ಗೀ ಶೋಯಿಗು ಭಾನುವಾರ ಹೇಳಿದರು.

ಲಿಸಿಚಾನ್‌ಸ್ಕ್ ಸುತ್ತಲಿನ ಹಳ್ಳಿಗಳು ಮತ್ತು ಪಟ್ಟಣಗಳನ್ನೂ ವಶಪಡಿಸಿ-ಕೊಳ್ಳಲಾಗಿದೆ ಎಂದು ಶೋಯಿಗು, ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರಿಗೆ ತಿಳಿಸಿದ್ದಾರೆ.

ಉಕ್ರೇನ್ ಅಧ್ಯಕ್ಷರ ಸಲಹೆಗಾರ, ಲಿಸಿಚಾನ್‌ಸ್ಕ್ ನಗರ ಯಾವುದೇ ಕ್ಷಣ ಪತನವಾಗಬಹುದು ಎಂದಿದ್ದಾರೆ.

ಉಕ್ರೇನ್ ದಾಳಿಗೆ ರಷ್ಯಾದ ಬೆಲ್ಗೊರೊಡ್ ನಗರದಲ್ಲಿ ಮೂವರು ನಾಗರಿಕರು ಮೃತಪಟ್ಟಿದ್ದಾರೆ ಎಂದು ರಷ್ಯಾ ಹೇಳಿದೆ. ರಷ್ಯಾದ ಶೆಲ್ ದಾಳಿಗೆ ಸ್ಲೊವಿಯಾನ್‌ಸ್ಕ್‌ನಲ್ಲಿ ಮಗು ಸೇರಿ ಆರು ಮಂದಿ ಹತರಾಗಿದ್ದಾರೆ ಎಂದು ಉಕ್ರೇನ್ ಹೇಳಿದೆ.

ಸಂಕ್ಷಿಪ್ತ ಸುದ್ದಿ

ಪೀಟರ್ ಬ್ರೂಕ್ ನಿಧನ



ಪೀಟರ್ ಬ್ರೂಕ್

ಪ್ಯಾರಿಸ್ (ಎಎಫ್‌ಪಿ): ಫ್ರಾನ್ಸ್ ಸಂಜಾತ ಪ್ರಸಿದ್ಧ ರಂಗಭೂಮಿ ನಿರ್ದೇಶಕ ಪೀಟರ್ ಬ್ರೂಕ್ (97) ಭಾನುವಾರ ನಿಧನರಾದರು. 20ನೇ ಶತಮಾನದ ಪ್ರತಿಭಾನ್ವಿತ ನಿರ್ದೇಶಕರಲ್ಲಿ ಒಬ್ಬರಾಗಿದ್ದ ಬ್ರೂಕ್, 90ನೇ ವಯಸ್ಸಿನ-ಲ್ಲಿಯೂ ತಮ್ಮ ನಟನೆ ಮೂಲಕ ಪ್ರೇಕ್ಷಕರ ಮನಗೆದ್ದಿದ್ದರು.

1985ರಲ್ಲಿ ಅವರು ನಿರ್ದೇಶಿಸಿದ್ದ 9 ಗಂಟೆಗಳ ಹಿಂದೂ ಮಹಾಕಾವ್ಯ 'ದಿ ಮಹಾಭಾರತ' ಜನಪ್ರಿಯವಾಗಿತ್ತು. ಅವರು 1970ರಲ್ಲಿ ಪ್ಯಾರಿಸ್‌ನಲ್ಲಿ ನೆಲೆಸಿದ್ದ ವೇಳೆ ರಂಗಭೂಮಿ ಸಂಶೋಧನೆಗಾಗಿ ಅಂತರರಾಷ್ಟ್ರೀಯ ಕೇಂದ್ರ ಸ್ಥಾಪಿಸಿದ್ದರು.

ರಂಗಭೂಮಿಯ ಅತ್ಯಂತ ಪ್ರಭಾವಶಾಲಿ ಪಠ್ಯಗಳಲ್ಲಿ ಒಂದಾದ 'ದಿ ಎಂಪ್ಟಿ ಸ್ಪೇಸ್' ಬರೆದರು.

1925ರ ಮಾರ್ಚ್ 21ರಂದು ಲಂಡನ್‌ನ ಯಹೂದಿ ವಿಜ್ಞಾನಿಗಳ ಕುಟುಂಬದಲ್ಲಿ ಜನಿಸಿದ ಬ್ರೂಕ್, ಲಂಡನ್ ವೆಸ್ಟ್ ಎಂಡ್‌ನಲ್ಲಿ ಉತ್ತಮ ನಿರ್ದೇಶಕ ಎಂಬ ಮೆಚ್ಚುಗೆಗಳಿಸಿದ್ದರು. 1970ರಲ್ಲಿ ಪ್ಯಾರೀಸ್‌ಗೆ ತೆರಳಿ, ಹಲವು ನಾಟಕಗಳನ್ನು ನಿರ್ದೇಶಿಸಿದ್ದರು. 1997ರಲ್ಲಿ ಲಂಡನ್‌ಗೆ ಮರಳಿದ್ದರು.

ಇವರು ನಿರ್ದೇಶಿಸಿದ್ದ ಹಲವು ನಾಟಕಗಳಲ್ಲಿ ಪತ್ನಿ ನತಾಶಾ ಪ್ಯಾರಿ ಪ್ರಮುಖ ಪಾತ್ರಗಳನ್ನು ನಿರ್ವಹಿಸಿದ್ದರು.

ಬಸ್ ಕಂದಕಕ್ಕೆ ಬಿದ್ದು 20 ಜನರ ಸಾವು

ಕ್ವೆಟ್ಟಾ (ರಾಯಿಟರ್ಸ್): ನೈರುತ್ಯ ಪಾಕಿ-ಸ್ತಾನದಲ್ಲಿ ಭಾನುವಾರ ಪ್ರಯಾಣಿಕರ ಬಸ್ ಕಂದಕಕ್ಕೆ ಬಿದ್ದು 20 ಜನರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಾವಲ್ಪಿಂಡಿ- ಕ್ವೆಟ್ಟಾ ಮಾರ್ಗದಲ್ಲಿ ಸಂಚರಿಸುತ್ತಿದ್ದ ಬಸ್ ಅಪಘಾತಕ್ಕೀ-ಡಾಗಿ 20 ಜನರು ಮೃತಪಟ್ಟು, 13 ಪ್ರಯಾಣಿಕರು ಗಾಯಗೊಂಡಿದ್ದಾರೆ ಎಂದು ಶೆರಾನಿ ಜಿಲ್ಲೆಯ ಜಿಲ್ಲಾಧಿಕಾರಿ ಇಯಾಜ್ ಜಾಫರ್ ತಿಳಿಸಿದ್ದಾರೆ.

ತೇಲುವ ಕ್ರೇನ್ ಮುಳುಗಿ 27 ಜನ ಕಣ್ಮರೆ

ಬೀಜಿಂಗ್ (ಪಿಟಿಐ): ದಕ್ಷಿಣ ಚೀನಾದ ಗುವಾಂಗ್‌ಡಾಂಗ್ ಪ್ರಾಂತ್ಯದ ಕರಾವಳಿಯ ಸಮುದ್ರದಲ್ಲಿ ಛಾಬಾ ಚಂಡಮಾರುತದ ಹೊಡೆತಕ್ಕೆ ಸಿಲುಕಿ, ತೇಲುವ ಕ್ರೇನ್ ಮುಳುಗಿ 27 ಜನರು ಕಣ್ಮರೆಯಾಗಿದ್ದಾರೆ ಎಂದು ಕಡಲ ಶೋಧ ಮತ್ತು ರಕ್ಷಣಾ ಕೇಂದ್ರದ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ರಕ್ಷಣಾ ಕಾರ್ಯಾಚರಣೆಗೆ 38 ರಕ್ಷಣಾ ಹಡಗುಗಳು ಮತ್ತು ವಿಮಾನವನ್ನು ಸ್ಥಳಕ್ಕೆ ಕಳುಹಿಸಲಾಗಿದೆ. ಯಾಂಗ್‌ಜಿಯಾಂಗ್ ನಗರ ಸಮೀಪ ತೇಲುವ ಕ್ರೇನ್ ಲಂಗರು ಹಾಕಿದ್ದಾಗ ಸರಪಳಿ ತುಂಡಾಗಿ, ಛಾಬಾ ಚಂಡಮಾರುತ ಕ್ರೇನ್ ಅನ್ನು ಅಪಾಯಕ್ಕೆ ಸಿಲುಕಿಸಿತು. ಶನಿವಾರ ಸಂಜೆಯೇ ಇದು ಮುಳುಗಲು ಆರಂಭಿಸಿದ್ದು, ಇದರಲ್ಲಿದ್ದ 27 ಜನರು ನೀರಿಗೆ ಬಿದ್ದು ಕಣ್ಮರೆಯಾ-ಗಿದ್ದಾರೆ ಎಂದು ಚೀನಾ ಸರ್ಕಾರಿ ಸುದ್ದಿ ಸಂಸ್ಥೆ 'ಷಿನುವಾ' ವರದಿ ಮಾಡಿದೆ.

ವಿದೇಶಿ ಹೂಡಿಕೆಯ ಎಂಎಫ್ ಉತ್ತಮವೇ?



ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಮ್ಯೂಚುವಲ್ ಫಂಡ್ ಕಂಪನಿಗಳಿಗೆ ವಿದೇಶಿ ಷೇರುಗಳಲ್ಲಿ ಹೂಡಿಕೆ ಮಾಡದಂತೆ ಫೆಬ್ರುವರಿಯಲ್ಲಿ ನಿರ್ಬಂಧ ಹೇರಿತ್ತು. ಸೆಬಿ ಹೇರಿದ್ದ 7 ಬಿಲಿಯನ್ ಡಾಲರ್ (ಅಂದಾಜು 54 ಸಾವಿರ ಕೋಟಿ) ಹೂಡಿಕೆ ಮಿತಿಯನ್ನು ಬಹುತೇಕ ಮ್ಯೂಚುವಲ್ ಫಂಡ್ ಕಂಪನಿಗಳು ಉಲ್ಲಂಘಿಸಿದ ಪರಿಣಾಮ ನಿರ್ಬಂಧ ಜಾರಿಯಾಗಿತ್ತು. ಸೆಬಿ ವಿದೇಶಿ ಷೇರುಗಳಲ್ಲಿ ಮತ್ತೆ ಹೂಡಿಕೆ ಮಾಡಲು ಫಂಡ್ ಕಂಪನಿಗಳಿಗೆ ಈಚೆಗೆ ಮತ್ತೆ ಅನುಮತಿ ನೀಡಿದೆ.

ಆದರೆ, ಕಂಪನಿಗಳು ಮಾಡುವ ಒಟ್ಟು ಹೂಡಿಕೆಯು 7 ಬಿಲಿಯನ್ ಡಾಲರ್ ಮೀರ ಬಾರದು ಎಂದು ಸೆಬಿ ತಾಕೀತು ಮಾಡಿದೆ.

ದೈತ್ಯ ಕಂಪನಿಗಳಲ್ಲಿ ಹೂಡಿಕೆಗೆ ಅವಕಾಶ: ಅಮೆಜಾನ್, ಗೂಗಲ್, ಆ್ಯಪಲ್, ಫೇಸ್‌ಬುಕ್, ಮೈಕ್ರೊಸಾಫ್ಟ್, ನೆಟ್‌ಫ್ಲಿಕ್ಸ್, ಟೆಸ್ಲಾ...ದೈತ್ಯ ಬ್ರ್ಯಾಂಡ್‌ಗಳ ಹೆಸರು ಹೇಳುತ್ತಿರುವುದು ಏಕೆ ಎಂದು ಹುಬ್ಬೇರಿಸಬೇಡಿ. ಮನಸ್ಸು ಮಾಡಿದರೆ ನೀವೂ ಈ ಕಂಪನಿಗಳಲ್ಲಿ ಪಾಲುದಾರರಾಗಬಹುದು! ಆಶ್ಚರ್ಯ ಅಂತ ಅನಿಸಿದರೂ, ಅಂತಾರಾಷ್ಟ್ರೀಯ, ವಿದೇಶಿ ಮ್ಯೂಚುವಲ್ ಫಂಡ್ ಹೂಡಿಕೆ ವ್ಯವಸ್ಥೆಯಲ್ಲಿ ಇಂತಹ ಅವಕಾಶವಿದೆ.

ಭಾರತದ ಷೇರು ಮಾರುಕಟ್ಟೆ ಹೊರತುಪಡಿಸಿ ಇತರ ಜಾಗತಿಕ ಮಾರುಕಟ್ಟೆ-ಗಳಲ್ಲಿನ ಕಂಪನಿಗಳಲ್ಲಿ ಹೂಡಿಕೆ ಮಾಡುವ ಕೆಲಸವನ್ನು ಅಂತರರಾಷ್ಟ್ರೀಯ ಅಥವಾ ವಿದೇಶಿ ಮ್ಯೂಚುವಲ್ ಫಂಡ್‌ಗಳು ಮಾಡುತ್ತವೆ. ಜಗತ್ತಿನ ಅತಿದೊಡ್ಡ ಕಂಪನಿಗಳಲ್ಲಿ ಹೂಡಿಕೆ ಮಾಡಲು ಈ ಮ್ಯೂಚುವಲ್ ಫಂಡ್‌ಗಳು ಅವಕಾಶ ಕಲ್ಪಿಸುತ್ತವೆ.

ಅನುಕೂಲ–ಅನನುಕೂಲ: ವಿಶ್ವದ ಎಲ್ಲ ಷೇರು ಮಾರುಕಟ್ಟೆಗಳೂ ಏಕಕಾಲದಲ್ಲಿ ಕುಸಿಯುವ ಸಾಧ್ಯತೆ ಕಡಿಮೆ ಇರುವುದರಿಂದ ಹೂಡಿಕೆಯಲ್ಲಿ ವೈವಿಧ್ಯ ಕಾಯ್ದುಕೊಳ್ಳಲು ವಿದೇಶಿ ಮ್ಯೂಚುವಲ್ ಫಂಡ್‌ಗಳು ಉತ್ತಮ ಆಯ್ಕೆ. ಅಲ್ಲದೆ ರೂಪಾಯಿ ಎದುರು ಡಾಲರ್ ಮೌಲ್ಯ ಹೆಚ್ಚಿಗೆ ಇರುವುದರಿಂದ ಅದರ ಅನುಕೂಲವೂ ಸಿಗುತ್ತದೆ. ವಿದೇಶಿ ಕಂಪನಿಗಳಲ್ಲಿ ಹೂಡಿಕೆ ಮಾಡುವ ಮ್ಯೂಚುವಲ್ ಫಂಡ್‌ಗಳಲ್ಲಿ ಹಣ ತೊಡಗಿಸುವಾಗ, ರಾಜಕೀಯ ಅಸ್ಥಿರತೆ ಜಾಸ್ತಿ ಇರುವ ಕಡೆಗಳಲ್ಲಿ ಹೆಚ್ಚು ಹಣ ತೊಡಗಿಸದೆ ಇರುವುದು ಒಳಿತು.

ತೆರಿಗೆ: ವಿದೇಶಿ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದಾಗ ಡೆಟ್ ಮ್ಯೂಚುವಲ್ ಫಂಡ್‌ಗೆ ಅನ್ವಯಿಸುವಷ್ಟು ತೆರಿಗೆ ಕಟ್ಟಬೇಕಾಗುತ್ತದೆ. ಹೂಡಿಕೆ ಮಾಡಿದ ಮೂರು ವರ್ಷಗಳ ಒಳಗಾಗಿ ಹೂಡಿಕೆ ಮೊತ್ತವನ್ನು ಹಿಂಪಡೆದರೆ ನಿಮ್ಮ ವಾರ್ಷಿಕ ಆದಾಯಕ್ಕೆ ಅನುಗುಣವಾಗಿ ಎಸ್‌ಟಿಸಿಜಿ (ಅಲ್ಪಾವಧಿ ಬಂಡವಾಳ ಗಳಿಕೆ) ತೆರಿಗೆ ಅನ್ವಯಿಸುತ್ತದೆ. ಆದರೆ ಮೂರು ವರ್ಷಗಳ ನಂತರದಲ್ಲಿ ಹೂಡಿಕೆ ಹಿಂಪಡೆದರೆ ಬೆಲೆ ಸೂಚ್ಯಂಕದ ಏರಿಳಿತಕ್ಕೆ ತಕ್ಕಂತೆ ಇಂಡೆಕ್ಸೇಷನ್ ಒಳಗೊಂಡು ಶೇಕಡ 20ರಷ್ಟು ತೆರಿಗೆ ಪಾವತಿಸಬೇಕಾಗುತ್ತದೆ.

ಪ್ರಮುಖ ಆಯ್ಕೆಗಳು:

1. ಇಂಡೆಕ್ಸ್ ಎಕ್ಸ್‌ಚೇಂಜ್ ಟ್ರೇಡೆಡ್ ಫಂಡ್/ ಸೂಚ್ಯಂಕ ಆಧಾರಿತ ಇಟಿಎಫ್: ಹೂಡಿಕೆದಾರ ಸೂಚ್ಯಂಕ (Index) ಆಧಾರಿತ ಭಾರತದ ಇಟಿಎಫ್‌ನಲ್ಲಿ ಮೊದಲಿಗೆ ಹೂಡಿಕೆ ಮಾಡುತ್ತಾನೆ. ಈ ಫಂಡ್ ನಿರ್ವಹಣೆ ಮಾಡುವವರು ಆ ಹೂಡಿಕೆಯನ್ನು ವಿದೇಶಿ ಮಾರುಕಟ್ಟೆಗಳಲ್ಲಿ ತೊಡಗಿಸುತ್ತಾರೆ. ಇಲ್ಲಿ ಹೂಡಿಕೆದಾರ ಪರೋಕ್ಷವಾಗಿ ವಿದೇಶಿ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುತ್ತಾನೆ.

2. ಫಂಡ್ ಆಫ್ ಫಂಡ್ಸ್: ಹೂಡಿಕೆದಾರ ಮೊದಲಿಗೆ ಭಾರತದ ಮ್ಯೂಚುವಲ್ ಫಂಡ್ ಒಂದರಲ್ಲಿ ಹೂಡಿಕೆ ಮಾಡುತ್ತಾನೆ. ಹೀಗೆ ಮಾಡಿದ ಹೂಡಿಕೆಯನ್ನು ದೇಶಿ ಮ್ಯೂಚುವಲ್ ಫಂಡ್ ಸಂಸ್ಥೆಯು, ವಿದೇಶಿ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುತ್ತದೆ. ಮುಂದಿನ ಹಂತದಲ್ಲಿ ಆ ವಿದೇಶಿ ಮ್ಯೂಚುವಲ್ ಫಂಡ್ ನಿರ್ವಹಿಸುವ ಸಂಸ್ಥೆಯು ಷೇರು ಮಾರುಕಟ್ಟೆಯಲ್ಲಿ ಹಣ ತೊಡಗಿಸುತ್ತದೆ. ಇಲ್ಲಿ, ಹೂಡಿಕೆದಾರ ಪರೋಕ್ಷವಾಗಿ ವಿದೇಶಿ ಮಾರುಕಟ್ಟೆಗಳಲ್ಲಿ ಹೂಡಿಕೆ ಮಾಡುತ್ತಾನೆ.

3. ಸಕ್ರಿಯ ನಿರ್ವಹಣೆಯ ಫಂಡ್: ಹೂಡಿಕೆದಾರ ತೊಡಗಿಸುವ ಹಣವನ್ನು ಯಾವ ವಿದೇಶಿ ಕಂಪನಿಯಲ್ಲಿ ಅಥವಾ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡಬೇಕು ಎನ್ನುವ ಬಗ್ಗೆ ಫಂಡ್ ಮ್ಯಾನೇಜರ್ ಮತ್ತು ವೃತ್ತಿಪರರ ತಂಡ ತೀರ್ಮಾನಿಸುತ್ತದೆ. ಈ ರೀತಿಯ ಹೂಡಿಕೆಗಳನ್ನು ಸಕ್ರಿಯ ನಿರ್ವಹಣೆಯ (ಆಕ್ಟಿವ್ಲಿ ಮ್ಯಾನೇಜ್ಡ್) ಫಂಡ್ ಎಂದು ಕರೆಯಲಾಗುತ್ತೆ.

4. ಫೀಡರ್ ಫಂಡ್: ಸಣ್ಣ ಸಣ್ಣ ಹೂಡಿಕೆಗಳನ್ನು ಸಂಗ್ರಹಿಸಿ ದೊಡ್ಡ ಫಂಡ್ ಒಂದಕ್ಕೆ (ಮಾಸ್ಟರ್ ಫಂಡ್) ಹೂಡಿಕೆ ಮಾಡುವ ವ್ಯವಸ್ಥೆಯನ್ನು ಫೀಡರ್ ಫಂಡ್ ಎನ್ನಲಾಗುತ್ತದೆ. ಮಾಸ್ಟರ್ ಫಂಡ್‌ನಲ್ಲಿ ಸಂಗ್ರಹವಾದ ಮೊತ್ತವನ್ನು ಹೂಡಿಕೆ ಸಲಹೆಗಾರರು ಅನ್ಯ ದೇಶಗಳ ಷೇರು ಮಾರುಕಟ್ಟೆಗಳಲ್ಲಿ ತೊಡಗಿಸುತ್ತಾರೆ. ಇದರಿಂದ ಹೂಡಿಕೆದಾರನಿಗೆ ಪರೋಕ್ಷವಾಗಿ ವಿದೇಶಿ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದ ಲಾಭ ಸಿಗುತ್ತದೆ.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಅಲ್ಪ ಗಳಿಕೆ ದಾಖಲಿಸಿದ ಸೂಚ್ಯಂಕಗಳು

ಅನಿಶ್ಚಿತತೆಯ ನಡುವೆ ಷೇರುಪೇಟೆ ಸೂಚ್ಯಂಕಗಳು ಅಲ್ಪ ಪ್ರಮಾಣದ ಗಳಿಕೆ ದಾಖಲಿಸಿವೆ. ಜುಲೈ 1ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಏರಿಕೆ ಕಂಡಿವೆ. ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.34ರಷ್ಟು ಜಿಗಿದಿದೆ. ನಿಫ್ಟಿ ಶೇ 0.33ರಷ್ಟು ಗಳಿಸಿಕೊಂಡಿದೆ. ಆದರೆ ಜೂನ್ ತಿಂಗಳ ಒಟ್ಟಾರೆ ಲೆಕ್ಕಾಚಾರವನ್ನು ಪರಿಗಣಿಸಿದಾಗ ಸೆನ್ಸೆಕ್ಸ್ ಶೇ 4.5ರಷ್ಟು ಮತ್ತು ನಿಫ್ಟಿ ಶೇ 4.8ರಷ್ಟು ಇಳಿಕೆಯಾಗಿವೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ನಿರಂತರವಾಗಿ ಷೇರುಗಳ ಮಾರಾಟ, ಜೂನ್ ತಿಂಗಳ ವಾಹನ ಮಾರಾಟ ಸಂಖ್ಯೆಯಲ್ಲಿ ಹೆಚ್ಚಳ, ದಾಖಲೆ ಜಿಎಸ್‌ಟಿ ಸಂಗ್ರಹ, ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಮಿಶ್ರ ಪ್ರತಿಕ್ರಿಯೆ ಸೇರಿ ಹಲವು ಅಂಶಗಳು ಮಾರುಕಟ್ಟೆ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಎಫ್‌ಎಂಸಿಜಿ ಸೂಚ್ಯಂಕ ಶೇ 2.5ರಷ್ಟು ಜಿಗಿದಿದೆ. ಲೋಹ ಮತ್ತು ರಿಯಲ್ ಎಸ್ಟೇಟ್ ಸೂಚ್ಯಂಕಗಳು ತಲಾ ಶೇ 2ರಷ್ಟು ಹೆಚ್ಚಳ ಕಂಡಿವೆ. ನಿಫ್ಟಿ ಅನಿಲ ಮತ್ತು ತೈಲ ಸೂಚ್ಯಂಕ ಮತ್ತು ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕಗಳು ಶೇ 0.5ರಿಂದ ಶೇ 1ರಷ್ಟು ಇಳಿಕೆಯಾಗಿವೆ. ಬಿಎಸ್‌ಇ ಲಾರ್ಜ್ ಕ್ಯಾಪ್ ಸೂಚ್ಯಂಕ ಶೇ 0.5ರಷ್ಟು ಸುಧಾರಿಸಿದ್ದರೆ ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಕ್ರಮವಾಗಿ ಶೇ 0.26ರಷ್ಟು ಮತ್ತು ಶೇ 1ರಷ್ಟು ಜಿಗಿದಿವೆ.

ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 6,836.71 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 5,926.47 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಗಳಿಕೆ–ಇಳಿಕೆ: ನಿಫ್ಟಿಯಲ್ಲಿ ಐಟಿಸಿ ಶೇ 6.96ರಷ್ಟು, ಹಿಂಡಾಲ್ಕೊ ಶೇ 5.85ರಷ್ಟು, ಎಲ್ ಆ್ಯಂಡ್ ಟಿ ಶೇ 5.17ರಷ್ಟು, ಅಲ್ಟ್ರಾ ಟೆಕ್ ಸಿಮೆಂಟ್ ಶೇ 4.09ರಷ್ಟು, ಕೋಲ್ ಇಂಡಿಯಾ ಶೇ 3.79ರಷ್ಟು ಹೆಚ್ಚಳ ಕಂಡಿವೆ. ಬಜಾಜ್ ಆಟೊ ಶೇ 4.95ರಷ್ಟು, ಟೈಟನ್ ಶೇ 4.86ರಷ್ಟು, ಒಎನ್‌ಜಿಸಿ ಶೇ 4.59ರಷ್ಟು, ರಿಲಯನ್ಸ್ ಶೇ 3.65ರಷ್ಟು ಮತ್ತು ಐಷರ್ ಮೋಟರ್ಸ್ ಶೇ 3.30ರಷ್ಟು ಕುಸಿದಿವೆ.

ಮುನ್ನೋಟ: ಜೂನ್ ತಿಂಗಳಲ್ಲಿ ಸೆನ್ಸೆಕ್ಸ್ ಶೇ 4.5ರಷ್ಟು ಮತ್ತು ನಿಫ್ಟಿ ಶೇ 4.8ರಷ್ಟು ಕುಸಿದಿವೆ. ಸದ್ಯದ ಸ್ಥಿತಿಯಲ್ಲಿ ಮಾರುಕಟ್ಟೆ ಸುಧಾರಿಸಿಕೊಳ್ಳುವುದು ಕಷ್ಟ ಎನ್ನಬಹುದು. ಈಗ ಕಂಪನಿಗಳ ತ್ರೈಮಾಸಿಕ ಫಲಿತಾಂಶ ಪ್ರಕಟಿಸುವುದು ಶುರುವಾಗಲಿದೆ.

ಈ ವಾರ ಟಿಸಿಎಸ್, ಡಿಮಾರ್ಟ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಸಾಧನೆ ವರದಿ ಪ್ರಕಟಿಸಲಿವೆ. ತ್ರೈಮಾಸಿಕ ಫಲಿತಾಂಶದಲ್ಲಿ ಕಂಪನಿಗಳು ಎಷ್ಟರ ಮಟ್ಟಿಗೆ ಸಾಧನೆ ತೋರಿವೆ ಎನ್ನುವ ಅಂಶ ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿದೆ. ಇದಲ್ಲದೆ ಜಾಗತಿಕ ವಿದ್ಯಮಾನಗಳಿ-ಗೂ ಸಹ ಪೇಟೆ ಪ್ರತಿಕ್ರಿಯಿಸಲಿದೆ.



2022ರ ಆರು ತಿಂಗಳಲ್ಲಿ ₹ 2.2 ಲಕ್ಷ ಕೋಟಿ ಹಿಂತೆಗೆತ

₹ 50,203 ಕೋಟಿ ವಿದೇಶಿ ಬಂಡವಾಳ ಹೊರಹರಿವು

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಸತತ ಒಂಬತ್ತನೇ ತಿಂಗಳಿನಲ್ಲಿಯೂ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ.

ಜೂನ್ ತಿಂಗಳಿನಲ್ಲಿ ₹ 50,203 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. 2020ರ ಮಾರ್ಚ್ ಬಳಿಕ ಆಗಿರುವ ಗರಿಷ್ಠ ಮೊತ್ತದ ಹೊರಹರಿವು ಇದು. 2020ರ ಮಾರ್ಚ್‌ನಲ್ಲಿ ಒಟ್ಟು ₹ 61,973 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದರು.


2022ರ ಮೊದಲ ಆರು ತಿಂಗಳಿನಲ್ಲಿ ದೇಶದ ಷೇರುಪೇಟೆಯಿಂದ ಒಟ್ಟು ₹ 2.2 ಲಕ್ಷ ಕೋಟಿ ಬಂಡವಾಳ ಹೊರಹೋಗಿದೆ.

ರೂಪಾಯಿ ಮೌಲ್ಯ ಕುಸಿತಕ್ಕೆ ಬಂಡವಾಳ ಹೊರಹರಿವು ಪ್ರಮುಖ ಕಾರಣವಾಗಿದೆ. ಕಳೆದ ವಾರ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಮೊದಲ ಬಾರಿಗೆ ₹ 79ಕ್ಕಿಂತಲೂ ಕೆಳಗೆ ಬಂದಿತ್ತು. ಅಲ್ಪಾವಧಿಯಲ್ಲಿ ಎಫ್‌ಪಿಐ ಹೊರ ಹರಿವು ಅಸ್ಥಿರವಾಗಿ ಇರುವ ಸಾಧ್ಯತೆ ಇದೆ ಎಂದು ವಿಶ್ಲೇಷಕರು ಎಚ್ಚರಿಕೆ ನೀಡಿದ್ದಾರೆ.

ಜೂನ್‌ನಲ್ಲಿ ಸಾಲಪತ್ರ ಮಾರು-ಕಟ್ಟೆಯಿಂದಲೂ ₹ 1,414 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ. ಮೇ ತಿಂಗಳಿನಲ್ಲಿ ₹ 5,506 ಕೋಟಿ ಹಿಂದಕ್ಕೆ ಪಡೆಯಲಾಗಿತ್ತು. ಇದಕ್ಕೆ ಹೋಲಿಸಿದರೆ ಹೊರಹರಿವು ಕಡಿಮೆ ಆಗಿದೆ.

ಪ್ರವರ್ಧಮಾನಕ್ಕೆ ಬರುತ್ತಿರುವ ಇತರ ದೇಶಗಳ ಮಾರುಕಟ್ಟೆಗಳಿಗೆ ಹೋಲಿಸಿದರೆ ಭಾರತದಿಂದ ಹೆಚ್ಚಿನ ಪ್ರಮಾಣದಲ್ಲಿ ಬಂಡವಾಳ ಹೊರ ಹರಿವು ಆಗಿದೆ ಎಂದು ಮಾರ್ನಿಂಗ್ ಸ್ಟಾರ್ ಇಂಡಿಯಾದ ಸಹಾಯಕ ನಿರ್ದೇಶಕ ಹಿಮಾಂಶು ಶ್ರೀವಾತ್ಸವ ಹೇಳಿದ್ದಾರೆ.

ಹೊರಹರಿವಿನ ವಿವರ (₹ ಕೋಟಿಗಳಲ್ಲಿ)



ಬಂಡವಾಳ ಹಿಂತೆಗೆತಕ್ಕೆ ಕಾರಣಗಳು

- ಅಮೆರಿಕದ ಫೆಡರಲ್ ರಿಸರ್ವ್‌ನಿಂದ ಬಡ್ಡಿದರ ಹೆಚ್ಚಳ
- ಹಣದುಬ್ಬರ ಏರಿಕೆ
- ದೇಶಿ ಷೇರುಗಳ ಮೌಲ್ಯ ಗರಿಷ್ಠ ಮಟ್ಟದಲ್ಲಿ ಇರುವುದು

> **ಅಮೆರಿಕದಲ್ಲಿ ಬಡ್ಡಿದರ ಹೆಚ್ಚಾಗುತ್ತಿರುವುದರಿಂದ ವಿದೇಶಿ ಹೂಡಿಕೆದಾರರಿಗೆ ಭಾರತದ ಸಾಲಪತ್ರಗಳು ಆಕರ್ಷಕ ಹೂಡಿಕೆಯ ಆಯ್ಕೆಯಾಗಿ ಉಳಿದಂತೆ ಕಾಣುತ್ತಿಲ್ಲ**
> **ಹಿಮಾಂಶು ಶ್ರೀವಾತ್ಸವ**
> ಮಾರ್ನಿಂಗ್‌ಸ್ಟಾರ್ ಇಂಡಿಯಾದ ಸಹಾಯಕ ನಿರ್ದೇಶಕ

ರಫ್ತು, ಆಕಸ್ಮಿಕ ಲಾಭ ತೆರಿಗೆ: ಕೇಂದ್ರಕ್ಕೆ ₹ 72 ಸಾವಿರ ಕೋಟಿ ವರಮಾನ

ನವದೆಹಲಿ (ಪಿಟಿಐ): ಪೆಟ್ರೋಲ್, ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ಕಡಿಮೆ ಮಾಡಿದ್ದರಿಂದ ಆದ ವರಮಾನ ಕೊರತೆಯ ಶೇಕಡ 85ರಷ್ಟನ್ನು, ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆ ಹಾಗೂ ಇಂಧನ ರಫ್ತಿಗೆ ವಿಧಿಸಿರುವ ತೆರಿಗೆಯು ತುಂಬಿಕೊಡಲಿದೆ ಎಂದು ಉದ್ಯಮದ ಮೂಲಗಳು ಹೇಳಿವೆ.

ಕಚ್ಚಾ ತೈಲ ಉತ್ಪಾದಿಸುವ ಕಂಪನಿಗಳಾದ ಒಎನ್‌ಜಿಸಿ, ಆಯಿಲ್ ಇಂಡಿಯಾ ಮತ್ತು ವೇದಾಂತ ಲಿಮಿಟೆಡ್ ಮೇಲಿನ ತೆರಿಗೆಯಿಂದ ಕೇಂದ್ರಕ್ಕೆ ₹ 69 ಸಾವಿರ ಕೋಟಿ ವಾರ್ಷಿಕ ವರಮಾನ ಸಿಗಲಿದೆ ಎಂದು ಮೂಲಗಳು ಹೇಳಿವೆ. ಪೆಟ್ರೋಲ್, ಡೀಸೆಲ್, ವಿಮಾನ ಇಂಧನ ರಫ್ತು ತೆರಿಗೆಯಿಂದ ಕೇಂದ್ರಕ್ಕೆ ಹೆಚ್ಚುವರಿ ವರಮಾನ ಸಿಗಲಿದೆ.

'ರಫ್ತು ತೆರಿಗೆಯು ಮಾರ್ಚ್‌ವರೆಗೆ ಜಾರಿಯಲ್ಲಿದ್ದರೆ ಕೇಂದ್ರಕ್ಕೆ ₹ 20 ಸಾವಿರ ಕೋಟಿ ಸಿಗುವ ಸಾಧ್ಯತೆ ಇದೆ' ಎಂದು ಮೂಲಗಳು ಹೇಳಿವೆ. ರಫ್ತು ಹಾಗೂ ಆಕಸ್ಮಿಕ ಲಾಭ ತೆರಿಗೆಗಳಿಂದ ಒಟ್ಟು ₹ 72 ಸಾವಿರ ಕೋಟಿ ವರಮಾನ ಸಿಗುವ ನಿರೀಕ್ಷೆ ಇದೆ.

ಪೆಟ್ರೋಲ್, ಡೀಸೆಲ್ ಮೇಲಿನ ಎಕ್ಸೈಸ್ ಸುಂಕ ಕಡಿತದಿಂದ ಕೇಂದ್ರಕ್ಕೆ ವಾರ್ಷಿಕ ₹ 1 ಲಕ್ಷ ಕೋಟಿ ವರಮಾನ ನಷ್ಟವಾಗುತ್ತದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದರು.

ಹೊಸ ತೆರಿಗೆಯನ್ನು ಜಾರಿಗೆ ತಂದಿದ್ದರ ಬಗ್ಗೆ ಸಚಿವೆ ನಿರ್ಮಲಾ ಅವರು, 'ತೈಲ ಸಂಸ್ಕರಣಾ ಕಂಪನಿಗಳು ರಫ್ತಿನ ಮೂಲಕ ಭಾರಿ ಲಾಭ ಗಳಿಸಿದ್ದವು. ಲಾಭ ಗಳಿಸುವವರ ಮೇಲೆ ನಮಗೆ ದ್ವೇಷವಿಲ್ಲ. ಆದರೆ, ಪೆಟ್ರೋಲ್ ಬಂಕ್‌ನಲ್ಲಿ ತೈಲ ಸಿಗದೆ, ಅವುಗಳನ್ನು ರಫ್ತು ಮಾಡಲಾಗುತ್ತಿದೆ ಎಂದಾದರೆ, ಅದರಲ್ಲಿ ಒಂದಿಷ್ಟು ಪಾಲು ನಮ್ಮ ಜನರಿಗೆ ಇರಿಸಬೇಕಾಗುತ್ತದೆ' ಎಂದು ಹೇಳಿದ್ದರು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹560
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹560

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹360-600
ದ್ವಿತಳಿ (ಬಿ.ವಿ)	₹520-823

₹ 1 ಲಕ್ಷ ಕೋಟಿಗೂ ಅಧಿಕ ಚಿನ್ನದ ಸಾಲ: ಕೆನರಾ ಬ್ಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್, ಜೂನ್ 30ರ ಅಂತ್ಯಕ್ಕೆ ₹ 1 ಲಕ್ಷ ಕೋಟಿಗೂ ಅಧಿಕ ಮೊತ್ತದ ಚಿನ್ನದ ಸಾಲ ನೀಡಿದೆ.

ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ಹಣಕಾಸು ವರ್ಷದಲ್ಲಿ ಈವರೆಗೆ ಚಿನ್ನದ ಸಾಲ ವಿಭಾಗದಲ್ಲಿ ಶೇಕಡ 26.19ರಷ್ಟು ಬೆಳವಣಿಗೆ ಸಾಧಿಸಲಾಗಿದೆ. 435 ಗೋಲ್ಡ್ ಲೋನ್ ಪ್ಲಾಜಾ ಶಾಖೆಗಳಿಂದಾಗಿ ಇದು ಸಾಧ್ಯವಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ರಿಟೇಲ್, ಗೃಹ, ಎಂಎಸ್‌ಎಂಇ, ಕೃಷಿ ಮತ್ತು ಕಾರ್ಪೊರೇಟ್ ಸಾಲಗಳಲ್ಲಿಯೂ ಎರಡಂಕಿ ಪ್ರಗತಿ ಸಾಧಿಸಿರುವುದಾಗಿ ಬ್ಯಾಂಕ್‌ನ ಬೆಂಗಳೂರು ಕೇಂದ್ರ ಕಚೇರಿಯ ಚೀಫ್ ಜನರಲ್ ಮ್ಯಾನೇಜರ್ ಭವೇಂದ್ರ ಕುಮಾರ್ ಅವರು ತಿಳಿಸಿದ್ದಾರೆ.

ಬ್ಯಾಂಕಿಂಗ್ ವಂಚನೆ ಪ್ರಕರಣ ಇಳಿಕೆ

ನವದೆಹಲಿ (ಪಿಟಿಐ): ಬ್ಯಾಂಕಿಂಗ್ ವಲಯದಲ್ಲಿ ₹ 100 ಕೋಟಿಗೂ ಹೆಚ್ಚಿನ ಮೊತ್ತದ ವಂಚನೆ ಪ್ರಕರಣಗಳ ಸಂಖ್ಯೆ ಇಳಿಕೆ ಕಾಣುತ್ತಿದೆ.

2020–21ರಲ್ಲಿ ₹ 1.05 ಲಕ್ಷ ಕೋಟಿ ಮೊತ್ತದ ವಂಚನೆ ನಡೆದಿತ್ತು. ಇದಕ್ಕೆ ಹೋಲಿಸಿದರೆ 2021–22ರಲ್ಲಿ ₹ 41 ಸಾವಿರ ಕೋಟಿ ಮೊತ್ತದ ವಂಚನೆ ನಡೆದಿದೆ ಎಂದು ಅಧಿಕೃತ ಅಂಕಿ–ಅಂಶಗಳು ಹೇಳಿವೆ.

ಸರ್ಕಾರಿ ಮತ್ತು ಖಾಸಗಿ ವಲಯದ ಬ್ಯಾಂಕ್‌ಗಳಲ್ಲಿ ವಂಚನೆ ಪ್ರಕರಣಗಳ ಸಂಖ್ಯೆಯು 2020–21ರಲ್ಲಿ 265 ಇದ್ದಿದ್ದು 2021–22ರಲ್ಲಿ 118ಕ್ಕೆ ಇಳಿಕೆ ಆಗಿದೆ.

ವಂಚನೆ ತಡೆಯಲು ಆರ್‌ಬಿಐ ಹಲವು ಕ್ರಮಗಳನ್ನು ತೆಗೆದುಕೊಂಡಿದೆ. ವಂಚನೆಯ ಬಗ್ಗೆ ಮುಂಚಿತವಾಗಿಯೇ ಎಚ್ಚರಿಕೆ ನೀಡುವ ವ್ಯವಸ್ಥೆಯನ್ನು ಸುಧಾರಣೆ, ದತ್ತಾಂಶ ವಿಶ್ಲೇಷಣೆ, ವಹಿವಾಟು ಮೇಲ್ವಿಚಾರಣೆ ಸೇರಿದಂತೆ ಹಲವು ಕ್ರಮಗಳನ್ನು ತೆಗೆದುಕೊಂಡಿದೆ.



ಬ್ಯಾಂಕ್	ವಂಚನೆಯ ಮೊತ್ತ (ಕೋಟಿಗಳಲ್ಲಿ)	
	2020-21	2021-22
ಸರ್ಕಾರಿ ಬ್ಯಾಂಕ್‌ಗಳು	65,900	28,000
ಖಾಸಗಿ ಬ್ಯಾಂಕ್‌ಗಳು	39,900	13,000

ಇಂಗ್ಲೆಂಡ್ ವಿರುದ್ಧ ಕ್ರಿಕೆಟ್ ಟೆಸ್ಟ್: ಸಿರಾಜ್‌ಗೆ ನಾಲ್ಕು ವಿಕೆಟ್; ಜಾನಿ ಬೆಸ್ಟೋ ಶತಕ

ಭಾರಿ ಮುನ್ನಡೆಯತ್ತ ಭಾರತ ಹೆಜ್ಜೆ

ಬರ್ಮಿಂಗ್‌ಹ್ಯಾಂ (ಪಿಟಿಐ): ಜಾನಿ ಬೆಸ್ಟೋ ಸೊಗಸಾದ ಶತಕದ ಮೂಲಕ ಇಂಗ್ಲೆಂಡ್‌ಗೆ ಆಸರೆಯಾದರೆ, ಮೊನಚಿನ ದಾಳಿ ನಡೆಸಿದ ಮೊಹಮ್ಮದ್ ಸಿರಾಜ್ ಭಾರತ ತಂಡಕ್ಕೆ ಇನಿಂಗ್ಸ್ ಮುನ್ನಡೆ ತಂದುಕೊಡಲು ನೆರವಾದರು.

ಬರ್ಮಿಂಗ್‌ಹ್ಯಾಂನಲ್ಲಿ ನಡೆಯುತ್ತಿರುವ ಐದನೇ ಹಾಗೂ ಕೊನೆಯ ಕ್ರಿಕೆಟ್ ಟೆಸ್ಟ್ ಪಂದ್ಯದ ಮೂರನೇ ದಿನವಾದ ಭಾನುವಾರ ಭಾರತ ಮತ್ತು ಇಂಗ್ಲೆಂಡ್ ಸಮಬಲದ ಪೈಪೋಟಿ ನಡೆಸಿದವು. ಮೊದಲ ಇನಿಂಗ್ಸ್‌ನಲ್ಲಿ ಇಂಗ್ಲೆಂಡ್ ತಂಡವನ್ನು 284 ರನ್‌ಗಳಿಗೆ ಆಲೌಟ್ ಮಾಡಿದ ಜಸ್‌ಪ್ರೀತ್ ಬೂಮ್ರಾ ಬಳಗ, ದಿನದಾಟದ ಅಂತ್ಯಕ್ಕೆ ಎರಡನೇ ಇನಿಂಗ್ಸ್‌ನಲ್ಲಿ 3 ವಿಕೆಟ್‌ಗೆ 125 ರನ್ ಗಳಿಸಿದೆ. ಒಟ್ಟಾರೆ 257 ರನ್‌ಗಳ ಮುನ್ನಡೆಯಲ್ಲಿದೆ.

ಮೊದಲ ಇನಿಂಗ್ಸ್‌ನಲ್ಲಿ ಲಭಿಸಿದ 132 ರನ್‌ಗಳ ಮುನ್ನಡೆಯ ಬಲದೊಂದಿಗೆ ಎರಡನೇ ಇನಿಂಗ್ಸ್ ಆರಂಭಿಸಿದ ಭಾರತ ತಂಡ ಶುಭಮನ್ ಗಿಲ್ (4) ಅವರನ್ನು ಬೇಗನೇ ಕಳೆದುಕೊಂಡಿತು. ಆ್ಯಂಡರ್ಸನ್ ಬೌಲಿಂಗ್‌ನಲ್ಲಿ ಕ್ರಾಲಿಗೆ ಕ್ಯಾಚಿತ್ತು ಅವರು ನಿರ್ಗಮಿಸಿದರು. ಅಲ್ಪ ಸಮಯದ ಬಳಿಕ ಹನುಮ ವಿಹಾರಿ (11), ಬ್ರಾಡ್‌ಗೆ ವಿಕೆಟ್ ಒಪ್ಪಿಸಿದರು. ವಿರಾಟ್ ಕೊಹ್ಲಿ (20) ಮತ್ತೊಮ್ಮೆ ವಿಫಲರಾದರು.

ಚೇತೇಶ್ವರ ಪೂಜಾರ (ಬ್ಯಾಟಿಂಗ್ 50, 139 ಎ) ಮತ್ತು ರಿಷಭ್ ಪಂತ್(ಬ್ಯಾಟಿಂಗ್ 30, 46 ಎ) ಅವರು ಕ್ರೀಸ್‌ನಲ್ಲಿದ್ದರು. ನಾಲ್ಕನೇ ದಿನ ವೇಗವಾಗಿ ರನ್ ಪೇರಿಸಿ ಇಂಗ್ಲೆಂಡ್‌ಗೆ ಕಠಿಣ ಗುರಿ ನೀಡುವ ಲೆಕ್ಕಾಚಾರವನ್ನು ಬೂಮ್ರಾ ಬಳಗ ಹಾಕಿಕೊಂಡಿದೆ.

ಬೆಸ್ಟೋ ಶತಕ: 5 ವಿಕೆಟ್‌ಗೆ 84 ರನ್‌ಗಳಿಂದ ಭಾನುವಾರ ಬೆಳಿಗ್ಗೆ ಆಟ ಮುಂದುವರಿಸಿದ ಇಂಗ್ಲೆಂಡ್‌ಗೆ ಬೆಸ್ಟೋ ಆಸರೆಯಾದರು. ಮೊದಲ ಇನಿಂಗ್ಸ್‌ನಲ್ಲಿ ಭಾರೀ ಮುನ್ನಡೆ ಗಳಿಸಬೇಕೆಂಬ ಭಾರತದ ಕನಸಿಗೆ ಅವರು ಅಡ್ಡಿಯಾದರು.

ಒಂದು ಬದಿಯಲ್ಲಿ ವಿಕೆಟ್ ಉರುಳುತ್ತಿದ್ದರೂ ಛಲದಿಂದ ಬ್ಯಾಟ್ ಬೀಸಿದ ಬೆಸ್ಟೋ (106, 140 ಎಸೆತ) ಸತತ ಮೂರನೇ ಟೆಸ್ಟ್‌ನಲ್ಲಿ ಹಾಗೂ ಈ ಋತುವಿನ ಐದನೇ ಶತಕ ಸಾಧನೆ ಮಾಡಿದರು.

ಬೆಳಿಗ್ಗೆ ಬೇಗನೇ ವಿಕೆಟ್ ಪಡೆದು, ಇಂಗ್ಲೆಂಡ್ ಮೇಲೆ ಒತ್ತಡ ಹೇರಬೇಕೆಂಬ ಭಾರತದ ತಂತ್ರ ಫಲಿಸಲಿಲ್ಲ. ಬೆಸ್ಟೋ ಅವರು ಬೆನ್ ಸ್ಟೋಕ್ಸ್ (25) ಜತೆ ಆರನೇ ವಿಕೆಟ್‌ಗೆ 66 ರನ್ ಸೇರಿಸಿದರು. ಎರಡನೇ ದಿನ ಮಿಂಚಿದ್ದ ಜಸ್‌ಪ್ರೀತ್ ಬೂಮ್ರಾ ಅವರ ಕರಾರುವಾಕ್ ದಾಳಿಯನ್ನು ಬೆಸ್ಟೋ ದಿಟ್ಟವಾಗಿ ಎದುರಿಸಿದರು.

ಸ್ಟೋಕ್ಸ್ ವಿಕೆಟ್ ಪಡೆದ ಶಾರ್ದೂಲ್ ಠಾಕೂರ್, ಭಾರತಕ್ಕೆ ದಿನದ ಮೊದಲ ಯಶಸ್ಸು ತಂದಿತ್ತರು. ಆದರೆ ಬೆಸ್ಟೋ ಅವರು ಸ್ಯಾಮ್ ಬಿಲಿಂಗ್ಸ್ (36, 57ನೇ ಎ) ಜತೆ ಏಳನೇ ವಿಕೆಟ್‌ಗೆ 92 ರನ್ ಸೇರಿಸಿದರು. ಇದರಿಂದ ಇಂಗ್ಲೆಂಡ್ ತಂಡದ ಮೊತ್ತ 250ರ ಗಡಿ ದಾಟಿತು.

ಶತಕದ ಪೂರೈಸಿದ ಬಳಿಕ ಬೆಸ್ಟೋ ಹೆಚ್ಚುಹೊತ್ತು ನಿಲ್ಲಲಿಲ್ಲ. ಮೊಹಮ್ಮದ್ ಶಮಿ ಅವರ ಬೌಲಿಂಗ್‌ನಲ್ಲಿ ವಿರಾಟ್ ಕೊಹ್ಲಿಗೆ ಕ್ಯಾಚ್‌ನೀಡಿ ಪೆವಿಲಿಯನ್‌ಗೆ ಹೆಜ್ಜೆಯಿಟ್ಟರು.

ಸಿರಾಜ್ ಮಿಂಚು: ಇಂಗ್ಲೆಂಡ್‌ನ ಕೊನೆಯ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳಿಗೆ ರಟ್ಟೆಯರಳಿಸಲು ಮೊಹಮ್ಮದ್ ಸಿರಾಜ್ (66ಕ್ಕೆ 4) ಅವಕಾಶ ನೀಡಲಿಲ್ಲ. 36 ರನ್ ಸೇರಿಸುವಷ್ಟರಲ್ಲಿ ಕೊನೆಯ ಮೂರು ವಿಕೆಟ್‌ಗಳನ್ನು ಪಡೆದು ಇಂಗ್ಲೆಂಡ್ ಇನಿಂಗ್ಸ್‌ಗೆ ಅಂತ್ಯಹಾಡಿದರು. ಬೂಮ್ರಾ (68ಕ್ಕೆ 3) ಶಿಸ್ತಿನ ದಾಳಿ ನಡೆಸಿದರೂ ಭಾನುವಾರ ಯಾವುದೇ ವಿಕೆಟ್ ಪಡೆಯಲಿಲ್ಲ. ಶಮಿ 78 ರನ್ ನೀಡಿ ಎರಡು ವಿಕೆಟ್ ಪಡೆದರು.



ಶತಕ ಗಳಿಸಿದ ಜಾನಿ ಬೆಸ್ಟೋ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್
ಭಾರತ 416 (84.5 ಓವರ್)
ಇಂಗ್ಲೆಂಡ್ 284 (61.3 ಓವರ್)
(ಶನಿವಾರ 84ಕ್ಕೆ 5)
ಬೆಸ್ಟೋ ಸಿ ಕೊಹ್ಲಿ ಬಿ ಶಮಿ 106 (140 ಎ, 4X14, 6X2), ಸ್ಟೋಕ್ಸ್ ಸಿ ಬೂಮ್ರಾ ಬಿ ಠಾಕೂರ್ 25 (36 ಎ, 4X3), ಸ್ಯಾಮ್ ಬಿಲಿಂಗ್ಸ್ ಬಿ ಸಿರಾಜ್ 36 (57 ಎ, 4X4), ಬ್ರಾಡ್ ಸಿ ಪಂತ್ ಬಿ ಸಿರಾಜ್ 1 (5 ಎ), ಪಾಟ್ಸ್ ಸಿ ಅಯ್ಯರ್ ಬಿ ಸಿರಾಜ್ 19 (18 ಎ, 4X3, 6X1), ಆ್ಯಂಡರ್ಸನ್ ಔಟಾಗದೆ 6 (10 ಎ, 4X1)
ಇತರೆ 35 (ಬೈ 15, ಲೆಗ್‌ಬೈ 5, ನೋಬಾಲ್ 13, ವೈಡ್ 1)
ವಿಕೆಟ್ ಪತನ: 6–149 (ಬೆನ್ ಸ್ಟೋಕ್ಸ್; 37.4), 7–241 (ಜಾನಿ ಬೆಸ್ಟೋ; 54.1), 8–248 (ಸ್ಟುವರ್ಟ್ ಬ್ರಾಡ್; 55.4), 9–267 (ಸ್ಯಾಮ್ ಬಿಲಿಂಗ್ಸ್; 59.1), 10–284 (ಮ್ಯಾಟಿ ಪಾಟ್ಸ್; 61.3)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 19–3–68–3, ಮೊಹಮ್ಮದ್ ಶಮಿ 22–4–78–2, ಮೊಹಮ್ಮದ್ ಸಿರಾಜ್ 11.3–2–66–4, ಶಾರ್ದೂಲ್ ಠಾಕೂರ್ 7–0–48–1, ರವೀಂದ್ರ ಜಡೇಜ 2–0–3–0

ಎರಡನೇ ಇನಿಂಗ್ಸ್
ಭಾರತ 3ಕ್ಕೆ 125 (45 ಓವರ್)
ಗಿಲ್ ಸಿ ಕ್ರಾಲಿ ಬಿ ಆ್ಯಂಡರ್ಸನ್ 4 (3 ಎ, 4X1), ಚೇತೇಶ್ವರ ಪೂಜಾರ ಬ್ಯಾಟಿಂಗ್ 50 (139 ಎ, 4X5), ಹನುಮ ಸಿ ಬೆಸ್ಟೋ ಬಿ ಬ್ರಾಡ್ 11 (44 ಎ, 4X1), ವಿರಾಟ್ ಸಿ ರೂಟ್ ಬಿ ಸ್ಟೋಕ್ಸ್ 20 (40ಎ, 4X4), ರಿಷಭ್ ಬ್ಯಾಟಿಂಗ್ 30 (46ಎ, 4X4)
ಇತರೆ 10 (ಲೆಗ್‌ಬೈ 7, ನೋಬಾಲ್ 2, ವೈಡ್ 1)
ವಿಕೆಟ್ ಪತನ: 1–4 (ಶುಭಮನ್ ಗಿಲ್; 0.3), 2–43 (ಹನುಮ ವಿಹಾರಿ; 16.3), 3–75 (ವಿರಾಟ್ ಕೊಹ್ಲಿ, 29.5)
ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 14–5–26–1, ಸ್ಟುವರ್ಟ್ ಬ್ರಾಡ್ 12–1–38–1, ಮ್ಯಾಟಿ ಪಾಟ್ಸ್ 8–2–20–0, ಜಾಕ್ ಲೀಚ್ 1–0–5–0, ಬೆನ್ ಸ್ಟೋಕ್ಸ್ 7–0–22–1, ಜೊ ರೂಟ್ 3–1–7–0

ಜಸ್‌ಪ್ರೀತ್ ಬೂಮ್ರಾ ದಾಖಲೆ

ವೇಗಿ ಜಸ್‌ಪ್ರೀತ್ ಬೂಮ್ರಾ ಇಂಗ್ಲೆಂಡ್ ನೆಲದಲ್ಲಿ ಟೆಸ್ಟ್ ಸರಣಿಯೊಂದರಲ್ಲಿ ಭಾರತದ ಪರ ಅತಿಹೆಚ್ಚು ವಿಕೆಟ್ ಪಡೆದ ದಾಖಲೆ ಬರೆದರು. ಅವರು ಇಂಗ್ಲೆಂಡ್‌ನ ಮೊದಲ ಇನಿಂಗ್ಸ್‌ನಲ್ಲಿ 68 ರನ್ ನೀಡಿ 3 ವಿಕೆಟ್ ಪಡೆದರು. ಐದು ಪಂದ್ಯಗಳ ಸರಣಿಯಲ್ಲಿ ಅವರು ಒಟ್ಟಾರೆ 21 ವಿಕೆಟ್ ಪಡೆದಿದ್ದಾರೆ.

2014 ರಲ್ಲಿ ನಡೆದಿದ್ದ ಐದು ಟೆಸ್ಟ್ ಪಂದ್ಯಗಳ ಸರಣಿಯಲ್ಲಿ ಭುವನೇಶ್ವರ್‌ಕುಮಾರ್ 19 ವಿಕೆಟ್ ಪಡೆದದ್ದು ಇದುವರೆಗಿನ ದಾಖಲೆಯಾಗಿತ್ತು. ಜಹೀರ್ ಖಾನ್ (18 ವಿಕೆಟ್, 2007ರಲ್ಲಿ) ಮತ್ತು ಇಶಾಂತ್ ಶರ್ಮ (18 ವಿಕೆಟ್, 2018 ರಲ್ಲಿ) ಬಳಿಕದ ಸ್ಥಾನದಲ್ಲಿದ್ದಾರೆ.

ಮಹಿಳಾ ಕ್ರಿಕೆಟ್: ಭಾರತಕ್ಕೆ ಸರಣಿ ಮುನ್ನಡೆಯ ಗುರಿ



ಹರ್ಲೀನ್

ಪಲ್ಲೆಕೆಲೆ (ಪಿಟಿಐ): ಭಾರತ ಮಹಿಳಾ ತಂಡ ಎರಡನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಸೋಮವಾರ ಶ್ರೀಲಂಕಾ ತಂಡವನ್ನು ಎದುರಿಸಲಿದ್ದು, ಸರಣಿ ಗೆಲ್ಲುವ ವಿಶ್ವಾಸದಲ್ಲಿದೆ.

ಲಂಕಾ ವಿರುದ್ಧದ ಟಿ20 ಸರಣಿಯನ್ನು 2–1 ರಲ್ಲಿ ಜಯಿಸಿದ್ದ ಭಾರತ, ಮೊದಲ ಏಕದಿನ ಪಂದ್ಯದಲ್ಲಿ 4 ವಿಕೆಟ್‌ಗಳ ಗೆಲುವು ಪಡೆದಿತ್ತು. ಗೆಲುವಿನ ಓಟ ಮುಂದುವರಿಸಿ ಮೂರು ಪಂದ್ಯಗಳ ಸರಣಿಯಲ್ಲಿ 2–0 ಮುನ್ನಡೆ ಪಡೆಯುವುದು ತಂಡದ ಗುರಿಯಾಗಿದೆ.

ಆರಂಭಿಕ ಬ್ಯಾಟರ್‌ಗಳು ಇನ್ನೂ ಲಯ ಕಂಡುಕೊಳ್ಳದೇ ಇರುವುದು ಭಾರತ ತಂಡದ ಚಿಂತೆಗೆ ಕಾರಣವಾಗಿದೆ. ಸ್ಮೃತಿ ಮಂದಾನ ಮತ್ತು ಶಫಾಲಿ ವರ್ಮ ಅವರು ತಂಡಕ್ಕೆ ಉತ್ತಮ ಆರಂಭ ನೀಡುವಲ್ಲಿ ವಿಫಲರಾಗಿದ್ದಾರೆ.

ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ಆಲ್‌ರೌಂಡ್ ಆಟದ ಮೂಲಕ ತಂಡದ ಗೆಲುವಿಗೆ ನೆರವಾಗುತ್ತಿದ್ದಾರೆ. ಕಳೆದ ಪಂದ್ಯದಲ್ಲಿ ಮಿಂಚಿದ್ದ ಹರ್ಲೀನ್ ಡಿಯೊಲ್, ದೀಪ್ತಿ ಶರ್ಮ ಮತ್ತು ರೇಣುಕಾ ಸಿಂಗ್ ಉತ್ತಮ ಆಟ ಮುಂದುವರಿಸುವ ವಿಶ್ವಾಸದಲ್ಲಿದ್ದಾರೆ.

ರೋಹಿತ್ ಚೇತರಿಕೆ

ಬರ್ಮಿಂಗ್‌ಹ್ಯಾಂ (ಪಿಟಿಐ):ಭಾರತ ತಂಡದ ನಾಯಕ ರೋಹಿತ್ ಶರ್ಮ ಕೋವಿಡ್‌ನಿಂದ ಚೇತರಿಸಿಕೊಂಡಿದ್ದು, ಪ್ರತ್ಯೇಕವಾಸದಿಂದ ಹೊರಬಂದಿದ್ದಾರೆ.

‘ಕೋವಿಡ್ ಪರೀಕ್ಷೆಯಲ್ಲಿ ನೆಗೆಟಿವ್ ಬಂದಿರುವುದರಿಂದ ರೋಹಿತ್ ಅವರ ಕ್ವಾರಂಟೈನ್ ಅವಧಿ ಮುಗಿದಿದೆ. ಶೀಘ್ರದಲ್ಲೇ ಅಭ್ಯಾಸ ಆರಂಭಿಸಲಿದ್ದು, ಇಂಗ್ಲೆಂಡ್ ವಿರುದ್ಧದ ಟಿ20 ಸರಣಿಗೆ ಲಭ್ಯರಾಗುವರು’ ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದರು.

ಸುದ್ದಿ 2 ನಿಮಿಷ

ಚೆಸ್ ಒಲಿಂಪಿಯಾಡ್: ಭಾರತದ ಮೂರನೇ ತಂಡಕ್ಕೆ ಅವಕಾಶ

ಚೆನ್ನೈ (ಪಿಟಿಐ): ಭಾರತವು 44ನೇ ಚೆಸ್ ಒಲಿಂಪಿಯಾಡ್‌ನ ಮುಕ್ತ ವಿಭಾಗದಲ್ಲಿ ಮೂರನೇ ತಂಡವನ್ನು ಕಣಕ್ಕಿಳಿಸಲಿದೆ ಎಂದು ಅಖಿಲ ಭಾರತ ಚೆಸ್ ಫೆಡರೇಷನ್ (ಎಐಸಿಎಫ್) ಹೇಳಿದೆ.

ಭಾರತದ ಆತಿಥ್ಯದಲ್ಲಿ ಚೆಸ್ ಒಲಿಂಪಿಯಾಡ್, ಜುಲೈ 28 ರಿಂದ ಆ. 10ರ ವರೆಗೆ ಆಯೋಜನೆಯಾಗಿದೆ.

ಆತಿಥೇಯ ರಾಷ್ಟ್ರ ಎಂಬ ಕಾರಣಕ್ಕೆ ಮೂರನೇ ತಂಡವನ್ನು ಕಣಕ್ಕಿಳಿಸಲು ವಿಶ್ವ ಚೆಸ್ ಸಂಸ್ಥೆ (ಫಿಡೆ) ಭಾರತಕ್ಕೆ ಅವಕಾಶ ನೀಡಿದೆ. ಮುಕ್ತ ವಿಭಾಗದಲ್ಲಿ ಭಾರತ ‘ಎ’ ತಂಡಕ್ಕೆ ಮೂರನೇ ಶ್ರೇಯಾಂಕ ಹಾಗೂ ‘ಬಿ’ ತಂಡಕ್ಕೆ 11ನೇ ಶ್ರೇಯಾಂಕ ದೊರೆತಿದೆ. ಮಹಿಳೆಯರ ವಿಭಾಗದಲ್ಲಿ ಕೊನೇರು ಹಂಪಿ, ಡಿ.ಹರಿಕಾ ಅವರನ್ನೊಳಗೊಂಡ ‘ಎ’ ತಂಡಕ್ಕೆ ಅಗ್ರಶ್ರೇಯಾಂಕ ಲಭಿಸಿದ್ದು, ‘ಬಿ’ ತಂಡ 12ನೇ ಶ್ರೇಯಾಂಕ ಹೊಂದಿದೆ.

ಭಾರತ ‘ಸಿ’ ತಂಡದಲ್ಲಿ ಗ್ರ್ಯಾಂಡ್‌ಮಾಸ್ಟರ್‌ಗಳಾದ ಸೂರ್ಯಶೇಖರ್ ಗಂಗೂಲಿ, ಕಾರ್ತಿಕೇಯನ್ ಮುರಳಿ, ಎಸ್.ಪಿ.ಸೇತುರಾಮನ್, ಅಭಿಜಿತ್ ಗುಪ್ತಾ, ಅಭಿಮನ್ಯು ಪುರಾಣಿಕ್ ಮತ್ತು ತೇಜಸ್ ಬಾಕ್ರೆ ಅವರು ಇದ್ದಾರೆ’ ಎಂದು ಎಐಸಿಎಫ್ ಪ್ರಕಟಣೆ ತಿಳಿಸಿದೆ.

‘ಎ’ ತಂಡದಲ್ಲಿ ವಿದಿತ್ ಗುಜರಾತಿ, ಪಿ.ಹರಿಕೃಷ್ಣ, ಅರ್ಜುನ್ ಎರಿಗೈಸಿ, ಎಸ್.ಎಲ್. ನಾರಾಯಣನ್, ಕೆ.ಶಶಿಕಿರಣ್ ಇದ್ದರೆ, ‘ಬಿ’ ತಂಡದಲ್ಲಿ ನಿಹಾಲ್ ಸರಿನ್, ಡಿ.ಗುಕೇಶ್, ಬಿ.ಅಧಿಬನ್, ಆರ್.ಪ್ರಜ್ಞಾನಂದ ಮತ್ತು ರೋನಕ್ ಸಧ್ವಾನಿ ಅವರು ಕಣಕ್ಕಿಳಿಯುವರು.



ಅಭಿರಾಮಿ ಮಿಂಚು: ಲೆಜೆಂಡ್ಸ್ ಗೆಲುವು

ಬೆಂಗಳೂರು: ಅಭಿರಾಮಿ ವಡಿವೇಲ್ ಗಳಿಸಿದ ನಾಲ್ಕು ಗೋಲುಗಳ ಬಲದಿಂದ ಲೆಜೆಂಡ್ಸ್ ಡಿ ಸ್ಪೋರ್ಟಿಂಗ್ ತಂಡವು ಕೆಎಸ್‌ಎಫ್‌ಎ ಮಹಿಳಾ ಬಿ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಬಿ ಗುಂಪಿನ ಹಣಾಹಣಿಯಲ್ಲಿ ಲೆಜೆಂಡ್ಸ್ ಡಿ ಸ್ಪೋರ್ಟಿಂಗ್ 6–0ಯಿಂದ ಅಲ್‌ಚೆಮಿ ಇಂಟರ್‌ನ್ಯಾಷನಲ್ ತಂಡವನ್ನು ಪರಾಭವಗೊಳಿಸಿತು. ಅಭಿರಾಮಿ ಮೊದಲ, 18, 21 ಮತ್ತು 40ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ಸಂಧ್ಯಾ ಮುವಾಲಿ (9 ಮತ್ತು 20ನೇ ನಿಮಿಷ) ಎರಡು ಗೋಲು ಗಳಿಸಿ ಮಿಂಚಿದರು.

ಮತ್ತೊಂದು ಪಂದ್ಯದಲ್ಲಿ ವಿಂಗ್ಸ್ ಬಾಲ್ಡ್‌ವಿನ್ ಇಂಟರ್‌ನ್ಯಾಷನಲ್ ತಂಡವು 1–0ಯಿಂದ ವಿಲಿಯಮ್ಸ್ ವಿಮೆನ್ಸ್ ತಂಡವನ್ನು ಸೋಲಿಸಿತು.

ಸಂಕ್ಷಿಪ್ತ ಸುದ್ದಿ

ಪಾರುಲ್ ಚೌಧರಿ ರಾಷ್ಟ್ರೀಯ ದಾಖಲೆ

ನವದೆಹಲಿ (ಪಿಟಿಐ): ಭಾರತದ ಪಾರುಲ್ ಚೌಧರಿ ಅವರು ಮಹಿಳೆಯರ 3000 ಮೀಟರ್ಸ್ ಓಟದಲ್ಲಿ ರಾಷ್ಟ್ರೀಯ ದಾಖಲೆ ಬರೆದಿದ್ದಾರೆ.

ಲಾಸ್ ಏಂಜಲೀಸ್‌ನಲ್ಲಿ ನಡೆದ ಸೌಂಡ್ ರನ್ನಿಂಗ್ ಕೂಟದಲ್ಲಿ ಶನಿವಾರ ಅವರು 8 ನಿಮಿಷ, 57.19 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಇದರೊಂದಿಗೆ ಒಂಬತ್ತು ನಿಮಿಷದೊಳಗೆ ಈ ಸಾಧನೆ ಮಾಡಿದ ಭಾರತದ ಮೊದಲ ಅಥ್ಲೀಟ್ ಎನಿಸಿಕೊಂಡರು. 27 ವರ್ಷದ ಚೌಧರಿ, ಆರು ವರ್ಷದ ಹಿಂದೆ ಸೂರಿಯಾ ಲೋಗನಾಥನ್ (9 ನಿ. 4.5 ಸೆಕೆಂಡು) ನಿರ್ಮಿಸಿದ ದಾಖಲೆಯನ್ನು ಮೀರಿದರು.ಈ ಕೂಟದಲ್ಲಿ ಪಾರುಲ್ ಮೂರನೇ ಸ್ಥಾನ ಗಳಿಸಿದರು.

ಫುಟ್‌ಬಾಲ್: ಮಾಜಿ ಗೋಲ್‌ಕೀಪರ್ ಸುಧೀರ್ ನಿಧನ

ನವದೆಹಲಿ (ಪಿಟಿಐ): ಭಾರತ ಫುಟ್‌ಬಾಲ್ ತಂಡದ ಮಾಜಿ ಗೋಲ್‌ಕೀಪರ್ ಇ.ಎನ್.ಸುಧೀರ್ (70) ಗೋವಾದ ಮಪುಸಾದಲ್ಲಿ ಭಾನುವಾರ ಬೆಳಿಗ್ಗೆ ನಿಧನರಾದರು. ಅವರಿಗೆ ಪುತ್ರ ಹಾಗೂ ಪುತ್ರಿ ಇದ್ದಾರೆ.

1972 ರಲ್ಲಿ ಇಂಡೊನೇಷ್ಯಾ ವಿರುದ್ಧದ ಪಂದ್ಯದೊಂದಿಗೆ ಅಂತರರಾಷ್ಟ್ರೀಯ ಫುಟ್‌ಬಾಲ್‌ಗೆ ಪದಾರ್ಪಣೆ ಮಾಡಿದ್ದ ಸುಧೀರ್, 9 ಪಂದ್ಯಗಳಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದಾರೆ.

1973ರ ಮರ್ಡೆಕಾ ಕಪ್ ಮತ್ತು 1974ರ ಏಷ್ಯನ್ ಕ್ರೀಡಾಕೂಟದಲ್ಲಿ ಅವರು ಭಾರತ ತಂಡವನ್ನು ಅವರು ಪ್ರತಿನಿಧಿಸಿದ್ದರು. ಸಂತೋಷ್ ಟ್ರೋಫಿ ಟೂರ್ನಿಗಳಲ್ಲಿ ಕೇರಳ, ಗೋವಾ ಮತ್ತು ಮಹಾರಾಷ್ಟ್ರ ರಾಜ್ಯ ತಂಡಗಳ ಪರ ಆಡಿದ್ದಾರೆ. ಕ್ಲಬ್ ಮಟ್ಟದಲ್ಲಿ ಯಂಗ್ ಚಾಲೆಂಜರ್ಸ್ (ಕೇರಳ), ವಾಸ್ಕೊ ಸ್ಪೋರ್ಟ್ಸ್ ಕ್ಲಬ್ (ಗೋವಾ) ಮತ್ತು ಮಹೀಂದ್ರ ಅಂಡ್ ಮಹೀಂದ್ರ ತಂಡಗಳನ್ನು ಪ್ರತಿನಿಧಿಸಿದ್ದರು.

ಅನುಚಿತ ವರ್ತನೆ; ಸಹಾಯಕ ಕೋಚ್ ವಜಾ

ನವದೆಹಲಿ (ಪಿಟಿಐ): ಭಾರತ 17 ವರ್ಷದೊಳಗಿನ ಮಹಿಳಾ ಫುಟ್‌ಬಾಲ್ ತಂಡದ ಆಟಗಾರ್ತಿಯ ಜತೆ ‘ಅನುಚಿತ ವರ್ತನೆ’ ತೋರಿದ್ದಕ್ಕೆ, ಸಹಾಯಕ ಕೋಚ್ ಅಲೆಕ್ಸ್ ಅಂಬ್ರೋಸ್ ಅವರನ್ನು ವಜಾ ಮಾಡಲಾಗಿದೆ.

‘ಆಟಗಾರ್ತಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಲ್ಲಿ ಅಂಬ್ರೋಸ್ ಅವರನ್ನು ವಜಾ ಮಾಡಲಾಗಿದೆ. ತನಿಖೆಯ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಎಐಎಫ್‌ಎಫ್ ಆಡಳಿತ ನೋಡಿಕೊಳ್ಳಲು ಸುಪ್ರೀಂಕೋರ್ಟ್ ನೇಮಿಸಿರುವ ಆಡಳಿತ ಸಮಿತಿ (ಸಿಒಎ) ಸದಸ್ಯ ಎಸ್.ವೈ.ಖುರೇಷಿ ಹೇಳಿದ್ದಾರೆ.

17 ವರ್ಷದೊಳಗಿನ ವಿಶ್ವಕಪ್ ಟೂರ್ನಿಗೆ ಸಿದ್ಧತೆ ನಡೆಸುವ ಅಂಗವಾಗಿ ಭಾರತ ತಂಡ ನಾರ್ವೆ ಪ್ರವಾಸದಲ್ಲಿದ್ದು, ಅಲ್ಲಿ ಈ ಘಟನೆ ನಡೆದಿತ್ತು. ತಂಡದ ಮುಖ್ಯ ಕೋಚ್ ಥಾಮಸ್ ಡೆನರ್ಬಿ ಈ ಬಗ್ಗೆ ಎಐಎಫ್‌ಎಫ್‌ಗೆ ದೂರು ನೀಡಿದ್ದರು. ತಂಡವನ್ನು ತೊರೆದು ತಕ್ಷಣವೇ ಭಾರತಕ್ಕೆ ವಾಪಸಾಗುವಂತೆ ಅಂಬ್ರೋಸ್ ಅವರಿಗೆ ಸೂಚಿಸಲಾಗಿತ್ತು.

ವಿಂಬಲ್ಡನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿ: ಸ್ಟೆಫಾನೊಸ್ ಸಿಸಿಪಸ್‌ಗೆ ನಿರಾಸೆ

ನಡಾಲ್, ಕಿರ್ಗಿಯೊಸ್‌ಗೆ ಜಯ

ಲಂಡನ್ (ಎಎಫ್‌ಪಿ): ಸ್ಪೇನ್‌ನ ರಫೆಲ್ ನಡಾಲ್ ಮತ್ತು ಆಸ್ಟ್ರೇಲಿಯಾದ ನಿಕ್ ಕಿರ್ಗಿಯೊಸ್ ಅವರು ವಿಂಬಲ್ಡನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಯ 16ರ ಘಟ್ಟ ಪ್ರವೇಶಿಸಿದರು.

ಶನಿವಾರ ರಾತ್ರಿ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ನಡಾಲ್ 6-1, 6-2, 6-4 ರಲ್ಲಿ ಇಟಲಿಯ ಲೊರೆಂಜೊ ಸೊನೆಗೊ ವಿರುದ್ಧ ನೇರ ಸೆಟ್‌ಗಳ ಜಯ ಸಾಧಿಸಿದರು. ಕಳೆದ ಎರಡು ಪಂದ್ಯಗಳಲ್ಲಿ ನಾಲ್ಕು ಸೆಟ್‌ಗಳನ್ನು ಆಡಿದ್ದ ನಡಾಲ್, ಈ ಪಂದ್ಯದಲ್ಲಿ ಎದುರಾಳಿಗೆ ಕೇವಲ ಏಳು ಗೇಮ್‌ಗಳನ್ನು ಮಾತ್ರ ಬಿಟ್ಟುಕೊಟ್ಟರು.

ನಡಾಲ್ ಮುಂದಿನ ಸುತ್ತಿನ ಪಂದ್ಯದಲ್ಲಿ ನೆದರ್ಲೆಂಡ್ಸ್‌ನ ಬಾಟಿಕ್ ವಾನ್ ಡೆರ್ ಜಂಡ್‌ಶುಪ್ ಅವರನ್ನು ಎದುರಿಸುವರು. ಬಾಟಿಕ್ 7-5, 2-6, 7-6 (9/7), 6-1 ರಲ್ಲಿ ಫ್ರಾನ್ಸ್‌ನ ರಿಚರ್ಡ್ ಗಾಸ್ಕೆಟ್ ವಿರುದ್ಧ ಗೆದ್ದರು.

ರೋಚಕ ಹಣಾಹಣಿ: ಈ ವಿಂಬಲ್ಡನ್ ಟೂರ್ನಿಯಲ್ಲಿ ಇದುವರೆಗಿನ ಅತ್ಯಂತ ರೋಚಕ ಹೋರಾಟಕ್ಕೆ ನಿಕ್ ಕಿರ್ಗಿಯೊಸ್ ಮತ್ತು ಗ್ರೀಸ್‌ನ ಸ್ಟೆಫಾನೊಸ್ ಸಿಸಿಪಸ್ ನಡುವಿನ ಪಂದ್ಯ ಸಾಕ್ಷಿಯಾಯಿತು.

ಜಿದ್ದಾಜಿದ್ದಿನ ಸೆಣಸಾಟದ ಜತೆಯಲ್ಲೇ ಮಾತಿನ ಚಕಮಕಿಯಿಂದಲೂ ಕಾವೇರಿದ ಪಂದ್ಯದಲ್ಲಿ ಕಿರ್ಗಿಯೊಸ್ 6-7 (2/7), 6-4, 6-3, 7-6 (9/7) ಸೆಟ್‌ಗಳಿಂದ ರೋಚಕ ಜಯ ದಾಖಲಿಸಿದರು. ಪಂದ್ಯದ ಬಳಿಕ ನಡೆದ ಸುದ್ದಿಗೋಷ್ಠಿಯಲ್ಲೂ ಇಬ್ಬರು ಆಟಗಾರರು ಪರಸ್ಪರ ದೂಷಿಸಿದರು.

2014 ರಲ್ಲಿ ಇಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದ ಕಿರ್ಗಿಯೊಸ್ ಮೊದಲ ಸೆಟ್‌ಅನ್ನು ಟೈಬ್ರೇಕರ್‌ನಲ್ಲಿ ಸೋತರು. ಬಳಿಕ ಲಯ ಕಂಡುಕೊಂಡು ಅಮೋಘ ಆಟ ಪ್ರದರ್ಶಿಸಿದರು. ನಾಲ್ಕನೇ ಸೆಟ್‌ನಲ್ಲಿ ತುರುಸಿನ ಪೈಪೋಟಿ ಕಂಡುಬಂತು. ಈ ಪಂದ್ಯ 3 ಗಂಟೆ 17 ನಿಮಿಷ ನಡೆಯಿತು.

ಎರಡನೇ ಸೆಟ್ ಸೋತಾಗ ಹತಾಶೆಗೊಳದಾದ ಸಿಸಿಪಸ್ ಚೆಂಡನ್ನು ಪ್ರೇಕ್ಷಕರತ್ತ ಹೊಡೆದರು. ಅದಕ್ಕೆ ರೆಫರಿಯಿಂದ ಎಚ್ಚರಿಕೆಯನ್ನೂ ಪಡೆದರು. ಕಿರ್ಗಿಯೊಸ್ ಕೂಡಾ ಒರಟು ವರ್ತನೆ ತೋರಿದ್ದಕ್ಕೆ, ಎಚ್ಚರಿಕೆಯನ್ನು ಪಡೆದರು.

ಈ ಗೆಲುವಿನ ಮೂಲಕ ಕಿರ್ಗಿಯೊಸ್ ಅವರು, ಗ್ರೀಸ್ ಆಟಗಾರನ ಎದುರಿನ ಗೆಲುವಿನ ದಾಖಲೆಯನ್ನು 4–1ಕ್ಕೆ ಹೆಚ್ಚಿಸಿಕೊಂಡರು.

ಬೊಜ್ಕೊವಾಗೆ ಜಯ: ಮಹಿಳೆಯರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಜೆಕ್ ರಿಪಬ್ಲಿಕ್‌ನ ಮರಿಯಾ ಬೊಜ್ಕೊವಾ 7-5, 6-2 ರಲ್ಲಿ ಫ್ರಾನ್ಸ್‌ನ ಕೆರೊಲಿನಾ ಗಾರ್ಸಿಯಾ ವಿರುದ್ಧ ಗೆದ್ದರು.

ಇನ್ನೊಂದು ಪಂದ್ಯದಲ್ಲಿ ಜರ್ಮನಿಯ ತತಿಯಾನ ಮರಿಯಾ 5–7, 7–5, 7–5 ರಲ್ಲಿ ಲಾತ್ವಿಯದ ಎಲೆನಾ ಒಸ್ಟಾಪೆಂಕೊ ಅವರನ್ನು ಮಣಿಸಿದರು.

ಕ್ವಾರ್ಟರ್‌ಫೈನಲ್‌ಗೆ ಸಾನಿಯಾ ಜೋಡಿ: ಭಾರತದ ಸಾನಿಯಾ ಮಿರ್ಜಾ ಮತ್ತು ಕ್ರೊಯೇಷ್ಯದ ಮಾಟೆ ಪಾವಿಚ್ ಜೋಡಿ ಎರಡನೇ ಸುತ್ತಿನಲ್ಲಿ ವಾಕ್‌ಓವರ್ ಪಡೆದು ಕ್ವಾರ್ಟರ್‌ಫೈನಲ್ ಪ್ರವೇಶಿಸಿತು. ಕ್ರೊಯೇಷ್ಯಾದ ಇವಾನ್ ಡೊಡಿಗ್ ಮತ್ತು ಚೀನಾ ತೈಪೆಯ ಲಟಿಶಾ ಚಾನ್ ಅವರು ಹಿಂದೆ ಸರಿದರು.



ನಿಕ್ ಕಿರ್ಗಿಯೊಸ್ ಗೆಲುವಿನ ಸಂಭ್ರಮ –ಎಎಫ್‌ಪಿ ಚಿತ್ರ

ವಿಂಬಲ್ಡನ್ ಸೆಂಟರ್ ಕೋರ್ಟ್‌ಗೆ 100ರ ಸಂಭ್ರಮ

ವಿಂಬಲ್ಡನ್, ಲಂಡನ್ (ಎಪಿ): ವಿಂಬಲ್ಡನ್ ಟೆನಿಸ್ ಟೂರ್ನಿ ನಡೆಯುತ್ತಿರುವ ಆಲ್ ಇಂಗ್ಲೆಂಡ್ ಲಾನ್ ಟೆನಿಸ್ ಮತ್ತು ಕ್ರಾಕೆಟ್ ಕ್ಲಬ್‌ನ ಸೆಂಟರ್ ಕೋರ್ಟ್‌ಗೆ ಈಗ ಶತಮಾನದ ಸಂಭ್ರಮ.

ಇಲ್ಲಿನ ಚರ್ಚ್ ರೋಡ್‌ಗೆ ಹೊಂದಿಕೊಂಡಂತೆ ನಿರ್ಮಾಣವಾಗಿರುವ ಸೆಂಟರ್ ಕೋರ್ಟ್ 1922 ರಲ್ಲಿ ಉದ್ಘಾಟನೆಗೊಂಡಿತ್ತು. 100ನೇ ವರ್ಷಾಚರಣೆ ಅಂಗವಾಗಿ ಭಾನುವಾರ ವಿಶೇಷ ಕಾರ್ಯಕ್ರಮ ನಡೆಯಿತು. ರೋಜರ್ ಫೆಡರರ್ ಸೇರಿದಂತೆ ವಿಂಬಲ್ಡನ್ ಗೆದ್ದ ಮಾಜಿ ಹಾಗೂ ಹಾಲಿ ಆಟಗಾರರು ಭಾಗವಹಿಸಿದರು.

ಎಂಟು ಬಾರಿಯ ಚಾಂಪಿಯನ್ ಫೆಡರರ್ ಈ ಬಾರಿ ಟೂರ್ನಿಯಲ್ಲಿ ಪಾಲ್ಗೊಂಡಿಲ್ಲ. ‘ಈ ಬಾರಿ ನನಗೆ ಆಡಲು ಆಗಿಲ್ಲ. ಮುಂದಿನ ಬಾರಿ ಇಲ್ಲಿಗೆ ಬರುತ್ತೇನೆ ಎಂಬ ವಿಶ್ವಾಸವಿದೆ’ ಎಂದು ಫೆಡರರ್ ಹೇಳಿದರು. ಫೆಡರರ್, ಸೆರೆನಾ ವಿಲಿಯಮ್ಸ್, ಮಾರ್ಟಿನಾ ನವ್ರಾಟಿಲೊವಾ, ಪೀಟ್ ಸಾಂಪ್ರಾಸ್, ಸ್ಟೆಫಿ ಗ್ರಾಫ್, ರಾಡ್ ಲೇವರ್, ಬಿಲೀ ಜೀನ್ ಕಿಂಗ್ ಒಳಗೊಂಡಂತೆ ಪುರುಷ ಮತ್ತು ಮಹಿಳಾ ವಿಭಾಗದಲ್ಲಿ ಹಲವು ಸ್ಪರ್ಧಿಗಳು ಇಲ್ಲಿ ಮೆರೆದಾಡಿದ್ದಾರೆ.

ಸೆಂಟರ್ ಕೋರ್ಟ್ ಆರಂಭವಾದ ಸಮಯದಲ್ಲಿ ಪ್ರೇಕ್ಷಕರಿಗೆ ಕುಳಿತು ಕೊಂಡು ಪಂದ್ಯ ನೋಡುವ ವ್ಯವಸ್ಥೆ ಇರಲಿಲ್ಲ. ಈಗ 14,974 ಆಸನ ವ್ಯವಸ್ಥೆ ಇಲ್ಲಿದೆ.



ಪ್ರಶಸ್ತಿಯೊಂದಿಗೆ ತನಿಷ್ಕಾ ಕಪಿಲ್ ಕಾಲಭೈರವ್, ಅಭಿನವ್ ಪ್ರಸನ್ನ, ತೇಶುಭ್ ದಿನೇಶ್, ಅರ್ನವ್ ಎನ್. ಮತ್ತು ಹಿಯಾ ಸಿಂಗ್

ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿ

ಅರ್ನವ್, ಹಿಯಾಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರ್ನವ್ ಎನ್. ಹಾಗೂ ಹಿಯಾ ಸಿಂಗ್ ಅವರು ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ 13 ವರ್ಷದೊಳಗಿನ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ಭಾನುವಾರ ಇಲ್ಲಿ ನಡೆದ ಬಾಲಕರ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಅರ್ನವ್ 6-11, 11-9, 5-11, 11-7, 11-9, 11-7ರಿಂದ ಅಥರ್ವ ನವರಂಗೆ ಅವರನ್ನು ಸೋಲಿಸಿದರು.

ಸೆಮಿಫೈನಲ್ ಪಂದ್ಯಗಳಲ್ಲಿ ಅರ್ನವ್ 11–6, 11–7, 7–11, 11–6ರಿಂದ ಸಿದ್ಧಾಂತ್ ಧರಿವಾಲ್ ಎದುರು, ಅಥರ್ವ 8- 11, 13-11, 8-11, 11-5, 11-9ರಿಂದ ಶಶಾಂಕ್ ಕೇಶವ ರಾವ್ ಎದುರು ಜಯ ಸಾಧಿಸಿದ್ದರು.

ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಹಿಯಾ ಸಿಂಗ್ 8-11, 11-9, 9-11, 11-7, 11-9, 11-7ರಿಂದ ಆಯುಷಿ ಬಿ. ಗೋಡ್ಸೆ ಎದುರು ಗೆದ್ದರು. ನಾಲ್ಕರ ಘಟ್ಟದ ಹಣಾಹಣಿಗಳಲ್ಲಿ ಹಿಯಾ 10-12, 11-8, 11-4, 11-5ರಿಂದ ತನಿಷ್ಕಾ ಕಪಿಲ್ ಕಾಲಭೈರವ್ ಅವರನ್ನು, ಆಯುಷಿ 11-6, 11-8, 11-3ರಿಂದ ಸ್ಮೃತಿ ಸುದರ್ಶನ್ ಅವರನ್ನು ಪರಾಭವಗೊಳಿಸಿದ್ದರು.

11 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ತನಿಷ್ಕಾ ಅವರಿಗೆ ಪ್ರಶಸ್ತಿ ಒಲಿಯಿತು. ಫೈನಲ್ ಪಂದ್ಯದಲ್ಲಿ ಅವರು 11-1, 11-1, 11-1ರಿಂದ ಮಿಹಿಕಾ ಆರ್. ಉಡುಪ ಎದುರು ಜಯಭೇರಿ ಮೊಳಗಿಸಿದರು. 11 ವರ್ಷದೊಳಗಿನ ಬಾಲಕರ ಫೈನಲ್‌ನಲ್ಲಿ ಅಭಿನವ್ ಪ್ರಸನ್ನ 11-5, 11-3, 11-8ರಿಂದ ಶ್ರೀರಾಮ್ ಕಿರಣ್ ಎದುರು ಗೆದ್ದು ಪ್ರಶಸ್ತಿ ತಮ್ಮದಾಗಿಸಿಕೊಂಡರು.

ನಾನ್ ಮೆಡಲ್ಸ್ ವಿಭಾಗದಲ್ಲಿ ಮೊಹನೀಶ್ ನಂದಿ ನಾರಾ ಜಯ ಸಾಧಿಸಿದರು. ಫೈನಲ್‌ನಲ್ಲಿ ಅವರು 9-11, 11-3, 11-4, 11-7ರಿಂದ ಪ್ರಣವ್ ವರ್ಮಾ ಅವರನ್ನು ಮಣಿಸಿದರು.15 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ತೇಶುಭ್ ದಿನೇಶ್ ಪ್ರಶಸ್ತಿ ಗೆದ್ದಿದ್ದರು.

ವಿಶ್ವಕಪ್ ಹಾಕಿ: ಭಾರತ– ಇಂಗ್ಲೆಂಡ್ ಪಂದ್ಯ ಡ್ರಾ

ಆಮ್‌ಸ್ಟೆಲ್ವೀನ್, ನೆದರ್ಲೆಂಡ್ಸ್ (ಪಿಟಿಐ): ಚುರುಕಿನ ಪ್ರದರ್ಶನ ನೀಡಿದ ಭಾರತ ತಂಡದವರು ವಿಶ್ವಕಪ್ ಮಹಿಳಾ ಹಾಕಿ ಟೂರ್ನಿಯ ಪಂದ್ಯದಲ್ಲಿ ಇಂಗ್ಲೆಂಡ್ ಜತೆ 1–1 ಗೋಲುಗಳ ಡ್ರಾ ಸಾಧಿಸಿದರು.

ಭಾನುವಾರ ನಡೆದ ಪಂದ್ಯದ 9ನೇ ನಿಮಿಷದಲ್ಲಿ ಇಸಾಬೆಲ ಪೀಟರ್ ಅವರು ಇಂಗ್ಲೆಂಡ್‌ಗೆ ಮುನ್ನಡೆ ತಂದಿತ್ತರು. ವಂದನಾ ಕಟಾರಿಯಾ 28ನೇ ನಿಮಿಷದಲ್ಲಿ ಭಾರತಕ್ಕೆ ಸಮಬಲದ ಗೋಲು ತಂದಿತ್ತರು.

ಪಂದ್ಯದ ನಾಲ್ಕು ಕ್ವಾರ್ಟರ್‌ಗಳಲ್ಲೂ ಉಭಯ ತಂಡಗಳು ಸಮಬಲದ ಪೈಪೋಟಿ ನಡೆಸಿದವು. ಭಾರತಕ್ಕೆ ಹಲವು ಪೆನಾಲ್ಟಿ ಕಾರ್ನರ್ ಅವಕಾಶಗಳು ಲಭಿಸಿದರೂ ಅವುಗಳನ್ನು ಗೋಲಾಗಿ ಪರಿವರ್ತಿಸಲು ಆಗಲಿಲ್ಲ.

ಮೂರನೇ ಕ್ವಾರ್ಟರ್‌ನಲ್ಲಿ ಇಂಗ್ಲೆಂಡ್ ತಂಡ ಗೋಲು ಗಳಿಸುವ ಕೆಲವೊಂದು ಉತ್ತಮ ಅವಕಾಶಗಳನ್ನು ಹಾಳುಮಾಡಿಕೊಂಡಿತು.

56ನೇ ನಿಮಿಷದಲ್ಲಿ ಶರ್ಮಿಳಾ ದೇವಿ ಅವರು ಚೆಂಡನ್ನು ಗುರಿ ಸೇರಿಸುವ ಅವಕಾಶವನ್ನು ಕಳೆದುಕೊಂಡರು. ಇದಾದ ಎರಡು ನಿಮಿಷಗಳ ಪೆನಾಲ್ಟಿ ಕಾರ್ನರ್ ಲಭಿಸಿದರೂ, ಇಂಗ್ಲೆಂಡ್ ರಕ್ಷಣಾ ವಿಭಾಗ ಭಾರತದ ಪ್ರಯತ್ನವನ್ನು ವಿಫಲಗೊಳಿಸಿತು.

ಸವಿತಾ ಪೂನಿಯಾ ಬಳಗ ‘ಬಿ’ ತನ್ನ ಎರಡನೇ ಪಂದ್ಯದಲ್ಲಿ ಮಂಗಳವಾರ ಚೀನಾ ತಂಡದ ಸವಾಲು ಎದುರಿಸಲಿದೆ.

ಏಷ್ಯಾ ಒಷಿಯಾನಿಯಾ 24 ತಾಸುಗಳ ಅಲ್ಟ್ರಾ ರನ್: ಮಹಿಳೆಯರಿಗೆ ಬೆಳ್ಳಿ

ಚಿನ್ನ ಜಯಿಸಿದ ಭಾರತ ಪುರುಷರ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಪುರುಷರ ತಂಡವು ಅಂತರರಾಷ್ಟ್ರೀಯ ಅಲ್ಟ್ರಾ ರನ್ನರ್ಸ್ ಸಂಸ್ಥೆಯ (ಐಎಯು) 24 ತಾಸುಗಳ ಏಷ್ಯಾ ಅಲ್ಟ್ರಾ ರನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಜಯಿಸಿದೆ. ಮಹಿಳಾ ತಂಡವು ಬೆಳ್ಳಿ ಪದಕ ತನ್ನದಾಗಿಸಿಕೊಂಡಿತು.

ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ಬೆಳಿಗ್ಗೆ 8 ಗಂಟೆಗೆ ಆರಂಭಗೊಂಡಿದ್ದ ಚಾಂಪಿಯನ್‌ಷಿಪ್ ಭಾನುವಾರ ಬೆಳಿಗ್ಗೆ 8 ಗಂಟೆಗೆ ಮುಕ್ತಾಯಗೊಂಡಿತು. ಅಮರ್ ಸಿಂಗ್ ದೇವಾಂದ (258.418 ಕಿಲೋ ಮೀಟರ್), ಸೌರವ್ ಕುಮಾರ್ ರಂಜನ್ (242.564 ಕಿ.ಮೀ.) ಮತ್ತು ಗೀನೊ ಆ್ಯಂಟನಿ (238.977 ಕಿ.ಮೀ.) ಅವರಿದ್ದ ಭಾರತ ತಂಡವು ಒಟ್ಟು 739.959 ಕಿ.ಮೀ. ಕ್ರಮಿಸಿ ಚಿನ್ನದ ಪದಕಕ್ಕೆ ಮುತ್ತಿಟ್ಟಿತು. ಪುರುಷರ ವೈಯಕ್ತಿಕ ಚಾಂಪಿಯನ್‌ಷಿಪ್‌ನಲ್ಲೂ ಈ ಮೂವರು ಕ್ರಮವಾಗಿ ಮೊದಲ ಮೂರು ಸ್ಥಾನಗಳನ್ನು ತಮ್ಮದಾಗಿಸಿಕೊಂಡರು.

ಅಂಜು ಸೈನಿ, ಆಶಾ ಸಿಂಗ್ ಮತ್ತು ಶಶಿ ಮೆಹ್ತಾ ಅವರನ್ನೊಳಗೊಂಡ ಭಾರತ ಮಹಿಳಾ ತಂಡವು 24 ತಾಸುಗಳಲ್ಲಿ 570.70 ಕಿ. ಮೀ. ಸಾಧನೆಯೊಂದಿಗೆ ಎರಡನೇ ಸ್ಥಾನ ಗಳಿಸಿತು. ಕರ್ನಾಟಕದ ಅಶ್ವಿನಿ ಗಣಪತಿ ಭಟ್ ಕೂಡ ಪಾಲ್ಗೊಂಡಿದ್ದರು.

ಫಲಿತಾಂಶಗಳು: ತಂಡ ವಿಭಾಗ: ಪುರುಷರು: ಭಾರತ (ದೂರ: 739.959 ಕಿ.ಮೀ.)–1, ಆಸ್ಟ್ರೇಲಿಯಾ–2, ಚೀನಾ ತೈಪೆ–3. ಮಹಿಳೆಯರು: ಆಸ್ಟ್ರೇಲಿಯಾ (ದೂರ: 607.630 ಕಿ.ಮೀ.)–1, ಭಾರತ–2, ಚೀನಾ ತೈಪೆ–3.

ವೈಯಕ್ತಿಕ ವಿಭಾಗ: ಪುರುಷರು: ಅಮರ್ ಸಿಂಗ್ ದೇವಾಂದ (ದೂರ: 258.418)–1, ಸೌರವ್ ಕುಮಾರ್ ರಂಜನ್–2, ಗೀನೊ ಆ್ಯಂಟನಿ–3 (ಮೂವರು ಭಾರತ). ಮಹಿಳೆಯರು: ಕುವಾನ್ ಜು ಲಿನ್ (ಚೀನಾ ತೈಪೆ, ದೂರ: 216.877 ಕಿ.ಮೀ.)–1, ಕ್ಯಾಸಿ ಕೊಹೆನ್–2, ಅಲಿಸಿಯಾ ಹೆರಾನ್–3 (ಇಬ್ಬರೂ ಆಸ್ಟ್ರೇಲಿಯಾ).

ಓಪನ್ ವಿಭಾಗ: ಎಲೀಟ್ ಮಹಿಳೆಯರು: ಜೋವಾನ್ನಾ ಜಾಕ್ರವೆಸ್ಕಿ (ಪೋಲೆಂಡ್, ದೂರ: 199.20 ಕಿ.ಮೀ.)–1. ಪುರುಷರು: ಥಾಮಸ್ ಪಾವ್ಲೊಸ್ಕಿ (ಪೋಲೆಂಡ್, ದೂರ: 222 ಕಿ.ಮೀ)–1

ಓಪನ್ ಮಹಿಳೆಯರು: ತೃಪ್ತಿ ಚೌಹಾನ್ (ಭಾರತ, ದೂರ: 134.90 ಕಿ.ಮೀ.)–1. ಪುರುಷರು: ಸಿಕಂದರ್ ಲಾಂಬಾ (ಭಾರತ, ದೂರ: 202.36 ಕಿ.ಮೀ.)–1.



ಪುರುಷರ ವೈಯಕ್ತಿಕ ವಿಭಾಗದಲ್ಲಿ ಪ್ರಶಸ್ತಿ ಗೆದ್ದ ಭಾರತದ ಅಮರ್ ಸಿಂಗ್ ದೇವಾಂದ (ಮಧ್ಯೆ), ಎರಡನೇ ಸ್ಥಾನ ಗಳಿಸಿದ ಸೌರವ್ ಕುಮಾರ್ ರಂಜನ್ (ಬಲ) ಮತ್ತು ಮೂರನೇ ಸ್ಥಾನ ಪಡೆದ ಗೀನೊ ಆ್ಯಂಟನಿ– ಪ್ರಜಾವಾಣಿ ಚಿತ್ರ

ಜಯ ತಂದಿತ್ತ ಹರ್ಷಲ್

ನಾರ್ಥಾಂಪ್ಟನ್ (ಪಿಟಿಐ): ಹರ್ಷಲ್ ಪಟೇಲ್ ಅವರ ಆಲ್‌ರೌಂಡ್ ಆಟದ ನೆರವಿನಿಂದ ಭಾರತ ತಂಡ ನಾರ್ಥಾಂಪ್ಟನ್‌ಷೈರ್ ವಿರುದ್ಧದ ಟಿ20 ಅಭ್ಯಾಸ ಪಂದ್ಯದಲ್ಲಿ 10 ರನ್‌ಗಳ ಜಯ ಸಾಧಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ದಿನೇಶ್ ಕಾರ್ತಿಕ್ ಬಳಗ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 149 ರನ್ ಗಳಿಸಿತು. ಪ್ರಮುಖ ಬ್ಯಾಟ್ಸ್‌ಮನ್‌ಗಳು ವೈಫಲ್ಯ ಅನುಭವಿಸಿದರೂ ಹರ್ಷಲ್ (54 ರನ್, 36 ಎ, 4X5, 6X3) ತಂಡದ ಗೌರವಾರ್ಹ ಮೊತ್ತಕ್ಕೆ ಕಾರಣರಾದರು.


ಭಾರತದ ಶಿಸ್ತಿನ ಬೌಲಿಂಗ್ ದಾಳಿಗೆ ಪರದಾಟ ನಡೆಸಿದ ನಾರ್ಥಾಂಪ್ಟನ್‌ಷೈರ್, 139 ರನ್‌ಗಳಿಗೆ ಆಲೌಟಾಯಿತು. ಅರ್ಷದೀಪ್ ಸಿಂಗ್, ಹರ್ಷಲ್ ಮತ್ತು ಯಜುವೇಂದ್ರ ಚಾಹಲ್ ತಲಾ ಎರಡು ವಿಕೆಟ್ ಪಡೆದರು.

ಡರ್ಬಿಷೈರ್ ಎದುರಿನ ಮೊದಲ ಅಭ್ಯಾಸ ಪಂದ್ಯದಲ್ಲಿ ಏಳು ವಿಕೆಟ್‌ಗಳ ಜಯ ಪಡೆದಿದ್ದ ಭಾರತ ತಂಡ ಇಂಗ್ಲೆಂಡ್ ವಿರುದ್ಧದ ಟಿ20 ಸರಣಿಯಲ್ಲಿ ಆತ್ಮವಿಶ್ವಾಸದೊಂದಿಗೆ ಕಣಕ್ಕಿಳಿಯಲಿದೆ.

ಸಂಕ್ಷಿಪ್ತ ಸ್ಕೋರ್: ಭಾರತ 8ಕ್ಕೆ 149 (20 ಓವರ್) ಇಶಾನ್ ಕಿಶನ್ 16, ದಿನೇಶ್ ಕಾರ್ತಿಕ್ 34, ವೆಂಕಟೇಶ್ ಅಯ್ಯರ್ 20, ಹರ್ಷಲ್ ಪಟೇಲ್ 54, ಬ್ರೆಂಡನ್ ಗ್ಲೋವರ್ 33ಕ್ಕೆ 3, ನೇಥನ್ ಬಕ್ 17ಕ್ಕೆ 2

ನಾರ್ಥಾಂಪ್ಟನ್‌ಷೈರ್ 139 (19.3 ಓವರ್) ಎಮಿಲಿಯೊ ಗೇ 22, ಸೈಫ್ ಝೈಬ್ 33, ನೇಥನ್ ಬಕ್ 18, ಅರ್ಷದೀಪ್ ಸಿಂಗ್ 29ಕ್ಕೆ 2, ಪ್ರಸಿದ್ಧ ಕೃಷ್ಣ 27ಕ್ಕೆ 1, ಆವೇಶ್ ಖಾನ್ 16ಕ್ಕೆ 2, ಹರ್ಷಲ್ ಪಟೇಲ್ 23ಕ್ಕೆ 2, ಯುಜುವೇಂದ್ರ ಚಾಹಲ್ 25ಕ್ಕೆ 2)

ಫಲಿತಾಂಶ: ಭಾರತಕ್ಕೆ 10 ರನ್ ಗೆಲುವು



ಹರ್ಷಲ್ ಪಟೇಲ್

ರ್‍ಯಾಗಿಂಗ್‌ಗೆ ಗುರಿಯಾಗಿದ್ದೆ: ದ್ಯುತಿ ಚಾಂದ್

ಭುವನೇಶ್ವರ (ಪಿಟಿಐ): ಕ್ರೀಡಾ ವಸತಿನಿಲಯದಲ್ಲಿದ್ದ ವೇಳೆ ಸೀನಿಯರ್ ವಿದ್ಯಾರ್ಥಿಗಳಿಂದ ರ್‍ಯಾಗಿಂಗ್‌ಗೆ ಗುರಿಯಾಗಿದ್ದೆ ಎಂದು ಅಥ್ಲೀಟ್ ದ್ಯುತಿ ಚಾಂದ್ ಹೇಳಿದ್ದಾರೆ.

ಇಲ್ಲಿಯ ಬಿಜೆಬಿ ಸ್ವಾಯತ್ತ ಕಾಲೇಜಿನ ವಿದ್ಯಾರ್ಥಿನಿಯೊಬ್ಬರು ರ್‍ಯಾಗಿಂಗ್‌ನಿಂದಾಗಿ ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದರ ಕುರಿತು ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ದ್ಯುತಿ ಬರೆದುಕೊಂಡಿದ್ದಾರೆ.

‘ಸೀನಿಯರ್ ವಿದ್ಯಾರ್ಥಿಗಳು ನನಗೆ ಮಸಾಜ್ ಮಾಡುವಂತೆ ಒತ್ತಾಯಿಸುತ್ತಿದ್ದರು. ಈ ಕುರಿತು ವಸತಿನಿಲಯದ ಮೇಲ್ವಿಚಾರಕರಿಗೆ ದೂರು ನೀಡಿದಾಗ ಅವರು ನನ್ನನ್ನು ನಿಂದಿಸಿದ್ದರು‘ ಎಂದು ದ್ಯುತಿ ಹೇಳಿದ್ದಾರೆ.